ಬುಧವಾರ, ಮೇ 15, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬಿಸಿಲು

ಆಗ್ರಾದ ತಾಜ್‌ಮಹಲ್ ಎದುರು ಮಂಗಳವಾರ ಪ್ರವಾಸಿಯೊಬ್ಬರು ಕಂಡಿದ್ದು ಹೀಗೆ...

SHOWROOMS: KARNATAKA: BENGALURU: RENAULT Bannerghatta Road Ph: 8546820204, RENAULT Mysore Road Ph: 8527240549 & 7026666922, RENAULT Silk Board Ph: 8527240654, RENAULT Whitefield Ph: 8527240685, RENAULT JP Nagar Ph: 8527240626 & 7353760555, RENAULT Kalyan Nagar Ph: 8527236137 & 8722866664, RENAULT Sarjapura Ph: 8448481374, 8746811000 & 8496915111, RENAULT Yelahanka Ph: 8527234592, 9071767600 & 8884498993, RENAULT Yeswanthpur Ph: 9311832962 & 9311832968. **TUMKUR:** RENAULT Tumkur Ph: 7353764337.

ನಮ್ಮ ಸುಧಾರಿತ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಯೊಂದಿಗೆ ನಿಮ್ಮ ದೃಷ್ಟಿಯನ್ನು ಮರುಸ್ಥಾಪಿಸಿ

- ಚುಚ್ಚುಮದ್ದು ಇಲ್ಲ
- ನೋವು ಇಲ್ಲ
- ವಿಶ್ರಾಂತಿ ಅಗತ್ಯವಿಲ್ಲ
- ದಿನದಿಂದ ದಿನಕ್ಕೆ ದೃಷ್ಟಿಯಲ್ಲಿ ಬದಲಾವಣೆ ನೋಡಬಹುದು

ಉಚಿತ ಸಮಾಲೋಚನೆ*
50 ವಯಸ್ಸು ಮೇಲ್ಪಟ್ಟವರಿಗೆ

ಇತರರಿಗೆ ಕಣ್ಣಿನ ತಪಾಸಣೆಗೆ 50% ರಿಯಾಯಿತಿ*

ಮಾನ್ಯತೆ: 31 ಮೇ 2024

600+ ಅನುಭವಿ ವೈದ್ಯರು
ವಿನೂತನ ತಂತ್ರಜ್ಞಾನ
190+ ಆಸ್ಪತ್ರೆಗಳು
10 ದೇಶಗಳು

dragarwal.com

Dr Agarwals
Eye Hospital

LOCATE US

ಬೆಂಗಳೂರಿನಲ್ಲಿರುವ ಡಾ ಅಗರ್ವಾಲ್ಸ್ ಕಣ್ಣಿನ ಆಸ್ಪತ್ರೆಗಳು:
ಇಂದಿರಾನಗರ (ವಕ್ರೀಭವನದ ಹಬ್) • ಬನ್ನೇರುಘಟ್ಟ ರಸ್ತೆ • ಬನಶಂಕರಿ • ಕೋಲ್ಸ್ ರಸ್ತೆ
ಕೋರಮಂಗಲ • ಪದ್ಮನಾಭನಗರ • ರಾಜಾಜಿನಗರ • ರಾಜರಾಜೇಶ್ವರಿ ನಗರ • ವೈಟ್‌ಫೀಲ್ಡ್
ಯಲಹಂಕ • ಮಿರ್ಲೆ ಐ ಕೇರ್, ಶಿವಾಜಿ ನಗರ • ತುಮಕೂರು

ನೇಮಕಾತಿಗಾಗಿ: 95940 29222

*T&C apply

ಬುಧವಾರ, ಮೇ 15, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 135 | ಪುಟ 18

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಮನುಷ್ಯರಂತೆ ಗಿಡಮರಗಳಿಗೂ ಕ್ಯಾನ್ಸರ್ ಕಾಯಿಲೆ ಬರುವುದಂತೆ!



ಆಳ-ಅಗಲ
'ನಮಾಮಿ ಗಂಗೆ' ಕುಂಟುತ್ತಲೇ ಸಾಗುತ್ತಿದೆ ಶುದ್ಧೀಕರಣ ಕ್ರಿಯೆ

ಇಂದು ರಾಜ್ಯದ ಕೆಲವೆಡೆ ಭಾರಿ ಮಳೆ ಸಾಧ್ಯತೆ 5

ಮೋದಿ ನಾಮಪತ್ರ; ಎನ್‌ಡಿಎ ಬಲ ಪ್ರದರ್ಶನ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
73,104	22,217	₹74,630 (ಬೆಂಗಳೂರು)	₹86,500 (ಬೆಂಗಳೂರು)	83.51

ಮುಖ್ಯಮಂತ್ರಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಸೂಚನೆಗೂ ಇಲ್ಲ ಕಿಮ್ಮತ್ತು

ನಿವೃತ್ತರ 'ಗುತ್ತಿಗೆ' ಸರ್ಕಾರಕ್ಕೆ ಹೊರೆ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಸರ್ಕಾರದ ವಿವಿಧ ಇಲಾಖೆಗಳು, ನಿಗಮ, ಮಂಡಳಿಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಿವೃತ್ತ ಅಧಿಕಾರಿಗಳು, ನೌಕರರನ್ನು ಕೆಲಸದಿಂದ ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿ ನಾಲ್ಕು ತಿಂಗಳಾದರೂ ಬಹುಪಾಲು ಮಂದಿಯ 'ಗುತ್ತಿಗೆ ಕೆಲಸ' ಅಬಾಧಿತವಾಗಿ ಮುಂದುವರಿದಿದೆ.

ಸರ್ಕಾರಿ ಸೇವೆಯಲ್ಲಿ ಇದ್ದಾಗ ಆಯಕಟ್ಟಿನ ಪ್ರಮುಖ ಹುದ್ದೆಗಳಲ್ಲಿ ಕೆಲಸ ಮಾಡಿದ ಐಎಎಸ್, ಕೆಎಎಸ್ ಅಧಿಕಾರಿಗಳೂ ಸೇರಿದಂತೆ ಹಲವು ಅಧಿಕಾರಿಗಳು ಮತ್ತು ನೌಕರರು ಸಚಿವರು, ಶಾಸಕರ ಪ್ರಭಾವ ಬಳಸಿಕೊಂಡು ನಿವೃತ್ತಿಯ ನಂತರವೂ ಗುತ್ತಿಗೆ ಆಧಾರದಲ್ಲೇ ಪ್ರಮುಖ ಹುದ್ದೆಗಳ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ. ಅವರಿಗೆ ಪಿಂಚಣಿಯ ಜತೆಗೆ, ದೊಡ್ಡಮೊತ್ತದ ಸಂಭಾವನೆಯನ್ನೂ ನೀಡಲಾಗುತ್ತಿದೆ.

'ಸಚಿವಾಲಯ, ಗ್ರಾಮೀಣಾಭಿವೃದ್ಧಿ ಇಲಾಖೆ ಸೇರಿದಂತೆ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಅನಗತ್ಯವಾದ ಹುದ್ದೆಗಳನ್ನು ಸೃಷ್ಟಿಸಿ, ಅಂತಹ ಹುದ್ದೆಗಳಿಗೆ ನಿವೃತ್ತ ಅಧಿಕಾರಿಗಳು, ನೌಕರರನ್ನು ಬಳಕೆ ಮಾಡಿಕೊಳ್ಳಲಾಗಿದೆ. ಸಮಾಲೋಚಕರು, ಸಂಪನ್ಮೂಲ ವ್ಯಕ್ತಿಗಳ ಹೆಸರಿನಲ್ಲಿ ಅಧಿಕ ಸಂಖ್ಯೆಯಲ್ಲಿ ನಿವೃತ್ತರನ್ನು ಬಳಕೆ ಮಾಡಿಕೊಂಡಿದ್ದರಿಂದ ಸರ್ಕಾರದ ಬೊಕ್ಕಸಕ್ಕೆ ಹೊರೆಯಾಗುತ್ತಿದೆ. ಗ್ರೂಪ್ 'ಎ' ವೃಂದದ ಹುದ್ದೆಗಳಿಗೂ ನಿವೃತ್ತ ಐಎಎಸ್, ಕೆಎಎಸ್ ಅಧಿಕಾರಿಗಳನ್ನು ನೇಮಕ ಮಾಡಿಕೊಂಡು ವೇತನ, ವಾಹನ ಸೇರಿದಂತೆ ಇತರೆ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಅಂತಹ ಎಲ್ಲ ನಿವೃತ್ತ ಅಧಿಕಾರಿ, ನೌಕರರನ್ನು ತಕ್ಷಣ ಕೆಲಸದಿಂದ ಬಿಡುಗಡೆ ಮಾಡಬೇಕು. ಆ ಜಾಗಕ್ಕೆ ಹಾಲಿ ಕರ್ತವ್ಯದಲ್ಲಿರುವ ಅಧಿಕಾರಿಗಳು, ನೌಕರರನ್ನೇ ನೇಮಕ ಮಾಡಿಕೊಳ್ಳಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸೂಚನೆಯಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಪ್ರಸಕ್ತ ವರ್ಷದ ಜನವರಿಯಲ್ಲೇ ಸುತ್ತೋಲೆ ಹೊರಡಿಸಿದ್ದರು.

ಸುತ್ತೋಲೆ ನಂತರ ಕೆಲ ಇಲಾಖೆಗಳು ತಮ್ಮ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿರುವ ನಿವೃತ್ತರ ಪಟ್ಟಿ ಕಳುಹಿಸಿದ್ದರೂ, ಸೇವೆಯಿಂದ ಬಿಡುಗಡೆಯಾದವರು ಬೆರಳೆಣಿಕೆಯಷ್ಟು ಮಾತ್ರ. ಕೆಲ ಇಲಾಖೆಗಳು ಇದುವರೆಗೂ ಪಟ್ಟಿಯನ್ನೇ ಕಳುಹಿಸಿಲ್ಲ. ಸರ್ಕಾರದ ಅಂದಾಜಿನ ಪ್ರಕಾರ ನಿಗಮ–ಮಂಡಳಿಗಳೂ ಸೇರಿದಂತೆ ವಿವಿಧೆಡೆ 1,400ಕ್ಕೂ ಹೆಚ್ಚು ನಿವೃತ್ತರು ಕೆಲಸ ಮಾಡುತ್ತಿದ್ದಾರೆ. ನಿವೃತ್ತರ ಕೆಲಸದಿಂದ ಬೊಕ್ಕಸಕ್ಕೆ ಆಗುತ್ತಿರುವ ಹೊರೆ ₹100 ಕೋಟಿಗೂ ಅಧಿಕ ಎನ್ನುತ್ತವೆ ಸರ್ಕಾರದ ಮೂಲಗಳು.

'ಕೆಲಸದಲ್ಲಿ ಇದ್ದಾಗ ಜನಪರ ಯೋಜನೆಗಳನ್ನು ವಿರೋಧಿಸಿದ್ದ ಉನ್ನತಾಧಿಕಾರಿಗಳು ನಿವೃತ್ತಿಯ ನಂತರ ಆಯಕಟ್ಟಿನ ಜಾಗದಲ್ಲಿ ಕುಳಿತು ಅದೇ ಜನಪರ ಯೋಜನೆಗಳ ಮೂಲಕ ಲಾಭ ಮಾಡಿಕೊಳ್ಳುತ್ತಿದ್ದಾರೆ. ಬಹುತೇಕ ಸಚಿವರ ಬಳಿ ವಿಶೇಷ ಕರ್ತವ್ಯಾಧಿಕಾರಿಗಳಾಗಿ (ಒಎಸ್‌ಡಿ) ಸೇರಿಕೊಂಡು ಅವರಿಗೂ ಲಾಭದ ಮಾರ್ಗಗಳನ್ನು ತೋರಿಸಿಕೊಡುತ್ತಿದ್ದಾರೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಯವರ ಕಚೇರಿಗಳೂ ನಿವೃತ್ತರನ್ನು ನೇಮಿಸಿಕೊಂಡಿವೆ. ಅಂಥವರು ಇಲಾಖೆಯ ಅಧಿಕಾರಿ, ಸಿಬ್ಬಂದಿಯನ್ನೂ ನಿಯಂತ್ರಿಸುತ್ತಿದ್ದಾರೆ' ಎನ್ನುತ್ತಾರೆ ಸಾಮಾಜಿಕ ಹೋರಾಟಗಾರ ಕೆ.ಆರ್. ಮಧುಸೂದನ್.

ನಿವೃತ್ತರದೇ ಕಾರುಬಾರು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲೇ ಅಧಿಕ ಸಂಖ್ಯೆಯ ನಿವೃತ್ತರು ಕೆಲಸ ಮಾಡುತ್ತಿದ್ದಾರೆ. ಉದ್ಯೋಗ ಖಾತ್ರಿ, ಕೂಸಿನ ಮನೆ ಸೇರಿದಂತೆ ಬಹುತೇಕ ಯೋಜನೆಗಳ ಅನುಷ್ಠಾನ ನಿವೃತ್ತ ಅಧಿಕಾರಿಗಳ ನಿರ್ದೇಶನದಂತೆ ನಡೆಯುತ್ತಿದೆ ಎನ್ನುವ ದೂರುಗಳಿವೆ.

ಉದ್ಯೋಗ ಖಾತರಿ ಯೋಜನೆ ಲೆಕ್ಕ ತಪಾಸಣೆಯನ್ನು ಸಾಮಾಜಿಕ ಸಂಶೋಧನಾ ನಿರ್ದೇಶನಾಲಯ ಮಾಡುತ್ತದೆ. ನಿರ್ದೇಶನಾಲಯದ ನಿರ್ದೇಶಕ ಹಾಗೂ ಜಂಟಿ ನಿರ್ದೇಶಕ ಇಬ್ಬರೂ ನಿವೃತ್ತ ಅಧಿಕಾರಿಗಳು. ಜಂಟಿ ನಿರ್ದೇಶಕರಾಗಿದ್ದ ಎಂ.ಕೆ. ಕೆಂಪೇಗೌಡ ಅವರು 2019ರಲ್ಲಿ ನಿವೃತ್ತರಾದ ನಂತರ ಅವರನ್ನು ಎರಡು ವರ್ಷ ಅದೇ ಹುದ್ದೆಯಲ್ಲಿ ಗುತ್ತಿಗೆ ಆಧಾರದಲ್ಲಿ ಮುಂದುವರಿಸಲಾಗಿತ್ತು. ಮತ್ತೆ ಅವರ ಅವಧಿ ವಿಸ್ತರಿಸಲಾಗಿದ್ದು, ಇಂದಿಗೂ ಅದೇ ಹುದ್ದೆಯಲ್ಲೇ ಮುಂದುವರಿದಿದ್ದಾರೆ. ನಿವೃತ್ತರಾದ ಬಹುತೇಕ ಐಎಎಸ್ ಅಧಿಕಾರಿಗಳು ಸರ್ಕಾರೇತರ ಸಂಸ್ಥೆಗಳನ್ನು (ಎನ್‌ಜಿಒ) ಸ್ಥಾಪಿಸಿಕೊಂಡಿದ್ದು, ಅಂತಹ ಎನ್‌ಜಿಒಗಳ ಮೂಲಕ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಕುರಿತು ಕೆಲ ಸಂಘಟನೆಗಳು ಗ್ರಾಮೀಣಾಭಿವೃದ್ಧಿ ಇಲಾಖೆಗೆ ದೂರು ಸಲ್ಲಿಸಿವೆ.

ಅಂಕಿ ಅಂಶಗಳು

1,400	872	286	47
ಸರ್ಕಾರದ ಮಾಹಿತಿ ಪ್ರಕಾರ ಕೆಲಸ ಮಾಡುತ್ತಿರುವ ನಿವೃತ್ತರು	ಇಲಾಖೆಗಳು ಕಳುಹಿಸಿದ ನಿವೃತ್ತರ ಸಂಖ್ಯೆ	ಸಚಿವಾಲಯದಲ್ಲಿ ಕೆಲಸ ಮಾಡುತ್ತಿರುವ ನಿವೃತ್ತರು	ಕೆಲಸದಿಂದ ಬಿಡುಗಡೆ ಆದವರು

ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ನಿವೃತ್ತ ಅಧಿಕಾರಿಗಳ ಹಾವಳಿ ಮಿತಿ ಮೀರಿದೆ. ಕೆಲಸದ ಹೆಸರಲ್ಲಿ ಲಾಭ ಮಾಡಿಕೊಳ್ಳುವ ಅಂಥವರನ್ನು ದೂರ ಇಡಬೇಕು
ಕಾಡಶೆಟ್ಟಿಹಳ್ಳಿ ಸತೀಶ್, ಅಧ್ಯಕ್ಷ, ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟ

ಖಾಲಿ ಇರುವ 2.58 ಲಕ್ಷ ಹುದ್ದೆಗಳನ್ನು ಸರ್ಕಾರ ಹಂತ ಹಂತವಾಗಿ ಭರ್ತಿ ಮಾಡಿದರೆ, ನಿರುದ್ಯೋಗ ಸಮಸ್ಯೆಯೂ ನಿವಾರಣೆಯಾಗುತ್ತದೆ, ನಿವೃತ್ತರ ಕೆಲಸದ ಅಗತ್ಯವೂ ಇರದು
ಸಿ.ಎಸ್. ಷಡಾಕ್ಷರಿ, ಅಧ್ಯಕ್ಷ, ರಾಜ್ಯ ಸರ್ಕಾರಿ ನೌಕರರ ಸಂಘ

ಸಚಿವಾಲಯದಲ್ಲಿ ನಿವೃತ್ತರ ಸಂಖ್ಯೆ ಏರಿಕೆಯಾಗಿದೆ. ಅವರನ್ನು ಕೆಲಸದಿಂದ ಬಿಡುಗಡೆ ಮಾಡಿ, ಸಚಿವಾಲಯದ ಅಧಿಕಾರಿಗಳು ಮತ್ತು ನೌಕರರಿಗೆ ಅವಕಾಶ ನೀಡಬೇಕು
ರಮೇಶ್ ಸಂಗಾ, ಅಧ್ಯಕ್ಷ, ಕರ್ನಾಟಕ ಸಚಿವಾಲಯ ನೌಕರರ ಸಂಘ

ಪ್ರಧಾನಿ ನರೇಂದ್ರ ಮೋದಿ ಅವರು ವಾರಾಣಸಿ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಮಂಗಳವಾರ ನಾಮಪತ್ರ ಸಲ್ಲಿಸಲು ಬಂದಾಗ ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಬಿಜೆಪಿ ಅಧ್ಯಕ್ಷ ಜೆ.ಪಿ ನಡ್ಡಾ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಕೇಂದ್ರದ ಹಲವು ಸಚಿವರು, ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು, ಎನ್‌ಡಿಎ ಮುಖಂಡರು ಜತೆಗಿದ್ದರು —ಎಎಫ್‌ಪಿ ಚಿತ್ರ

ಪ್ರಧಾನಿ, ರಾಹುಲ್, ಖರ್ಗೆ ವಿರುದ್ಧ ಸಲ್ಲಿಕೆಯಾದ ದೂರು

ಆಯೋಗದಿಂದ ಕ್ರಮವಿಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ, ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ವಿರುದ್ಧದ ದೂರುಗಳಿಗೆ ಸಂಬಂಧಿಸಿದಂತೆ ಚುನಾವಣಾ ಆಯೋಗವು (ಇ.ಸಿ) ಬಿಜೆಪಿ ಮತ್ತು ಕಾಂಗ್ರೆಸ್ ಮುಖ್ಯಸ್ಥರಿಗೆ ನೋಟಿಸ್‌ಗಳನ್ನು ನೀಡಿ ಮೂರು ವಾರಗಳೇ ಕಳೆದರೂ, ಇಲ್ಲಿಯವರೆಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ.

ಈ ಕುರಿತು ಮಂಗಳವಾರ ಪ್ರತಿಕ್ರಿಯಿಸಿರುವ ಚುನಾವಣಾ ಆಯೋಗ, 'ಬಿಜೆಪಿ ಮುಖ್ಯಸ್ಥ ಜೆ.ಪಿ.ನಡ್ಡಾ ಮತ್ತು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಪ್ರತಿಕ್ರಿಯೆಗಳನ್ನು ಸ್ವೀಕರಿಸಲಾಗಿದೆ. ದೂರುಗಳು ಮತ್ತು ಪ್ರತಿ ದೂರುಗಳಿಗೆ ಸಂಬಂಧಿಸಿದಂತೆ ಸೂಕ್ತ ಕ್ರಮ ತೆಗೆದುಕೊಳ್ಳುವ ಕುರಿತು ಪರಿಶೀಲಿಸಲಾಗುತ್ತಿದೆ' ಎಂದು ಹೇಳಿದೆ.

ದ್ವೇಷ ಭಾಷಣಕ್ಕೆ ಸಂಬಂಧಿಸಿದ ದೂರುಗಳನ್ನು ಆಧರಿಸಿ ನಡ್ಡಾ ಅವರಿಗೆ ನೋಟಿಸ್ ನೀಡಲಾಗಿತ್ತು. ಭಾಷಾ ಮತ್ತು ಸಾಂಸ್ಕೃತಿಕ ವಿಭಜನೆಯನ್ನು ಸೃಷ್ಟಿಸುವ ಭಾಷಣಗಳನ್ನು ರಾಹುಲ್ ಗಾಂಧಿ ಮಾಡಿದ್ದರೆಂಬ ಕಾರಣಕ್ಕೆ ಖರ್ಗೆ ಅವರಿಗೆ ನೋಟಿಸ್ ಕೊಡಲಾಗಿತ್ತು. ಇಬ್ಬರಿಗೂ ಈ ಕುರಿತು ಪ್ರತಿಕ್ರಿಯಿಸುವಂತೆ ಏಪ್ರಿಲ್ 25ರಂದು ಸೂಚಿಲಾಗಿತ್ತು. ಆರಂಭದಲ್ಲಿ ಏಪ್ರಿಲ್ 29ರವರೆಗೆ ಸಮಯ ನೀಡಲಾಗಿತ್ತು. ಆದರೆ, ಅವರು ಹೆಚ್ಚಿನ ಸಮಯ ಕೋರಿದ್ದರು. ಸಂಬಂಧಿಸಿದವರಿಂದ ಪ್ರತಿಕ್ರಿಯೆಗಳನ್ನು ಯಾವಾಗ ಸ್ವೀಕರಿಸಲಾಯಿತು ಎಂಬುದನ್ನು ಆಯೋಗ ಸ್ಪಷ್ಟಪಡಿಸಿಲ್ಲ.

ಕಾಂಗ್ರೆಸ್ ಮತ್ತು ಬಿಜೆಪಿ ವಿರುದ್ಧ ಪರಸ್ಪರರು ನೀಡಿರುವ ಕೆಲವು ದೂರುಗಳು ಬಾಕಿ ಉಳಿದಿವೆ. ಅವುಗಳು ಕೋಮು, ಪ್ರಾದೇಶಿಕ ಭಾಷಾ ವಿಭಜನೆ ಅಥವಾ ಸಂವಿಧಾನ ಪಾವಿತ್ರ್ಯದ ಕುರಿತು ಉನ್ನತ ತಾರಾ ಪ್ರಚಾರಕರ ಪ್ರತಿಕೂಲ ಹೇಳಿಕೆಗಳಿಗೆ ಸಂಬಂಧಿಸಿದ್ದಾಗಿವೆ ಎಂದು ಆಯೋಗ ತಿಳಿಸಿದೆ.

ಕೆಲ ಸಂದರ್ಭಗಳಲ್ಲಿ ಪಕ್ಷದ ಮುಖ್ಯಸ್ಥರಿಗೆ ನೋಟಿಸ್ ನೀಡುವ ತನ್ನ ನಿರ್ಧಾರವನ್ನು ಸಮರ್ಥಿಸಿಕೊಂಡಿರುವ ಆಯೋಗವು, 'ತಾವು ಮಾಡುವ ಟೀಕೆಗಳಿಗೆ ವ್ಯಕ್ತಿಗಳು ಜವಾಬ್ದಾರರಾಗಿದ್ದರೂ, ಅಂತಹ ಉಲ್ಲಂಘನೆಗಳನ್ನು ಮಾಡದಂತೆ ತಮ್ಮ ತಾರಾ ಪ್ರಚಾರಕರನ್ನು ನಿಯಂತ್ರಿಸುವ ಪ್ರಮುಖ ಜವಾಬ್ದಾರಿ ಪಕ್ಷಗಳಿಗಿದೆ' ಎಂದು ಹೇಳಿದೆ.

11ನೇ ಪುಟ ನೋಡಿ

ಮೋದಿ ನಾಮಪತ್ರ ಸಲ್ಲಿಕೆ

ವಾರಾಣಸಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ವಾರಾಣಸಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ಮಂಗಳವಾರ ನಾಮಪತ್ರ ಸಲ್ಲಿಸಿದರು. ಈ ವೇಳೆ ಎನ್‌ಡಿಎ ಕೂಟದ ಹಲವು ಮುಖಂಡರು, ಕೇಂದ್ರ ಸಚಿವರು ಮತ್ತು ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ಪಾಲ್ಗೊಂಡು ಶಕ್ತಿ ಪ್ರದರ್ಶನ ನಡೆಸಿದರು.

ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಕೇಂದ್ರ ಸಚಿವರಾದ ಅಮಿತ್ ಶಾ, ರಾಜನಾಥ್ ಸಿಂಗ್, ಹರ್‌ದೀಪ್ ಸಿಂಗ್ ಪುರಿ, ಅನುಪ್ರಿಯಾ ಪಟೇಲ್ ಸೇರಿದಂತೆ ಹಲವರು ಪ್ರಧಾನಿ ಜತೆಗೂಡಿದ್ದರು. ಅನಾರೋಗ್ಯದ ಕಾರಣ ನೀಡಿದ್ದ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಗೈರಾಗಿದ್ದರು.

ಎಲ್‌ಟಿಟಿಇ ನಿಷೇಧ 5 ವರ್ಷ ವಿಸ್ತರಣೆ

ನವದೆಹಲಿ (ಪಿಟಿಐ): ಶ್ರೀಲಂಕಾ ಮೂಲದ ಹಾಗೂ ಭಾರತದಲ್ಲಿ ಬೆಂಬಲಿಗರನ್ನು ಹೊಂದಿರುವ ಎಲ್‌ಟಿಟಿಇ ಸಂಘಟನೆಯ ಮೇಲಿನ ನಿಷೇಧವನ್ನು ಕೇಂದ್ರ ಸರ್ಕಾರವು ಮಂಗಳವಾರ ಮತ್ತೆ ಐದು ವರ್ಷಗಳವರೆಗೆ ವಿಸ್ತರಣೆ ಮಾಡಿದೆ.

ದೇಶದ ಜನರಲ್ಲಿ ಪ್ರತ್ಯೇಕತೆಯ ಪ್ರವೃತ್ತಿ ಹರಡಲು ಮತ್ತು ದೇಶದಾದ್ಯಂತ, ಅದರಲ್ಲೂ ಮುಖ್ಯವಾಗಿ ತಮಿಳುನಾಡಿನಲ್ಲಿ ಬೆಂಬಲ ಪಡೆಯಲು ಯತ್ನಿಸುತ್ತಿರುವ ಎಲ್‌ಟಿಟಿಇ ಸಂಘಟನೆಯು ಭಾರತದ ಸಮಗ್ರತೆಗೆ ಬೆದರಿಕೆಯೊಡ್ಡುತ್ತಿದೆ. ಈ ಹಿನ್ನೆಲೆಯಲ್ಲಿ 1967ರ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯಡಿ ಈ ಸಂಘಟನೆ ಮೇಲೆ ನಿಷೇಧಾಜ್ಞೆ ಹೇರಲಾಗಿದೆ ಎಂದು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ.

ಶ್ರೀಲಂಕಾ ಮೂಲದ ಸಂಘಟನೆಯಾಗಿರುವ ಎಲ್‌ಟಿಟಿಇ ಭಾರತದಲ್ಲಿಯೂ ಬೆಂಬಲಿಗರು, ಸಹಾನುಭೂತಿ ಹೊಂದಿದವರು ಮತ್ತು ಏಜೆಂಟ್‌ಗಳನ್ನು ಹೊಂದಿದೆ ಎಂದು ಕೇಂದ್ರ ಸರ್ಕಾರ ಹೊರಡಿಸಿದ ಅಧಿಸೂಚನೆಯಲ್ಲಿ ಉಲ್ಲೇಖಿಸಲಾಗಿದೆ. ದೇಶದ ಭದ್ರತೆ ಮತ್ತು ಸಮಗ್ರತೆಗೆ ಹಾನಿ ಉಂಟುಮಾಡುವ ಚಟುವಟಿಕೆಗಳಲ್ಲಿ ಎಲ್‌ಟಿಟಿಇ ಈಗಲೂ ಸಕ್ರಿಯವಾಗಿದೆ ಎಂದು ಅಭಿಪ್ರಾಯಪಟ್ಟಿದೆ.

ಸಿಐಡಿ ಅಧಿಕಾರಿ ಅನಿತಾ ಬಂಧನ

ಸರ್ಕಾರಿ ಕೆಲಸ ಕೊಡಿಸುವುದಾಗಿ ₹ 2 ಕೋಟಿ ವಸೂಲಿ • 6 ಮಂದಿಗೆ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಕೆಲಸ ಕೊಡಿಸುವುದಾಗಿ ನಂಬಿಸಿ ಯುವಕರಿಂದ ಲಕ್ಷಾಂತರ ರೂಪಾಯಿ ಪಡೆದು ವಂಚಿಸುತ್ತಿದ್ದ ಸಿಐಡಿ ಘಟಕದ ಸೆಕ್ಷನ್ ಸೂಪರಿಂಟೆಂಡೆಂಟ್ ಸೇರಿ ಇಬ್ಬರನ್ನು ವಿಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರಿನ ಸಿಐಡಿ ಘಟಕದ ಆಡಳಿತ ವಿಭಾಗದ ಸೆಕ್ಷನ್ ಸೂಪರಿಂಟೆಂಡೆಂಟ್, ಬಿ.ಎಸ್.ಆರ್. ಪಿ.ಸಿ ಲೇಔಟ್‌ನ ನಿವಾಸಿ ಬಿ.ಎಸ್. ಅನಿತಾ(42) ಹಾಗೂ ಮಧ್ಯವರ್ತಿ ರಾಮಚಂದ್ರ ಭಟ್(56) ಬಂಧಿತರು.

ಚಿಕ್ಕಮಗಳೂರಿನ ಕಲ್ಯಾಣ ನಗರದ ಸುನಿಲ್ ಅವರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಅನಿತಾ

ರಾಮಚಂದ್ರ ಭಟ್

'2021ರಲ್ಲಿ ಸ್ನೇಹಿತ ಮಂಜುನಾಥ್ ಮೂಲಕ ಸುನಿಲ್ ಅವರಿಗೆ ರಾಮಚಂದ್ರ ಭಟ್ ಪರಿಚಯವಾಗಿತ್ತು. ತನಗೆ ಬೆಂಗಳೂರಿನ ಸಿಐಡಿ ಘಟಕದ ಅಧಿಕಾರಿ ಅನಿತಾ ಅವರ ಪರಿಚಯವಿದ್ದು, ಅವರಿಗೆ ಕೆಪಿಎಸ್‌ಸಿ ಹಾಗೂ ಸರ್ಕಾರದ ಉನ್ನತ ಹುದ್ದೆಯಲ್ಲಿರುವ ಹಲವು ಪ್ರಭಾವಿ ವ್ಯಕ್ತಿಗಳ ಸಂಪರ್ಕವಿದೆ. ಸರ್ಕಾರಿ ಕೆಲಸ ಕೊಡಿಸುತ್ತೇನೆ' ಎಂದು ರಾಮಚಂದ್ರ ಭಟ್ ನಂಬಿಸಿದ್ದ. ಇದಕ್ಕೆ ಹಣ ನೀಡಬೇಕೆಂದು ಹೇಳಿದ್ದ. ಅದಾದ ಮೇಲೆ ಸುನಿಲ್, ಸಿಐಡಿ ಕಚೇರಿಯಲ್ಲಿ ಅನಿತಾ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದ' ಎಂದು ಮೂಲಗಳು ತಿಳಿಸಿವೆ.

ಕಚೇರಿಯಲ್ಲೇ ಹಣದ ವ್ಯವಹಾರ: 'ಸಿಐಡಿ ಕಚೇರಿಯಲ್ಲೇ ಅನಿತಾ ಹಾಗೂ ಮಧ್ಯವರ್ತಿ ಹಣದ ವ್ಯವಹಾರ ನಡೆಸುತ್ತಿದ್ದರು. ಕಚೇರಿಗೆ ಬಂದವರಿಗೆ ಗುರುತಿನ ಚೀಟಿ ತೋರಿಸಿ ನಂಬಿಸುತ್ತಿದ್ದ ಅನಿತಾ, ಕೆಪಿಎಸ್‌ಸಿ ಮೂಲಕ ಪಿಡಬ್ಲ್ಯುಡಿ ಇಲಾಖೆಯಲ್ಲಿ ಸಹಾಯಕ ಎಂಜಿನಿಯರ್ ಕೆಲಸ ಕೊಡಿಸುವುದಾಗಿ ಸುನಿಲ್‌ಗೆ ನಂಬಿಸಿದ್ದಳು. ಸುನಿಲ್ ₹40 ಲಕ್ಷ ನೀಡಿದ್ದರು. ಹಣ ಪಡೆದು ಸುನಿಲ್‌ಗೆ ಯಾವುದೇ ಕೆಲಸ ಕೊಡಿಸಿರಲಿಲ್ಲ' ಎಂದು ಮೂಲಗಳು ತಿಳಿಸಿವೆ.

'ಕೆಲಸ ಕೊಡಿಸದ ಕಾರಣಕ್ಕೆ ಹಣ ವಾಪಸ್ ನೀಡುವಂತೆ ಸುನಿಲ್ ಮನವಿ ಮಾಡಿದ್ದರು. ಆಗ ಅನಿತಾ ಹಾಗೂ ರಾಮಚಂದ್ರ ಭಟ್ ಬೆದರಿಕೆ ಒಡ್ಡಿದ್ದರು. ಇಬ್ಬರು ಆರೋಪಿಗಳು ಇದೇ ರೀತಿ ₹2 ಕೋಟಿ ವಂಚಿಸಿದ್ದರು' ಎಂದು ಮೂಲಗಳು ತಿಳಿಸಿವೆ.

'ಆರೋಪಿ ಅನಿತಾ ನಗದು ರೂಪದಲ್ಲಿ ಮಾತ್ರ ಹಣ ಪಡೆಯುತ್ತಿದ್ದರು. ಚೆಕ್ ಪಡೆಯುತ್ತಿರಲಿಲ್ಲ. ಆನ್‌ಲೈನ್ ಮೂಲಕ ಹಣ ಪಡೆಯಲು ನಿರಾಕರಿಸುತ್ತಿದ್ದರು. ಅನಿತಾ 6 ಮಂದಿಗೆ ವಂಚನೆ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ. ಇದೇ ರೀತಿ ವಿಜಯಪುರ, ಬಾಗಲಕೋಟೆ ಮತ್ತು ಗದಗ ಜಿಲ್ಲೆಯ ಹಲವು ಮಂದಿಗೆ ವಂಚನೆ ಆಗಿದೆ. ವಂಚನೆಗೆ ಒಳಗಾದವರು ವಿಜಯನಗರ ಠಾಣೆಗೆ ಹಾಜರಾಗಿ ದೂರು ನೀಡಬಹುದು' ಎಂದು ಪೊಲೀಸರು ತಿಳಿಸಿದ್ದಾರೆ.

ಸನ್ಮಾನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ಅಂಕಿತಾ ಕೊಣ್ಣೂರ (ಬಲತುದಿ) ಮತ್ತು ಮೂರನೇ ಸ್ಥಾನ ಪಡೆದ ಕೆ.ಸಿ. ನವನೀತ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೆಂಗಳೂರಿನಲ್ಲಿ ಮಂಗಳವಾರ ಸನ್ಮಾನಿಸಿದರು

ಎಸ್‌ಎಸ್‌ಎಲ್‌ಸಿ: ಸಾಧಕರಿಗೆ ಸಿಎಂ, ಡಿಸಿಎಂ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಶಾಲೆಯಲ್ಲಿ ಓದಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೊದಲ ಸ್ಥಾನ ಪಡೆದ ಬಾಗಲಕೋಟೆ ಜಿಲ್ಲೆಯ ಮೆಳ್ಳಿಗೇರಿಯ ಅಂಕಿತಾ ಕೊಣ್ಣೂರ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಲಾ ₹5 ಲಕ್ಷ ಪ್ರೋತ್ಸಾಹ ಧನ ನೀಡಿದ್ದಾರೆ. ಮೂರನೇ ಸ್ಥಾನ ಪಡೆದ ಕೆ.ಸಿ. ನವನೀತ್ ಅವರಿಗೆ ಅನುಕ್ರಮವಾಗಿ ₹ 3 ಲಕ್ಷ ಮತ್ತು ₹ 2 ಲಕ್ಷ ನೀಡಿದ್ದಾರೆ.

11ನೇ ಪುಟ ನೋಡಿ

ಐಎಂಎ ಅಧ್ಯಕ್ಷರಿಗೆ ತರಾಟೆ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ವಿರುದ್ಧವೇ ಹಾನಿಕಾರಕ ಹೇಳಿಕೆಗಳನ್ನು ನೀಡಿದ್ದ ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಅಧ್ಯಕ್ಷ ಆರ್.ವಿ.ಅಶೋಕನ್ ಅವರನ್ನು ಸುಪ್ರೀಂ ಕೋರ್ಟ್ ಮಂಗಳವಾರ ತೀವ್ರ ತರಾಟೆಗೆ ತೆಗೆದುಕೊಂಡಿತು.

ಪತಂಜಲಿ ಆಯುರ್ವೇದದ ತಪ್ಪುದಾರಿಗೆಳೆಯುವ ಜಾಹೀರಾತು ಪ್ರಕರಣದ ಕುರಿತು ಆರ್.ವಿ.ಅಶೋಕನ್ ಅವರು ಇತ್ತೀಚೆಗೆ ಪಿಟಿಐಗೆ ಸಂದರ್ಶನ ನೀಡಿದ್ದರು. ಅದರಲ್ಲಿ ಅವರು ಸುಪ್ರೀಂ ಕೋರ್ಟ್ ವಿರುದ್ಧ ನೀಡಿದ್ದ ಹೇಳಿಕೆಗಳಿಗೆ ಸಂಬಂಧಿಸಿದಂತೆ ಮಂಗಳವಾರ ಬೇಷರತ್ ಕ್ಷಮೆಯಾಚಿಸಿದರು.

'ಇದು ಅಷ್ಟು ಸುಲಭವಾಗಿ ಕ್ಷಮಿಸುವ ವಿಚಾರವಲ್ಲ' ಎಂದ ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ ಮತ್ತು ಅಹ್ಸಾನುದ್ದೀನ್ ಅಮಾನುಲ್ಲಾ ಅವರು ಇದ್ದ ವಿಭಾಗೀಯ ಪೀಠವು, 'ನೀವು ಸುಖಾಸನದಲ್ಲಿ ಕುಳಿತು ಪತ್ರಿಕಾ ಸಂದರ್ಶನ ನೀಡುತ್ತಾ, ನ್ಯಾಯಾಲಯದ ಬಗ್ಗೆ ವಿಡಂಬನೆ ಮಾಡುವುದು ತರವಲ್ಲ' ಎಂದು ತರಾಟೆಗೆ ತೆಗೆದುಕೊಂಡಿತು.

ಈ ಹಂತದಲ್ಲಿ ಐಎಂಎ ಅಧ್ಯಕ್ಷರು ಸಲ್ಲಿಸಿದ ಕ್ಷಮೆಯಾಚನೆಯ ಪ್ರಮಾಣಪತ್ರವನ್ನು ಸ್ವೀಕರಿಸಲು ನ್ಯಾಯಾಲಯಕ್ಕೆ ಒಲವಿಲ್ಲ ಎಂದು ಪೀಠವು ಐಎಂಎ ವಕೀಲರಿಗೆ ಸ್ಪಷ್ಟಪಡಿಸಿತು.

'ವಾಕ್ ಸ್ವಾತಂತ್ರ್ಯ ಮತ್ತು ಚಿಂತನೆಯ ಹಕ್ಕನ್ನು ಎತ್ತಿಹಿಡಿಯುವಲ್ಲಿ ನಾವು ಮೊದಲಿಗರು. ಆದರೆ ಕೆಲ ಸಂದರ್ಭಗಳಲ್ಲಿ ಸಂಯಮ ಹೊಂದಿರಬೇಕು. ಅದು ನಿಮ್ಮ ಸಂದರ್ಶನದಲ್ಲಿ ನಮಗೆ ಕಾಣಲಿಲ್ಲ' ಎಂದು ನ್ಯಾಯಮೂರ್ತಿ ಕೊಹ್ಲಿ ಅವರು ಹೇಳಿದರು. 'ಈ ಪ್ರಕರಣದಲ್ಲಿ ಐಎಂಎ ಅರ್ಜಿದಾರರಾಗಿರುವಾಗ, ಈ ರೀತಿಯ ಹೇಳಿಕೆಗಳನ್ನು ನೀವು ಏಕೆ ನೀಡಿದಿರಿ' ಎಂದು ನ್ಯಾಯಪೀಠ ಪ್ರಶ್ನಿಸಿತು.

11ನೇ ಪುಟ ನೋಡಿ

ತೀರ್ಪು ಕಾಯ್ದಿರಿಸಿದ 'ಸುಪ್ರೀಂ'

ನವದೆಹಲಿ (ಪಿಟಿಐ): ತಪ್ಪುದಾರಿಗೆ ಎಳೆಯುವ ಜಾಹೀರಾತು ಪ್ರಕರಣದಲ್ಲಿ ಯೋಗ ಗುರು ಬಾಬಾ ರಾಮದೇವ ಮತ್ತು ಅವರ ಆಪ್ತ ಆಚಾರ್ಯ ಬಾಲಕೃಷ್ಣ ಹಾಗೂ ಪತಂಜಲಿ ಆಯುರ್ವೇದ್ ಲಿಮಿಟೆಡ್ ಕಂಪನಿಗೆ ನೀಡಿರುವ ನ್ಯಾಯಾಂಗ ನಿಂದನೆ ನೋಟಿಸ್‌ನ ಆದೇಶವನ್ನು ಸುಪ್ರೀಂ ಕೋರ್ಟ್ ಮಂಗಳವಾರ ಕಾಯ್ದಿರಿಸಿತು.

ಪತಂಜಲಿಗೆ ಸಂಬಂಧಿಸಿದಂತೆ ಪರವಾನಗಿ ಅಮಾನತಾಗಿರುವ ಉತ್ಪನ್ನಗಳ ಜಾಹೀರಾತುಗಳನ್ನು ಹಿಂಪಡೆಯಲು ತೆಗೆದುಕೊಳ್ಳುತ್ತಿರುವ ಕ್ರಮಗಳ ಕುರಿತು ಪ್ರಮಾಣಪತ್ರ ಸಲ್ಲಿಸಲು ಸಂಸ್ಥೆಯ ಪರ ವಕೀಲರು ಸಮಯ ಕೋರಿರುವುದನ್ನು ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ ಮತ್ತು ಅಹ್ಸಾನುದ್ದೀನ್ ಅಮಾನುಲ್ಲಾ ಅವರ ವಿಭಾಗೀಯ ಪೀಠ ಗಮನಿಸಿತು. ಈ ಕುರಿತ ಪ್ರಮಾಣಪತ್ರವನ್ನು ಮೂರು ವಾರಗಳಲ್ಲಿ ಸಲ್ಲಿಸುವಂತೆ ಪೀಠ ಸೂಚಿಸಿತು. ನಿಂದನೆ ನೋಟಿಸ್ ಕುರಿತ ಆದೇಶವನ್ನು ಕಾಯ್ದಿರಿಸಲಾಗಿದೆ ಎಂದು ತಿಳಿಸಿತು.

ಉತ್ತರಾಖಂಡ ರಾಜ್ಯದ ಪರವಾನಗಿ ಪ್ರಾಧಿಕಾರವು ಕಳೆದ ತಿಂಗಳು ಅಮಾನತುಗೊಳಿಸಿರುವ ಪತಂಜಲಿ ಆಯುರ್ವೇದ ಕಂಪನಿಯ 14 ಉತ್ಪನ್ನಗಳ ಮಾರಾಟವನ್ನು ನಿಲ್ಲಿಸಲಾಗಿದೆಯೇ ಎಂದು ಪೀಠ ಇದೇ ವೇಳೆ ಪ್ರಶ್ನಿಸಿತು. ಮಾರಾಟವನ್ನು ನಿಲ್ಲಿಸಲಾಗಿದೆ ಎಂದು ಪತಂಜಲಿ ಪರ ವಾದಿಸಿದ ಬಲ್ಬೀರ್ ಸಿಂಗ್ ತಿಳಿಸಿದರು.

ಒಳಪುಟಗಳಲ್ಲಿ

ವಿವಿಧ ಜಿಲ್ಲೆಗಳಲ್ಲಿ ಗುಡುಗು ಸಹಿತ ಧಾರಾಕರ ಮಳೆ 5

ಇಂಡೊನೇಷ್ಯಾದಲ್ಲಿ ಪ್ರವಾಹ:52 ಸಾವು, 20 ಮಂದಿ ನಾಪತ್ತೆ 10

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಬೆಲೆ ಏರಿಕೆ ವಿರೋಧಿಸಿ ಭುಗಿಲೆದ್ದ ಪ್ರತಿಭಟನೆ

ಗುಂಡಿನ ದಾಳಿಗೆ ಮೂವರು ನಾಗರಿಕರ ಸಾವು

ಇಸ್ಲಾಮಾಬಾದ್ (ಪಿಟಿಐ): ಪಾಕ್ ಆಕ್ರಮಿತ ಕಾಶ್ಮೀರದ (ಪಿಒಕೆ) ರಾಜಧಾನಿ ಮುಜಫ್ಫರಾಬಾದ್‌ನಲ್ಲಿ ವಿದ್ಯುತ್ ದರ, ಗೋಧಿ ಹಿಟ್ಟಿನ ಬೆಲೆ ಭಾರಿ ಏರಿಕೆಯಿಂದ ತತ್ತರಿಸಿರುವ ಜನ ನಡೆಸಿರುವ ಪ್ರತಿಭಟನೆ ತೀವ್ರಗೊಂಡಿದೆ. ಭದ್ರತಾ ಪಡೆಗಳು, ಪ್ರತಿಭಟನಕಾರರ ಮೇಲೆ ಪ್ರಯೋಗಿಸಿದ ಗುಂಡಿನ ದಾಳಿಯಲ್ಲಿ ಮೂವರು ನಾಗರಿಕರು ಮೃತಪಟ್ಟು, ಆರು ಮಂದಿ ಗಾಯಗೊಂಡಿದ್ದಾರೆ.

ವಿವಾದಿತ ಪ್ರದೇಶದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ನಿಯೋಜಿಸಲಾಗಿದ್ದ ಅರೆಸೇನಾಪಡೆಯ ರೇಂಜರ್‌ಗಳು ನಗರದಿಂದ ವಾಪಸ್ ಹೋಗುವಾಗ ಉದ್ರಿಕ್ತರು ಅವರು ಮೇಲೆ ಕಲ್ಲು ತೂರಿದರು. ಇದಕ್ಕೆ ಪ್ರತಿಯಾಗಿ ಭದ್ರತಾಪಡೆಗಳು ಅಶ್ರುವಾಯು ಮತ್ತು ಗುಂಡಿನ ದಾಳಿ ನಡೆಸಿದವು ಎಂದು 'ಡಾನ್' ಪತ್ರಿಕೆ ವರದಿ ಮಾಡಿದೆ. ಅರೆಸೇನಾಪಡೆಯ 19 ವಾಹನಗಳು ಮುಜಫ್ಫರಾಬಾದ್‌ನಿಂದ ಹೊರಹೋಗುತ್ತಿದ್ದವು. ಅವುಗಳಲ್ಲಿ ಮೂರು ವಾಹನಗಳಿಗೆ ಉದ್ರಿಕ್ತರು ಬೆಂಕಿ ಹಚ್ಚಿದರು. ವಾಹನಗಳು ಹೊತ್ತಿ ಉರಿಯುತ್ತಿದ್ದ ದೃಶ್ಯಗಳು ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡಿವೆ.

ಭದ್ರತಾ ಪಡೆಗಳು ನಡೆಸಿದ ಗುಂಡಿನ ದಾಳಿಯಲ್ಲಿ ಮೂವರು ನಾಗರಿಕರು ಮೃತಪಟ್ಟಿರುವುದನ್ನು ಮುಜಫ್ಫರಾಬಾದ್‌ನ ವಿಭಾಗೀಯ ಆಯುಕ್ತ ಸರ್ದಾರ್ ಅದ್ನಾನ್ ಖಚಿತಪಡಿಸಿದ್ದಾರೆ.

ಮುಜಫ್ಫರಾಬಾದ್‌ನಲ್ಲಿ ಭದ್ರತಾ ಪಡೆಗಳ ಗುಂಡಿನ ದಾಳಿಗೆ ಬಲಿಯಾದವರ ಅಂತ್ಯಕ್ರಿಯೆ ವೇಳೆ ಪ್ರತಿಭಟನಕಾರರು ಮೆರವಣಿಗೆ ನಡೆಸಿದರು —ಎಎಫ್‌ಪಿ ಚಿತ್ರ

ಪ್ರತಿಭಟನಕಾರರು ಮತ್ತು ಪ್ರಾದೇಶಿಕ ಸರ್ಕಾರದ ನಡುವಿನ ಮಾತುಕತೆಗಳು ಬಿಕ್ಕಟ್ಟಿನಲ್ಲಿ ಕೊನೆಗೊಂಡ ನಂತರ ಈ ಪ್ರದೇಶದಲ್ಲಿ ಪರಿಹಾರ ಕ್ರಮ ಕೈಗೊಳ್ಳಲು ಪ್ರಧಾನಿ ಶೆಹಬಾಜ್ ಷರೀಫ್ ಅವರು ಸೋಮವಾರವೇ ₹690 ಕೋಟಿ ಬಿಡುಗಡೆಗೆ ಅನುಮೋದನೆ ನೀಡಿದ್ದರು. ಆದಾಗ್ಯೂ, ಸರ್ಕಾರದ ನಿರ್ಧಾರವು ಈ ಪ್ರದೇಶದಲ್ಲಿನ ಉದ್ವಿಗ್ನತೆ ಶಮನಗೊಳಿಸುವಲ್ಲಿ ವಿಫಲವಾಗಿದೆ ಎಂದು ವರದಿ ಹೇಳಿದೆ.

ಪಾಕಿಸ್ತಾನದಲ್ಲಿ 40 ಕೆ.ಜಿ. ಗೋಧಿಹಿಟ್ಟಿನ ದರವನ್ನು ಅಲ್ಲಿನ ರೂಪಾಯಿ ಮೌಲ್ಯದಲ್ಲಿ 3100ರಿಂದ 2000ಕ್ಕೆ ಇಳಿಸಲಾಗಿದೆ. ವಿದ್ಯುತ್ ದರವನ್ನೂ ತಗ್ಗಿಸಲಾಗಿದೆ. ಆದಾಗ್ಯೂ ಪ್ರತಿಭಟನೆಗಳು ನಿಂತಿಲ್ಲ.

ಶುಕ್ರವಾರದಿಂದ ಈ ಪ್ರದೇಶದಲ್ಲಿ ವ್ಯಾಪಕ ಮುಷ್ಕರ ನಡೆಯುತ್ತಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ.

ವಿವಾದಿತ ಪ್ರದೇಶದಲ್ಲಿ ಶನಿವಾರ ಪೊಲೀಸರು ಮತ್ತು ಚಳವಳಿಗಾರರ ಮಧ್ಯೆ ಸಂಘರ್ಷ ನಡೆದಿತ್ತು. ಘಟನೆಯಲ್ಲಿ ಒಬ್ಬ ಪೊಲೀಸ್ ಅಧಿಕಾರಿ ಮೃತಪಟ್ಟು, ನೂರಾರು ಜನ ಗಾಯಗೊಂಡಿದ್ದರು. ಅದರಲ್ಲಿ ಬಹುತೇಕರು ಪೊಲೀಸರೇ ಆಗಿದ್ದರು.

ಜಮ್ಮು ಕಾಶ್ಮೀರ ಜಂಟಿ ಅವಾಮಿ ಕ್ರಿಯಾ ಸಮಿತಿ (ಜೆಎಎಸಿ) ನೇತೃತ್ವದಲ್ಲಿ ಈ ಪ್ರತಿಭಟನೆ ನಡೆದಿತ್ತು. ಪ್ರತಿಭಟನೆಯಲ್ಲಿ ವ್ಯಾಪಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದು, ವಿದ್ಯುತ್ ದರ ಏರಿಕೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು. ಸರ್ಕಾರ ಘೋಷಿಸಿದ ಪರಿಹಾರಕ್ಕೆ ಸಂಬಂಧಿಸಿದಂತೆ ಅಧಿಸೂಚನೆ ಹೊರಟ ಮೇಲೆ ಪ್ರತಿಭಟನೆ ಕೈಬಿಡುವ ಕುರಿತು ನಿರ್ಧರಿಸುವುದಾಗಿ ಜೆಎಎಸಿ ತಿಳಿಸಿತ್ತು.

'ಗ್ರಾಹಕರ ಹಿತರಕ್ಷಣಾ ಕಾಯ್ದೆ ವ್ಯಾಪ್ತಿಗಿಲ್ಲ ವಕೀಲರ ಸೇವೆ'

ಪ್ರಜಾವಾಣಿ ವಾರ್ತೆ

ನವದೆಹಲಿ: ಗ್ರಾಹಕರ ಹಿತರಕ್ಷಣಾ ಕಾಯ್ದೆಯ ಅಡಿಯಲ್ಲಿ ವಕೀಲರ ವಿರುದ್ಧ ದಾಖಲಿಸುವ ದೂರುಗಳನ್ನು ಪುರಸ್ಕರಿಸಲು ಆಗದು, ವೃತ್ತಿಪರರು ಒದಗಿಸುವ ಸೇವೆಗಳು ಈ ಕಾಯ್ದೆಯ ವ್ಯಾಪ್ತಿಗೆ ಬರುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ವೃತ್ತಿಪರರಾಗಿ ವಕೀಲರು ಹೊಂದಿರುವ ಹೊಣೆ, ಅವರ ಸ್ಥಾನ ಮತ್ತು ಅವರು ನಿರ್ವಹಿಸುವ ಕರ್ತವ್ಯಗಳನ್ನು ಪರಿಗಣಿಸಿ, ವಕೀಲ ವೃತ್ತಿಯು ವಿಶಿಷ್ಟವಾದುದು ಎನ್ನಬೇಕಾಗುತ್ತದೆ; ಅದನ್ನು ಬೇರೆ ಯಾವುದೇ ವೃತ್ತಿಯ ಜೊತೆ ಹೋಲಿಸಲು ಆಗುವುದಿಲ್ಲ ಎಂದು ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಮತ್ತು ಪಂಕಜ್ ಮಿತ್ತಲ್ ಅವರು ಇದ್ದ ವಿಭಾಗೀಯ ಪೀಠವು ಹೇಳಿದೆ.

ವೃತ್ತಿಯೊಂದನ್ನು ವಾಣಿಜ್ಯ ವಹಿವಾಟು ಅಥವಾ ವ್ಯಾಪಾರ ವಹಿವಾಟಿನೊಂದಿಗೆ ಹೋಲಿಸಿ ನೋಡಲು ಆಗುವುದಿಲ್ಲ. ವೃತ್ತಿಪರರು ಒದಗಿಸುವ ಸೇವೆಗಳನ್ನು ಉದ್ಯಮಿಗಳು ಅಥವಾ ವರ್ತಕರು ಒದಗಿಸುವ ಸೇವೆಗಳ ಜೊತೆ ಹೋಲಿಸಲು ಆಗುವುದಿಲ್ಲ ಎಂದು ಪೀಠವು ಹೇಳಿದೆ.

'ವೈದ್ಯ ವೃತ್ತಿ: ಪುನರ್ ಪರಿಶೀಲನೆ ಬೇಕು'

ವೈದ್ಯಕೀಯ ವೃತ್ತಿಯಲ್ಲಿ ತೊಡಗಿಸಿಕೊಂಡವರು ಒದಗಿಸುವ ಸೇವೆಗಳನ್ನು ಗ್ರಾಹಕರ ಹಿತರಕ್ಷಣಾ ಕಾಯ್ದೆಯ ವ್ಯಾಪ್ತಿಗೆ ತಂದ, 1995ರಲ್ಲಿ ಭಾರತೀಯ ವೈದ್ಯಕೀಯ ಸಂಘ ಮತ್ತು ವಿ.ಪಿ. ಶಾಂತಾ ನಡುವಿನ ಪ್ರಕರಣದಲ್ಲಿ ತ್ರಿಸದಸ್ಯ ಪೀಠವೊಂದು ನೀಡಿದ ತೀರ್ಪನ್ನು ವಿಸ್ತೃತ ಪೀಠವೊಂದು ಪುನರ್ ಪರಿಶೀಲನೆಗೆ ಒಳಪಡಿಸಬೇಕು ಎಂದು ವಿಭಾಗೀಯ ಪೀಠವು ಅಭಿಪ್ರಾಯ ವ್ಯಕ್ತಪಡಿಸಿದೆ.

ಕೆ.ಪಿ.ಸಿ.ಸಿ ಅಧ್ಯಕ್ಷರು ಹಾಗೂ ಕರ್ನಾಟಕ ಸರ್ಕಾರದ ಮಾನ್ಯ
ಉಪಮುಖ್ಯಮಂತ್ರಿಗಳು ಬ್ರಾಂಡ್ ಬೆಂಗಳೂರಿನ ಹರಿಕಾರರಾದ ಸನ್ಮಾನ್ಯ
ಶ್ರೀ. ಡಿ.ಕೆ ಶಿವಕುಮಾರ್ ರವರಿಗೆ
ಹುಟ್ಟುಹಬ್ಬದ ಹಾರ್ದಿಕ
ಶುಭಾಶಯಗಳು
ಶ್ರೀ. ಎ.ಸಿ ಶ್ರೀನಿವಾಸ್ ರವರು
ಶಾಸಕರು
ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರ ಹಾಗೂ
ಬಿ.ಡಿ.ಎ. ಸದಸ್ಯರು

DH ಪ್ರಜಾವಾಣಿ EXAM MASTERMIND
KAS ಪರೀಕ್ಷಾ ಸರಣಿಯ ಖರೀದಿಯೊಂದಿಗೆ*
₹728.00 ಮೌಲ್ಯದ ಎಕ್ಸಾಂ ಮಾಸ್ಟರ್‌ಮೈಂಡ್ ವಾರ್ಷಿಕ ಪ್ಯಾಕೇಜ್ + ಆರ್ಕೈವ್ ಪ್ಲಾನ್ ಸಂಪೂರ್ಣ ಉಚಿತ
*ತ್ವರೆ ಮಾಡಿ, ಈ ಕೊಡುಗೆ ಮೇ 15 ರಿಂದ 19 ರವರೆಗೆ ಮಾತ್ರ ಲಭ್ಯ
ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ
*ಷರತ್ತುಗಳು ಅನ್ವಯ

ಬೆಂಗಳೂರು: ಕರಾರು, ಭರವಸೆಗಳನ್ನು ಮೀರಿ ಬಾಡಿಗೆ ಹೆಚ್ಚಿಸುತ್ತಿರುವ ಮನೆ ಮಾಲೀಕರು

ಬಾಡಿಗೆ ಪಾಲಾದ 'ಗೃಹಜ್ಯೋತಿ' ಉಳಿತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ಗೃಹಜ್ಯೋತಿ ಯೋಜನೆಯಿಂದ ಹಣ ಉಳಿತಾಯ ವಾಗುತ್ತದೆ ಎಂಬ ಖುಷಿಯಲ್ಲಿದ್ದ ಕೆಲವು ಬಾಡಿಗೆ ಮನೆಯ ವಾಸಿಗಳಿಗೆ, ಮನೆ ಮಾಲೀಕರು ಬಾಡಿಗೆ ಹೆಚ್ಚಿಸುವ ಮೂಲಕ 'ಶಾಕ್' ನೀಡುತ್ತಿದ್ದಾರೆ. 'ಗೃಹ-ಜ್ಯೋತಿ'ಯಿಂದ ಉಳಿತಾಯವಾದ ಹಣ ಬಾಡಿಗೆಯ ಪಾಲಾಗುತ್ತಿದೆ!

ಗೃಹಜ್ಯೋತಿಯಿಂದಾಗಿ ಕೆಲವು ಗ್ರಾಹಕರಿಗೆ ವಿದ್ಯುತ್ ಬಿಲ್ ಶೂನ್ಯ-ವಾಗಿದ್ದರೆ, ಇನ್ನೂ ಕೆಲವರಿಗೆ ತುಂಬಾ ಕಡಿಮೆ ಬಿಲ್ ಬರುತ್ತಿದೆ. ಇದನ್ನು ಗಮನಿಸಿದ ಕೆಲವು ಮನೆ ಮಾಲೀಕರು, ಬಾಡಿಗೆಯನ್ನು ದಿಢೀರನೆ ಹೆಚ್ಚಿಸುತ್ತಿದ್ದಾರೆ. ಇನ್ನೂ ಕೆಲವರಿಗೆ ವಾರ್ಷಿಕ ಬಾಡಿಗೆ ದರವನ್ನು ಕರಾರಿನಲ್ಲಿ ಉಲ್ಲೇ-ಖಿಸಿರುವುದಕ್ಕಿಂತ ಹೆಚ್ಚು ಏರಿಕೆ ಮಾಡುತ್ತಿದ್ದಾರೆ. ಇದರಿಂದ ಬಾಡಿಗೆ ದಾರರು ಗೊಂದಲಕ್ಕೆ ಸಿಲುಕಿದ್ದಾರೆ.

'ನಾನು ಎರಡು ವರ್ಷಗಳಿಂದ ಬಾಡಿಗೆ ಮನೆಯಲ್ಲಿದ್ದೇನೆ. ಆರಂಭದಲ್ಲೇ ಐದು ವರ್ಷ ಬಾಡಿಗೆ ಹೆಚ್ಚಿಸುವುದಿಲ್ಲ ಎಂದು ಭರವಸೆ ನೀಡಿದ್ದರು. ಮೊದಲು ತಿಂಗಳಿಗೆ ₹500ರಿಂದ ₹ 600 ವಿದ್ಯುತ್ ಬಿಲ್ ಬರುತ್ತಿತ್ತು. 'ಗೃಹಜ್ಯೋತಿ' ಯೋಜನೆ ಜಾರಿಯ ನಂತರ ₹50ರ ಒಳಗೆ ಬಿಲ್ ಬರತೊಡಗಿತು. ಇದು ತಿಳಿಯುತ್ತಿದ್ದಂತೆ ಮಾಲೀಕರು ₹500 ಬಾಡಿಗೆ ಹೆಚ್ಚಿಸಿದರು. ಅವರು ನೀಡಿದ್ದ ಭರವಸೆ ನೆನಪಿಸಿದರೂ ಕೇಳಲಿಲ್ಲ. ಈಗ ಎಲ್ಲ ಕಡೆ ಬಾಡಿಗೆ ಜಾಸ್ತಿಯಾಗಿದೆ. ನಿಮಗೇನು ನಷ್ಟವಾಗುವುದಿಲ್ಲ. ಕರೆಂಟ್ ಬಿಲ್‌ನಲ್ಲಿ ಉಳಿಯುವುದಿಲ್ವೆ ಎಂದು ಹೇಳಿದ್ದರು' ಎಂದು ನಾಗಸಂದ್ರದ ಭಾನುಪ್ರಕಾಶ್ ಬೇಸರ ವ್ಯಕ್ತಪಡಿಸಿದರು.

'ಮನೆ ಬಾಡಿಗೆಗೆ ಬರುವಾಗ ಪ್ರತಿ 11 ತಿಂಗಳಿಗೊಮ್ಮೆ ಬಾಡಿಗೆ ದರವನ್ನು ಶೇ 5ರಷ್ಟು ಹೆಚ್ಚಿಸುವುದಾಗಿ ಕರಾರಿನಲ್ಲಿ ಉಲ್ಲೇಖಿಸಲಾಗಿತ್ತು. ಗೃಹಜ್ಯೋತಿಯಿಂದ ಹಣ ಉಳಿತಾ-ಯವಾಗುತ್ತದೆ ಎಂದು ತಿಳಿದ ಮೇಲೆ, ಮಾಲೀಕರು ಬಾಡಿಗೆ ದರವನ್ನು ಏಕಾಏಕಿ ಶೇ 10ಕ್ಕೆ ಏರಿಸಿದ್ದಾರೆ. ನಿಮಗೆ ಬಾಡಿಗೆ ಕೊಡಲು ಕಷ್ಟವಾದರೆ, ಬೇರೆ ಮನೆ ನೋಡಿಕೊಳ್ಳಬಹುದು ಎನ್ನುತ್ತಾರೆ' ಎಂದು ರಾಜಾಜಿನಗರದ ಬಾಡಿಗೆದಾರರೊಬ್ಬರು ವಿವರಿಸಿದರು.

'ಈಗ ಬಾಡಿಗೆ ಹೆಚ್ಚಿಸಿದ್ದಾರೆ ಎಂದು ತಕ್ಷಣ ಮನೆ ಬದಲಿಸಲಾಗುವುದಿಲ್ಲ. ಹಾಗೆ ಬದಲಿಸಿದರೆ, ಸುಣ್ಣ–ಬಣ್ಣ ಎಂದು ಠೇವಣಿ ಹಣದಲ್ಲಿ ಒಂದು ತಿಂಗಳ ಬಾಡಿಗೆ ಮುರಿದುಕೊಳ್ಳುತ್ತಾರೆ. ಜೊತೆಗೆ ಮನೆ ಸ್ಥಳಾಂತರದ ಖರ್ಚಿನ ಹೊರೆಯೂ ಇರುತ್ತದೆ' ಎಂದು ಅಲವತ್ತುಕೊಂಡರು.

ಬೇಸಿಗೆಯ ಬರೆ: 'ಗೃಹಜ್ಯೋತಿ' ಯೋಜನೆಯ ಫಲಾನುಭವಿಗಳಿಗೆ ತಿಂಗಳಿಗೆ ಗರಿಷ್ಠ 200 ಯೂನಿಟ್‌ವರೆಗೆ ಉಚಿತವಾಗಿ ವಿದ್ಯುತ್ ಬಳಸಲು ಅವಕಾಶವಿದೆ. ಈ ಫಲಾನುಭವಿಗಳು ಹಿಂದಿನ ತಿಂಗಳ ಬಳಕೆಗಿಂತ 10 ಯೂನಿಟ್ ಅಧಿಕ ಬಳಕೆ ಮಾಡಬಹುದು. ಅದಕ್ಕಿಂತ ಹೆಚ್ಚು ಬಳಸಿದರೆ, ಹೆಚ್ಚುವರಿ ಯೂನಿಟ್‌ಗಳ ಬಿಲ್ ಪಾವತಿ ಮಾಡಬೇಕು. ಈ ವರ್ಷ ಜನವರಿಯಿಂದ ನಾಲ್ಕು ತಿಂಗಳು ಬಿಸಿಲು ತೀವ್ರವಾಗಿತ್ತು. ಇದರಿಂದ ಮನೆಗಳಲ್ಲಿ ಫ್ಯಾನ್, ಫ್ರಿಜ್, ಕೂಲರ್‌ನಂತಹ ಉಪಕರಣಗಳ ಬಳಕೆ ಹೆಚ್ಚಾಗಿ, ವಿದ್ಯುತ್ ಬಳಕೆಯೂ ಏರಿಕೆಯಾಗಿದೆ. ವಿದ್ಯುತ್ ಬಿಲ್ ಕೂಡ ಹೆಚ್ಚಾಗಿದೆ. ಇಂಥ ಪರಿಸ್ಥಿತಿಯಲ್ಲಿ ಮನೆ ಮಾಲೀಕರು ಬಾಡಿಗೆ ಹೆಚ್ಚಿಸಿರುವುದು ಇನ್ನಷ್ಟು ಸಂಕಷ್ಟ ಉಂಟು ಮಾಡಿದೆ ಎಂದು ಬಾಡಿಗೆದಾರರು ದೂರಿದರು.

ಅಂಕಿ ಅಂಶ

1.50 ಕೋಟಿ ರಾಜ್ಯದಲ್ಲಿ 'ಗೃಹಜ್ಯೋತಿ' ಫಲಾನುಭವಿಗಳು

60 ಲಕ್ಷ ಬೆಸ್ಕಾಂ ವ್ಯಾಪ್ತಿಯ 8 ಜಿಲ್ಲೆಗಳಲ್ಲಿ 'ಗೃಹಜ್ಯೋತಿ' ಫಲಾನುಭವಿಗಳು

35 ಲಕ್ಷ ಬಿಬಿಎಂಪಿ ವ್ಯಾಪ್ತಿಯ 'ಗೃಹಜ್ಯೋತಿ' ಫಲಾನುಭವಿಗಳು

ವಿಕ್ಟೋರಿಯಾ: ನೌಕರರ ಮರು ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಕ್ಟೋರಿಯಾ ಆಸ್ಪತ್ರೆ-ಯಲ್ಲಿ ಕೈಬಿಡಲಾಗಿದ್ದ ಗ್ರೂಪ್ 'ಡಿ'ನ 55 ನೌಕರರನ್ನು ಮರು ನೇಮಕ ಮಾಡಿಕೊಂಡು, ಎರಡು ತಿಂಗಳ ವೇತನ ನೀಡುವುದಾಗಿ ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಬಿಎಂಸಿಆರ್‌ಐ) ತಿಳಿಸಿದೆ.

ಈ ಹಿಂದೆ ಸ್ವಿಸ್ ಏಜೆನ್ಸಿ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇವರನ್ನು, ಹೊಸದಾಗಿ ಗುತ್ತಿಗೆ ಪಡೆದಿದ್ದ ಸ್ಫೂರ್ತಿ ಏಜೆನ್ಸಿ ಕೆಲಸದಿಂದ ತೆಗೆದು ಹಾಕಿತ್ತು. ಏಕಾಏಕಿ ಕೆಲಸದಿಂದ ತೆಗೆದು ಹಾಕಿದ್ದನ್ನು ವಿರೋಧಿಸಿ ಎಲ್ಲ 55 ಮಂದಿ ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿ ಕೆಲ ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದರು.

ಈ ಬಗ್ಗೆ ಬಿಎಂಸಿಆರ್‌ಐ ಡೀನ್ ಮತ್ತು ನಿರ್ದೇಶಕರ ಅಧ್ಯಕ್ಷತೆಯಲ್ಲಿ ರಚನೆಯಾದ ಸಮಿತಿಯು, ಎರಡೂ ಏಜೆನ್ಸಿಗಳ ಮುಖ್ಯಸ್ಥರೊಂದಿಗೆ ಸಭೆ ನಡೆಸಿ, ಕೈಬಿಡಲಾಗಿದ್ದ 55 ಮಂದಿಯನ್ನು ನೇಮಕ ಮಾಡಿಕೊಳ್ಳುವಂತೆ ಸೂಚಿಸಿದೆ.

ಕಳೆದ 10-15 ವರ್ಷಗಳಿಂದ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಿದ ಅನುಭವವನ್ನು ಸಿಬ್ಬಂದಿ ಹೊಂದಿದ್ದಾರೆ. ಹಾಗಾಗಿ, ಅನುಭವ ಮತ್ತು ಮಾನವೀಯತೆ ಆಧಾರದ ಮೇಲೆ ಅವರನ್ನು ತಕ್ಷಣವೇ ನೇಮಕ ಮಾಡಿಕೊಳ್ಳುವಂತೆ ಹಾಗೂ ಹೊಸದಾಗಿ ನೇಮಕ ಮಾಡಿಕೊಂಡಿರುವವರನ್ನು ಬೇರೆ ಕಡೆಗೆ ನಿಯೋಜಿಸುವಂತೆ ಏಜೆನ್ಸಿ ಮುಖ್ಯಸ್ಥರಿಗೆ ಸಮಿತಿ ತಿಳಿಸಿದೆ.

'ಕೆಲಸದಿಂದ ಕೈಬಿಡಲಾಗಿದ್ದ ಎಲ್ಲ 55 ಮಂದಿ ಹಲವು ವರ್ಷಗಳಿಂದ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದು, ಅನುಭವ ಹೊಂದಿದ್ದರು. ಹಾಗಾಗಿ, ಅವರನ್ನೇ ನೇಮಿಸಿಕೊಳ್ಳು-ವಂತೆ ಹೊಸ ಏಜೆನ್ಸಿಗೆ ತಿಳಿಸಲಾಗಿದೆ' ಎಂದು ಬಿಎಂಸಿಆರ್‌ಐ ಡೀನ್ ಮತ್ತು ನಿರ್ದೇಶಕ ಡಾ.ರಮೇಶ್ ಕೃಷ್ಣ ತಿಳಿಸಿದ್ದಾರೆ.

22ಕ್ಕೆ ಮುತ್ಯಾಲಮ್ಮ ದೇವಿ ರಥೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು : ಶಿವಾಜಿನಗರ ಸೆಪ್ಪಿಂಗ್ಸ್ ರಸ್ತೆಯ ಮುತ್ಯಾಲಮ್ಮ ದೇವಿ ರಥೋತ್ಸವ ಮೇ 22ರಂದು ನಡೆಯಲಿದೆ.

ಮಂಗಳವಾರ ವನಭೋಜನ ದಿಂದ ಮಹೋತ್ಸವ ಆರಂಭವಾಗಿದ್ದು, ಮೇ 21ರಂದು ದೀಪೋತ್ಸವ ನಡೆಯಲಿದೆ. ಮೇ 29 ರಂದು ಶಯನೋತ್ಸವ ದೊಂದಿಗೆ ಮುಕ್ತಾಯಗೊಳ್ಳಲಿದೆ.

ಏಪ್ರಿಲ್ ತಿಂಗಳಲ್ಲಿ ರಥೋತ್ಸವ ನಡೆಯಬೇಕಿತ್ತಾ-ದರೂ ಲೋಕಸಭೆ ಚುನಾವಣೆ ಇದ್ದಿದ್ದರಿಂದ ಮುಂದೂಡ ಲಾಗಿತ್ತು ಎಂದು ಮುತ್ಯಾಲಮ್ಮ ದೇವಿ ಟ್ರಸ್ಟ್ ಪ್ರಕಟಣೆ ತಿಳಿಸಿದೆ.

ಬೆಂಗಳೂರು, ಕೋಲಾರ, ರಾಮನಗರ, ಚಿಕ್ಕಬ-ಳ್ಳಾಪುರ, ತುಮಕೂರು, ಮೈಸೂರು ಸೇರಿದಂತೆ ರಾಜ್ಯದ ವಿವಿಧೆಡೆಯಿಂದ ಭಕ್ತರು ರಥೋತ್ಸವದಲ್ಲಿ ಪಾಲ್ಗೊಳ್ಳ-ಲಿದ್ದಾರೆ.

ಹೈಕೋರ್ಟ್ ವಕೀಲ ಸಿ.ಎಚ್.ಹನುಮಂತರಾಯ ಅಭಿಪ್ರಾಯ

ಬಲಾಢ್ಯರಿಂದ ಸಾಕ್ಷಿ ತಿರುಚುವ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನದ ಲೈಂಗಿಕ ದೌರ್ಜನ್ಯ ಪ್ರಕರಣದ ಆರೋಪಿಗಳು ಸಾಮಾಜಿಕವಾಗಿ, ರಾಜಕೀಯವಾಗಿ ಬಲಾಢ್ಯರಾಗಿದ್ದು, ಸಾಕ್ಷಿಗಳನ್ನು ತಿರುಚುವ, ಅಳಿಸಿ ಹಾಕುವ ಸಾಧ್ಯತೆ ಇದೆ ಎಂದು ಹೈಕೋರ್ಟ್ ವಕೀಲ ಸಿ.ಎಚ್. ಹನುಮಂತರಾಯ ಎಚ್ಚರಿಸಿದರು.

ಲೈಂಗಿಕ ದೌರ್ಜನ್ಯದ ಸಂತ್ರಸ್ತೆ ಯರಿಗೆ ನ್ಯಾಯ, ರಕ್ಷಣೆ ಹಾಗೂ ಅಪರಾಧಿಗಳಿಗೆ ಕಠಿಣ ಶಿಕ್ಷೆಗೆ ಆಗ್ರಹಿಸಿ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್) ಮಂಗಳವಾರ ಹಮ್ಮಿಕೊಂಡಿದ್ದ ರಾಜ್ಯ ಮಟ್ಟದ ಸಮಾವೇಶದಲ್ಲಿ ಅವರು ಮಾತನಾಡಿದರು.

ಬಹು ಆಯಾಮ ಹೊಂದಿರುವ ಈ ಪ್ರಕರಣವನ್ನು ನಿಷ್ಪಕ್ಷಪಾತವಾಗಿ ತನಿಖೆ ನಡೆಸಲು ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕು. ತನಿಖೆ ದಾರಿ ತಪ್ಪದಂತೆ ಮಾಡಲು ಇಂಥ ಚಳವಳಿಗಳು ಅಗತ್ಯ ಎಂದು ಪ್ರತಿಪಾದಿಸಿದರು.

ನಗರದಲ್ಲಿ ಮಂಗಳವಾರ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ ಆಯೋಜಿಸಿದ ರಾಜ್ಯಮಟ್ಟದ ಮಹಿಳಾ ಸಮಾವೇಶದಲ್ಲಿ ಹೈಕೋರ್ಟ್ ವಕೀಲ ಸಿ.ಎಚ್.ಹನುಮಂತರಾಯ ಮಾತನಾಡಿದರು. ಎಐಎಂಎಸ್‌ಎಸ್ ರಾಜ್ಯ ಕಾರ್ಯದರ್ಶಿ ಶೋಭಾ ಎಸ್., ರಾಷ್ಟ್ರೀಯ ಉಪಾಧ್ಯಕ್ಷೆ ಡಾ.ಸುಧಾಕಾಮತ್ ಮತ್ತು ರಾಜ್ಯಾಧ್ಯಕ್ಷೆ ಎಂ.ಎನ್.ಮಂಜುಳಾ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ಪ್ರಾಣಿಗಳ ಮೇಲಿನ ದೌರ್ಜನ್ಯ ತಡೆಯಲು ನಮ್ಮಲ್ಲಿ 41 ಕಾಯ್ದೆಗಳಿವೆ. ಆದರೆ, ಮಹಿಳೆಯರ ಮೇಲಿನ ದೌರ್ಜನ್ಯ ತಡೆಯಲು ಇರುವುದು 24 ಕಾಯ್ದೆಗಳು. ಇಂಥ ಲೋಪಗಳನ್ನು ಮೊದಲು ಸರಿಪಡಿಸಬೇಕು ಎಂದು ಆಗ್ರಹಿಸಿದರು.

ಎಐಎಂಎಸ್‌ಎಸ್ ಉಪಾಧ್ಯಕ್ಷೆ ಡಾ. ಸುಧಾ ಕಾಮತ್ ಮಾತನಾಡಿ, 'ಪ್ರಜ್ವಲ್ ರೇವಣ್ಣ ಕೇವಲ ಅತ್ಯಾ-ಚಾರಿಯಲ್ಲ, ವಿಕೃತಕಾಮಿ. ವಿಡಿಯೊ ಮಾಡಿಟ್ಟುಕೊಂಡು ಹೆಣ್ಣುಮಕ್ಕಳನ್ನು ಬ್ಲ್ಯಾಕ್‌ಮೇಲ್ ಮಾಡಲು ಬಳಸುತ್ತಿದ್ದ' ಎಂದು ಆರೋಪಿಸಿದರು.

ಅತ್ಯಾಚಾರಿ ಪುರುಷನನ್ನು ಬಿಟ್ಟು ಬಲಿಪಶು ಮಹಿಳೆಯರನ್ನೇ ತಪ್ಪಿತಸ್ಥ ಸ್ಥಾನದಲ್ಲಿ ನಿಲ್ಲಿಸಲಾಗುತ್ತಿದೆ. ವ್ಯಾಪಕವಾಗಿ ಹರಡುತ್ತಿರುವ ಅಶ್ಲೀಲತೆ ಮನುಷ್ಯನಲ್ಲಿರುವ ಸೂಕ್ಷ್ಮ ಸಂವೇದನೆ ಗಳನ್ನು ನಾಶಗೊಳಿಸುತ್ತಿದೆ. ಯುವ ಜನರು ಇದಕ್ಕೆ ಬಲಿಯಾಗದೇ ಈ ಸಮಸ್ಯೆಗಳಿಗೆ ಮೂಲ ಕಾರಣವಾದ ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಹೋರಾಟ ನಡೆಸಬೇಕು ಎಂದರು.

ಎಐಎಂಎಸ್‌ಎಸ್ ರಾಜ್ಯ ಅಧ್ಯಕ್ಷೆ ಎಂ.ಎನ್. ಮಂಜುಳಾ ಮಾತನಾಡಿ, 'ಹಾಸನದ ಈ ಘಟನೆ ಮಾನವಕುಲಕ್ಕೆ ಆದ ಅವಮಾನ. ವಿಕೃತ ಮನಸು, ಅಧಿಕಾರದ ದರ್ಪ, ರಾಜಕೀಯ ಬೆಂಬಲ ಈ ದುಷ್ಕೃತ್ಯಕ್ಕೆ ಕಾರಣವಾಗಿದೆ. ಹೆಣ್ಣು ಮಕ್ಕಳನ್ನು ಹಲವು ರೀತಿಯ ಬೆದರಿಕೆಗಳನ್ನೊಡ್ಡಿ ಈ ಕೃತ್ಯವನ್ನು ಎಸಗಲಾಗಿದೆ. ಕಾನೂನಿನ ಲ್ಲಿರುವ ಲೋಪಗಳು ಅಪರಾಧಿಗೆ ಶಿಕ್ಷೆಯಾಗದಂತೆ ತಡೆಯುತ್ತಿವೆ' ಎಂದು ಬೇಸರ ವ್ಯಕ್ತಪಡಿಸಿದರು.

ಸಂಘಟನೆಯ ರಾಜ್ಯ ಕಾರ್ಯದರ್ಶಿ ಎಸ್.ಶೋಭಾ ಅಧ್ಯಕ್ಷತೆ ವಹಿಸಿದ್ದರು.

ರಾಮಯ್ಯ ವಿ.ವಿ : 233 ಪ್ರಾಜೆಕ್ಟ್ ಪ್ರದರ್ಶನ

ಬೆಂಗಳೂರು: ಎಂ.ಎಸ್.ರಾಮಯ್ಯ ಅನ್ವಯಿಕ ವಿಜ್ಞಾನ ವಿಶ್ವವಿದ್ಯಾಲಯವು ಪೀಣ್ಯದಲ್ಲಿರುವ ರಾಮಯ್ಯ ಟೆಕ್ನಾಲಜಿ ಕ್ಯಾಂಪಸ್‌ನಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ತಂತ್ರಜ್ಞಾನ ದಿನ ಕಾರ್ಯಕ್ರಮದಲ್ಲಿ ತಂತ್ರಜ್ಞಾನ ಆಧಾರಿತ 233 ಪ್ರಾಜೆಕ್ಟ್‌ಗಳನ್ನು ಪ್ರದರ್ಶಿಸಲಾಯಿತು.

ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಟಿಸಿಎಸ್ ಡೆಲಿವರಿ ಸೆಂಟರ್ ಮುಖ್ಯಸ್ಥ ಸುನೀಲ್ ದೇಶಪಾಂಡೆ, ಕೃತಕ ಬುದ್ಧಿಮತ್ತೆ ತಂತ್ರಜ್ಞಾನ, ಡ್ರೋನ್ ಹಾಗೂ ಎಲೆಕ್ಟ್ರಿಕ್ ವಾಹನ ಕ್ಷೇತ್ರದ ಪ್ರಗತಿಯ ಬಗ್ಗೆ ವಿವರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಕುಲದೀಪ್ ಕುಮಾರ್ ರೈನಾ, ವಿದ್ಯಾರ್ಥಿಗಳು ಹಾಗೂ ಅವರ ಮಾರ್ಗದರ್ಶಕರನ್ನು ಪ್ರಶಂಸಿಸಿದರು.

ನಗರದ ವಿವಿಧ ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು. ಪದವಿ ಪೂರ್ವ ಮತ್ತು ಸ್ನಾತಕೋತ್ತರ ಕೋರ್ಸ್‌ಗಳು ಒಳಗೊಂಡಂತೆ ಅಂತಿಮ ವರ್ಷದ 800 ವಿದ್ಯಾರ್ಥಿಗಳು ವಿವಿಧ ಪ್ರಾಜೆಕ್ಟ್‌ಗಳನ್ನು ಪ್ರದರ್ಶಿಸಿದರು. ತೀರ್ಪುಗಾರರು ಮೌಲ್ಯಮಾಪನದ ಬಳಿಕ ಅತ್ಯುತ್ತಮ ಪ್ರಾಜೆಕ್ಟ್‌ಗಳಿಗೆ ಬಹುಮಾನ ನೀಡಲಾಯಿತು.

ರಾಮಯ್ಯ ಟೆಕ್ನಾಲಜಿ ಕ್ಯಾಂಪಸ್ ಡೀನ್ ಜಿ.ವಿ. ದೇಸಾಯಿ, ಸಹ ಡೀನ್ ನಯನಾ ಎನ್. ಪಾಟೀಲ ಪಾಲ್ಗೊಂಡಿದ್ದರು.

ಅಮರಜ್ಯೋತಿ ಶಾಲೆ ಉತ್ತಮ ಸಾಧನೆ

ಶಂಕರ್ ಆರ್. ಪಾಟೀಲ್

ವಿಷ್ಣು ಅಮರನಾಥ್

ಕೆ.ಆರ್.ಪುರ: ದೇವಸಂದ್ರದ ಅಮರ ಜ್ಯೋತಿ ಇಂಗ್ಲಿಷ್ ಪ್ರೈಮರಿ ಶಾಲೆಯ ವಿದ್ಯಾರ್ಥಿಗಳು ಈ ಬಾರಿ ಹತ್ತನೇ ತರಗತಿಯ ಐಸಿಎಸ್‌ಇ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ.

ವಿದ್ಯಾರ್ಥಿ ಶಂಕರ್ ಆರ್. ಪಾಟೀಲ್ ಶೇ 98.80 ಅಂಕ ಪಡೆದು ಶಾಲೆಗೆ ಪ್ರಥಮ ಸ್ಥಾನ ಹಾಗೂ ವಿಷ್ಣು ಅಮರನಾಥ್ ಶೇ 97.80 ಪಡೆದು ಶಾಲೆಗೆ ದ್ವಿತೀಯ ಸ್ಥಾನ ಪಡೆದಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನವ್ಯಾ ಡಿ.

ಶೇ 98.72
ಎನ್‌ಇಟಿ ಪಬ್ಲಿಕ್ ಶಾಲೆ, ಗವಿಪುರ

ಕಬ್ಬನ್ ಉದ್ಯಾನ: ಸಿನಿಮಾ ಚಿತ್ರೀಕರಣಕ್ಕೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬನ್ ಉದ್ಯಾನದಲ್ಲಿ ಚಿತ್ರೀಕರಣ ಮಾಡುವುದನ್ನು ನಿಷೇಧಿಸಲಾಗಿದೆ. ಆದರೆ, ಸೋಮ-ವಾರದಂದು(ಮೇ 13) ಉದ್ಯಾನದ ರಾಜ್ಯ ಕೇಂದ್ರ ಗ್ರಂಥಾಲಯದ ಭಾಗದಲ್ಲಿ ಸಿನಿಮಾ ಚಿತ್ರೀಕರಣ ಮಾಡಲು ಅವಕಾಶ ನೀಡಿರುವುದಕ್ಕೆ ಕಬ್ಬನ್ ಉದ್ಯಾನ ನಡಿಗೆದಾರರ ಸಂಘ ಆಕ್ಷೇಪ ವ್ಯಕ್ತಪಡಿಸಿದೆ.

'ಕಬ್ಬನ್ ಉದ್ಯಾನದಲ್ಲಿ ಚಲನಚಿತ್ರ ಚಿತ್ರೀಕರಣ, ಛಾಯಾಗ್ರಹಣ ಮತ್ತು ವಿಡಿಯೋಗ್ರಫಿ ಮಾಡುವುದನ್ನು ನಿಷೇಧಿಸಲಾಗಿದೆ. ಆದರೆ, ತೋಟಗಾರಿಕೆ ಇಲಾಖೆಯು ಚಿತ್ರೀಕರಣ ಮಾಡುವುದಕ್ಕೆ ಅನುಮತಿ ನೀಡಿರುವುದು ಖಂಡನೀಯ. ಈ ಬಗ್ಗೆ ತನಿಖೆ ನಡೆಸಿ, ಅವಕಾಶ ನೀಡಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಸಂಘವು ಆಗ್ರಹಿಸಿದೆ.

'ಸಿನಿಮಾ ಚಿತ್ರೀಕರಣ ಮಾಡುವುದಕ್ಕೆ ಅವಕಾಶ ಕಲ್ಪಿಸುವ ಮೂಲಕ ಉದ್ಯಾನವನ್ನು ವಾಣಿಜ್ಯ ಉದ್ದೇಶಗಳಿಗೆ ಬಳಕೆ ಮಾಡಿಕೊಳ್ಳ ಲಾಗುತ್ತಿದೆ' ಎಂದು ದೂರಿದೆ.

'ತೋಟಗಾರಿಕೆ ಇಲಾಖೆ ಉಪನಿರ್ದೇಶಕಿ (ಕಬ್ಬನ್ ಉದ್ಯಾನ) ಪವಿತ್ರಾ, 'ಕಬ್ಬನ್ ಉದ್ಯಾನದಲ್ಲಿ ಚಲನಚಿತ್ರ ಚಿತ್ರೀಕರಣ ಮಾಡುವುದಕ್ಕೆ ತೋಟಗಾರಿಕೆ ಇಲಾಖೆಯಿಂದ ಯಾವುದೇ ರೀತಿಯ ಅನುಮತಿ ನೀಡಿಲ್ಲ. ಆದರೆ, ಉದ್ಯಾನದ ಆವರ-ಣದಲ್ಲಿರುವ ಕೇಂದ್ರ ಗ್ರಂಥಾಲಯದಲ್ಲಿ ಚಿತ್ರೀಕರಣ ಮಾಡುವುದಕ್ಕೆ ಸಾರ್ವಜನಿಕ ಗ್ರಂಥಾಲಯ ಇಲಾಖೆ ಅನುಮತಿ ನೀಡಿದೆ' ಎಂದು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ಕಬ್ಬನ್ ಉದ್ಯಾನ ಒಂದು ಸಂರಕ್ಷಿತ ಪ್ರದೇಶ. ಉದ್ಯಾನದ ಅಂದಕ್ಕೆ ಯಾವುದೇ ಧಕ್ಕೆ ಆಗಬಾರದು. ಹೀಗಾಗಿ ಕ್ಯಾಮರಾ ಬಳಕೆಯನ್ನು ನಿಷೇಧಿಸಲಾಗಿದೆ' ಎಂದು ತಿಳಿಸಿದರು.

ಹೊಸ ವಿದ್ಯುತ್ ಬಾಕ್ಸ್ ಅಳವಡಿಕೆ

ವರದಿ ಪರಿಣಾಮ

ಬೆಂಗಳೂರು: ಗಾಂಧಿ ನಗರದ ಎರಡನೇ ಮುಖ್ಯ ರಸ್ತೆಯ ಕ್ರಾಸ್‌ನಲ್ಲಿ ಬಾಗಿಲು ತೆರೆದ ಸ್ಥಿತಿಯಲ್ಲಿ-ದ್ದ ವಿದ್ಯುತ್ ಬಾಕ್ಸ್ ಅನ್ನು ತೆರವುಗೊಳಿಸಿ, ಹೊಸ ಬಾಕ್ಸ್ ಅನ್ನು ಅಳವಡಿಸ-ಲಾಗಿದೆ.

'ಪ್ರಜಾವಾಣಿ'ಯ ಕುಂದು ಕೊರತೆ ವಿಭಾಗದಲ್ಲಿ ಮೇ 13ರಂದು 'ವಿದ್ಯುತ್ ಬಾಕ್ಸ್ ಸರಿಪಡಿಸಿ' ಎಂಬ ಶೀರ್ಷಿಕೆಯಲ್ಲಿ ವರದಿ ಪ್ರಕಟವಾಗಿತ್ತು. ಇದರಿಂದ, ಎಚ್ಚೆತ್ತ ಬೆಸ್ಕಾಂ ಅಧಿಕಾರಿಗಳು ವಿದ್ಯುತ್ ಬಾಕ್ಸ್ ಅನ್ನು ತೆರವುಗೊಳಿಸುವ ಮೂಲಕ ಮುಂದಾಗುವ ಅನಾಹುತ ಗಳನ್ನು ತಪ್ಪಿಸಿದ್ದಾರೆ. ಹೊಸ ಬಾಕ್ಸ್ ಅಳವಡಿಸಿ ರುವ ಬಗ್ಗೆ ಬಿಬಿಎಂಪಿಗೂ ಮಾಹಿತಿ ನೀಡಿಲಾಗಿದೆ' ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

ನಗರದಲ್ಲಿ ಇಂದು

56ನೇ ವರ್ಷದ ಮಕ್ಕಳ ಬೇಸಿಗೆ ರಜೆಯ ಸಾಂಸ್ಕೃತಿಕ ಶಿಕ್ಷಣ ಹಾಗೂ ಮನೋರಂಜನಾ ಶಿಬಿರ–2024: ಬೀಳ್ಕೊಡುಗೆ ಹಾಗೂ ಬಹುಮಾನ ವಿತರಣಾ ಸಮಾರಂಭ: ಅಧ್ಯಕ್ಷತೆ: ಮೋಹನ್‌ದೇವ್ ಆಳ್ವ, ಬಹುಮಾನ ವಿತರಣೆ: ಎಂ.ಕೆ. ಶೈಲಜಾ ಆಳ್ವ, ಅತಿಥಿ: ಎನ್. ಚಂದ್ರಶೇಖರ್, ಆಯೋಜನೆ ಮತ್ತು ಸ್ಥಳ: ಅಖಿಲ ಕರ್ನಾಟಕ ಮಕ್ಕಳ ಕೂಟ, ಆರ್. ಕಲ್ಯಾಣಮ್ಮ ಮಕ್ಕಳ ಆಟದ ಮೈದಾನ, ಕೋಟೆ, ಬೆಳಿಗ್ಗೆ 11

ಬಸವೇಶ್ವರ ಜಯಂತಿ: ಅಧ್ಯಕ್ಷತೆ: ರಾಣಿ ಸತೀಶ್, ಅತಿಥಿ: ಮೀನಾಕ್ಷಿ ಬಾಳಿ, ಆಯೋಜನೆ: ಅಕ್ಕಮಹಾದೇವಿ ಸೇವಾ ಸಮಾಜ, ಸ್ಥಳ: ಕುಮಾರಪಾರ್ಕ್ ಸಮಾಜದಲ್ಲಿ, ನಂ. 20, ಅಕ್ಕಮಹಾದೇವಿ ಸೇವಾ ಸಮಾಜ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಮಧ್ಯಾಹ್ನ 3

ಉಮೇಶ್ ಉಪಾಧ್ಯಾಯ ಅವರ 'ವೆಸ್ಟರ್ನ್ ಮೀಡಿಯಾ ನರೇಟಿವ್ಸ್ ಆನ್ ಇಂಡಿಯಾ– ಫರ್ಮ್ ಗಾಂಧಿ ಟು ಮೋದಿ' ಪುಸ್ತಕದ ಕುರಿತು ಸಂವಾದ: ಆಯೋಜನೆ: ಮಂಥನ, ಸ್ಥಳ: ಶ್ರೀಕೃಷ್ಣದೇವರಾಯ ಕಲಾಮಂದಿರ, ಮಲ್ಲೇಶ್ವರ ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಮಗು ಮಾರಾಟ ಪ್ರಕರಣಕ್ಕೆ ಹೊಸ ತಿರುವು • ಹಣ ಪಡೆದು ದತ್ತು ನೀಡಿದ ಆರೋಪ

ದತ್ತು ನೀಡಿದ ಮಗು ಮರಳಿ ಕೇಳಿದ ತಾಯಿ

ಪ್ರಜಾವಾಣಿ ವಾರ್ತೆ

ಬಂಗಾರಪೇಟೆ (ಕೋಲಾರ): ಹಣಕ್ಕಾಗಿ ಪತಿಯು ಮಾರಾಟ ಮಾಡಿದ್ದ ಮಗುವನ್ನು ಮರಳಿ ನೀಡುವಂತೆ ಮಗುವಿನ ತಾಯಿ ಪೊಲೀಸ್ ಠಾಣೆ ಮೆಟ್ಟಿಲೇರಿದ್ದಾಳೆ. ದಂಪತಿ ಸಮ್ಮತಿಯ ಮೇರೆಗೆ ಮಗುವನ್ನು ದತ್ತು ನೀಡಿರುವ ವಿಷಯ ವಿಚಾರಣೆ ವೇಳೆ ಬಹಿರಂಗ-ವಾಗಿದ್ದು, ಇಡೀ ಪ್ರಕರಣ ನಾಟಕೀಯ ತಿರುವು ಪಡೆದುಕೊಂಡಿದೆ.

'ಸಾಲ ತೀರಿಸುವ ನೆಪದಲ್ಲಿ ಪತಿ ಎಸ್.ಎ.ಮುನಿರಾಜು ನನಗೆ ಗೊತ್ತಿಲ್ಲದೇ ಮಗುವನ್ನು ಹಣಕ್ಕೆ ಮಾರಾಟ ಮಾಡಿದ್ದಾರೆ' ಎಂದು ಪಟ್ಟಣದ ಕೆರೆಕೋಡಿ ವಾರ್ಡ್‌ನ ಕೆ.ಪವಿತ್ರಾ ಎಂಬ ಮಹಿಳೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮೊರೆ ಹೋಗಿದ್ದರು. ಈ ಸಂಬಂಧ ಮಕ್ಕಳ ರಕ್ಷಣಾ ಘಟಕ ಅಧಿಕಾರಿ ನಾಗರತ್ನಾ ಭಾನುವಾರ ಬಂಗಾರಪೇಟೆ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಮುಖ್ಯಾಂಶಗಳು

- ಬಂಗಾರಪೇಟೆ ಉಪ ನೋಂದಣಾಧಿಕಾರಿ ಕಚೇರಿ ಯಲ್ಲಿ ದತ್ತು ಸ್ವೀಕಾರ ಪತ್ರ
- ದತ್ತು ನಿಯಮ ಉಲ್ಲಂಘನೆ ಆರೋಪ
- ಮಗುವಿನೊಂದಿಗೆ ದತ್ತು ಪಡೆದವರು ಠಾಣೆಗೆ ಹಾಜರು

ಪೊಲೀಸರು ಮಹಿಳೆಯನ್ನು ವಿಚಾರಣೆಗೆ ಒಳಪಡಿಸಿದಾಗ ಪರಸ್ಪರ ಒಪ್ಪಿಗೆ ಮೇರೆಗೆ ದಂಪತಿ, ಮಗುವನ್ನು ದತ್ತು ನೀಡಿರುವುದಾಗಿ ಒಪ್ಪಿಕೊಂಡಿ-ದ್ದಾರೆ. ಆದರೆ, ದತ್ತು ಪ್ರಕ್ರಿಯೆ ಕಾನೂನು ಪ್ರಕಾರ ನಡೆದಿಲ್ಲ ಎಂದು ತಿಳಿದು ಬಂದಿದೆ. ಮಗುವನ್ನು ದತ್ತು ನೀಡಿದ ದಂಪತಿ ಮತ್ತು ದತ್ತು ಪಡೆದ ದಂಪತಿ ಹಾಗೂ ಸಾಕ್ಷಿಗಳನ್ನು ವಿಚಾರಣೆಗೆ ಒಳಪ-ಡಿಸಿದ್ದಾರೆ. ದತ್ತು ಪಡೆದವರು ಮಗು ಸಮೇತ 'ದತ್ತು ಸ್ವೀಕಾರ ಪತ್ರ'ದೊಂದಿಗೆ ವಿಚಾರಣೆಗೆ ಹಾಜರಾಗಿದ್ದಾರೆ.

ದೂರಿನಲ್ಲಿ ಏನಿದೆ?: ಕೆರೆಕೋಡಿ ವಾರ್ಡ್‌ನ ಪವಿತ್ರಾ ಅವರ ಎರಡನೇ ಗಂಡು ಮಗುವನ್ನು ಆಕೆಯ ಪತಿ ಮುನಿರಾಜು ಹಾಗೂ ಅದೇ ವಾರ್ಡ್ ನಿವಾಸಿ ವಲ್ಲಿ ಎಂಬ ಮಹಿಳೆ ಸೇರಿ ಅಪರಿಚಿತರಿಗೆ ಮಾರಾಟ ಮಾಡಿದ್ದಾರೆ. ಈ ಸಂಬಂಧ ಕಾನೂನು ಕ್ರಮ ಕೈಗೊಂಡು ಮಗುವನ್ನು ತಾಯಿಗೆ ವಾಪಸ್ ಕೊಡಿಸಿ ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿ, ಪೊಲೀಸರಿಗೆ ನೀಡಿದ ದೂರಿನಲ್ಲಿ ಮನವಿ ಮಾಡಿದ್ದರು.

ಈ ಹಿನ್ನೆಲೆಯಲ್ಲಿ ಪೊಲೀಸರು ಪವಿತ್ರಾ ಅವರನ್ನು ಕರೆದು ತನಿಖೆಗೆ ಒಳಪಡಿಸಿದ್ದಾರೆ. ಆಗ ಅವರು ನಡೆದ ಘಟನೆ ವಿವರಿಸಿದ್ದಾರೆ.

ದತ್ತು ಸ್ವೀಕಾರ ಪತ್ರ: ಮುನಿರಾಜು ಹಾಗೂ ಪವಿತ್ರಾ ಅವರ ಮೂರು ತಿಂಗಳ ಮಗುವನ್ನು ತಾಲ್ಲೂಕಿನವರೇ ಆದ ಹೆನ್ರಿ ಜೋಸೆಫ್ ಹಾಗೂ ಎನ್.ಭುವನೇಶ್ವರಿ ಎಂಬುವರಿಗೆ ದತ್ತು ನೀಡಿರುವ 'ದತ್ತು ಸ್ವೀಕಾರ ಪತ್ರ'ವನ್ನು ಬಂಗಾರಪೇಟೆ ಉಪನೋಂದಣಾಧಿಕಾರಿ ಕಚೇರಿಯಲ್ಲಿ 2023ರ ಆಗಸ್ಟ್ 16ರಂದು ನೋಂದಾಯಿಸಲಾಗಿದೆ.

ಅದರಲ್ಲಿ ಮುನಿರಾಜು ಹಾಗೂ ಪವಿತ್ರಾ ಅವರ ಫೋಟೊ, ಹೆಬ್ಬೆಟ್ಟು ಗುರುತು ಹಾಗೂ ಸಹಿಯೂ ಇದೆ. ಸಾಕ್ಷಿಗಳ ಸಮೇತ ದತ್ತು ಪಡೆದವರ ವಿವರವೂ ಇದೆ.

'ಪ್ರಕ್ರಿಯೆ ನಿಯಮ ಪ್ರಕಾರ ನಡೆದಿಲ್ಲ'

'ಮಗು ಮಾರಾಟವಾಗಿದೆ ಎಂದು ಕೆಲ ತಿಂಗಳ ಹಿಂದೆ ಮಕ್ಕಳ ಸಹಾಯವಾಣಿಗೆ ಕರೆ ಬಂದಿತ್ತು. ನಾವು ಎಷ್ಟೇ ಪ್ರಯತ್ನ ಪಟ್ಟರೂ ಆಗ ವಿಳಾಸ ಪತ್ತೆಯಾಗಿರಲಿಲ್ಲ. ಪತಿಯು ಮಗು ಮಾರಾಟ ಮಾಡಿದ್ದಾರೆ ಎಂದು ಎರಡು ದಿನಗಳ ಹಿಂದೆ ಮಗುವಿನ ತಾಯಿಯೇ ನಮಗೆ ದೂರು ನೀಡಿದರು. ಈ ಸಂಬಂಧ ನಾವು ಪೊಲೀಸ್ ಠಾಣೆಗೆ ದೂರು ದಾಖಲಿಸಿದೆವು. ದತ್ತು ನೀಡಿರುವ ವಿಚಾರವನ್ನು ಪೊಲೀಸರ ಮುಂದೆ ಮಹಿಳೆ ಒಪ್ಪಿಕೊಂಡಿದ್ದಾರೆ. ಇದಕ್ಕೆ ಸಂಬಂಧಪಟ್ಟವರನ್ನು ಪೊಲೀಸರು ತನಿಖೆಗೆ ಒಳಪಡಿಸಿದ್ದಾರೆ. ಪ್ರಕರಣದಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹಿಸಿದ್ದೇವೆ' ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿ ನಾಗರತ್ನಾ 'ಪ್ರಜಾವಾಣಿ'ಗೆ ತಿಳಿಸಿದರು.

'ಮಗು ದತ್ತು ನೀಡಿ ಉಪನೋಂದಣಾಧಿಕಾರಿ ಕಚೇರಿಯಲ್ಲಿ ದತ್ತು ಸ್ವೀಕಾರ ಪತ್ರ ಮಾಡಿಸಿದ್ದಾರೆ. ಆದರೆ, ನಿಯಮದ ಪ್ರಕಾರ ದತ್ತು ಪ್ರಕ್ರಿಯೆ ನಡೆದಿಲ್ಲ ಎಂಬುದು ಗೊತ್ತಾಗಿದೆ' ಎಂದರು.

SRI DEVARAJ URS ACADEMY OF HIGHER EDUCATION AND RESEARCH
KNOWLEDGE FOR POSTERITY SDUAHER
A DEEMED TO BE UNIVERSITY (Declared under section 3 of UGC Act. 1956)
TAMAKA, KOLAR-563 103, KARNATAKA, INDIA
Phone: 9448395233 Extn. 470 E-mail: admission.fahbs@sduaher.ac.in
No. SDUAHER/KLR/ADMN/ 362 /2024-25 Date: 29.04.2024
NOTIFICATION
Applications are invited from eligible candidates for admission to the following programs for the academic year 2024-25.
Bachelor Programs (AHS): Medical Laboratory Technology, Anesthesia and Operation Theatre Technology, Medical Radiology & Imaging Technology, Optometry, Renal Dialysis Technology, Radio Therapy Technology, Cardiac Care Technology, Cardiac Perfusion Technology, Respiratory Care Technology, Emergency Medicine Technology, Blood Banking Technology, Clinical Psychology, Audiology and Speech Language Pathology, Physiotherapy, B.Sc.-M.Sc. Integrated Clinical Nutrition and Dietetics.
Important Dates: Issue of application forms: 15-04-2024 Last date for receipt of filled applications: 31-07-2024 Commencement of Admission: 08-08-2024 Commencement of the classes: 23-09-2024 onwards.
Bachelor program (Nursing): B.Sc. Nursing, PB B.Sc. Nursing (as per INC).
Master's program (Nursing): M.Sc. (N) with Medical surgical, Community health, Pediatric, OBG and Psychiatry Nursing specialty (as per INC).
Important Dates: Online application forms available from: 16-05-2024 Last date for receipt of filled applications: 06-06-2024 Entrance Examination for B.Sc. (N): 14.06.2024, Commencement of the classes for all programs: 01-08-2024 onwards.
PG/Ph.D./Fellowship Programs: Post Graduate Courses: M.Sc. Molecular Biology and Human Genetics, M.Sc. Medical Laboratory Technology, M.Sc. Anesthesia and Operation Theatre Technology, M.Sc. Medical Radiology & Imaging Technology, Master of Optometry, M.Sc. Yoga, and Master of Physiotherapy.
Fellowship: Head and Neck Surgical Oncology, Oral Onco- Surgery.
Ph.D.: Faculty of Medicine: Anatomy, Physiology, Biochemistry, Microbiology, Pathology and Medical Education. Clinical subjects - Medicine, OBG, Surgery, and Community Medicine.
FAH & BS: Cell Biology and Molecular Genetics, Speech Language Pathology, Clinical Nutrition and Dietetics and Physiotherapy. Faculty of Nursing: Medical Surgical Nursing, Child Health Nursing.
Important Dates: Issue of application forms: 01-06-2024, Last date for receipt of filled applications: 01-08-2024 Date of entrance examination for Ph.D./Fellowship 10-08-2024 (UGC NET score will be considered for Ph.D. admission). Commencement of the Admission: 19-08-2024 Commencement of Course: 16-09-2024 onwards.
For further details log on to www.sduaher.ac.in Sd/- Registrar

Bengaluru
Dastkar Bazaar
15th - 21st May 2024
10.30 am - 8.00pm | Entry Rs. 100/- | Free Parking
We are so excited to be bringing 160+ crafts groups under one roof. More than 25 states of India will be representing their craft traditions it's 40% of new groups coming to Bengaluru for the first time.
CRAFT WORKSHOPS
Terracotta Pottery, Sholapith flower making, Pattachitra, Gond Kalighat, Pichwai & Madhubani painting.
Dates: 18th & 19th May 2024 | Time: 3 pm - 6 pm
Participation Fees: INR 300/-
CULTURAL PERFORMANCE
Rouf Dance from Kashmir
Date: 16th, 17th, 18th & 19th may 2024 | Time: 12 pm–7 pm
Jayamahal Palace Hotel
#1, Behind Cantonment Railway Station, Bengaluru
E-mail: info@dastkar.org | Mob: 9742801793 | 9910802970

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

NIRMAN INTERNATIONAL PUBLIC SCHOOL, Near Automated RTO,7th Block, Vishweshwaraiah Layout, Bangalore-91 Requires Qualified TEACHERS for All Subjects, Computer and PE. Contact: 8123030731/ 9986055970. Email: nirmanorganisation@ gmail.com

WANTED QUALIFIED Nursery Primary Computer Teachers for all Subjects Royal English School Rajajinagar: 9611878492/ 8861406060/ 9945276973

|| Jai Sri Gurdev ||
Sri Adichunchanagiri Shikshana Trust(R)
BGS Global Institute of Pharmaceutical Sciences
No.69, Uttarahalli Road, Dr. Vishnuvardhan Road, Kengeri - 560 060. Tel No. : 080 269848001

Applications are invited from the eligible candidate for the following position in **Teaching and Non-Teaching for the recruitment in Pharmacy College**

Assistant Professor (Qualification: **M. Pharm**)

- Pharmaceutics 2 Posts
- Pharmaceutical Chemistry 2 Posts
- Pharmacology 2 Posts
- Pharmacognosy 2 Posts

Lecturer - 4 Posts (Qualification: B. Pharm with 3 Years of Teaching Experience)
Technician (Qualification: D. Pharm) 3 Posts
Computer Operator (Qualification: Diploma) 2 Posts
Qualification: As per PCI Norms
Pay Scale: As per PCI / Trust / Government of Karnataka norms

Applications on plain paper giving complete resume along with copies of relevant certificate and testimonials should be sent to the undersigned within 07 days from the date of advertisements or Email on
bgsgipsprincipal@gmail.com
bgssecretary7@gmail.com
principalbgspharmacy@gmail.com
Sd/- Secretary

RBANM's Educational Charities
24, Gangadhara Chetty Road, Bengaluru-560 042, Ph: 080-41311570
Career Opportunities- Applications invited for the Post of Principal at RBANM's First Grade College
Principal : Job Code: FGCPR-01
Qualification: Master Degree in any discipline with Ph.D., with minimum of 15 years' Experience as a Principal or any Senior Position in Reputed Educational Institutions with Proven Leadership Capabilities and Administrative Work. Knowledge of Kannada is preferred. Should be capable of handling work related to the Educational Department.
Skills: Excellent Communication Skills, Interpersonal Development Skills and Computer knowledge is a must.
Salary: Gross Monthly Remuneration will be best in the Industry.
Interested candidates may send their latest and detailed profile to jobs@rbanmscharities.in OR post your resume to Secretary, RBANM's Educational Charities, # 24, Gangadhara Chetty Road, S C Garden, Bengaluru - 560 042, Within 10 days from the date of publication.

NARGUND COLLEGE OF PHARMACY
Approved by: PCI, Govt Of Karnataka, Afflicted to AICTE & RGUHS,Bangalore
Immediate Recruitment/ Professor/Assistant Professor
Designation: Professor | Department: Pharmacy Practice
Designation: Assistant Professor | Department: Pharmaceutical Chemistry | Pharmaceutics | Pharmacology| Pharmacy Practice
Qualification: First Class B. Pharm with Master's Degree in Pharmacy
Experience:Experience as per PCI norms
Interested candidates can drop their resume in person or through email to Principal, Nargund College of Pharmacy.
Email id: office@nargund.edu.in
Nargund College of Pharmacy | 2nd main Dattatreyanagar, 100 feet ring road, 3rd stage Banashankari | Bangalore-560085 | Contact No: 7019425622 | 08026720604

GLOBAL ACADEMY FOR LEARNING Next Gen School
Near Global Village & R.V. Engineering College, R.R. Nagar, Bengalure - 59.
WE ARE **HIRING**
ONLY FEMALE STAFF
CO-CURRICULAR
- Art & Craft Teacher : Degree/Diploma in Fine Art.
- Swimming Coach
- Physical Education: Teachers / Sports Coaches: B.P.Ed / M.P. Ed.
- Skating Coach

ADMINISTRATION
- Accountant with experience in ERP & TALLY
- Front office Executive

Send your CV to contact@gaflschool.com
www.gaflschool.com
+ 91 88804 00900

Smt. Bylamma Educational & Charitable Trust (R)
HARWARD INTERNATIONAL SCHOOL
CBSE Affiliation No. 830335
Dasanapura, Tumkur Road, Bengaluru North 562162
HIRING FOR THE ACADEMIC YEAR 2024-25
PGT
Physics / Maths / Social Science / Female PE Teacher / DTP Computer operator Dance, Yoga, Abacus, Music, Karate
HARWARD PRE UNIVERSITY COLLEGE
Govt. of Karnataka
PHYSICS LECTURER (Min. 5 years exp. NEET, JEE, KCET)
Eligible candidates mail your application with updated Bio-data to : email: infoharwardints@gmail.com
Contact: 9880112833 / 9741337257

WANTED TEACHERS with B.Ed Subjects: English, Science, Maths, Social, Computer and Kindergarten Teachers. Contact: 9844421155

HOLY ANGEL'S High School Hampinagar, Vijayanagar, Bengaluru-560104 Phone: 23404465/23202042 holyangels.highschool rpclayout@gmail.com Requires Experienced Trained Teachers for the Academic year 2024-2025 for Nursery, Primary, High-School, Music Teacher & PE Teacher, STATE & ICSE. Qualification:B.A./B.Sc., B.Ed, M.A./M.Sc.,M.Ed, N.T.T, CP.Ed. Only English Medium Candidates need to apply

REQUIRED EXPERIENCED candidates to handle Nursery, Primary & High school sections with NTT D.Ed B.Ed (English/SS, Hindi, Math/ Physics) BPEd, DPEd Qualification. Contact: Jnanavahini Vidya Samsthe(R) JVS #8, BEML layout, 8th Main Road, BasaveshwaraNagar, Bengaluru-79 Email: jvsschool@gmail.com Whatsapp- 9343745526

HERITAGE PUBLIC SCHOOL Srinidhi Layout, J.P.Nagar 8th`Phase Konanakunte Bengaluru-62. Requires: High School Co-Ordinator, English and Social Teachers for Middle School, PE Teachers, Kindergarten Co Ordinator and`Teachers. Attractive Salary Graduates can also`apply.Call: 080-26322111 9901733776.

WANTED TEACHERS. English, Social Science, maths, Science, PT, Yoga. Primary/High School. 3rd Phase. J.P.Nagar. 9845042249/ 26590773.

WANTED TRAINED Grduate Teachers for CBSE school at Malagal (Nagarbhavi). Teacher for Computer Science, History, Economics, Social Studies for Pre University and High School at Chamarajpet. Attenders and Driver required. Walk-in interview on 20.05.2024 at 11am. at Bharatiya Samskriti Vidyapith , #76, 1st Main Road, Chamarajpet, Bangalore -560018, Mob:7899900241

WANTED TEACHERS ICSE CURRICULUM BA, MA, ENGLISH HINDI M.Sc B.Ed PHYSICS Salary Upto 30,000/- Contact: OXFORD PUBLIC SCHOOL Srikantapura Anchepalya Near Jindal Public School, Tumkur Road Bangalore Mobile: 9620075574, 9945622240

GREEN COUNTRY Public School (ICSE), requires Teachers for All Subjects. Walk in Interview 10.00 am to 3.00 pm / Apply thro. email : gcps2000@yahoo.co.in, Ph: 9535487053, 9482480397. Add. KIA Road, Kodigehalli gate, Hebbal, Bangalore-560092

WANTED TEACHERS– Mathematics, Science, English, KannadaSocial. Contact Carmel High School, Hosur Road, Bangalore. 9900872744

MORNING STAR School Ramachandrapuram, Rajajinagar Entrance Bangalore Require TCH/ D.Ed, BA/ MA. B.Ed (English, Social) B.Sc/ MSc, B.Ed (Science, Mathematics) Lady Teachers Contact: 9845018480

WANTED FRESHER/ Experience Teachers/ Assistant Head Master/ Academic Co-ordinators English/ Physics/ Chemistry/ Biology/ Maths/ Social Science/ Hindi Teachers/ Computer Teachers Salary Rs. 20000 to 35000/- PM ESI, PF, Attender Rs. 15000/- per month. Walk-In Interview All Working Days Between 10.30 AM To 4.00 PM MATHA'S INTERNATIONAL SCHOOLICSE Affiliation Code KA470, Matha's English High School ® State Syllabus English Medium #55/2B, 11th K.M. Hosur Main Road, Garuve Bhavi Palya, Bommanahalli Post, Bangalore-560068 M: 9449814917/ 8277258609

SVN ENGLISH HIGH School, Thanisandra Main Road, Nagawara, Bangalore-77, (opposite Elements Mall), Requires Qualified TEACHERS MATHS & ENGLISH for High School Call:9611807494/ 080 25446756 Mail: svnschool@gmail.com

WANTED QUALIFIED LADY TEACHERS for High School (to teach English, Science, Maths and Hindi) Lady DTP Operator who can handle Accounts. Contact:- Max Muller English High School, No. 173/1, 3rd Main, H.V.R.Layout, Magadi Main Road, Bangalore-79. Ph: 23284559, 23285559. info@maxmullerhighschool.com

REQUIRED TRAINED & Exp Lady Teachers For Nursery, Primary & High School For All Subjects(P.E. Male) Hebbal Kempapura. Contact: 9008981637 svsres21@gmail.com

WANTED MONTESSORI Teachers and Science for PMS High School Bettahalasur near Yelahanka Contact:- 9632329017, 9880113895

FRESHER TEACHER required for Primary and High school for Maths, Science and Kannada contact Kenmore School at Basavanagudi , whatsapp 9901501185 email. kenmoreschool@gmail.com

WALK-IN INTERVIEW. Carmel Garden High School, Nandini Layout, Bangalore. B.Sc/ M.Sc B.Ed. Phone: 8618293621.

DH DECCAN HERALD The Power of Good
ಪ್ರಜಾವಾಣಿ
Classifieds
More value, more impact
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
*Conditions apply
For more details contact:
+91 9731810277 | +91 9886213331
+91 9845114560 | +91 9900428036
+91 9901641752 | 080- 45557163/164

Multiple Vacancy

WANTED EXPERIENCED Gemologist with English speaking knowledge/ talent male/ female Sales persons/ Assistance Staff/ Driver/ cooking specialist (veg only) for reputed jewellery showroom at SADASIVANAGAR. Candidates must speak kannada, Hindi, English, tamil telugu languages. Food/ accommodation with good salary. Interested whatsapp your resume & call mobile: 9845722355

Security & Detectives

REQUIRED SECURITY FIELD OFFICER/ AREA MANAGER for Bangalore. Best salary in the industry. Send resume or Call 9945273400 from 9am to 5pm Monday to Saturday.

Advertising Agency

WANTED OFFICE Boys (Field Work), Office Assistant, for advt. agency near Hanumanthnagar- 41618530, 6361942572

Accounts & Finance

REQUIRED ACCOUNTS EXECUTIVE with Tally knowledge. Send your Bio-data with Salary expectation to : accounts@velcare.in

ACCOUNTANT (FEMALE) B.Com, minimum 2-3 Years Experience, with knowledge of computer and Tally is must. Salary Rs.20000 to 25000 P.M, Immediate Appointment. Contact: 9980322157 Email: accounts@ newindiaelectricals.com

Engg/ Production Technical

"WANTED AC Technician (with two Wheeler) B.Narayanapura, Bangalore. Email: chillzonesales@gmail.com. Call: 9845981111"

WANTED CIVIL Engineer for a construction firm, having 2-3 experience in the construction field. Interested please reply/ call on 9845249184- Lakshman

General

EMPLOYEE NEEDED! Business Development Office for property developer company No investment, age above 30 years experienced required. Earning Rs. 50,000/- per month Retired persons are eligible. Contact:- 9845334751.

Marketing & Sales

WANTED IMMEDIATELY Field Executives, Telecallers, Team Leaders For Banking Process Basic Salary, Good Incentives: 7676268872

Part-Time Jobs

PART TIME/FULL Time job Opportunity for Retired/Housewives from Reputed MNC in Bangalore. Call: 9206187228, 9916485500

MORE Classifieds Ads on Subsequent Pages

RENTAL PROPERTIES

Accommodation Available

Industrial And Factory

INDUSTRIAL SHED AVAILABLE FOR RENT AT #20/P1, BIDADI INDUSTRIAL AREA, 2ND PHASE, SECTOR-1, BIDADI, BUILT-UP AREA 6,000 SQFT, VACANT SPACE 9,000 SQFT WITH 10 HP POWER AND BOREWELL. READY TO OCCUPY. CONTACT: 9448345802

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

Commercial Building

Bannerghatta Road

REQUIRED 4000 to 5000 sq feet building with water facility & ELECTRICITYfor garment washing unit HOSUR ROAD/ BANNERGATTA ROAD #8919131671, 9845025202

OTHERS

Medical

RUNNING NEW Modern NABH Ready 50 Bed Hospital South Bangalore, Longterm Rental Partnership WhatsApp: 00447868727506

PERSONAL

Change of Name

CHANGE OF NAME
I, **RAVINDRA. H.C** S/o. Hiremath C.V residing at 3311, Satyadeva Residency, Byrasandra Road, G M Palya, New Thippasandra Post, Bengaluru-560075 have changed my name as **RAVINDRA HIREMATH** S/o. C.V. Hiremath and declare that Ravindra.H.C, Ravindra Hiremath Chandrashekharayya, Ravindra Chandrashekharayya Hiremath all the above names belong to me vide affidavit dated 13.05.2024 before Notary D.K. Prakash, Bengaluru.

I, **NEEMA** MANDAL, D/o. Sultan Shaikh, have changed my name to LIMA SHAIKH, Vide Affidavit dated 14.05.2024 sworn before advocate and notary V.Rajashekhara, Bangalore

ಕ್ಲಾಸಿಫೈಡ್ಸ್
EDUCATION SUCCESS

ADITYA NATIONAL PUBLIC SCHOOL
ANPS
Affiliated to ICSE Board, New Delhi, School Code: KA360
Yelahanka, Bangalore - 64 | www.adityanps.in
100% RESULT OF CLASS X FOR 6TH CONSECUTIVE YEAR
Heartiest Congratulations to all Achievers!
DHIKSHA REDDY G 96.6%
RESHMA T 91.6% | KARAN SEERVI 91.4% | ANUKA RASHMI K 90.4% | SOFIYA S 86.8%
KEERTHANA B H 83% | BAHATHI L 82.8% | KEERTHANA M 82% | G DEVI SHREE AKSHAYA 80.4% | B DEEKSHA 80.2%
ADMISSION OPEN 2024-25
Contact : 9606031015, 9513373893
Scan for Location

St. MARTIN'S HIGH SCHOOL
Magadi Road, Bengaluru – 566023
CONGRATULATIONS TO SSLC TOPPERS 2023-24
ANJU 600 (96%) English – 122
KEERTHANA J 593(95%) Social Science – 100
SUMITH K 585(94%)
HARSHITHA S 579(93%)
SHARANYA 579(93%) English -122 , Hindi - 100
PAVAN KUMAR L R 569(91%)
RINKU KUMARI 562(90%) Social Science–100
SHRUTHI A 560(90%)
RISHIKA P 559(89%)
GOPIKA S 558(89%)
KISHORE KUMAR 555(89%)
ASMITHA KANWAR C 521(83%)
MERCILLA BLESSY 521(83%)
SATHWIK MALLIKARJUN 517(83%)
BHAVANA KUWAR R 515(82%)
PARVITHA KUWAR 513(82%)
RAMYA SHREE 512(82%)
MONIKA S 509(81%)
ASHIKA J 497 (80%)
BHOOMIKA SANKLA L 495(80%) Hindi-100

ಶ್ರೀ ಅನುಪಮ ವಿದ್ಯಾ ಮಂದಿರ
ಬೆಂಗಳೂರಿನ ಪೀಣ್ಯ 2ನೇ ಹಂತ ಆಂದ್ರಹಳ್ಳಿ ಮುಖ್ಯರಸ್ತೆ ಯಲ್ಲಿರುವ ಶ್ರೀ ಅನುಪಮ ವಿದ್ಯಾ ಮಂದಿರ ಶಾಲೆಯ ವಿದ್ಯಾರ್ಥಿಗಳು ಹೆಚ್ಚು ಅಂಕ ಗಳಿಸಿ ಶಾಲೆಗೆ ಕೀರ್ತಿ ತಂದಿದ್ದಾರೆ
ಎಸ್.ಎಸ್.ಎಲ್.ಸಿ. ಟಾಪರ್ಸ್ 2023–2024
ಕೆ.ಎಸ್. ಭರತ್‌ಕುಮಾರ್ 91.68%
ಶೇಷಾದ್ರಿ ಜಿ 90.72% | ಕುಶಲ್‌ರಾಜ್ ಪಿ 89.92% | ಚಂದ್ರಕಲ ಕೆ.ಆರ್ 87.02% | ಚಂದನ್‌ಗೌಡ ವಿ 83.52% | ನಿತಿನ್‌ಗೌಡ ಎನ್ 83.04% | ಮನುಶ್ರೀ ಆರ್ 80.08

ಶ್ರೀ ಅನುಪಮ ಪದವಿ ಪೂರ್ವ & ಡಿಗ್ರಿ ಕಾಲೇಜು
ಬೆಂಗಳೂರಿನ ಪೀಣ್ಯ 2ನೇ ಹಂತ ಆಂದ್ರಹಳ್ಳಿ ಮುಖ್ಯರಸ್ತೆ ಯಲ್ಲಿರುವ ಶ್ರೀ ಅನುಪಮ ಸಂಯುಕ್ತ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಹೆಚ್ಚು ಅಂಕ ಗಳಿಸಿ ಕಾಲೇಜಿಗೆ ಟಾಪರ್ಸ್ ಗಳಾಗಿದ್ದಾರೆ
ವಾಣಿಜ್ಯ ವಿಭಾಗ 2023–2024
ಸುಷ್ಮಿತ 93% | ಶ್ವೇತಾ .ಜಿ 92.67%
ಶೇಕ್ ಫೌಜ್ಜಿಯ 90.67% | ಅಮೃತ .ಪಿ 89.83% | ವೇದಮೂರ್ತಿ .ಎನ್ 89.83% | ಯಕ್ಷಿತ್ .ಎಸ್ 83.83% | ರಾಜಮ್ಮ .ಎನ್ 79.16% | ವಿಶ್ವಾಸ್ ಬಾಲಾಜಿ .ವಿ 73.83%

I, SABITA NAYAK, Residing at #05, 12th cross, NTTF Nelagadaranahalli shivapura, Peenya 2nd stage, Bengaluru-58 have changed my name as ANJALI DAS, vide affidavit dated 16/04/2024 before Notary M.Devaraja, Bengaluru

CHANGE OF NAME
I, **SHARADA.H.C** D/o. Hiremath.C.V and W/o. Mahantesh Hiremath residing at AG-1, SVS Coco Grooves, A Block, 19th B Cross, T C Palya Main Road, Kowdenahalli, Ramamurthynagar, Doorvaninagar Post, Bengaluru-560016 have changed my name as **SHARADA HIREMATH** D/o. C.V.Hiremath W/o. Mahantesh Hiremath and declare that Sharada.H.C, Sharada Hiremath Chandrashekharayya, Sharada Chandrashekharayya Hiremath all the above names belong to me vide affidavit dated 13.05.2024 before Notary D.K.Prakash, Bengaluru.

CHANGE OF NAME
I, **MAMATHA.H.C** D/o. Hiremath.C.V and W/o. Manjunath Hiremath residing at Fortuna Blue Wings, C-109, Talacauvery Layout, Vibhuthipura, Basavanagar, Bengaluru-560037, have changed my name as **MAMATHA HIREMATH** D/o. C.V. Hiremath W/o. Manjunath Hiremath and declare that Mamatha.H.C, Mamatha Hiremath Chandrashekharayya all the above names belong to me vide affidavit dated 13.05.2024 before Notary D.K. Prakash, Bengaluru.

CHANGE OF NAME
I, **SYED ZAINULLA HUQUE,** S/o Syed Hidayathulla Haque, residing at # 136/a, 1st Floor, 4th B Cross, Ilyas Nagar, JP Nagar, Bangalore - 560078 have changed my name to **SYED ZAINULLA HAQUE** vide affidavit dated 13.05.2024, before notary Mohammed Hussain K, Bangalore.

CHANGE OF NAME
I, **ANNAPOORNA.C** D/o. Late Channaveeraiah and W/o. Ravindra H.C residing at 3311, Satyadeva Residency, Byrasandra Road, G M Palya, New Thippasandra Post, Bengaluru-560075 have changed my name as **ANNAPOORNA HIREMATH** D/o. Late Channaveeraiah W/o. Ravindra Hiremath vide affidavit dated 13.05.2024 before Notary D.K.Prakash, Bengaluru.

CHANGE OF NAME
I, **ASHOKA RAJANASIRIYURU PUPPEGOWDA**, R/at # 209, 2nd 'C' Cross, Kasturinagar, Kalyananagar Post, Bengaluru-560043, wrongly mentioned my minor daughter's name as **MANYA** in some documents, here by declaring the correct name is **MANYA ASHOKA** vide affidavit dated 10.05.2024 before notary Uday Kumar K, Bengaluru. Henceforth she shall be called as **MANYA ASHOKA** only.

CHANGE OF NAME
I, **ATHEEQ PASHA B A,** residing at # 78, 4th Cross, Ashwath Nagar Thanisandra Main Road, Near Bharath Floor Mill, Bangalore North, Dr. Shivarama Karanth Nagar, Bangalore - 560077 have changed my name to **ATHEEQ PASHA** vide affidavit dated 27.02.2024, before notary Sajjan Jain N Bangalore.

CHANGE OF NAME
I, **VIJAYALAKSHMI** (DOB: 17.4.1975) D/o. Sri. Sundarrajan and W/o. Sri. Ramesh Jaganathan, R/a #346/4, 6th cross, near BCC Layout, Bus stand, BMP Layout, Vijayanagara, Bangalore-560040 have changed my Name from **VIJAYALAKSHMI RAMESH** to **VIJAYALAKSHMI** vide affidavit dated: 13.05.2024 Sworn before Notary P. K. Nalinakshi, Bangalore.

I, MRS. Anisha S. aged 51 years, W/o Sanjeev R/o No. 291, 16th Cross, Sadashivanagar, Bengaluru-560080, have changed my name from Jyothi S., Jyothi Sanjeev, Anisha S. Bathija to Anisha S. vide Affidavit dated13-05-2024 sworn before Notary Manohar Jeerige, Bengaluru.

EDUCATIONAL

Admission

FAILED/DISCONTINUED JOIN Complete B.Com, BBA, B.Tech BCA Diploma MBA. Direct/Private SSLC PUC 9341273990

Tuitions

REVOLUTIONIZE YOUR Learning With T.S.Shivashankar: 9743095715 PHD (USA) Maths and Physics Expert 40 Plus Years of International Experience Fluent in English, Hindi, Kannada, French Portuguese living Mahalaxmi Layout Educated in USA, Brazil, Canada, England, France, Germany, Holland, Greece & Russia, Also Educated in Kendriya Vidyalaya I.I.T Kanpur 1981, 12th Standard Pass out from K.V.I.T.T. Kanpur Any Maths Physics Chemistry English French Hindi Portuguese Civil Aeronautical Mechanical Electrical & Electronics All Subjects At All and Different Levels Big Push for Maths Numerical Physics & Academic Language Father Dr. T.K Srikantaiah Former Professor Aeronautical Engg Dept I.I.T Kanpur A Very Rare Case of a Person Coming From Industry into Academics in two Related fields Civil & Aeronautical Aero Structures 2 Years Koyna Dam Experience after B.E (Civil) UVCE & 4 Years HAL Experience Bangalore After M.Tech in Aero IISC Bangalore thus having more than the Proper & Required credentials and Making it Big with Indian Aeronautics all Areas of Bangalore Metro Routes

COMPUTERS

Hardware

USED COMPUTERS FOR SALE
Dual Core/ 2GB Ram / 80GB HDD / 17"LCD Rs.6,000/-
For Qty of 10 No's Rs.5,000/-per system
For Qty of 10 No's. without Monitor Rs.3,000/- per system
For Qty of 30 No's. without Monitor Rs.2,500/- per system
For Qty of 50 No's. without Monitor Rs.2,000/- per system
Core I 3/ 4GB Ram / 250GB HDD / 17"LCD Rs.10,000/-
For Qty of 10 No's. Rs.9,000/- per system
For Qty of 10 No's. without Monitor Rs.7,000/- per system
For Qty of 40 No's. without Monitor Rs.6,000/- per system
LAPTOP
Core I 3/ 4GB Ram / 500GB HDD / Adaptor Rs.12,000/-
Courier Charges: Rs.1,000/- per system
COMPUTER HOUSE
L-81, SECTOR 11, 8th CROSS, 9th B MAIN, LIC COLONY, JEEVANBHIMA NAGAR, BANGALORE - 560075.
09886038331 / 080- 42076287

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ನೆಫ್ರೊ–ಯುರಾಲಾಜಿ ಸಂಸ್ಥೆಯಲ್ಲಿ 5 ವರ್ಷಗಳಲ್ಲಿ 4.21 ಲಕ್ಷ ಮಂದಿಗೆ ಚಿಕಿತ್ಸೆ

ಮೂತ್ರಪಿಂಡ ಸಮಸ್ಯೆ: ರೋಗಿಗಳ ಸಂಖ್ಯೆ ಹೆಚ್ಚಳ

• ವರುಣ ಹೆಗಡೆ

ಬೆಂಗಳೂರು: ಮೂತ್ರಪಿಂಡ ಹಾಗೂ ಮೂತ್ರಕೋಶ ಸಮಸ್ಯೆಗೆ ಚಿಕಿತ್ಸೆ ಸಂಬಂಧ ನಗರದ ನೆಫ್ರೊ–ಯುರಾಲಾಜಿ ಸಂಸ್ಥೆಗೆ ಬರುವ ರೋಗಿಗಳ ಸಂಖ್ಯೆ ಹೆಚ್ಚಳವಾಗಿದ್ದು, ಕಳೆದ ಐದು ವರ್ಷಗಳಲ್ಲಿ 4.21 ಲಕ್ಷ ಮಂದಿ ಚಿಕಿತ್ಸೆ ಪಡೆದಿದ್ದಾರೆ.

ಮಧುಮೇಹ, ಅಧಿಕ ರಕ್ತದೊತ್ತಡ, ನೋವು ನಿವಾರಕ ಮಾತ್ರೆಗಳ ಸೇವನೆ ಸೇರಿ ವಿವಿಧ ಕಾರಣಗಳಿಂದ ಈ ಸಮಸ್ಯೆಗೆ ಒಳಗಾಗುವವರ ಸಂಖ್ಯೆ ಹೆಚ್ಚಳವಾಗಿದೆ. ರಾಜ್ಯದ ವಿವಿಧೆಡೆಯ ಜತೆಗೆ ನೆರೆಯ ರಾಜ್ಯಗಳಿಂದಲೂ ಮೂತ್ರಪಿಂಡ ಮತ್ತು ಮೂತ್ರಕೋಶ ಸಮಸ್ಯೆಗಳ ಚಿಕಿತ್ಸೆ ಸಂಬಂಧ ಸಂಸ್ಥೆಗೆ ರೋಗಿಗಳು ಬರುತ್ತಿದ್ದಾರೆ. ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿರುವ ಸಂಸ್ಥೆಯು, 2007ರಿಂದ ಕಾರ್ಯನಿರ್ವಹಿಸುತ್ತಿದೆ. ಇದು ಸ್ವಾಯತ್ತ ಸಂಸ್ಥೆಯಾಗಿದ್ದು, 160 ಹಾಸಿಗೆಗಳನ್ನು ಒಳಗೊಂಡಿದೆ. ಪ್ರತಿನಿತ್ಯ 200ಕ್ಕೂ ಹೆಚ್ಚು ರೋಗಿಗಳಿಗೆ ಡಯಾಲಿಸಿಸ್ ಮಾಡಲಾಗುತ್ತಿದೆ.

ಕಳೆದ ಐದು ವರ್ಷಗಳಲ್ಲಿ 35 ಸಾವಿರಕ್ಕೂ ಅಧಿಕ ಮಂದಿ ಒಳರೋಗಿಗಳಾಗಿ ಸಂಸ್ಥೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ. 1.63 ಲಕ್ಷಕ್ಕೂ ಅಧಿಕ ಮಂದಿಗೆ ಡಯಾಲಿಸಿಸ್ ಚಿಕಿತ್ಸೆ ಒದಗಿಸಲಾಗಿದೆ. 42 ಸಾವಿರಕ್ಕೂ ಅಧಿಕ ಮಂದಿ ಶಸ್ತ್ರಚಿಕಿತ್ಸೆ ಹಾಗೂ 125 ಮಂದಿ ಮೂತ್ರಪಿಂಡ ಕಸಿಗೆ ಇಲ್ಲಿ ಒಳಗಾಗಿದ್ದಾರೆ. ಕೋವಿಡ್ ಪೂರ್ವದಲ್ಲಿ 200ರಿಂದ 250ಕ್ಕೆ ತಲುಪುತ್ತಿದ್ದ ದೈನಂದಿನ ಹೊರರೋಗಿಗಳ ಸಂಖ್ಯೆ, ಈಗ 400ಕ್ಕೆ ತಲುಪಿದೆ.

> **ಸಂಸ್ಥೆಗೆ ರಾಜ್ಯದ ಜತೆಗೆ ಹೊರರಾಜ್ಯಗಳಿಂದಲೂ ರೋಗಿಗಳು ಬರುತ್ತಿದ್ದಾರೆ. ಹೊರ ರೋಗಿಗಳ ಸಂಖ್ಯೆ ಪ್ರತಿ ವರ್ಷ ಹೆಚ್ಚಳವಾಗುತ್ತಿದೆ**
> **ಡಾ. ಕೇಶವಮೂರ್ತಿ ಆರ್.** ನೆಫ್ರೊ–ಯುರಾಲಾಜಿ ಸಂಸ್ಥೆ ನಿರ್ದೇಶಕ

ಅಂತಿಮ ಹಂತದಲ್ಲಿ ಅನೆಕ್ಸ್ ಕಟ್ಟಡ

ಸಂಸ್ಥೆಗೆ ಬರುವ ರೋಗಿಗಳ ಸಂಖ್ಯೆ ಹೆಚ್ಚಳದಿಂದಾಗಿ ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿ 150 ಹಾಸಿಗೆಗಳ ಅನೆಕ್ಸ್ ಕಟ್ಟಡ ನಿರ್ಮಾಣಕ್ಕೆ 2016ರಲ್ಲಿಯೇ ಅಡಿಗಲ್ಲು ಹಾಕಲಾಗಿತ್ತು. 2018ರಲ್ಲಿ ಈ ಕಟ್ಟಡದ ನಿರ್ಮಾಣ ಕಾಮಗಾರಿ ಪ್ರಾರಂಭವಾಗಿತ್ತು. ಕೋವಿಡ್ ಹಾಗೂ ಅನುದಾನದ ಕೊರತೆಯಿಂದ ಕಾಮಗಾರಿಗೆ ಹಿನ್ನಡೆಯಾಗಿತ್ತು. ಈಗ ಕಟ್ಟಡದ ಕಾಮಗಾರಿ ಅಂತಿಮ ಹಂತ ತಲುಪಿದ್ದು, ಜೂನ್ ವೇಳೆಗೆ ಲೋಕಾರ್ಪಣೆಗೊಳ್ಳುವ ಸಾಧ್ಯತೆಯಿದೆ.

ನೂತನ ಕಟ್ಟಡವು 30 ಹಾಸಿಗೆಗಳ ಡಯಾಲಿಸಿಸ್ ಘಟಕ, 20 ಹಾಸಿಗೆಗಳ ತೀವ್ರ ನಿಗಾ ಘಟಕವನ್ನೂ ಒಳಗೊಂಡಿರಲಿದೆ.

ಮೂತ್ರಪಿಂಡ ಆರೋಗ್ಯ ಕಡೆಗಣನೆ: 'ಮೂತ್ರಪಿಂಡದ ಮಹತ್ವದ ಬಗ್ಗೆ ಜನರಿಗೆ ಅಷ್ಟಾಗಿ ಜಾಗೃತಿಯಿಲ್ಲ. ಇದರಿಂದಾಗಿ ಅದರ ಆರೋಗ್ಯದ ಕಡೆಗೆ ಹೆಚ್ಚಿನ ಗಮನಹರಿಸದೇ ಸಮಸ್ಯೆಯನ್ನು ತಂದೊಡ್ಡಿಕೊಳ್ಳುತ್ತಿದ್ದಾರೆ. ಮೂತ್ರಪಿಂಡ ಕೂಡ ಸೂಕ್ಷ್ಮವಾದ ಅಂಗವಾಗಿದ್ದು, ರಕ್ತ ಶುದ್ಧಿ ಕಾರ್ಯದ ನಂತರ ಮೂತ್ರದ ಮೂಲಕ ದೇಹದಲ್ಲಿನ ತ್ಯಾಜ್ಯವನ್ನು ಹೊರಹಾಕಲು ಈ ಅಂಗ ಸಹಕಾರಿ. ಅದೇ ರೀತಿ, ದೇಹದಲ್ಲಿನ ಲವಣಾಂಶಗಳು, ನೀರಿನಾಂಶಗಳು, ಆಮ್ಲ ಮತ್ತು ಪ್ರತ್ಯಾಮ್ಲಗಳನ್ನು ಸಮತೋಲನದಲ್ಲಿ ಇರಿಸುತ್ತದೆ' ಎಂದು ಸಂಸ್ಥೆಯ ವೈದ್ಯರು ತಿಳಿಸಿದರು.

'ಪೌಷ್ಟಿಕ ಆಹಾರ ಸೇವನೆ, ಉತ್ತಮ ಜೀವನಶೈಲಿ, ವ್ಯಾಯಾಮ ಅಳವಡಿಸಿಕೊಳ್ಳಬೇಕು. ಈಗಾಗಲೇ ಕಿಡ್ನಿ ಸಮಸ್ಯೆ ಎದುರಿಸುತ್ತಿರುವವರು ನಿಯಮಿತವಾಗಿ ಡಯಾಲಿಸಿಸ್ ಮಾಡಿಸಿಕೊಳ್ಳುವ ಜತೆಗೆ ವೈದ್ಯರ ಸಲಹೆಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು' ಎಂದು ಹೇಳಿದರು.

'ಮಧುಮೇಹ ಮತ್ತು ಅಧಿಕ ರಕ್ತದೊತ್ತಡವೇ ಮೂತ್ರಪಿಂಡ ಸಮಸ್ಯೆಗೆ ಮುಖ್ಯ ಕಾರಣ. ಸಂಸ್ಥೆಗೆ ಬರುವ ಬಹುತೇಕ ರೋಗಿಗಳು ಅಂತಿಮ ಹಂತದ ಮೂತ್ರಪಿಂಡ ವೈಫಲ್ಯಕ್ಕೆ ಒಳಗಾದವರಾಗಿದ್ದಾರೆ' ಎಂದು ಸಂಸ್ಥೆಯ ನಿರ್ದೇಶಕ ಡಾ. ಕೇಶವಮೂರ್ತಿ ಆರ್. ತಿಳಿಸಿದರು.

ಬಿಎಂಟಿಸಿ ಚಾಲಕರಿಗೆ ವೇತನ ವ್ಯತ್ಯಯ: ಪ್ರತಿಭಟನೆ

ಬೆಂಗಳೂರು: ಬಿಎಂಟಿಸಿ ವಿದ್ಯುತ್ ಚಾಲಿತ ಬಸ್‌ಗಳ ಚಾಲಕರು ವೇತನ ನೀಡಿಲ್ಲ ಎಂದು ಆರೋಪಿಸಿ ಮಂಗಳವಾರ ದಿಢೀರ್ ಪ್ರತಿಭಟನೆ ನಡೆಸಿದ್ದರಿಂದ ಬಸ್ ಸಂಚಾರದಲ್ಲಿ ವ್ಯತ್ಯಯವಾಯಿತು.

ಭಾರತ ಸರ್ಕಾರದ ಫೇಮ್–2 ಯೋಜನೆ ಯಡಿ ಮೊದಲ ಹಂತದಲ್ಲಿ 2023ರ ಡಿಸೆಂಬರ್‌ನಲ್ಲಿ ಎಲೆಕ್ಟ್ರಿಕ್ ಹವಾನಿಯಂತ್ರಿತ ಬಸ್‌ಗಳು ಶಾಂತಿನಗರ ಘಟಕದಿಂದ ಆರಂಭವಾಗಿದ್ದವು. ಎಂ/ಎಸ್. ಟಿಎಂಎಲ್ ಸ್ಮಾರ್ಟ್ ಸಿಟಿ ಮೊಬಿಲಿಟಿ ಸಲ್ಯೂಶನ್ಸ್ ಲಿಮಿಟೆಡ್ ಕಂಪನಿಯವರು ಈ ಬಸ್‌ಗಳನ್ನು ನಿರ್ವಹಿಸುತ್ತಿದ್ದರು.

ಬಸ್ ನಿರ್ವಹಣೆ ಮತ್ತು ಚಾಲಕನ ವೇತನವನ್ನು ಆ ಸಂಸ್ಥೆಯವರು ನೀಡಬೇಕು. ಆದರೆ, ಸಮಯಕ್ಕೆ ಸರಿಯಾಗಿ ವೇತನ ನೀಡದೇ ಇದ್ದ ಕಾರಣ ಚಾಲಕರು ಪ್ರತಿಭಟನೆ ನಡೆಸಿದರು.

ಇದರಿಂದ ಮಂಗಳವಾರ ಬೆಳಿಗ್ಗೆ 7ರಿಂದ 11ರವರೆಗೆ 113 ಟ್ರಿಪ್‌ಗಳು ವ್ಯತ್ಯಯಗೊಂಡವು. ಬಿಎಂಟಿಸಿ ವತಿಯಿಂದ ಈ ಮಾರ್ಗಗಳಲ್ಲಿ ಹೆಚ್ಚುವರಿ ಬಸ್‌ಗಳನ್ನು ಕಾರ್ಯಾಚರಣೆಗೆ ವ್ಯವಸ್ಥೆ ಮಾಡುವ ಮೂಲಕ ಪ್ರಯಾಣಿಕರಿಗೆ ತೊಂದರೆ ಆಗದಂತೆ ನೋಡಿಕೊಳ್ಳಲಾಯಿತು.

'ಟಿಎಂಎಲ್ ಸ್ಮಾರ್ಟ್ ಸಿಟಿ ಮೊಬಿಲಿಟಿ ಸಲ್ಯೂಶನ್ಸ್ ಲಿಮಿಟೆಡ್' ಕಂಪನಿಗೆ ನೋಟಿಸ್ ನೀಡಲಾಗಿದೆ. ಮುಂದೆ ಈ ರೀತಿ ಸಮಸ್ಯೆ ಆಗದಂತೆ ನೋಡಿಕೊಳ್ಳಲು ತಿಳಿಸಲಾಗಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಶಾರ್ಟ್ ಸರ್ಕ್ಯೂಟ್ ಸುಟ್ಟು ಹೋದ ಬಸ್

ತರೀಕೆರೆ (ಚಿಕ್ಕಮಗಳೂರು): ಸಮೀಪದ ಅಜ್ಜಂಪುರ ಕ್ರಾಸ್‌ನಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಹೊತ್ತಿ ಕೆಎಸ್‌ಆರ್‌ಟಿಸಿ ಐರಾವತ ಬಸ್ ಸುಟ್ಟು ಹೋಗಿದೆ. ಶಿವಮೊಗ್ಗದಿಂದ ಮೈಸೂರು ಕಡೆಗೆ ಹೋಗುತ್ತಿದ್ದಾಗ ಘಟನೆ ನಡೆದಿದೆ. ಎಲ್ಲ ಪ್ರಯಾಣಿಕರು ಸುರಕ್ಷಿತವಾಗಿದ್ದಾರೆ.

ಜಲಮಂಡಳಿ ಅಧಿಕಾರಿಗಳ ಜತೆ ರಾಮ್‌ಪ್ರಸಾತ್ ಸಭೆ

ಸರ್ಕಾರಿ ಕಚೇರಿಗಳಲ್ಲಿ ಮಳೆ ನೀರು ಸಂಗ್ರಹಕ್ಕೆ ಸೂಚನೆ

ಬೆಂಗಳೂರು: ಸರ್ಕಾರಿ ಶಾಲೆಗಳು, ಕಾಲೇಜುಗಳು, ಬಿಬಿಎಂಪಿ ಅಧೀನದ ಶೈಕ್ಷಣಿಕ ಸಂಸ್ಥೆಗಳು, ಆಸ್ಪತ್ರೆಗಳು, ಪಾರ್ಕ್‌ಗಳು, ಸರ್ಕಾರಿ ಕಟ್ಟಡಗಳಲ್ಲಿರುವ ಅಂಗನವಾಡಿಗಳು ಸೇರಿದಂತೆ ಸರ್ಕಾರಿ ಕಟ್ಟಡಗಳಲ್ಲಿ ಜಲಮಂಡಳಿಯ ವತಿಯಿಂದ ಮಳೆ ನೀರು ಸಂಗ್ರಹ ವ್ಯವಸ್ಥೆ ಹಾಗೂ ಇಂಗು ಗುಂಡಿಗಳನ್ನು ನಿರ್ಮಿಸಬೇಕು ಎಂದು ಜಲಮಂಡಳಿ ಅಧ್ಯಕ್ಷ ಡಾ.ವಿ.ರಾಮ್‌ಪ್ರಸಾತ್ ಮನೋಹರ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಬಗ್ಗೆ ಮಂಗಳವಾರ ಜಲಮಂಡಳಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ಸಾರ್ವಜನಿಕರಿಗೆ ಮಾದರಿಯಾಗುವ ನಿಟ್ಟಿನಲ್ಲಿ ಈಗಾಗಲೇ ಜಲಮಂಡಳಿಯ ವತಿಯಿಂದ 1000ಕ್ಕೂ ಹೆಚ್ಚು ಕಡೆಗಳಲ್ಲಿ ಇಂಗುಗುಂಡಿಗಳನ್ನು ನಿರ್ಮಿಸಿದೆ. ಇನ್ನೂ ಒಂದು ಸಾವಿರ ಇಂಗುಗುಂಡಿಗಳನ್ನು ನಿರ್ಮಿಸಲಿದೆ ಎಂದು ಹೇಳಿದರು.

ರಾಮ್ ಪ್ರಸಾತ್ ಮನೋಹರ್

ಮಳೆ ನೀರು ಸಂಗ್ರಹ ಪದ್ಧತಿ ಅಳವಡಿಕೆ ಮತ್ತು ಇಂಗುಗುಂಡಿಗಳನ್ನು ನಿರ್ಮಿಸುವ ಜೊತೆಯಲ್ಲೇ, ಮಾಹಿತಿ ಫಲಕಗಳನ್ನು ಅಳವಡಿಸಬೇಕು. ಇದರಿಂದ ಇಂಗುಗುಂಡಿ ಉಪಯೋಗದ ಬಗ್ಗೆ ಸಾರ್ವಜನಿಕರು ಮಾಹಿತಿ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಖಾಸಗಿ ಶೈಕ್ಷಣಿಕ ಸಂಸ್ಥೆಗಳಲ್ಲೂ ಈ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಅಳವಡಿಸಿ ವಿದ್ಯಾರ್ಥಿಗಳಿಗೆ ಈ ಬಗ್ಗೆ ಪ್ರಾತ್ಯಕ್ಷಿಕೆ ನೀಡಬೇಕು. ವಲಯವಾರು ಪ್ರದೇಶಗಳಲ್ಲಿ ಎಲ್ಲಾ ಧಾರ್ಮಿಕ ಸಂಸ್ಥೆಗಳ ಆವರಣದಲ್ಲೂ ಮಂಡಳಿ ವತಿಯಿಂದ ಮಳೆ ನೀರು ಸಂಗ್ರಹ ಪದ್ಧತಿಯನ್ನು ಅಳವಡಿಸಲಾಗುವುದು. ಇದರ ಮೂಲಕ ಆಯಾ ಸ್ಥಳಗಳಿಗೆ ಭೇಟಿ ನೀಡುವಂತಹ ಜನರಿಗೆ ಈ ಬಗ್ಗೆ ಜಾಗೃತಿ ಮೂಡಿಸಲು ಹಾಗೂ ನೀರಿನ ಸದ್ಬಳಕೆಗೆ ಉತ್ತೇಜನ ನೀಡಿದಂತಾಗುತ್ತದೆ ಎಂದರು.

ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಬಸ್ ನಿಲ್ದಾಣಗಳಲ್ಲಿಯೂ ಮಳೆ ನೀರು ಸಂಗ್ರಹ ಹಾಗೂ ಇಂಗುಗುಂಡಿಗಳನ್ನು ಮಾಡಬೇಕು ಎಂದು ತಿಳಿಸಿದರು.

ಪ್ರಧಾನ ಮುಖ್ಯ ಎಂಜನಿಯರ್ ಸುರೇಶ, ಮುಖ್ಯ ಎಂಜನಿಯರ್‌ಗಳಾದ ಎಲ್. ಕುಮಾರ ನಾಯ್ಕ್, ಕೆ.ಎನ್. ಪರಮೇಶ, ಎಸ್.ವಿ. ವೆಂಕಟೇಶ, ಎ.ರಾಜಶೇಖರ್, ಮಹೇಶ ಕೆ.ಎನ್., ರಾಜೀವ್ ಕೆ.ಎನ್., ಗಂಗಾಧರ್ ಬಿ.ಸಿ., ದೇವರಾಜು ಎಂ., ಜಯಶಂಕರ್, ಹೆಚ್ಚುವರಿ ಮುಖ್ಯ ಎಂಜಿನಿಯರ್ ಮಧುಸೂದನ್ ಭಾಗವಹಿಸಿದ್ದರು.

ಕೆರೆ ಸಂರಕ್ಷಣೆ ಉಪನ್ಯಾಸ ಕಾರ್ಯಕ್ರಮದಲ್ಲಿ ಪ್ರೀತಿ ಗೆಹಲೋತ್

185 ಕೆರೆಗಳ ಪುನರುಜ್ಜೀವನದ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ನಾಲ್ಕು ವರ್ಷಗಳಲ್ಲಿ ನಗರದ 185 ಕೆರೆಗಳನ್ನು ಪುನರುಜ್ಜೀವನಗೊಳಿಸುವ ಗುರಿಯನ್ನು ಬಿಬಿಎಂಪಿ ಇಟ್ಟುಕೊಂಡಿದೆ ಎಂದು ಬಿಬಿಎಂಪಿಯ ವಿಶೇಷ ಆಯುಕ್ತೆ ಪ್ರೀತಿ ಗೆಹಲೋತ್ ತಿಳಿಸಿದರು.

ಬೆಂಗಳೂರು ಚೇಂಬರ್ ಆಫ್ ಕಾಮರ್ಸ್ (ಬಿಸಿಐಸಿ) ಆಯೋಜಿಸಿದ್ದ ವೆಬಿನಾರ್ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಬಿಬಿಎಂಪಿ ವ್ಯಾಪ್ತಿಯಲ್ಲಿ 202 ಕೆರೆಗಳಿವೆ. ಅದರಲ್ಲಿ 17 ಕೆರೆಗಳನ್ನು ಮಿತಿ ಮೀರಿ ಒತ್ತುವರಿ ಮಾಡಲಾಗಿದ್ದು, ಅಭಿವೃದ್ಧಿಪಡಿಸಲು ಸಾಧ್ಯವಿಲ್ಲದಂತಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಕೆರೆ ಒತ್ತುವರಿ, ಕೆರೆಗೆ ಚರಂಡಿ ನೀರು ಹರಿಸುವುದು, ಘನತ್ಯಾಜ್ಯ ಸುರಿಯುವುದು, ರಾಸಾಯನಿಕಗಳನ್ನು ಹರಿಸುವಂತಹ ಕೆಲಸಗಳು ನಡೆಯುತ್ತಿವೆ. ಇಂಥವುಗಳನ್ನು ನಿಯಂತ್ರಿಸುವುದೇ ದೊಡ್ಡ ಸವಾಲಾಗಿದೆ. ಸಾಕಷ್ಟು ಹಣಕಾಸು ನೆರವು ಇಲ್ಲದಿರುವುದು, ಸಿಬ್ಬಂದಿ ಕೊರತೆ, ಇಲಾಖೆಗಳ ನಡುವಿನ ಸಮನ್ವಯದ ಕೊರತೆ ಕೂಡ ಕೆರೆ ಅಭಿವೃದ್ಧಿಗೆ ತೊಡಕುಂಟು ಮಾಡಿವೆ' ಎಂದು ವಿವರಿಸಿದರು.

ಪ್ರೀತಿ ಗೆಹಲೋತ್

'ಭೌಗೋಳಿಕ ವಿಜ್ಞಾನ, ತಾಂತ್ರಿಕ ಜ್ಞಾನದ ಜೊತೆಗೆ, ಭೂತಾಂತ್ರಿಕ ವಿಷಯಗಳ ಬಗ್ಗೆ ಅರಿವಿನ ಕೊರತೆಯೂ ಕೆರೆ ಪುನರುಜ್ಜೀವನ ಕಾರ್ಯ ವೇಗವಾಗಿ ಮುನ್ನಡೆಯಲು ಅಡ್ಡಿಯಾಗಿದೆ' ಎಂದು ವಿಶ್ಲೇಷಿಸಿದರು.

'ಬಿಬಿಎಂಪಿಯಲ್ಲಿ 'ಬೆಂಗಳೂರು ಹವಾಮಾನ ಕ್ರಿಯಾ ಯೋಜನೆ' ರೂಪಿಸಿದ್ದು, ಇದು ದೀರ್ಘಕಾಲೀನ ಪರಿಣಾಮ ಉಂಟುಮಾಡುವಂತಹ ಉಪಕ್ರಮಗಳನ್ನು ಕೈಗೆತ್ತಿಕೊಳ್ಳಲು ಸಮಗ್ರ ಯೋಜನೆಯ ಮೇಲೆ ಕೆಲಸ ಮಾಡುತ್ತದೆ' ಎಂದು ವಿವರಿಸಿದರು.

ಬಿಬಿಎಂಪಿ, ಸಮುದಾಯ ಒಳಗೊಳ್ಳುವಿಕೆಯ 'ಕೆರೆ ಸಂರಕ್ಷಣಾ ನೀತಿ-2024' ಅನ್ನು ಹೈಕೋರ್ಟ್‌ಗೆ ಸಲ್ಲಿಸಲಾಗಿದೆ. ಹೈಕೋರ್ಟ್‌ನಿಂದ ಒಪ್ಪಿಗೆ ದೊರೆತ ಕೂಡಲೇ ಇದನ್ನು ಅನುಷ್ಠಾನಗೊಳಿಸಲಾಗುವುದು. ಕಾರ್ಪೋರೇಟ್ ಸಂಸ್ಥೆಗಳು, ವೈಯಕ್ತಿಕ ಸಂಘ ಸಂಸ್ಥೆಗಳು ಅಥವಾ ನಿವಾಸಿಗಳ ಕಲ್ಯಾಣ ಸಂಘಗಳ ಸಹಕಾರದೊಂದಿಗೆ ಕೆರೆಗಳ ಪುನರುಜ್ಜೀವನ, ಸಂರಕ್ಷಣೆ, ನಿರ್ವಹಣೆ ಮಾಡಲಾಗುವುದು ಎಂದರು.

ಬಿಸಿಐಸಿ ಅಧ್ಯಕ್ಷ ಎಸ್. ದೇವರಾಜನ್ ಮಾತನಾಡಿ, 'ಈಗಾಗಲೇ ಅನೇಕ ಜಲ ಸಂರಕ್ಷಣೆ ಉಪಕ್ರಮಗಳನ್ನು ಕೈಗೊಳ್ಳಲಾಗಿದೆ. ಆದರೂ ಇನ್ನಷ್ಟು ಕೆಲಸಗಳಾಗಬೇಕಿದೆ. ಕೆರೆ ಸಂರಕ್ಷಣೆ, ಜಲಸಂರಕ್ಷಣೆಯ ಕಾರ್ಯಗಳಲ್ಲಿ ಬಿಬಿಎಂಪಿಗೆ ಪೂರ್ಣ ಬೆಂಬಲ ನೀಡಲಾಗುವುದು' ಎಂದು ಭರವಸೆ ನೀಡಿದರು.

ಸಾಮಾಜಿಕ ಬ್ರಾಂಡ್ ಪರಿಣತರ ಸಮಿತಿಯ ಚೇರ್ಮನ್ ಜಿ.ವಿ. ರಾವ್ ಉಪನ್ಯಾಸ ನೀಡಿ, 'ಕೆರೆ ಪುನರುಜ್ಜೀವನ ಕಾರ್ಯದಲ್ಲಿ ಕೆರೆ ಸುತ್ತ ಬೇಲಿ ಹಾಕುವುದು, ಹೂಳೆತ್ತುವುದು, ಕೆರೆ ಏರಿ ಅಭಿವೃದ್ಧಿ, ಹೊರ ಒಡ್ಡು ರಚನೆ, ಒಳಹರಿವಿನ ಮಾರ್ಗಗಳನ್ನು ಸ್ವಚ್ಛಗೊಳಿಸುವಂತಹ ಕೆಲಸಗಳು ಇರುತ್ತವೆ. ನಾಲೆಗಳ ಪುನರುಜ್ಜೀವನ, ಒಳ ಚರಂಡಿ ನೀರಿನ ಸಂಸ್ಕರಣೆ ಹಾಗೂ ನೀರಿನ ಸಮತೋಲನಕ್ಕಾಗಿ ಜೌಗು ಭೂಮಿಗಳ ನಿರ್ಮಾಣ, ತೂಬುಗಳ ನಿರ್ಮಾಣ ಮತ್ತು ಹೊರಹರಿವಿನ ಅಭಿವೃದ್ಧಿ ಮಾಡುವಂತಹ ಕಾರ್ಯಗಳಿರುತ್ತವೆ. ಪಾದಚಾರಿ ಮಾರ್ಗಗಳ ಅಭಿವೃದ್ಧಿ, ಭದ್ರತೆ, ಬಾಗಿಲುಗಳು ಮತ್ತು ಫಲಕಗಳನ್ನು ಸ್ಥಾಪಿಸುವುದು, ಉದ್ಯಾನ ಪ್ರದೇಶ ನಿರ್ಮಾಣ, ಮಕ್ಕಳ ಆಟದ ಪ್ರದೇಶ ನಿರ್ಮಾಣ ಸೇರಿದಂತೆ ಹಲವು ಕೆಲಸಗಳಿರುತ್ತವೆ. ಆಸಕ್ತರು ಯಾವುದೇ ಚಟುವಟಿಕೆಗಳಿಗೆ ಕೈ ಜೋಡಿಸಬಹುದು' ಎಂದರು.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಎಸ್‌ಎನ್‌ಟಿ_ಹೈರಿಂಗ್_ಬ್ಲ್ಯಾಕ್‌ಸ್ಮಿತ್
ದಿನಾಂಕ : 09–05–2024
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದಲ್ಲಿ ಎಸ್&ಟಿ ನಿರ್ವಹಣಾ ಚಟುವಟಿಕೆಗಳಲ್ಲಿ ಸಹಾಯಕ್ಕಾಗಿ ಕಮ್ಮಾರ ಹೊರಗುತ್ತಿಗೆ.	ರೂ. 1,29,90,120/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 31–05–2024 ರಂದು 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಸಿಗ್ನಲ್ ಮತ್ತು ಟೆಲಿಕಮ್ಯುನಿಕೇಶನ್ ಇಂಜಿನಿಯರ್
ಪಿಯುಬಿ/75/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024-25 ಬೆಂಗಳೂರು
South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: ECN-07-2024-RT
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಹೆಬ್ಬಾಳ 'ಸಿ' ನಿಲ್ದಾಣದಲ್ಲಿ ಈಗಿನ 66ಕೆವಿ ಯುಜಿ ಕೇಬಲ್ 1&2 ಡಿ/ಸಿ ಯ ಸ್ಥಳಾಂತರ / ಮಾರ್ಪಡಿಸುವಿಕೆ. ಬೆಂಗಳೂರು ದಂಡು ರೈಲ್ವೆ ನಿಲ್ದಾಣದಲ್ಲಿ ಪುನರಾಭಿವೃದ್ಧಿಯ ಅಂಗವಾಗಿ ಪ್ರಸ್ತಾವಿತ ಹೊಸ ತಿರುವು ರಸ್ತೆಯ ನಿರ್ಮಾಣದ ಉಲ್ಲಂಘನೆ.	ರೂ. 1,89,03,960.62

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 30.05.2024, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್ (ನಿರ್ಮಾಣ)
PUB/65/AAD/PRB/SWR/2024-25 ಬೆಂಗಳೂರು ದಂಡು
South Western Railway - SWR | SWRRLY | SWRRLY

'ಕ್ರಿಯಾಶೀಲರನ್ನು ಸೃಷ್ಟಿಸುವ ರಂಗಭೂಮಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಂಗಭೂಮಿಯ ಮೂಲಕ ಕಲಾಕ್ಷೇತ್ರಕ್ಕೆ ಪಾದಾರ್ಪಣೆ ಮಾಡುವ ಕಲಾವಿದರು ಕ್ರಿಯಾಶೀಲ ಹಾಗೂ ಉತ್ತಮ ಅಭಿನಯ ಮಾಡುವ ಸಾಮರ್ಥ್ಯ ಹೊಂದಿರುತ್ತಾರೆ' ಎಂದು ಹಾಸ್ಯ ಸಾಹಿತಿ ಎಂ.ಎಸ್. ನರಸಿಂಹಮೂರ್ತಿ ಹೇಳಿದರು.

ರಂಗಸಂಸ್ಕೃತಿ ತಂಡದ '8ನೇ ವಾರ್ಷಿಕೋತ್ಸವ' ಮತ್ತು 'ರಂಗಸಂಸ್ಕೃತಿ ಸಿರಿ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ಕಿರುತೆರೆ, ಬೆಳ್ಳಿತೆರೆಯಲ್ಲಿ ಅಭಿನಯಿಸುವ ಬಹುತೇಕ ಕಲಾವಿದರು ರಂಗಭೂಮಿ ಹಿನ್ನೆಲೆಯವರು. ರಂಗಭೂಮಿ ಹಿನ್ನೆಲೆಯಿಂದ ಬಂದ ಕಲಾವಿದರ ಕಲಾನೈಪುಣ್ಯತೆ ಇತರರಲ್ಲಿ ಕಂಡು ಬರುವುದಿಲ್ಲ' ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ 2024ನೇ ಸಾಲಿನ 'ರಂಗಸಂಸ್ಕೃತಿ ಸಿರಿ' ಪ್ರಶಸ್ತಿಯನ್ನು ನಟಿ ಕಲ್ಯಾಣಿ ಪ್ರದೀಪ್ ಅವರಿಗೆ ಪ್ರದಾನ ಮಾಡಲಾಯಿತು.

ಸೌಭಾಗ್ಯ ಹಂದ್ರಾಳ ಅವರು ಭರತನಾಟ್ಯ ಪ್ರದರ್ಶಿಸಿದರು. ರಂಗಸಂಸ್ಕೃತಿಯ ಕಲಾವಿದರು 'ಭಾಗವತರ ನಾಟಕ ಮಂಡಳಿ' ಎಂಬ ಹಾಸ್ಯ ನಾಟಕವನ್ನು ಪ್ರಸ್ತುತಪಡಿಸಿದರು.

ನಾಟಕಕಾರರಾದ ಲೋಕನಾಥ ದೀಕ್ಷಿತ್, ಪತ್ರಕರ್ತ ಪ್ರಶಾಂತ ರಿಪ್ಪನ್‌ಪೇಟೆ, ನ್ಯಾಯವಾದಿ ರಘು, ಜಯಂತಿ, ಸುಗುಣ ಭಾಗವಹಿಸಿದ್ದರು.

ನಟಿ ಕಲ್ಯಾಣಿ ಪ್ರದೀಪ್ ಅವರಿಗೆ 'ರಂಗಸಂಸ್ಕೃತಿ ಸಿರಿ2024' ಪ್ರಶಸ್ತಿ ಪ್ರದಾನ ಮಾಡಲಾಯಿತು. ಎಂ.ಎಸ್.ನರಸಿಂಹಮೂರ್ತಿ, ಲೋಕನಾಥ ದೀಕ್ಷಿತ್, ಪ್ರಶಾಂತ ರಿಪ್ಪನ್‌ಪೇಟೆ ಭಾಗವಹಿಸಿದ್ದರು.

ಚುನಾವಣೆ: ಸಚಿವರಿಂದ ವರದಿ ಪಡೆದ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಜಿ.ಪರಮೇಶ್ವರ ಸೇರಿದಂತೆ ಕೆಲವು ಸಚಿವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮಂಗಳವಾರ ಭೇಟಿ ಮಾಡಿ ತಮಗೆ ಉಸ್ತುವಾರಿ ವಹಿಸಿದ್ದ ಲೋಕಸಭಾ ಕ್ಷೇತ್ರಗಳಲ್ಲಿ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿನ ಸಾಧ್ಯತೆ ಕುರಿತು ಮಾಹಿತಿ ನೀಡಿದರು.

ಸಿದ್ದರಾಮಯ್ಯ ಮೈಸೂರು ಪ್ರವಾಸಕ್ಕೆ ತೆರಳುವ ಮುನ್ನ ಅವರ ಸರ್ಕಾರಿ ನಿವಾಸ ಕಾವೇರಿಗೆ ಬಂದ ಪರಮೇಶ್ವರ ಅವರು ಕೆಲ ಹೊತ್ತು ಚರ್ಚಿಸಿದರು. ಚುನಾವಣೆ ಬೆಳವಣಿಗೆಗಳ ಜತೆಯಲ್ಲೇ ಹಾಸನ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಪ್ರಕರಣ, ಶಾಸಕ ಎಚ್.ಡಿ.ರೇವಣ್ಣ ಬಂಧನ ಮತ್ತು ಬಿಡುಗಡೆ ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚಿಸಿದರು ಎಂದು ಮೂಲಗಳು ತಿಳಿಸಿವೆ. ಶಿವಕುಮಾರ್, ಸಚಿವರಾದ ಡಾ.ಎಚ್.ಸಿ.ಮಹದೇವಪ್ಪ, ಮಧು ಬಂಗಾರಪ್ಪ, ಎನ್. ಚಲುವರಾಯಸ್ವಾಮಿ ಅವರು ಕುರಿತು ವರದಿ ನೀಡಿದರು. ಕೆಲಕಾಲ ಎಲ್ಲ ಸಚಿವರೊಂದಿಗೆ ಒಟ್ಟಾಗಿ ಸಿದ್ದರಾಮಯ್ಯ ಚರ್ಚಿಸಿದರು. ಸಭೆ ಬಳಿಕ ಮೈಸೂರಿನತ್ತ ತೆರಳಿದರು. ಮುಖ್ಯಮಂತ್ರಿಯವರ ಭೇಟಿ ಮಾಡಿದ ಬಳಿಕ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರ ಸರ್ಕಾರಿ ನಿವಾಸಕ್ಕೆ ತೆರಳಿದ ಪರಮೇಶ್ವರ, ಅವರೊಂದಿಗೂ ಕೆಲಕಾಲ ಚರ್ಚೆ ನಡೆಸಿದರು.

ವೇಣು ಆಸ್ಪತ್ರೆಗೆ ದಾಖಲು

ಚಿತ್ರದುರ್ಗ: ಕಾದಂಬರಿಕಾರ ಬಿ.ಎಲ್.ವೇಣು ಅನಾರೋಗ್ಯದಿಂದ ಬಳಲುತ್ತಿದ್ದು, ಬೆಂಗಳೂರಿನ ಫೋರ್ಟಿಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ವೇಣು ಅವರಿಗೆ ಮೇ 10ರಂದು ಉಸಿರಾಟ ಸಮಸ್ಯೆ ಕಾಣಿಸಿಕೊಂಡಿತ್ತು.

ಚಿತ್ರಾವಳಿ

ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಕಾಲೇಜಿನಲ್ಲಿ ಮಂಗಳವಾರ ನಡೆದ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಎಸ್.ಎಂ. ಜಯಕರ ಉದ್ಘಾಟಿಸಿದರು. ಕರ್ನಾಟಕ ಬೌದ್ಧ ಸಮಾಜದ ಅಧ್ಯಕ್ಷ ಹ.ರಾ. ಮಹೇಶ್, ಹೈಕೋರ್ಟ್ ವಕೀಲ ಸುನಿಲ್ ಕುಮಾರ್ ಗುನ್ನಾಪುರ, ಕಾಲೇಜಿನ ಪ್ರಾಂಶುಪಾಲ, ಡೀನ್ ವಿ. ಸುದೇಶ್, ಎನ್. ದಶರಥ. ಎನ್. ಸತೀಶ್‌ಗೌಡ, ಜ್ಯೋತಿ ವಿಶ್ವನಾಥ್, ಎಲ್. ಚಂದ್ರಕಾಂತಿ ಭಾಗವಹಿಸಿದ್ದರು.

ಕೃಷಿಕ್ ಸರ್ವೋದಯ ಫೌಂಡೇಷನ್ ಸ್ಪರ್ಧಾತ್ಮಕ ಪರೀಕ್ಷಾ ಸಂಸ್ಥೆಯಲ್ಲಿ ಬ್ಯಾಂಕಿಂಗ್ ನೇಮಕಾತಿ ಪರೀಕ್ಷೆಗಾಗಿ ತರಬೇತಿ ಪಡೆದು ಆಯ್ಕೆಯಾಗಿರುವ ಮಂಜುನಾಥ್ (ಕೆನರಾ ಬ್ಯಾಂಕ್), ಎಚ್.ಪಿ. ಚಂದನ್ (ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ), ಪೂಜಾ (ಕೆನರಾ ಬ್ಯಾಂಕ್) ಮತ್ತು ವರುಣ್ (ಬ್ಯಾಂಕ್ ಆಫ್ ಬರೋಡಾ) ಅವರನ್ನು ಸನ್ಮಾನಿಸಲಾಯಿತು. ಸಂಸ್ಥೆಯ ಅಧ್ಯಕ್ಷ ವೈ.ಕೆ. ಪುಟ್ಟಸೋಮೇಗೌಡ, ಉಪಾಧ್ಯಕ್ಷ ಸಿ. ಚಿಕ್ಕಣ್ಣ, ಕಾರ್ಯದರ್ಶಿ ಟಿ. ತಿಮ್ಮೇಗೌಡ, ಖಜಾಂಚಿ ಸಿ.ಕೆ. ಶಿವಣ್ಣ, ಟ್ರಸ್ಟಿಗಳಾದ ಶಂಕರಲಿಂಗೇಗೌಡ, ದೇವರಾಜ್, ಎಸ್.ಟಿ. ರಾಮಚಂದ್ರ ಭಾಗವಹಿಸಿದ್ದರು.

ನಗರದ ಚಂದ್ರಾಲೇಔಟ್‌ನಲ್ಲಿರುವ ಶ್ರೀದುರ್ಗಾಪರಮೇಶ್ವರಿ ದೇವಾಲಯದಲ್ಲಿ ಬಿಜೆಪಿ ಮುಖಂಡ ವಿ.ಸೋಮಣ್ಣ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಶಾಸಕ ಸಿ.ಕೆ.ರಾಮಮೂರ್ತಿ ವಿಶೇಷ ಪೂಜೆ ಸಲ್ಲಿಸಿದರು. ಇದೇ ವೇಳೆ ದುರ್ಗಾಪರಮೇಶ್ವರಿ ದೇವಿಗೆ ಶ್ರೀಚಕ್ರ ಮತ್ತು ರಜತ ಕವಚ ಸಮರ್ಪಿಸಲಾಯಿತು. ಶೈಲಜಾ ಸೋಮಣ್ಣ, ಅರುಣ್‌ಕುಮಾರ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ರದ್ದಾದ ಬುದ್ಧಿಮಾಂದ್ಯರ ಶಾಲೆಗೆ ₹27 ಲಕ್ಷ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬುದ್ಧಿಮಾಂದ್ಯ ಮಕ್ಕಳ ವಸತಿ ರಹಿತ ಶಾಲೆಯೊಂದರ ಮಾನ್ಯತೆ 2020ರಲ್ಲೇ ರದ್ದಾಗಿದ್ದರೂ, ₹27 ಲಕ್ಷ ಅನುದಾನ ಬಿಡುಗಡೆ ಮಾಡಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನಿರ್ದೇಶನ ನೀಡಿರುವುದು ಚರ್ಚೆಗೆ ಗ್ರಾಸವಾಗಿದೆ.

ಶಾರದಾ ಮಾತಾ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ದತ್ತಿ ಸಂಸ್ಥೆ ಬೆಂಗಳೂರಿನ ಬೆನ್ಸನ್ ಟೌನ್‌ನ ಮುದ್ದಮ್ಮ ಗಾರ್ಡನ್‌ನಲ್ಲಿ 2000 ಇಸವಿಯಿಂದಲೂ ಬುದ್ಧಿಮಾಂದ್ಯ ಮಕ್ಕಳ ವಸತಿ ರಹಿತ ಶಾಲೆ ನಡೆಸುತ್ತಿದೆ. ಮಕ್ಕಳ ಸಂಖ್ಯೆ ಕಡಿಮೆಯಾಗಿದ್ದರೂ, ಹಲವು ವರ್ಷಗಳು ಮಕ್ಕಳ ದಾಖಲಾತಿಯೇ ಇಲ್ಲದಿದ್ದರೂ ಸಂಸ್ಥೆ ಸುಳ್ಳು ಲೆಕ್ಕ ತೋರಿಸಿ ಅನುದಾನ ಪಡೆಯುತ್ತಿದೆ ಎಂಬ ದೂರುಗಳು ಬಂದಿದ್ದರಿಂದ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ತನಿಖೆಗೆ ಆದೇಶಿಸಿತ್ತು.

ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ, ವಿಕಲಚೇತನರು ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವ್ಯವಸ್ಥಾಪಕರನ್ನು ಒಳಗೊಂಡ ತಂಡ ತನಿಖೆ ನಡೆಸಿ, ನೀಡಿದ್ದ ವರದಿ ಆಧಾರದಲ್ಲಿ ಸಂಸ್ಥೆಗೆ ನೀಡಿದ್ದ ಮಾನ್ಯತೆಯನ್ನು ಸೆ.29, 2020ರಲ್ಲಿ ರದ್ದು ಮಾಡಲಾಗಿತ್ತು.

ಮಾನ್ಯತೆ ರದ್ದಾದ ಸಂಸ್ಥೆಗೆ 2019–20, 2020–21 ಹಾಗೂ 2021–22ನೇ ಸಾಲಿನ ಬಾಕಿ ಅನುದಾನವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಕಳೆದ ತಿಂಗಳು ವಿಕಲಚೇತನರು ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ನಿರ್ದೇಶಕರಿಗೆ ಆದೇಶ ನೀಡಿದ್ದು, ಇಲಾಖೆಯ ನಿರ್ದೇಶನದಂತೆ ಹಣ ಬಿಡುಗಡೆ ಮಾಡಲಾಗುತ್ತಿದೆ ಎಂದು ಕರ್ನಾಟಕ ರಾಜ್ಯ ವಿಕಲಚೇತನರ ರಕ್ಷಣಾ ಸಮಿತಿ ಆರೋಪಿಸಿದೆ.

> **ಅಂಗವಿಕಲರು, ಹಿರಿಯ ನಾಗರಿಕರ ಸಬಲೀಕರಣ ಇಲಾಖೆಗೆ ನೀಡಲಾಗುವ ಸಾರ್ವಜನಿಕರ ತೆರಿಗೆ ಹಣವನ್ನು ಅನುಮತಿ ರದ್ದಾದ ಸಂಸ್ಥೆಗೆ ನೀಡುವುದು ಅಕ್ಷಮ್ಯ. ಇದಕ್ಕೆ ಕಾರಣವಾದ ಸಂಸ್ಥೆ, ಅಧಿಕಾರಿಗಳು, ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಬೇಕು.**
> **– ಚಂದ್ರಶೇಖರ ಪುಟ್ಟಪ್ಪ,** ರಾಜ್ಯ ಸಾಮಾಜಿಕ ಲೆಕ್ಕ ಪರಿಶೋಧನಾ ಸಮಿತಿ ಸದಸ್ಯ

'ಪರೀಕ್ಷಾ ವ್ಯವಸ್ಥೆ ಹಾಳುಗೆಡವಿದ ಸರ್ಕಾರ'

ಬೆಂಗಳೂರು: ರಾಜ್ಯದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳ ವ್ಯವಸ್ಥೆ ಹೀನಾಯ ಸ್ಥಿತಿಗೆ ತಲುಪಿದೆ. ಶಿಕ್ಷಣ ಇಲಾಖೆಗೆ ಪರೀಕ್ಷೆಯ ಬಗ್ಗೆ ಸ್ಪಷ್ಟ ಕಲ್ಪನೆ ಇಲ್ಲದೇ ವಿದ್ಯಾರ್ಥಿಗಳು ಮತ್ತು ಪಾಲಕರನ್ನು ಅನಗತ್ಯವಾಗಿ ಗೊಂದಲಕ್ಕೆ ತಳ್ಳಿದೆ ಎಂದು ವಿಧಾನ-ಪರಿಷತ್‌ನ ಮಾಜಿ ಸದಸ್ಯ, ಬಿಜೆಪಿ ಮುಖಂಡ ಅರುಣ್ ಶಹಾಪುರ ಟೀಕಿಸಿದರು.

10ನೇ ತರಗತಿ ಮತ್ತು ದ್ವಿತೀಯ ಪಿಯುಸಿಗೆ ತಲಾ ಮೂರು ಪರೀಕ್ಷೆಗಳನ್ನು ನಡೆಸುತ್ತಿದೆ. ಇದರಿಂದ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪಾಲಕರು ತೀವ್ರ ಒತ್ತಡಕ್ಕೆ ಸಿಲುಕಿದ್ದಾರೆ ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ದೂರಿದರು.

ಪ್ರಕಟಣೆ

ಟಿಮ್‌ಕೆನ್ ಇಂಡಿಯಾ ನಿಯಮಿತ
CIN - L29130KA1996PLC048230
ನೋಂದಣಿ ಕಛೇರಿ: ಸಂಖ್ಯೆ. 39–42, ಎಲೆಕ್ಟ್ರಾನಿಕ್ ಸಿಟಿ, ಫೇಸ್ II, ಹೊಸೂರು ರಸ್ತೆ, ಬೆಂಗಳೂರು–560 100 ದೂರವಾಣಿ : 080 41362000 ಫ್ಯಾಕ್ಸ್ : 080 41362010
ಇ–ಮೇಲ್: tilinvestor@timken.com ವೆಬ್‌ಸೈಟ್ : www.timken.com/en-in

ಈಕ್ವಿಟಿ ಷೇರುಗಳನ್ನು ಹೂಡಿಕೆದಾರರ ವಿದ್ಯಾಭ್ಯಾಸ ಮತ್ತು ಸಂರಕ್ಷಣ ನಿಧಿಗೆ ವರ್ಗಾಯಿಸಲು ಷೇರುದಾರರಿಗೆ ಸೂಚನೆ

ಹೂಡಿಕೆದಾರರ ವಿದ್ಯಾಭ್ಯಾಸ ಮತ್ತು ಸಂರಕ್ಷಣ ನಿಧಿಗಳ ಪ್ರಾಧಿಕಾರ (ಲೆಕ್ಕಪತ್ರ, ಪರಿಶೋಧನೆ, ವರ್ಗಾವಣೆ ಮತ್ತು ಹಿಂದಿರುಗಿಸುವುದು) ನಿಯಮ, 2016 ಆಗಿಂದಾಗ್ಗೆ ಬದಲಾವಣೆಯಾದ ಪ್ರಕಾರವಾಗಿ ("ಈ ನಿಯಮಗಳು") ಸಂಸದೀಯ ವ್ಯವಹಾರಗಳ ಸಚಿವಾಲಯ, ಭಾರತ ಸರ್ಕಾರದಿಂದ ಸೂಚಿಸಲಾಗಿದೆ ಎಂದು ಓದಿಕೊಳ್ಳುವ ಕಂಪನಿಗಳ ಕಾಯಿದೆ, 2013 ರ ನಿಬಂಧನೆಗಳಿಗೆ ಅನುಗುಣವಾಗಿ ಈ ಸೂಚನೆಯನ್ನು ಪ್ರಕಟಿಸಲಾಗಿದೆ.

ಈ ನಿಯಮಗಳು, ಇನ್ನಿತರ ವಿಷಯಗಳೊಂದಿಗೆ, ಸತತವಾಗಿ ಏಳು ವರ್ಷಗಳಿಗೆ ಕೇಂದ್ರ ಸರ್ಕಾರ ಸ್ಥಾಪಿಸಿದ ಹೂಡಿಕೆದಾರರ ವಿದ್ಯಾಭ್ಯಾಸ ಮತ್ತು ಸಂರಕ್ಷಣ ನಿಧಿಗೆ (ಐಇಪಿಎಫ್) ಲಾಭಾಂಶಗಳನ್ನು ಪಾವತಿಸದೆ ಅಥವಾ ಷೇರುದಾರರು ಪಡೆಯದೆ ಇರುವ ಎಲ್ಲಾ ರೀತಿಯ ಷೇರುಗಳಿಗೆ ಸಂಬಂಧಿಸಿದಂತೆ ವರ್ಗಾವಣೆಯನ್ನು ಒದಗಿಸುವುದು. ಅದರಂತೆ, ಸದರಿ ನಿಯಮದ ಅಡಿಯಲ್ಲಿ ಯಾರ ಷೇರುಗಳು ಐಇಪಿಎಫ್ ಡೀಮ್ಯಾಟ್ ಖಾತೆಗೆ 2024 ರ ಸೆಪ್ಟೆಂಬರ್ ತಿಂಗಳಲ್ಲಿ ವರ್ಗಾಯಿಸಲು ಅನ್ವಯಿಸುವಂತಹ ಸಂಬಂಧಿತ ಷೇರುದಾರರಿಗೆ ಸೂಚನೆ ನೀಡಿದೆ. ಕಂಪನಿಯು ಇಂತಹ ಷೇರುದಾರರ ಮತ್ತು ಐಇಪಿಎಫ್‌ಗೆ ಡೀಮ್ಯಾಟ್ ಖಾತೆಗೆ ವರ್ಗಾಯಿಸಲು ನಿಶ್ಚಯಿಸಿರುವ ಷೇರುಗಳ ವಿವರಗಳನ್ನು ತನ್ನ ವೆಬ್‌ಸೈಟ್ https://www.timken.com/en-in/investors/statutory-compliances/ ("TIL Shares to be transferred to IEPF_FY 2016-17") ರಲ್ಲಿ ಅಪ್‌ಲೋಡ್ ಮಾಡಿದೆ. ಕಂಪನಿಯು ಸಂಬಂಧಿತ ಷೇರುದಾರರಿಗೆ ಅಗತ್ಯವಿರುವ ಕ್ರಮ ಕೈಗೊಳ್ಳಲು ಲಭ್ಯವಿರುವ ಇತ್ತೀಚಿನ ವಿಳಾಸಕ್ಕೆ ಪ್ರತ್ಯೇಕವಾದ ಸಂದೇಶವನ್ನು ರವಾನಿಸಿದೆ.

ಐಇಪಿಎಫ್‌ಗೆ ವರ್ಗಾಯಿಸದೆ ಉಳಿದಿರುವ ಷೇರುಗಳ ಬಗ್ಗೆ 2016–17 ಹಾಗೂ ಮುಂದಿನ ಸಾಲುಗಳ (ಗಳಿಗೆ), ಯಾವುದೇ ಪಡೆಯದೆ ಉಳಿದಿರುವ ಅಂತಿಮ ಲಾಭಾಂಶವನ್ನು ಪಡೆಯಲು ಕಂಪನಿ / ರಿಜಿಸ್ಟ್ರಾರ್ ಹಾಗೂ ಟ್ರಾನ್ಸ್‌ಫರ್ ಏಜೆಂಟ್ (ಆರ್‌ಟಿಎ) ಗೆ 16 ಆಗಸ್ಟ್, 2024 ರೊಳಗೆ ತಮ್ಮ ಅರ್ಜಿಯನ್ನು ಸಲ್ಲಿಸಲು ಸಂಬಂಧಪಟ್ಟ ಎಲ್ಲಾ ಷೇರುದಾರರಿಗೆ ಮನವಿ ಮಾಡಲಾಗಿದೆ. ತಾವುಗಳು ಗಮನಿಸಬೇಕಾದ ಅಂಶವೇನೆಂದರೆ ಮೇಲಿನ ನಿಗಧಿತ ದಿನದೊಳಗೆ ತಮಗೆ ಸಲ್ಲಬೇಕಾದ ಲಾಭಾಂಶಕ್ಕಾಗಿ ಅರ್ಜಿ ಸಲ್ಲಿಸಲು ವಿಫಲವಾದರೆ, ಕಂಪನಿಯು ಮುಂದೆ ಷೇರುದಾರರಿಗೆ ಯಾವುದೇ ಸೂಚನೆ ನೀಡದೆ ಷೇರುಗಳನ್ನು ಐಇಪಿಎಫ್‌ಗೆ ವರ್ಗಾಯಿಸುವುದಲ್ಲದೆ ಬೇರೆ ದಾರಿ ಇರುವುದಿಲ್ಲ. ಷೇರುದಾರರಿಗೆ ತಿಳಿಸುವುದೇನೆಂದರೆ ಐಇಪಿಎಫ್‌ಗೆ ಷೇರುಗಳನ್ನು ವರ್ಗಾಯಿಸುವ ಉದ್ದೇಶ : ಕಂಪನಿಯು ತಾವು ಹೊಂದಿರುವ ಮೂಲ ಷೇರು ಪ್ರಮಾಣ ಪತ್ರ (ಗಳು)ದ ಬದಲಾಗಿ ಷೇರು ಪ್ರಮಾಣ ಪತ್ರ (ಗಳ)ದ ಪ್ರತಿಯನ್ನು ನೀಡುವುದು ಮತ್ತು ಇಂತಹ ಸಂದರ್ಭದಲ್ಲಿ, ಮೂಲ ಷೇರು ಪ್ರಮಾಣ ಪತ್ರ (ಗಳ)ದ ನೋಂದಾಯಿಸಲಾದ ತಮ್ಮ ಹೆಸರು ನಿಯಮಾನುಸಾರ ರದ್ದುಗೊಳ್ಳುತ್ತದೆ.

ಈ ಮೂಲಕ ಸೂಚಿಸುವುದೇನೇಂದರೆ ಐಇಪಿಎಫ್‌ಗೆ ವರ್ಗಾಯಿತಗೊಂಡ ಷೇರುಗಳು, ಯಾವುದೇ ಷೇರಿಗಳಿಗೆ ಅನ್ವಯಿಸುವ ಎಲ್ಲಾ ಸೌಲಭ್ಯಗಳು ಇದ್ದಲ್ಲಿ, ಇದನ್ನು ಒಳಗೊಂಡಂತೆ ಐಇಪಿಎಫ್ ಪ್ರಾಧಿಕಾರದಿಂದ ನಿಯಮದ ಅನುಸಾರ ಇವೆಲ್ಲವನ್ನು ಅನುಸರಿಸಿ ಅಂತಹ ಷೇರುಗಳನ್ನು ಪಡೆಯಬಹುದು. ಈ ವಿಷಯದ ಬಗ್ಗೆ ಸ್ಪಷ್ಟತೆಗಾಗಿ, ಕಂಪನಿ ರಿಜಿಸ್ಟ್ರಾರ್ಸ್ ಅಂಡ್ ಷೇರ್ ಟ್ರಾನ್ಸ್‌ಫರ್ ಏಜೆಂಟ್ (ಆರ್‌ಟಿಏ), ಸಿಬಿ ಮ್ಯಾನೇಜ್‌ಮೆಂಟ್ ಸರ್ವಿಸಸ್ (ಪ್ರೈ) ಲಿಮಿಟೆಡ್, ಪಿ–22, ಬಾಂಡೆಲ್ ರಸ್ತೆ, ಕೋಲ್ಕತಾ – 700019 ದೂರವಾಣಿ ಸಂಖ್ಯೆ 033: 4011 6700/6725, ಇ–ಮೇಲ್: rta@cbmsl.com, website: www.cbmsl.com ಮೂಲಕ ಸಂಪರ್ಕಿಸಬಹುದು.

ದಿನಾಂಕ: 14 ಮೇ, 2024

ಟಿಮ್‌ಕೆನ್ ಇಂಡಿಯ ನಿಯಮಿತ ಪರವಾಗಿ
ಸಹಿ/–
ಮಂದಾರ್ ವಸಮತ್‌ಕರ್
ಕಂಪನಿ ಕಾರ್ಯದರ್ಶಿ ಮತ್ತು ಮುಖ್ಯ–ಕಾಂಪ್ಲಯನ್ಸ್

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE
My Client intends to purchase the property more particularly described in the Schedule hereunder from its present co-owners **M.N. JAGATHAMBA, M.N VIJAY KUMAR, M.N. RAVI KUMAR, M.N. SUDHINDRA RAO & M.N. NARENDRA RAO** who have represented that they have a clear and marketable title to the same. Any person/s, financial institutions and statutory authorities who claims any right, title or interest of any nature in or any lien, charge or enforceable right in relation to the Schedule Property and / or has any objections of any nature to the aforesaid transaction should lodge such claim and / or objections in writing to the undersigned together with supporting documents within ten (10) days hereof, failing which it will be presumed that no valid claims or objections subsist and my clients would proceed to complete the transaction with the present owners thereof subject to compliance with other statutory and legal formalities.

SCHEDULE PROPERTY
All that piece and parcel of the site and building located at No. 88 (amalgamated as 88 by combining property No. 88 & property No. 88/1), situated as Rashtriya Vidyalaya Road, near Lalbagh West Gate, Basvanagudi, Bangalore, measuring East to West 72 Feet and North to South 30 Feet, totally measuring 2160 Sq. Ft., presently coming under the jurisciction of the Bruhat Bangalore Mahanagara Palike, New Ward No. 143, (Old Ward No. 50), Vishveshwara Puram, having the amalgamated Khatha PID No. 50-70-88 with all rights, appurtenances whatsoever hereunder or underneath or above the surface and bounded on the : **East by:** Common Passage and Lalbagh Metro Station, **West by:** Conservancy Lane, **North by:** Property No. 89, **South by:** Property No. 87.

For **ARVIND RAGHAVAN Law Partners,**
ARVIND RAGHAVAN, Advocate
#48, "Ishita" 2nd Floor, 2nd Main Road, Vyalikaval, Bangalore -560003 Email : arvind_ncsr@yahoo.com
Place: Bangalore, Date:15.05.2024

EDUCATION CORNER

R.E.S. POLYTECHNIC
Estd: 1986 - Recognised by Govt. of Karnataka & AICTE
10th Pass / What Next ???
JOIN DIPLOMA IN: ♦ Computer Science ♦ IS ♦ Civil ♦ Mechanical ♦ Automobile ♦ Electrical ♦ Electronics ♦ Fashion Tech ♦ Commerce (CP)
After Diploma can join JOB / 2nd year Engg OR Any Degree through LATERAL ENTRY QUOTA
PUC Pass Join 2 yrs Diploma Engineering
PUC Fail Join 3 yrs Diploma Engineering
EVENING / WEEKEND CLASSES
Available for working Professionals to EE
5, Sunkadakatte, Magadi Road, Hegganahalli Cross, B-91
Call: Secretary-99166 46466 / Principal-9916639466
RES-24502

PROPERTY CORNER

GODOWN FOR RENT
SPACIOUS GODOWN ON MAIN ROAD AVAILABLE FOR RENT AT CHAMARAJPET, MYSORE ROAD, BLR–18
MEASURING 10,815 SQ.FT & OPEN AREA OF 3,450, SQ.FT. STONE BUILDING WITH SHEET ROOFING CORNER PLOT
Mail: arunyas13@gmail.com
Ph: +91 9108012898

SADASHIVANAGAR CLUB
No.21, 15th Cross, Sadashivanagar, Bangalore 560080. Mob : 9148975091
TENDER NOTIFICATION
FOR RUNNING VEG & NON VEG MULTI CUISINE CANTEEN & CHAATS.
Sealed quotations are invited from Experienced Catering Contractors for running the Club Canteen. Interested contractors may collect the tender documents from the office from 15th May '2024 to 20th May' 2024 by paying Rs.500/- + GST and submit filled up documents on or before 5pm on 22nd May '2024 with details of Menu, Quantity & Rates.
Date : 13.05.2024 Place : Bangalore — Rakesh Kumar P. S. Hon. Secretary

BUSINESS
Business to Business
Business

WANTED BUSINESS PARTNER ATTRACTIVE INCOME CONTACT: 88925 01007/ 9606701007

ಬಿರುಸಿನ ಮಳೆ: ಮನೆಯೊಳಗೆ ನುಗ್ಗಿದ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧ ಭಾಗಗಳಲ್ಲಿ ಸೋಮವಾರ ತಡರಾತ್ರಿ ಭಾರಿ ಮಳೆಯಾಗಿದ್ದು, ಕೆಲವು ಪ್ರದೇಶಗಳಲ್ಲಿ ಮನೆಗಳಿಗೆ ನೀರು ನುಗ್ಗಿದೆ.

ಗುಡುಗು, ಮಿಂಚು, ಬಿರುಗಾಳಿಯೊಂದಿಗೆ ಮುಂಜಾನೆವರೆಗೆ ಭಾರಿ ಮಳೆ ಸುರಿಯಿತು. ಬಿಬಿಎಂಪಿ ವ್ಯಾಪ್ತಿಯ ದೊಡ್ಡನೆಕುಂದಿ, ಎಚ್‌ಎಎಲ್ ಸುತ್ತಮುತ್ತಲ ಪ್ರದೇಶಗಳಲ್ಲಿ 6 ರಿಂದ 8 ಸೆಂಟಿ ಮೀಟರ್‌ನಷ್ಟು ಮಳೆಯಾಗಿದೆ.

ಮೈಸೂರು ರಸ್ತೆ ಗುಡ್ಡದಹಳ್ಳಿಯಲ್ಲಿ ಮನೆಗಳ ಒಳಗೆ ಒಳಚರಂಡಿ ನೀರು ಮತ್ತು ಮಳೆ ನೀರು ನುಗ್ಗಿತು. ನಿವಾಸಿಗಳು ಮನೆಯೊಳಗಿನ ನೀರನ್ನು ಹೊರ ಹಾಕಲು ಬೆಳಿಗ್ಗೆವರೆಗೆ ಶ್ರಮವಹಿಸಿದರು.

'ಒಳಚರಂಡಿ ಮಾರ್ಗದಲ್ಲಿ ಸಾಕಷ್ಟು ಸಮಸ್ಯೆ ಇದೆ. ಮಳೆ ಬಂದ ಕೂಡಲೇ ತುಂಬಿಕೊಂಡು ಹೊರ ಹರಿಯುತ್ತದೆ. ಮಳೆ ನೀರಿನೊಂದಿಗೆ ಕೊಳಕು ನೀರು ಮನೆಯೊಳಗೆ ನುಗ್ಗುತ್ತದೆ. ಬಿಬಿಎಂಪಿ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ಅಲ್ಲಿನ ನಿವಾಸಿಗಳು ದೂರಿದರು.

ಜೆ.ಪಿ. ನಗರ, ಅಗರ ರಸ್ತೆಗಳಲ್ಲಿ ಮರಗಳು ಉರುಳಿ ರಸ್ತೆ ಸಂಚಾರಕ್ಕೆ ತೊಡಕುಂಟಾಯಿತು. ಧಾರಾಕಾರವಾಗಿ ಮಳೆ ಸುರಿದಿದ್ದರಿಂದ, ಹಲವು ರಸ್ತೆಗಳು ಜಲಾವೃತಗೊಂಡಿದ್ದವು. ಹೊಸಕೆರೆಹಳ್ಳಿ, ಮೈಸೂರು ರಸ್ತೆ, ಪೀಣ್ಯ ಮುಖ್ಯರಸ್ತೆ, ನಾಯಂಡಹಳ್ಳಿ, ಶಿವಾಜಿನಗರ, ಎಂ.ಜಿ. ರಸ್ತೆ, ಜೆ.ಸಿ. ನಗರ ಸಹಿತ ಅನೇಕ ಕಡೆಗಳಲ್ಲಿ ರಸ್ತೆಯಲ್ಲಿ ನೀರು ಹರಿದು ತೊಂದರೆ ಉಂಟಾಯಿತು.

ಮಂಗಳವಾರ ರಾತ್ರಿ ಸುರಿದ ಮಳೆ (ಸೆಂ.ಮೀ)

ದೊಡ್ಡನೆಕ್ಕುಂದಿ	7.9
ಎಚ್‌ಎಎಲ್ ವಿಮಾನ ನಿಲ್ದಾಣ	6.3
ಕೋನೇನ ಅಗ್ರಹಾರ	4.4
ವಿಜ್ಞಾನ ನಗರ	3.8
ಎಚ್‌ಎಸ್‌ಆರ್ ಬಡಾವಣೆ	3.8
ಮಾರತ್‌ಹಳ್ಳಿ	3.7
ಸಿಂಗಸಂದ್ರ	3.4
ಹಂಪಿನಗರ	3.4
ಗಾಳಿ ಆಂಜನೇಯ ದೇವಸ್ಥಾನ	3.4
ವಿದ್ಯಾಪೀಠ	3.3
ವನ್ನಾರ್‌ಪೇಟೆ	3.3
ಬಸವನಗುಡಿ	3.3
ಕುಮಾರಸ್ವಾಮಿ ಲೇಔಟ್	3.3
ರಾಜಮಹಲ್ ಗುಟ್ಟಳ್ಳಿ	3.2
ಹೊರಮಾವು	3.2
ಮಾರುತಿ ಮಂದಿರ	3
ನಾಗರಬಾವಿ	3
ಸಂಪಿಗೆ ನಗರ	3

ನಗರದ ಹೊಸಕೆರೆಹಳ್ಳಿ ಕೆರೆಯ ಪಕ್ಕದ ಕೆರೆಕೋಡಿ ಮುಖ್ಯ ರಸ್ತೆ ಕೆಸರುಮಯವಾಗಿದ್ದು, ದ್ವಿಚಕ್ರ ವಾಹನ ಸವಾರರು ಪರದಾಡುವಂತಾಯಿತು. –ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

ರಸ್ತೆಯಲ್ಲಿ ಗುಂಡಿ ಬಿದ್ದಿರುವುದು

ಮೈಸೂರು ರಸ್ತೆ ಗುಡ್ಡದಹಳ್ಳಿಯಲ್ಲಿ ಭಾರಿ ಮಳೆಯಿಂದಾಗಿ ಮನೆಯೊಳಗೆ ನುಗ್ಗಿದ ಒಳಚರಂಡಿ ನೀರು ಮತ್ತು ಮಳೆ ನೀರನ್ನು ಹೊರ ಹಾಕುತ್ತಿರುವ ಮಹಿಳೆಯರು. ಪ್ರಜಾವಾಣಿ ಚಿತ್ರ: ಬಿ.ಕೆ.ಜನಾರ್ದನ್

ಅಗರ ರಸ್ತೆಯಲ್ಲಿ ಮರವೊಂದು ಮುರಿದು ಬಿದ್ದುದರಿಂದ ಪಾದಚಾರಿಗಳಿಗೆ ತೊಂದರೆಯಾಯಿತು. ಪ್ರಜಾವಾಣಿ ಚಿತ್ರ: ಪ್ರೇರಣಾ ಚುಲುಕ

ಮಳೆ: ಬೆಂಗಳೂರು ಬಳಿಕ ಕೋಲಾರದಲ್ಲೇ ಅಧಿಕ

• ಕೆ.ಓಂಕಾರ ಮೂರ್ತಿ

ಮುಖ್ಯಾಂಶಗಳು

- ಈ 30ಗಳಲ್ಲಿ 6.7 ಸೆ.ಮೀ ಮಳೆ
- ಶೇ 176ರಷ್ಟು ಮಳೆ ಪ್ರಮಾಣ ದಾಖಲು
- ಏಪ್ರಿಲ್‌ನಲ್ಲಿ ಜಿಲ್ಲೆಯಲ್ಲಿ ಒಂದನಿಯೂ ಬೀಳದ ಮಳೆ

ಕೋಲಾರ: ಏಪ್ರಿಲ್ ತಿಂಗಳಲ್ಲಿ ಒಂದೂ ಹನಿ ಮಳೆ ಕಾಣದ ಕೋಲಾರ ಜಿಲ್ಲೆಯಲ್ಲಿ ಮೇ ತಿಂಗಳಲ್ಲಿ ಈವರೆಗೆ ದಾಖಲೆಯ ಮಳೆಯಾಗಿದೆ.

ಈ ತಿಂಗಳು ಈವರೆಗೆ 6.7 ಸೆ.ಮೀ (67 ಮಿ.ಮೀ) ಮಳೆಯಾಗಿದ್ದು, ಶೇ 176ರಷ್ಟು ಹೆಚ್ಚಳವಾಗಿದೆ. ಈ ಅವಧಿಯಲ್ಲಿ ಜಿಲ್ಲೆಯ ವಾಡಿಕೆ ಮಳೆ 2.4 ಸೆ.ಮೀ (24 ಮಿ.ಮೀ.).

ರಾಜ್ಯದಲ್ಲಿ ಈ ಅವಧಿಯಲ್ಲಿ ಬೆಂಗಳೂರು ನಗರ (7.7 ಸೆ.ಮೀ) ಬಳಿಕ ಕೋಲಾರ ಜಿಲ್ಲೆಯಲ್ಲಿ ಅತ್ಯಧಿಕ ಮಳೆಯಾಗಿದ್ದು, ಬಿಸಿಲ ಧಗೆಗೆ ಕಂಗೆಟ್ಟಿದ್ದ ರೈತರ ಮೊಗದಲ್ಲಿ ಮಂದಹಾಸ ಮೂಡಿಸಿದೆ.

ಈ ವರ್ಷ ಜನವರಿಯಿಂದ ಮೇ 13ರವರೆಗೆ ಜಿಲ್ಲೆಯಲ್ಲಿ ಒಟ್ಟು 7.1 ಸೆ.ಮೀ (71 ಮಿ.ಮೀ) ಮಳೆಯಾಗಿದೆ. ಈ ಅವಧಿಯ ವಾಡಿಕೆ ಮಳೆ ಶೇ 6.9 ಸೆ.ಮೀ (69 ಮಿ.ಮೀ.) ಎಂದು ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಕಳೆದ ಒಂದು ವಾರದಿಂದ ಜಿಲ್ಲೆಯಲ್ಲಿ ಮಳೆ ಆಗುತ್ತಲೇ ಇದೆ. ಮುಳಬಾಗಿಲು ತಾಲ್ಲೂಕಿನ ಹನುಮನಹಳ್ಳಿಯಲ್ಲಿ 13 ಸೆ.ಮೀ ಮಳೆಯಾಗಿತ್ತು.

ಒಣಗುತ್ತಿದ್ದ ಕೆರೆ ಕಟ್ಟೆಗಳಿಗೆ ಇದರಿಂದ ಮತ್ತೆ ಜೀವಕಳೆ ಬಂದಿದೆ. ಬಿರು ಬಿಸಲಿನಿಂದ ಹೈರಾಣಾಗಿದ್ದ ಜನರಿಗೂ ಮಳೆ ತಂಪೆರೆದಿದೆ. ಪ್ರಾಣಿ, ಪಕ್ಷಿಗಳಿಗೆ ನೀರಿನ ಕೊರತೆ ನೀಗಿಸಿದೆ.

ಕೆಲವು ಭಾಗದಲ್ಲಿ ಮಳೆಯಾಶ್ರಿತ ಬೆಳೆ ಬೆಳೆಯಲು ರೈತರು ಭೂಮಿಯನ್ನು ಹದ ಮಾಡುವಲ್ಲಿ ನಿರತರಾಗಿದ್ದಾರೆ. ಇನ್ನು ಕೆಲವರು ಮುಂಗಾರು ಹಂಗಾಮಿಗೆ ಜಮೀನು ಸಿದ್ಧಪಡಿಸಿಕೊಳ್ಳುತ್ತಿದ್ದಾರೆ. ಶ್ರೀನಿವಾಸಪುರದಲ್ಲಿ ರೈತರು ಸಂಪ್ರದಾಯದಂತೆ ಹೊನ್ನೇರು ಕಟ್ಟಿ ಜಮೀನು ಹಾಗೂ ಎತ್ತುಗಳಿಗೆ ಪೂಜೆ ಸಲ್ಲಿಸಿದ್ದಾರೆ.

ಕೆಲವೊಮ್ಮೆ ಬಿರುಗಾಳಿ, ಸಿಡಿಲು ಹಾಗೂ ಆಲಿಕಲ್ಲು ಸಮೇತ ಮಳೆಯಾಗಿದೆ. ಇದರಿಂದ ಜಿಲ್ಲೆಯ ಹಲವೆಡೆ ನಷ್ಟವೂ ಸಂಭವಿಸಿದೆ. ಕೋಲಾರ, ಮುಳಬಾಗಿಲು, ಬಂಗಾರಪೇಟೆ, ಕೆಜಿಎಫ್ ಹಾಗೂ ಬೇತಮಂಗಲದ ಕೆಲವೆಡೆ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದ್ದು, ಮನೆಗಳು ಜಲಾವೃತಗೊಂಡಿವೆ. ಮಾಲೂರು, ಕೋಲಾರ ಸೇರಿದಂತೆ ವಿವಿಧೆಡೆ ವಿದ್ಯುತ್ ಕಂಬಗಳು, ಮರಗಳು ನೆಲಕ್ಕುರುಳಿ ಹಲವೆಡೆ ವಿದ್ಯುತ್ ಅಡಚಣೆ ಉಂಟಾಗಿದೆ. ಕೋಲಾರ ನಗರದಲ್ಲಿ ಮೇ 7 ಹಾಗೂ 8ರಂದು 24 ಗಂಟೆ ವಿದ್ಯುತ್ ಅಡಚಣೆ ಉಂಟಾಗಿತ್ತು. ಇಡೀ ಕೋಲಾರ ನಗರ ಕತ್ತಲಲ್ಲಿ ಮುಳುಗಿತ್ತು.

ಮೇನಲ್ಲಿ ಅತಿ ಹೆಚ್ಚು ಮಳೆಯಾದ ಜಿಲ್ಲೆಗಳು (ಸೆ.ಮೀ)

ಜಿಲ್ಲೆ	ವಾಡಿಕೆ	ಬಿದ್ದ ಮಳೆ	ಪ್ರಮಾಣ (ಶೇ)
ಬೆಂಗಳೂರು ನಗರ	3.3	7.7	119
ಕೋಲಾರ	2.4	6.7	176
ಮೈಸೂರು	4.6	6.6	45
ಹಾಸನ	3.5	5.9	67
ಕೊಡಗು	4.9	5.9	19
ತುಮಕೂರು	2.5	5.7	122

* ಮೇ 13ರವರೆಗಿನ ಮಳೆ ಮಾಹಿತಿ

ಮಳೆಯೊಂದಿಗೆ ಗುಂಡಿಯೂ ಹೆಚ್ಚಳ

ನಗರದಲ್ಲಿ ಕೆಲವು ದಿನಗಳಿಂದ ಮಳೆ ಸುರಿಯುತ್ತಿದ್ದು, ಮಳೆ ಪ್ರಮಾಣ ಏರುತ್ತಿದ್ದಂತೆ ನಗರದ ರಸ್ತೆಗಳಲ್ಲಿ ಬೀಳುತ್ತಿರುವ ಗುಂಡಿ–ಹೊಂಡಗಳ ಸಂಖ್ಯೆಯೂ ಹೆಚ್ಚುತ್ತಿದೆ. ಹಲವು ಕಡೆಗಳಲ್ಲಿ ರಸ್ತೆ ಮಧ್ಯೆಯೇ ಗುಂಡಿಗಳು ಬಾವಿ, ಕೆರೆಗಳಂತಾಗಿದ್ದು, ಒಂದೆಡೆ ವಾಹನ ಸಂಚಾರಕ್ಕೆ ತೊಡಕಾಗಿದ್ದರೆ, ಇನ್ನೊಂದೆಡೆ ವಾಹನಗಳು ಸಾಗುವಾಗ ಪಾದಚಾರಿಗಳ ಮೇಲೆ ಕೆಸರು ನೀರಿನ ಸಿಂಚನವಾಗುತ್ತಿದೆ.

ಮಾಕಳಿ–ಹುಸ್ಕೂರು ರಸ್ತೆಯಲ್ಲಿ ಗುಂಡಿ

ಹೆಸರಘಟ್ಟ: ಮಾಕಳಿಯಿಂದ ಹುಸ್ಕೂರು ಕಡೆಗೆ ಹೋಗುವ ಮುಖ್ಯರಸ್ತೆಯಲ್ಲಿ ಯೂನಿಬಿಕ್ ಕಾರ್ಖಾನೆ ಮುಂಭಾಗ ರಸ್ತೆಯು ಕಿತ್ತು ಹೋಗಿದ್ದು ದೊಡ್ಡ ಗುಂಡಿಯಾಗಿದೆ.

ಗುಂಡಿಯಲ್ಲಿ ಮಳೆ ನೀರು ನಿಂತು ವಾಹನಗಳು ಓಡಾಡುವುದೇ ದುಸ್ತರವಾಗಿದೆ. ಈ ರಸ್ತೆಯಲ್ಲಿ ಬಾರಿ ವಾಹನಗಳು ಸಂಚರಿಸುವುದರಿಂದ ಕೆಲವೊಮ್ಮೆ ಟ್ರಾಫಿಕ್ ಜಾಮ್ ಆಗುತ್ತಿದೆ.

ತಿರುವಿನಲ್ಲಿಯೇ ಆಳವಾದ ಗುಂಡಿ ಬಿದ್ದಿರುವುದರಿಂದ ಅಪಘಾತಗಳು ಸಂಭವಿಸುತ್ತಿವೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ದುರಸ್ತಿ ಕಾರ್ಯ ಕೈಗೊಳ್ಳಬೇಕಾಗಿ ಸ್ಥಳೀಯರು ಮತ್ತು ವಾಹನ ಸವಾರರು ಆಗ್ರಹಿಸಿದ್ದಾರೆ

ಮಳೆಗೆ ಕಿತ್ತುಹೋಗಿರುವ ನಗರದ ಕನ್ನಿಂಗ್ ಹ್ಯಾಮ್ ರಸ್ತೆಯ ಡಾಂಬರು(ಎಡಚಿತ್ರ). ಬಿರುಸಿನ ಮಳೆಗೆ ಮಾಧವನಗರದ ರಸ್ತೆಯ ಡಾಂಬರು ಕಿತ್ತುಬಂದಿದ್ದು, ವಾಹನ ಸಂಚಾರಕ್ಕೆ ತೊಡಕು ಉಂಟಾಗಿದೆ.(ಮಧ್ಯದ ಚಿತ್ರ). ನಗರದಲ್ಲಿ ಸುರಿದ ಮಳೆ ಚಿತ್ರಕಲಾ ಪರಿಷತ್ ಬಳಿ ರಸ್ತೆಯ ಕಳಪೆ ಗುಣಮಟ್ಟವನ್ನು ಅನಾವರಣಗೊಳಿಸಿದೆ –ಪ್ರಜಾವಾಣಿ ಚಿತ್ರಗಳು: ಪ್ರಶಾಂತ್ ಎಚ್.ಜಿ.

ಮಾಕಳಿಯಿಂದ ಹುಸ್ಕೂರು ಕಡೆಗೆ ಹೋಗುವ ಮುಖ್ಯ ರಸ್ತೆಯಲ್ಲಿ ಯೂನಿಬಿಕ್ ಕಾರ್ಖಾನೆ ಮುಂಭಾಗ ಗುಂಡಿ ಬಿದ್ದಿರುವುದು.

ಒಳಚರಂಡಿ ಕಾಮಗಾರಿ: ರಸ್ತೆಯಲ್ಲಿ ಗುಂಡಿ...

ರಾಜರಾಜೇಶ್ವರಿ ನಗರ: ದುಬಾಸಿ ಪಾಳ್ಯದ ಕೆರೆ ಪಕ್ಕದ ರಸ್ತೆಯಲ್ಲಿ (ಆರ್.ವಿ.ಕಾಲೇಜಿನ ಕಡೆಗೆ ಹೋಗುವ ಮಾರ್ಗ) ಗುಂಡಿಗಳಾಗಿದ್ದು, ಕೆಲವು ಕಡೆ ಬಿರುಕು ಬಿಟ್ಟಿದೆ.

ದುಬಾಸಿಪಾಳ್ಯ ಕೆರೆಗೆ ಹರಿಯುತ್ತಿದ್ದ ಒಳಚರಂಡಿ ನೀರನ್ನು ತಪ್ಪಿಸಲು ನಾಗದೇವನಹಳ್ಳಿಯ ರಾಮನಾಥ್ ನಗರದಿಂದ ದುಬಾಸಿಪಾಳ್ಯದ ಕೆರೆ ಕೋಡಿವರೆಗೆ ಬೆಂಗಳೂರು ಜಲಮಂಡಳಿ ಹೊಸದಾಗಿ ಒಳಚರಂಡಿ ಕಾಮಗಾರಿ ಕೈಗೊಂಡಿತ್ತು. ₹1.20 ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ಕಾಮಗಾರಿಯ ಭಾಗವಾಗಿ ಪೈಪ್‌ಗಳನ್ನು ಜೋಡಿಸಿರುವ ಜಾಗದಲ್ಲಿ ಗುಂಡಿಗಳಾಗಿವೆ.

'ಒಳಚರಂಡಿ ಕಾಮಗಾರಿ ಕಳಪೆಯಾಗಿರುವುದರಿಂದ ರಸ್ತೆಗಳು ಗುಂಡಿ ಬೀಳಲು ಕಾರಣವಾಗಿದೆ' ಎಂದು ಸ್ಥಳೀಯರು ಅನುಮಾನ ವ್ಯಕ್ತಪಡಿಸಿದ್ದಾರೆ.

'ಕಳಪೆ ಕಾಮಗಾರಿ ಜೊತೆಗೆ, ಒಳಚರಂಡಿಗೆ ಅಳವಡಿಸಿರುವ ಪೈಪುಗಳ ಗುಣಮಟ್ಟದ ಬಗ್ಗೆಯೂ ಅನುಮಾನವಿದೆ. ಮಳೆಗಾಲ ಪ್ರಾರಂಭವಾಗಿದ್ದು, ಶೀಘ್ರ ಕಾಮಗಾರಿ ಪೂರ್ಣಗೊಳಿಸಿ, ರಸ್ತೆ ಸರಿಪಡಿಸಬೇಕು' ಎಂದು ಸ್ಥಳೀಯ ಎನ್.ಸಿ.ಕುಮಾರ್ ಒತ್ತಾಯಿಸಿದ್ದಾರೆ.

ಬಿಡಬ್ಲ್ಯುಎಸ್‌ಎಸ್‌ಬಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಶಶಿಕುಮಾರ್, 'ಒಳ ಚರಂಡಿಗೆ ಹಾಕಲಾಗಿದ್ದ ಹಳೆಯ ಪೈಪ್‌ಗಳನ್ನು ಬದಲಾಯಿಸಿ, ಹೊಸದಾಗಿ ಕಾಮಗಾರಿ ಕೈಗೊಂಡಿದ್ದೇವೆ. ಮುನೇಶ್ವರ ದೇವಸ್ಥಾನದ ಬಳಿ ಬಂಡೆ ಸಿಕ್ಕಿದ್ದರಿಂದ, ಕಾಮಗಾರಿ ವಿಳಂಬವಾಗಿ, ಒಳಚರಂಡಿ ನೀರು ಸರಾಗವಾಗಿ ಹರಿಯದೆ ಗುಂಡಿಗಳಾಗಿವೆ. ಗುಂಡಿ ಬಿದ್ದಿರುವ ರಸ್ತೆಯನ್ನು ಸರಿಪಡಿಸಲಾಗುತ್ತಿದೆ' ಎಂದು ತಿಳಿಸಿದರು.

ರಸ್ತೆ ಬಿರುಕುಬಿಟ್ಟಿರುವುದು

ಸಿಬ್ಬಂದಿ ಜತೆ ಸರಸ: ಪಂಚಾಯ್ತಿ ಬಿಲ್ ಕಲೆಕ್ಟರ್ ಸೆರೆ

ಪ್ರಜಾವಾಣಿ ವಾರ್ತೆ

ಕೆಜಿಎಫ್: ರಾಮಸಾಗರ ಗ್ರಾ. ಪಂ. ಕಚೇರಿಯಲ್ಲಿ ಮಹಿಳಾ ಸಿಬ್ಬಂದಿ ಜತೆ ಖಾಸಗಿ ಕ್ಷಣಗಳನ್ನು ಚಿತ್ರೀಕರಿಸಿ ಹಂಚಿದ ಆರೋಪ ಎದುರಿಸುತ್ತಿರುವ ಬಿಲ್ ಕಲೆಕ್ಟರ್ ಅರ್ಜುನ್ ಹರಿಕೃಷ್ಣ ಅವರನ್ನು ಬೇತಮಂಗಲ ಪೊಲೀಸರು ಸೋಮವಾರ ರಾತ್ರಿ ಬಂಧಿಸಿದ್ದಾರೆ.

ಅರ್ಜುನ್ ಹರಿಕೃಷ್ಣ

ಪೊಲೀಸರು ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು, ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಗ್ರಾಮ ಪಂಚಾಯಿತಿಯ ಕಚೇರಿಯ ಮೊದಲ ಮಹಡಿಯ ಕೊಠಡಿಯಲ್ಲಿ ಸಿಸಿಟಿವಿ ಸಂಪರ್ಕ ಕಡಿತಗೊಳಿಸಿದ ಆರೋಪಿಯು ಖಾಸಗಿ ಕ್ಷಣಗಳನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದ.

ಸಂತ್ರಸ್ತೆ ನೀಡಿದ ದೂರಿನ ಮೇಲೆ ಅರ್ಜುನ್ ವಿಚಾರಣೆ ನಡೆಸಿದ ಬೇತಮಂಗಲ ಪೊಲೀಸರು ನಂತರ ಆತನನ್ನು ಬಂಧಿಸಿ, ನ್ಯಾಯಾಲಯದ ಮುಂದೆ ಹಾಜರುಪಡಿಸಿದರು.

ಆರೋಪಿಯನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಲು ಹೋದಾಗ ಬೇತಮಂಗಲ ಪೊಲೀಸ್ ಠಾಣೆಯಲ್ಲಿ ಹೈಡ್ರಾಮಾ ನಡೆಯಿತು.

ತನ್ನ ಮಗನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಹೋಗದಂತೆ ಆರೋಪಿಯ ತಾಯಿ ಪೊಲೀಸರ ಜೀಪ್ ಮುಂದೆ ಅಡ್ಡಲಾಗಿ ಮಲಗಿ ತಡೆ ಒಡ್ಡಿದರು.

ಕೊನೆಗೆ ಪೊಲೀಸರು ಅವರನ್ನು ಪಕ್ಕಕ್ಕೆ ಸರಿಸಿ ಆರೋಪಿಯನ್ನು ಕರೆದೊಯ್ದರು.

ಈ ಪ್ರಕರಣದ ತನಿಖೆಯನ್ನು ಸೈಬರ್ ಇನ್‌ಸ್ಪೆಕ್ಟರ್ ಲಕ್ಷ್ಮಿನಾರಾಯಣ ನಡೆಸುತ್ತಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಂ.ಶಾಂತರಾಜು ತಿಳಿಸಿದ್ದಾರೆ.

ಆರೋಪಿಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ರಾಮಸಾಗರ ಗ್ರಾಮ ಪಂಚಾಯಿತಿಯ 14 ಸದಸ್ಯರು ಮಂಗಳವಾರ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಮಂಜುನಾಥ ಹರ್ತಿ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಆರೋಪಿ ಮತ್ತು ಸಂತ್ರಸ್ತೆಯನ್ನು ಸೇವೆಯಿಂದ ಅಮಾನತು ಮಾಡಲು ಗ್ರಾ. ಪಂ. ಅಧ್ಯಕ್ಷ ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಸೂಚನೆ ನೀಡಿರುವುದಾಗಿ ಹರ್ತಿ ತಿಳಿಸಿದ್ದಾರೆ.

ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸುವಂತೆ ಆರೋಗ್ಯ ಇಲಾಖೆ ಮನವಿ

ಡೆಂಗಿ ನಿಯಂತ್ರಣಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಮುಂಗಾರು ಪೂರ್ವ ಮಳೆ ಆಗುತ್ತಿರುವುದರಿಂದ ಡೆಂಗಿ ಜ್ವರ ನಿಯಂತ್ರಣಕ್ಕೆ ಮುನ್ನೆಚ್ಚರಿಕೆ ಕ್ರಮಗಳನ್ನು ತೀವ್ರಗೊಳಿಸಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ರಾಜ್ಯದಲ್ಲಿ ಡೆಂಗಿ ಪ್ರಕರಣಗಳ ಪತ್ತೆಗೆ ಸಂಬಂಧಿಸಿದಂತೆ ಈ ವರ್ಷ 26,476 ರಕ್ತದ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದ್ದು, ಒಟ್ಟು 2,877 ಡೆಂಗಿ ಪ್ರಕರಣಗಳು ವರದಿಯಾಗಿವೆ. ಕಳೆದ ವರ್ಷ ಈ ವೇಳೆ 18,597 ಮಾದರಿಗಳ ಪರೀಕ್ಷೆಯಲ್ಲಿ 1,725 ಡೆಂಗಿ ಪ್ರಕರಣಗಳು ದೃಢಪಟ್ಟಿದ್ದವು. ಶಂಕಿತ ಪ್ರಕರಣಗಳ ತಪಾಸಣೆ ಹಾಗೂ ಪರೀಕ್ಷೆ ಹೆಚ್ಚಳದಿಂದ ದೃಢ ಪ್ರಕರಣಗಳಲ್ಲಿಯೂ ಏರಿಕೆಯಾಗಿದೆ ಎಂದು ಇಲಾಖೆ ತಿಳಿಸಿದೆ.

ನಿಯಂತ್ರಣಕ್ಕೆ ಮುಂಜಾಗ್ರತಾ ಕ್ರಮಗಳು

- ಈಡಿಸ್ ಸೊಳ್ಳೆಗಳ ಉತ್ಪತ್ತಿ ತಡೆಗೆ ಮನೆಯಲ್ಲಿನ ನೀರಿನ ತೊಟ್ಟಿ, ಬ್ಯಾರಲ್, ಡ್ರಮ್‌ಗಳಲ್ಲಿನ ನೀರನ್ನು ವಾರಕ್ಕೊಮ್ಮೆ ಖಾಲಿ ಮಾಡಿ, ಸ್ವಚ್ಛಗೊಳಿಸಬೇಕು
- ಫ್ರಿಡ್ಜ್ ಹಿಂಭಾಗ, ಹೂ ಕುಂಡ ಮತ್ತು ಹೂ ಕುಂಡದ ಕೆಳಗಿನ ತಟ್ಟೆಗಳಲ್ಲಿ ಶೇಖರಣೆಯಾಗುವ ನೀರನ್ನು ನಿಯಮಿತವಾಗಿ ಖಾಲಿ ಮಾಡಬೇಕು
- ಮನೆಯ ಸುತ್ತ-ಮುತ್ತ ನೀರು ನಿಲ್ಲದಂತೆ ಎಚ್ಚರವಹಿಸಿ, ಘನ ತ್ಯಾಜ್ಯ ವಸ್ತುಗಳನ್ನು ವಿಲೇವಾರಿ ಮಾಡಬೇಕು. ಪರಿಸರವನ್ನು ಸ್ವಚ್ಛವಾಗಿಡಬೇಕು
- ಹಗಲು ಹೊತ್ತಿನಲ್ಲಿ ವಿಶ್ರಾಂತಿ ಪಡೆಯುವವರು, ವಿಶೇಷವಾಗಿ ವೃದ್ಧರು, ಗರ್ಭಿಣಿಯರು ಹಾಗೂ ಮಕ್ಕಳು ಸೊಳ್ಳೆ ಪರದೆಯನ್ನು ಬಳಸಬೇಕು
- ಡೆಂಗಿ ಮತ್ತು ಚಿಕೂನ್‌ಗುನ್ಯ ರೋಗಿಗಳೂ ತಪ್ಪದೆ ಸೊಳ್ಳೆಯ ಪರದೆಯನ್ನು ಉಪಯೋಗಿಸಬೇಕು
- ಸೊಳ್ಳೆಗಳು ಕಚ್ಚದಂತೆ ಮೈ ತುಂಬಾ ಬಟ್ಟೆ ಧರಿಸಿ, ಸೊಳ್ಳೆ ಪರದೆ, ಸೊಳ್ಳೆ ಬತ್ತಿ, ಮುಲಾಮು, ದ್ರಾವಣವನ್ನು ಉಪಯೋಗಿಸಬೇಕು
- ಎಲ್ಲ ಸರ್ಕಾರಿ ಹಾಗೂ ಖಾಸಗಿ ಕಚೇರಿಯ ಒಳಾಂಗಣ ಮತ್ತು ಹೊರಾಂಗಣಗಳಲ್ಲಿ ಈಡಿಸ್ ಸೊಳ್ಳೆಯ ಉತ್ಪತ್ತಿ ನಿಯಂತ್ರಣಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು

ರಾಜ್ಯದಲ್ಲಿ ಡೆಂಗಿ ಪ್ರಕರಣಗಳು ಸದ್ಯ ನಿಯಂತ್ರಣದಲ್ಲಿದ್ದು, ಯಾವುದೇ ಸಾಂಕ್ರಾಮಿಕ ಸ್ಫೋಟ ವರದಿಯಾಗಿಲ್ಲ. ಈ ಜ್ವರದ ನಿಯಂತ್ರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕರು ಜಿಲ್ಲಾ ಆರೋಗ್ಯಾಧಿಕಾರಿಗಳ ಜತೆಗೆ ಈಗಾಗಲೆ ಸಭೆ ನಡೆಸಿದ್ದಾರೆ. ಈಡಿಸ್ ಸೊಳ್ಳೆ ಉತ್ಪತ್ತಿ ತಾಣಗಳ ನಾಶಕ್ಕೂ ಕ್ರಮವಹಿಸಲಾಗಿದೆ. ಆರೋಗ್ಯ ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತೆಯರು ಮನೆಗಳಿಗೆ ಭೇಟಿ ನೀಡಿ, ಆರೋಗ್ಯ ಶಿಕ್ಷಣ ನೀಡುತ್ತಿದ್ದಾರೆ ಎಂದು ಹೇಳಿದೆ.

ಡೆಂಗಿ ಸೊಳ್ಳೆಯಿಂದ ಹರಡುವ ಕಾಯಿಲೆಯಾಗಿದ್ದು, ಹಗಲು ಹೊತ್ತಿನಲ್ಲಿ ಕಚ್ಚುವ ಈಡಿಸ್ ಜಾತಿಯ ಸೊಳ್ಳೆಗಳಿಂದ ಈ ಜ್ವರವು ಹರಡುತ್ತದೆ. ಸೊಳ್ಳೆ ಕಚ್ಚಿದ ನಾಲ್ಕರಿಂದ ಹತ್ತು ದಿನಗಳ ಒಳಗೆ ರೋಗ ಲಕ್ಷಣಗಳು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಡೆಂಗಿ ಜ್ವರ ಇದ್ದರೆ ದೇಹದ ತಾಪಮಾನ ವಿಪರೀತವಾಗಿ ಹೆಚ್ಚಾಗುತ್ತದೆ. ರೋಗ ಲಕ್ಷಣಗಳಿಗೆ ಅನುಸಾರ ಚಿಕಿತ್ಸೆ ನೀಡಲಾಗುತ್ತದೆ ಎಂದು ತಿಳಿಸಿದೆ.

ಲಕ್ಷಣವಿದ್ದಲ್ಲಿ ಸಂಪರ್ಕಿಸಿ: ಇದ್ದಕ್ಕಿದ್ದಂತೆ ತೀವ್ರ ಜ್ವರ, ವಿಪರೀತ ತಲೆನೋವು, ಕಣ್ಣಿನ ಹಿಂಭಾಗದಲ್ಲಿ ನೋವು, ಮಾಂಸಖಂಡ ಮತ್ತು ಕೀಲುಗಳಲ್ಲಿ ವಿಪರೀತ ನೋವು, ವಾಕರಿಕೆ, ವಾಂತಿ ಈ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣವೇ ವೈದ್ಯರನ್ನು ಸಂಪರ್ಕಿಸಬೇಕು. ಶಂಕಿತ ಡೆಂಗಿ ಜ್ವರ ಪ್ರಕರಣಗಳ ಪರೀಕ್ಷೆ ಹಾಗೂ ಚಿಕಿತ್ಸೆಯು ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಲಭ್ಯವಿರುತ್ತದೆ ಎಂದು ಆರೋಗ್ಯ ಇಲಾಖೆ ಹೇಳಿದೆ. ಈಡಿಸ್ ಲಾರ್ವಾ ಸಮೀಕ್ಷೆಗಾಗಿ ಮನೆಗಳಿಗೆ ಭೇಟಿ ನೀಡುವ ಆರೋಗ್ಯ ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತೆಯರಿಗೆ ಅಗತ್ಯ ಸಹಕಾರವನ್ನು ನೀಡಿ, ಅವರು ನೀಡುವ ಸಲಹೆಗಳನ್ನು ಪಾಲಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಶಿವಮೊಗ್ಗ ಲೋಕಸಭಾ ಕ್ಷೇತ್ರ ಫಲಿತಾಂಶ ತಡೆ ಹಿಡಿಯಲು ಈಶ್ವರಪ್ಪ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಬಿಜೆಪಿ ಅಭ್ಯರ್ಥಿ ಬಿ.ವೈ.ರಾಘವೇಂದ್ರ ತಮ್ಮ ವಿರುದ್ಧ ಅಪ ಪ್ರಚಾರ ನಡೆಸಿರುವ ಹಿನ್ನೆಲೆಯಲ್ಲಿ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಮತ್ತು ಫಲಿತಾಂಶ ತಡೆ ಹಿಡಿಯಬೇಕು ಎಂದು ಶಿವಮೊಗ್ಗ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಕೆ.ಎಸ್.ಈಶ್ವರಪ್ಪ ಅವರು ಚುನಾವಣಾ ಆಯೋಗವನ್ನು ಒತ್ತಾಯಿಸಿದ್ದಾರೆ.

ಕೆ.ಎಸ್.ಈಶ್ವರಪ್ಪ

ಮಂಗಳವಾರ ಬೆಂಗಳೂರಿನಲ್ಲಿ ಈ ಸಂಬಂಧ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

'ಮತದಾನಕ್ಕೆ ಒಂದೆರಡು ದಿನ ಇರುವಾಗಲೇ ನಾನು ಕಣದಿಂದ ಹಿಂದಕ್ಕೆ ಸರಿದು, ರಾಘವೇಂದ್ರ ಅವರಿಗೆ ಮತ ಚಲಾಯಿಸಿ ಎಂದು ಮನವಿ ಮಾಡುವ ನಕಲಿ ವಿಡಿಯೊ ಹರಿ ಬಿಡಲಾಯಿತು. ಇದನ್ನು ಬಿಜೆಪಿ ಸಾಮಾಜಿಕ ಜಾಲತಾಣ ವಿಭಾಗವೇ ಹರಿಬಿಟ್ಟಿದ್ದು, ಇದು ಮತದಾರರಲ್ಲಿ ಗೊಂದಲವನ್ನು ಸೃಷ್ಟಿ ಮಾಡಿತು. ಇದರ ಹಿಂದೆ ಬಿಜೆಪಿ ಅಭ್ಯರ್ಥಿ ರಾಘವೇಂದ್ರ ಅವರ ಕೈವಾಡವಿದೆ' ಎಂದು ಹೇಳಿದರು.

'2019ರ ಚುನಾವಣೆಯಲ್ಲಿ ಮಾಡಿದ್ದ ಪ್ರಚಾರ ಭಾಷಣವನ್ನು ಈಗ ಮಾಡಿರುವಂತೆ ತಿರುಚಿ ವಿಡಿಯೊ ಬಿಡುಗಡೆ ಮಾಡಿದರು. ಚುನಾವಣೆಯಲ್ಲಿ ಸೋಲುವ ಭಯದಿಂದ ಈ ಕೆಲಸ ಮಾಡಿದ್ದಾರೆ. ಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿಯ ಮಾದರಿಯ ತುಣುಕೊಂದನ್ನು ಅವರು ಹರಿಬಿಟ್ಟಿದ್ದರು. ಹಿಂದುತ್ವ ಪ್ರತಿಪಾದಿಸಿದ ಈಶ್ವರಪ್ಪ ತಮ್ಮನ್ನು ಬೆಂಬಲಿಸಿದ್ದಾರೆ ಎಂಬುದಾಗಿ ಸುಳ್ಳು ಮಾಹಿತಿ ಹಂಚಿಕೊಂಡಿದ್ದರು. ನಾನು ಕಣದಿಂದ ಸರಿದಿರುವುದಾಗಿ ಎಲ್ಲೂ ಹೇಳಿಲ್ಲ ಮತ್ತು ಮಾಧ್ಯಮಗಳಿಗೆ ಹೇಳಿಕೆಯನ್ನೂ ನೀಡಿರಲಿಲ್ಲ. ಇದು ಷಡ್ಯಂತ್ರ' ಎಂದು ಅವರು ತಿಳಿಸಿದರು.

'ಈ ಸಂಬಂಧ ಶಿವಮೊಗ್ಗದ ಜಯನಗರ ಪೊಲೀಸ್ ಠಾಣೆಯಲ್ಲೂ ದೂರು ದಾಖಲಿಸಿದ್ದೇನೆ. ಇದರ ತನಿಖೆ ಪೂರ್ಣಗೊಳ್ಳುವ ವರೆಗೆ ಫಲಿತಾಂಶವನ್ನು ತಡೆ ಹಿಡಿಯಬೇಕು' ಎಂದು ಈಶ್ವರಪ್ಪ ಮನವಿ ಮಾಡಿದರು.

'ರಾಜ್ಯ ಸರ್ಕಾರ ಬಂಡೆಯಂತೆ ಗಟ್ಟಿಯಾಗಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರ ಬಂಡೆಯಂತೆ ಗಟ್ಟಿಯಾಗಿದೆ. ನಮ್ಮ ಸರ್ಕಾರವನ್ನು ಪತನಗೊಳಿಸಲು ಯಾರಿಗೂ ಸಾಧ್ಯವಿಲ್ಲ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಲೋಕಸಭಾ ಚುನಾವಣೆ ಬಳಿಕ ರಾಜ್ಯದ ಕಾಂಗ್ರೆಸ್ ಸರ್ಕಾರ ಪತನವಾಗಲಿದೆ ಎಂಬ ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಹೇಳಿಕೆ ಕುರಿತು ಸುದ್ದಿಗಾರರಿಗೆ ಮಂಗಳವಾರ ಪ್ರತಿಕ್ರಿಯಿಸಿದ ಅವರು, 'ವಿಧಾನಸಭೆಯಲ್ಲಿ ಸೋತು ಸುಣ್ಣವಾಗಿರುವ ಬಿಜೆಪಿ, ಲೋಕಸಭಾ ಚುನಾವಣೆಯಲ್ಲೂ ಹೀನಾಯವಾಗಿ ಸೋಲಲಿದೆ. ಇಲ್ಲಿ ಸರ್ಕಾರ ಪತನಗೊಳಿಸುವುದು ಬಿಜೆಪಿಯವರ ಹಗಲುಗನಸು' ಎಂದರು.

ಕೇಂದ್ರದಲ್ಲಿ ಅಧಿಕಾರಕ್ಕೆ ಬಾರದಿದ್ದರೆ ಮಹಾರಾಷ್ಟ್ರದಲ್ಲಿ ಶಿಂಧೆ ನೇತೃತ್ವದ ಸರ್ಕಾರವೂ ಉಳಿಯುವುದಿಲ್ಲ. ಕಿತ್ತಾಡಿಕೊಂಡು ಸರ್ಕಾರ ಉರುಳುತ್ತದೆ. ಸರಿಯಾಗಿ ಆಡಳಿತ ನಡೆಸಲು ಆಗದ ಶಿಂದೆ ಕರ್ನಾಟಕದ ಬಗ್ಗೆ ಮಾತನಾಡುತ್ತಿದ್ದಾರೆ ಎಂದು ಟೀಕಿಸಿದರು.

'ಉಪಮುಖ್ಯಮಂತ್ರಿ ಹುದ್ದೆ ಕುರಿತು ಈಗ ಚರ್ಚಿಸುವುದಿಲ್ಲ. ಉಪಮುಖ್ಯಮಂತ್ರಿ ಹುದ್ದೆ ಸೃಜಿಸುವುದು ಪಕ್ಷದ ಹೈಕಮಾಂಡ್‌ಗೆ ಬಿಟ್ಟ ವಿಚಾರ' ಎಂದರು.

ಸಂಕ್ಷಿಪ್ತ ಸುದ್ದಿ

ಶಾಲೆಗೆ ಬಾಂಬ್ ಬೆದರಿಕೆಯ ಇ–ಮೇಲ್

ಬೆಂಗಳೂರು: ಅಮೃತಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಕೆಂಪಾಪುರದ ಜೈನ್ ಹೆರಿಟೇಜ್ ಶಾಲೆಗೆ ಇ –ಮೇಲ್ ಮೂಲಕ ಬಾಂಬ್ ಬೆದರಿಕೆ ಸಂದೇಶ ಬಂದಿದ್ದು ಮಂಗಳವಾರ ಬೆಳಿಗ್ಗೆ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಸೋಮವಾರ ರಾತ್ರಿ ಇ–ಮೇಲ್‌ನಲ್ಲಿ ಕಿಡಿಗೇಡಿಗಳು ಬೆದರಿಕೆಯ ಸಂದೇಶ ಕಳುಹಿಸಿದ್ದರು. ಮಂಗಳವಾರ ಬೆಳಿಗ್ಗೆ 7.30 ಸುಮಾರಿಗೆ ಶಾಲಾ ಸಿಬ್ಬಂದಿ ಇ–ಮೇಲ್ ಪರಿಶೀಲಿಸಿದಾಗ ಬೆದರಿಕೆ ಸಂದೇಶ ಬಂದಿರುವುದು ತಿಳಿಯಿತು.

ಶಾಲಾ ಆವರಣದಲ್ಲಿ ಬಾಂಬ್ ಇಡಲಾಗಿದೆ. ಅದು ಸ್ಫೋಟಗೊಳ್ಳಲಿದೆ ಎಂದು ಇ–ಮೇಲ್‌ನಲ್ಲಿ ಬರೆಯಲಾಗಿತ್ತು. ಸಿಬ್ಬಂದಿ ತಕ್ಷಣವೇ ಠಾಣೆಗೆ ಮಾಹಿತಿ ನೀಡಿದರು. ಬಾಂಬ್ ಪತ್ತೆದಳ, ಬಾಂಬ್ ನಿಷ್ಕ್ರಿಯ ದಳ, ಶ್ವಾನದಳದೊಂದಿಗೆ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಲಾಯಿತು. ಸ್ಫೋಟದ ಯಾವುದೇ ವಸ್ತುಗಳು ಪತ್ತೆಯಾಗಿಲ್ಲ. ಇದೊಂದು ಹುಸಿ ಸಂದೇಶವೆಂದು ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

ಈ ಹಿಂದೆಯೂ ನಗರದ ಶಾಲೆಗಳಿಗೆ ಇದೇ ರೀತಿಯ ಇ–ಮೇಲ್ ಬಂದಿದ್ದವು.

ಕಲ್ಲು ಎತ್ತಿ ಹಾಕಿ ವ್ಯಕ್ತಿಯ ಕೊಲೆ

ಬೆಂಗಳೂರು: ಬನಶಂಕರಿ ಪೊಲೀಸ್ ಠಾಣಾ ವ್ಯಾಪ್ತಿಯ ಜಯನಗರದ 7ನೇ ಹಂತದಲ್ಲಿ ವ್ಯಕ್ತಿಯ ಮೇಲೆ ಕಲ್ಲು ಎತ್ತಿ ಹಾಕಿ ಕೊಲೆ ಮಾಡಲಾಗಿದೆ. ಆರೋಪಿಗಳು ಪರಾರಿಯಾಗಿದ್ದಾರೆ.

ಕೊಲೆಯಾದ ವ್ಯಕ್ತಿಯ ಗುರುತು ಪತ್ತೆಯಾಗಿಲ್ಲ.

‘ಜಯನಗರದ 7ನೇ ಹಂತದಲ್ಲಿ ಓಡಾಡಿಕೊಂಡಿದ್ದ ವ್ಯಕ್ತಿ, ಎಲ್ಲೆಂದರಲ್ಲಿ ಮಲಗುತ್ತಿದ್ದ. ಸೋಮವಾರ ರಾತ್ರಿ ವ್ಯಕ್ತಿಯೊಬ್ಬನ ಜತೆಗೆ ಗಲಾಟೆ ಮಾಡಿಕೊಂಡಿದ್ದ ಎಂಬುದು ಸ್ಥಳೀಯರಿಂದ ಗೊತ್ತಾಗಿದೆ. ಬಳಿಕ ರಸ್ತೆ ಬದಿ ಮಲಗಿದ್ದ. ತಡರಾತ್ರಿ ಭಾರಿ ಮಳೆ ಸುರಿಯುತ್ತಿದ್ದರಿಂದ ಅಂಗಡಿ ಮುಂಭಾಗ ಮಲಗಿದ್ದಾನೆ. ಈ ವೇಳೆ ಆತನ ಮೇಲೆ ಕಿಡಿಗೇಡಿಗಳು ಕಲ್ಲು ಎತ್ತಿಹಾಕಿ ಕೊಲೆ ಮಾಡಿ ಪರಾರಿ ಆಗಿದ್ದಾರೆ. ವಿಚಾರ ತಿಳಿದು ಘಟನಾ ಸ್ಥಳಕ್ಕೆ ಭೇಟಿ ಪರಿಶೀಲಿಸಲಾಯಿತು. ಮೃತದೇಹವನ್ನು ಶವಾಗಾರದಲ್ಲಿ ಇಡಲಾಗಿದೆ. ವ್ಯಕ್ತಿಯ ಕುಟುಂಬಸ್ಥರು ಪತ್ತೆಯಾದ ಮೇಲೆ ಮೃತದೇಹ ಹಸ್ತಾಂತರ ಮಾಡಲಾಗುವುದು’ ಎಂದು ಪೊಲೀಸರು ತಿಳಿಸಿದರು.

ಬನಶಂಕರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಚೇರಿಯಲ್ಲಿ ಹಣ ದೋಚಿದ್ದ ಆರೋಪಿ ಬಂಧನ

ಬೆಂಗಳೂರು: ಕೆಲಸ ಮಾಡುತ್ತಿದ್ದ ಕಚೇರಿಯಲ್ಲಿ ಹಣ ದೋಚಿ ಪರಾರಿಯಾಗಿದ್ದ ಆರೋಪಿಯನ್ನು ವಿಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ವಿಜಯನಗರ ನಿವಾಸಿ ಮಹೇಶ್ (34) ಬಂಧಿತ.

ಆರೋಪಿ ವಿಜಯನಗರದ ಸರ್ವೀಸ್ ರಸ್ತೆಯಲ್ಲಿರುವ ಕೆಎನ್‌ಎಸ್ ಕಚೇರಿಯಲ್ಲಿ ಕ್ಯಾಶ್ ಬಾಕ್ಸ್‌ನಲ್ಲಿದ್ದ ₹25 ಲಕ್ಷವನ್ನು ದೋಚಿ ಪರಾರಿಯಾಗಿದ್ದ. ಕಚೇರಿ ಸಿಬ್ಬಂದಿ ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಲಾಯಿತು.

ನಿವೃತ್ತ ಪಿಎಸ್‌ಐ ಪುತ್ರ ಮಹೇಶ್, ಕೆಎನ್‌ಎಸ್ ಕಚೇರಿಯಲ್ಲಿ ಎರಡು ವರ್ಷಗಳಿಂದ ಕೆಲಸ ಮಾಡಿಕೊಂಡಿದ್ದ. ಮಾರ್ಚ್ 20ರಂದು ಕಚೇರಿಯಲ್ಲಿದ್ದ ಹಣ ದೋಚಿ ಮೂಡಲಪಾಳ್ಯದ ತನ್ನ ಸ್ನೇಹಿತನ ಮನೆಯಲ್ಲಿ ಇಟ್ಟಿದ್ದ. ವೈಯಕ್ತಿಕ ಖರ್ಚಿಗಾಗಿ ₹50 ಸಾವಿರ ತೆಗೆದುಕೊಂಡು ಹೋಗಿದ್ದ. ಬಳಿಕ ತನಿಖೆ ಕೈಗೊಂಡು ಆರೋಪಿಯನ್ನು ಮಡಿಕೇರಿಯಲ್ಲಿ ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

‘ಸ್ನೇಹಿತನ ಮನೆಯಲ್ಲಿದ್ದ ₹24.50 ಲಕ್ಷ ವಶಕ್ಕೆ ಪಡೆಯಲಾಗಿದೆ’ ಎಂದು ಪೊಲೀಸರು ಮಾಹಿತಿ ನೀಡಿದರು.

ನಕಲಿ ಪ್ರಮಾಣ ಪತ್ರ ಪಡೆದ ಆರೋಪ • ಹೈಕೋರ್ಟ್ ಮೆಟ್ಟಿಲೇರಿದ್ದ ಪಳನಿ

‘ಪ್ರಕರಣ ದಾಖಲು: ಬೇಕು ಡಿಸಿವಿಸಿ ಶಿಫಾರಸು’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಆರೋಪಿಯ ವಿರುದ್ಧ ಕ್ರಮಕ್ಕೆ ಪೂರ್ವಾನುಮತಿ ಅಗತ್ಯ
- ಅಧಿಕಾರ ವ್ಯಾಪ್ತಿ ಮೀರಿ ಪ್ರಕರಣ ದಾಖಲು

ಬೆಂಗಳೂರು: ‘ಜಾತಿಯನ್ನು ಮರೆಮಾಚಿ ನಕಲಿ ಪ್ರಮಾಣ ಪತ್ರವನ್ನು ಪಡೆದ ಆರೋಪಿಗಳ ವಿರುದ್ಧ ಜಿಲ್ಲಾ ಜಾತಿ ಪರಿಶೀಲನಾ ಸಮಿತಿ (ಡಿಸಿವಿಸಿ) ಶಿಫಾರಸು ಮಾಡದ ಹೊರತು ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯ ಪ್ರಕರಣ ದಾಖಲಿಸಲು ಆಗದು’ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಈ ಸಂಬಂಧ ಎನ್‌ಜಿಇಎಫ್ ಲೇಔಟ್‌ನ ಸದಾನಂದ ನಗರ ನಿವಾಸಿ ಎ.ಎಸ್.ಪಳನಿ (51) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದ್ದು, ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯ ದಾಖಲಿಸಿದ್ದ ಪ್ರಕರಣ, ಮತ್ತು ಇದಕ್ಕೆ ಸಂಬಂಧಿಸಿದ ದೋಷಾರೋಪ ಪಟ್ಟಿಯನ್ನು ರದ್ದುಪಡಿಸಿದೆ.

‘ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ಮೀಸಲಾತಿ ಮತ್ತು ನೇಮಕಾತಿ ಇತರೆ) ಕಾಯ್ದೆ–1990ರ ಕಲಂ 5ಎ ಅನುಸಾರ ಕಲಂ 6ರಲ್ಲಿ ತಿಳಿಸಿರುವಂತೆ ಆರೋಪಿಯ ವಿರುದ್ಧ ಕಾನೂನು ಕ್ರಮಕ್ಕೆ ಮುಂದಾಗಬೇಕಾದರೆ ರಾಜ್ಯ ಸರ್ಕಾರದಿಂದ ಪೂರ್ವಾನುಮತಿ ಪಡೆಯಬೇಕು. ಆದರೆ, ಈ ಪ್ರಕರಣದಲ್ಲಿ ರಾಜ್ಯ ಸರ್ಕಾರ ಯಾವುದೇ ರೀತಿಯ ಪೂರ್ವಾನುಮತಿ ಪಡೆದಿಲ್ಲ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

‘ಜಾತಿ ಪ್ರಮಾಣ ಪತ್ರ ರದ್ದುಪಡಿಸಿರುವ ಕ್ರಮವನ್ನು ಪ್ರಶ್ನಿಸಿ ಅರ್ಜಿದಾರರು ಮೇಲ್ಮನವಿ ಪ್ರಾಧಿಕಾರದಲ್ಲಿ ಪ್ರಶ್ನಿಸಿದ್ದಾರೆ. ಈ ಅರ್ಜಿ ವಿಚಾರಣಾ ಹಂತದಲ್ಲಿರುವಾಗ ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯ ತನ್ನ ಅಧಿಕಾರ ಮೀರಿ ಎಫ್‌ಐಆರ್ ದಾಖಲಿಸಿದೆ. ಅಂತೆಯೇ, ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ಅರ್ಜಿದಾರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ಯಾವುದೇ ಶಿಫಾರಸು ಮಾಡಿಲ್ಲದಿರುವುದು ಗಮನಾರ್ಹ’ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಪ್ರಕರಣವೇನು?: ಅರ್ಜಿದಾರ ಪಳನಿ ಬಂದರು ಮತ್ತು ಹಡಗುಗಳು ಹಾಗೂ ಸಾರಿಗೆ ಸಚಿವಾಲಯದಲ್ಲಿ ಲೈಟ್ ಕೀಪರ್ ಆಗಿ ಸೇವೆಗೆ ಸೇರಿಕೊಂಡಿದ್ದರು. ‘ಇವರು ಮೊದಲಿಯಾರ್ ಸಮುದಾಯಕ್ಕೆ ಸೇರಿದ್ದು, ಸರ್ಕಾರದ ಪ್ರಾಧಿಕಾರಗಳಿಗೆ ತಪ್ಪು ಮಾಹಿತಿ ನೀಡಿ ಪರಿಶಿಷ್ಟ ಪಂಗಡಕ್ಕೆ ಸೇರಿದ ವಾಲ್ಮೀಕಿ ಸಮುದಾಯಕ್ಕೆ (ಎಸ್‌ಟಿ) ಸೇರಿದವರು ಎಂಬ ಜಾತಿ ಪ್ರಮಾಣ ಪತ್ರ ಪಡೆದು ಸರ್ಕಾರಿ ಕೆಲಸ ಗಿಟ್ಟಿಸಿಕೊಂಡಿದ್ದಾರೆ’ ಎಂಬ ಆಕ್ಷೇಪದ ಹಿನ್ನೆಲೆಯಲ್ಲಿ ಇವರ ಜಾತಿ ಪ್ರಮಾಣ ಪತ್ರವನ್ನು ತಹಶೀಲ್ದಾರ್ ರದ್ದುಪಡಿಸಿದ್ದರು.

ಇದನ್ನು ಪ್ರಶ್ನಿಸಿ ಪಳನಿ ಮೇಲ್ಮವಿ ಪ್ರಾಧಿಕಾರದ ಮುಂದೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿ ವಿಚಾರಣಾ ಹಂತದಲ್ಲಿ ಇರುವಾಗಲೇ ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯ ಇವರ ವಿರುದ್ಧ ಕೆ.ಆರ್. ಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿತ್ತು. ತನಿಖೆ ನಡೆಸಿದ್ದ ಪೊಲೀಸರು ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಸಲ್ಲಿಸಿದ್ದರು. ಇದನ್ನು ಪ್ರಶ್ನಿಸಿ ಪಳನಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿದಾರರ ಪರ ಹಿರಿಯ ವಕೀಲ ಸಿ.ವಿ.ನಾಗೇಶ್ ಮತ್ತು ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ ಪರ ವಕೀಲ ಸಿ.ಜಗದೀಶ್ ವಾದ ಮಂಡಿಸಿದ್ದರು.

ಮುಂಬೈಗೆ ಪರಾರಿಯಾಗಲು ಯತ್ನಿಸಿದ ಇಬ್ಬರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯ ಹಿಂಬದಿಯ ಬಾಗಿಲು ಮುರಿದು ಒಳಪ್ರವೇಶಿಸಿ ಲಕ್ಷಾಂತರ ರೂಪಾಯಿ ನಗದು ಮತ್ತು ಚಿನ್ನಾಭರಣ ದೋಚಿದ್ದ ಇಬ್ಬರು ಆರೋಪಿಗಳನ್ನು ಅಶೋಕನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆನೇಪಾಳ್ಯ ನಿವಾಸಿ ಅಸ್ಕರ್ ಮೆಹದಿ (30), ನೀಲಸಂದ್ರ ನಿವಾಸಿ ಸಲ್ಮಾನ್ ಖಾನ್ (30) ಬಂಧಿತ ಆರೋಪಿಗಳು. ‘ಬಂಧಿತರಿಂದ ₹24.43 ಲಕ್ಷ ನಗದು ಮತ್ತು 150 ಗ್ರಾಂ ಚಿನ್ನಾಭರಣ ಜಪ್ತಿ ಮಾಡಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

‘ನೀಲಸಂದ್ರ ನಿವಾಸಿಯೊಬ್ಬರ ಮನೆಯಲ್ಲಿ ಮೇ 7ರಂದು ಕಳವು ನಡೆದಿತ್ತು. ಆರೋಪಿಗಳು ಮನೆಯ ಹಿಂಬಾಗಿಲು ಮುರಿದು, ಒಳಕ್ಕೆ ನುಗ್ಗಿ, ಬೀರುವಿನಲ್ಲಿದ್ದ ನಗದು ಹಾಗೂ ಚಿನ್ನಾಭರಣ ಕಳವು ಮಾಡಿದ್ದರು. ಆರೋಪಿಗಳು ಖಾಸಗಿ ಬಸ್ ಮೂಲಕ ಮುಂಬೈಗೆ ಪರಾರಿಯಾಗಲು ಮುಂದಾಗಿದ್ದರು. ಈ ಖಚಿತ ಮಾಹಿತಿ ಮೇರೆಗೆ ಕ್ಷಿಪ್ರ ಕಾರ್ಯಾಚರಣೆ ನಡೆಸಿ, ಘಟನೆ ನಡೆದ 24 ಗಂಟೆಯಲ್ಲೇ ಇಬ್ಬರನ್ನು ಚಿತ್ರದುರ್ಗದಲ್ಲಿ ಬಂಧಿಸಿ, ನಗರಕ್ಕೆ ಕರೆತರಲಾಗಿತ್ತು. ಬಳಿಕ 10 ದಿನ ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಿದಾಗ ಮನೆ ಕಳವು ಕೃತ್ಯದ ಬಗ್ಗೆ ಬಾಯ್ಬಿಟ್ಟಿದ್ದಾರೆ. ಆರೋಪಿಗಳು ಬೇರೆ ಕಡೆ ಅಡಮಾನ ಇಟ್ಟಿದ್ದ ಚಿನ್ನಾಭರಣ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಆರೋಪಿಗಳು ಕಳ್ಳತವನ್ನೇ ವೃತ್ತಿ. ಕದ್ದು ಪಡೆದ ಹಣದಿಂದ ಮೋಜಿನ ಜೀವನ ನಡೆಸುತ್ತಿದ್ದರು’ ಎಂದು ಪೊಲೀಸರು ಹೇಳಿದರು.

ಕಲಾ ಪ್ರದರ್ಶನ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಸಂಸ್ಥಾಪಕ ಶ್ರೀ ಶ್ರೀ ರವಿಶಂಕರ ಗುರೂಜಿ ಅವರ 68ನೇ ಜನ್ಮದಿನದ ಪ್ರಯುಕ್ತ ಸಂಸ್ಥೆಯು ಹಮ್ಮಿಕೊಂಡಿದ್ದ ‘ಗ್ಲೋಬಲ್ ಹ್ಯಾಪಿನೆಸ್’ ಕಾರ್ಯಕ್ರಮದಲ್ಲಿ ಕಲಾವಿದರು ನೃತ್ಯ ಪ್ರದರ್ಶಿಸಿದರು.

ಚುನಾವಣೆ ದಿನಗಳನ್ನು ‘ಬಳಕೆ’ ಮಾಡಿಕೊಂಡ ಪೋಷಕರು

ಒಂದೂವರೆ ತಿಂಗಳಲ್ಲೇ 10 ಬಾಲ್ಯವಿವಾಹ!

ಇಮಾಮಹುಸೇನ ಗೂಡುನವರ

ಬೆಳಗಾವಿ: ಸರ್ಕಾರದ ಕಠಿಣ ಕ್ರಮದ ಎಚ್ಚರಿಕೆ ಮತ್ತು ಜಾಗೃತಿ ಮಧ್ಯೆಯೂ ಜಿಲ್ಲೆಯಲ್ಲಿ ಒಂದೂವರೆ ತಿಂಗಳಲ್ಲೇ 10 ಬಾಲ್ಯವಿವಾಹ ನಡೆದಿವೆ. ಜಾತ್ರೆ, ಉತ್ಸವಗಳ ಸಂದರ್ಭದಲ್ಲಿ ಗ್ರಾಮಗಳಲ್ಲಿ ಸಾಮೂಹಿಕ ವಿವಾಹ ಸಮಾರಂಭಗಳು ನಡೆಯುತ್ತಿದ್ದು, ಅಲ್ಲಿ ಬಾಲ್ಯ ವಿವಾಹಗಳು ನಡೆಯುವ ಸಾಧ್ಯತೆ ಹೆಚ್ಚಿವೆ ಎಂದು ಅಧಿಕಾರಿಗಳು ಕಣ್ಣಿಟ್ಟಿದ್ದಾರೆ.

2022–23ನೇ ಸಾಲಿನಲ್ಲಿ 16 ಮತ್ತು 2023–24ರಲ್ಲಿ 23 ಬಾಲ್ಯವಿವಾಹ ನೆರವೇರಿದ್ದವು. ಆದರೆ, ಈ ಸಲ ಒಂದೂವರೆ ತಿಂಗಳಲ್ಲೇ (2024ರ ಏಪ್ರಿಲ್ 1ರಿಂದ ಮೇ 13ರವರೆಗೆ) 10 ಬಾಲ್ಯವಿವಾಹ ನಡೆದಿವೆ.

‘ಏಪ್ರಿಲ್‌ನಲ್ಲಿ ಇಡೀ ಜಿಲ್ಲೆಯಲ್ಲಿ ಲೋಕಸಭೆ ಚುನಾವಣೆ ಕಾವು ಏರಿತ್ತು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸೇರಿ ವಿವಿಧ ಇಲಾಖೆಗಳ ಅಧಿಕಾರಿಗಳು ಚುನಾವಣೆ ಕರ್ತವ್ಯದಲ್ಲಿ ನಿರತರಾಗಿದ್ದರು. ಈ ಅವಕಾಶ ಬಳಸಿಕೊಂಡ ಕೆಲವರು ಬಾಲ್ಯವಿವಾಹ ಮಾಡಿಸಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

> ಬಾಲ್ಯವಿವಾಹದ ಬಗ್ಗೆ ಜನರಿಗೆ ಭಯವಿಲ್ಲ. ತಪ್ಪೆಸಗಿದವರಿಗೆ ಕಠಿಣ ಶಿಕ್ಷೆ ಆಗುತ್ತಿಲ್ಲ. ಕಠಿಣ ಶಿಕ್ಷೆಯೊಂದೇ ಬಾಲ್ಯವಿವಾಹ ತಡೆಗೆ ಮುಖ್ಯ ಅಸ್ತ್ರ
>
> **ವೈಜಯಂತಿ ಪಾಟೀಲ,** ಕಾರ್ಯದರ್ಶಿ, ಮಹಿಳಾ ಕಲ್ಯಾಣ ಸಂಸ್ಥೆ, ಬೆಳಗಾವಿ

> ಜಿಲ್ಲೆಯಲ್ಲಿ ಬಾಲ್ಯವಿವಾಹ ತಡೆಗೆ ಕಾರ್ಯಾಚರಣೆ ಚುರುಕಾಗಿದೆ. ಇದರಿಂದ ಹೆಚ್ಚಿನ ಪ್ರಕರಣ ಬೆಳಕಿಗೆ ಬರುತ್ತಿವೆ. ಜಾಗೃತಿ ಮೂಡಿಸಲು ಆದ್ಯತೆ ನೀಡಿದ್ದೇವೆ.
>
> **ಮಹಾಂತೇಶ ಭಜಂತ್ರಿ,** ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಬೆಳಗಾವಿ

2023–24ರಲ್ಲಿ ಮಕ್ಕಳ ಸಹಾಯವಾಣಿ ಸಂಖ್ಯೆ 1098ಕ್ಕೆ 133 ಕರೆ ಬಂದಿದ್ದವು. ಈ ಪೈಕಿ 110 ಬಾಲ್ಯವಿವಾಹ ತಡೆಯಲಾಗಿತ್ತು. 2024ರ ಏಪ್ರಿಲ್ 1ರಿಂದ ಮೇ 13ರ ಅವಧಿಯಲ್ಲಿ 25 ಬಾಲ್ಯವಿವಾಹಕ್ಕೆ ಕಡಿವಾಣ ಹಾಕಲಾಗಿದೆ.

ಗುರಿ ಮುಟ್ಟಲು ಮದುವೆ: ‘21 ವರ್ಷ ವಯಸ್ಸಿನ ವರ ಮತ್ತು 18 ವರ್ಷ ಪೂರ್ಣಗೊಂಡ ವಧುವಿನ ಜನ್ಮದಾಖಲೆ ಪರಿಶೀಲಿಸಿಯೇ ಮದುವೆ ಮಾಡಿಸುವಂತೆ ಸಾಮೂಹಿಕ ವಿವಾಹ ಸಮಾರಂಭದ ಆಯೋಜಕರಿಗೂ ಸೂಚಿಸಿದ್ದೇವೆ. ಆದರೆ, ಕೆಲ ಆಯೋಜಕರು ಈ ವರ್ಷ ಇಂತಿಷ್ಟು ಮದುವೆ ಮಾಡಿಸುವ ಗುರಿ ಹೊಂದಿರುತ್ತಾರೆ. ಅಷ್ಟೊಂದು ಜೋಡಿ ಸಿಗದಾದಾಗ ಗುರಿ ಮುಟ್ಟಲು ಬಾಲ್ಯವಿವಾಹಕ್ಕೆ ಮುಂದಾಗುತ್ತಾರೆ’ ಎಂದು ಮಕ್ಕಳ ರಕ್ಷಣಾಧಿಕಾರಿ ಜೆ.ಟಿ.ಲೋಕೇಶ ತಿಳಿಸಿದರು.

‘ಬಾಲ್ಯವಿವಾಹ ತಡೆಗೆ ಜಾಗೃತಿ ಹೆಚ್ಚಿದ್ದರಿಂದ ಈಗ ಕೆಲವರು ಗೋಧೂಳಿ ಮದುವೆ (ಮಧ್ಯರಾತ್ರಿ ನಡೆಯುವ ಮದುವೆ), ಯಾದಿ ಮೇ ಶಾದಿ ಮಾಡುತ್ತಿದ್ದಾರೆ. ಮನೆ ಪೂಜೆ ಹೆಸರಲ್ಲೇ ಅಪ್ರಾಪ್ತರ ಮದುವೆ ಮಾಡಿಸುತ್ತಾರೆ. ಇದರಿಂದ ಕಾರ್ಯಾಚರಣೆಗೆ ಕಷ್ಟವಾಗುತ್ತಿದೆ. ಆದರೂ, ಪ್ರಯತ್ನ ಮುಂದುವರಿಸಿದ್ದೇವೆ’ ಎಂದರು.

‘ಬಾಲ್ಯವಿವಾಹ ಆಗಲಿರುವ ಕೆಲ ಬಾಲಕಿಯರು ಅಥವಾ ಆಕೆಯ ಸ್ನೇಹಿತೆಯರು ಮಕ್ಕಳ ಸಹಾಯವಾಣಿ ಸಂಖ್ಯೆ 1098ಕ್ಕೆ ಕರೆ ಮಾಡಿ ಮಾಹಿತಿ ನೀಡುತ್ತಾರೆ. ನಾವು ತಕ್ಷಣವೇ ಬಾಲಕಿ ಮನೆಗೆ ತೆರಳಿ ರಕ್ಷಿಸಿ, ಇಲಾಖೆ ಹಾಸ್ಟೆಲ್‌ಗಳಲ್ಲಿ ಆಶ್ರಯ ಕಲ್ಪಿಸುತ್ತೇವೆ. ಪಾಲಕರು ನಿಶ್ಚಯಿಸಿದ ಮದುವೆ ದಿನಾಂಕ ಮುಗಿದ ಬಳಿಕ ಬಾಲಕಿಯನ್ನು ಮನೆಗೆ ಕಳುಹಿಸುತ್ತೇವೆ. ಒಂದು ವೇಳೆ ನಿರಾಕರಿಸಿದರೆ, 18 ವರ್ಷ ತುಂಬುವವರೆಗೆ ಹಾಸ್ಟೆಲ್‌ನಲ್ಲೇ ಇರಿಸುತ್ತೇವೆ. ನಿಯಮ ಮೀರಿ ಬಾಲ್ಯವಿವಾಹ ಮಾಡಿದರೆ, ವರ–ವಧುವಿನ ಪಾಲಕರ ವಿರುದ್ಧ ದೂರು ದಾಖಲಿಸುತ್ತೇವೆ’ ಎಂದು ಹೇಳಿದರು.

ವಿಮಾನ ನಿಲ್ದಾಣ ರಸ್ತೆ: ವಾಹನಗಳ ವೇಗಕ್ಕೆ ಕಡಿವಾಣ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ವಿಮಾನ ನಿಲ್ದಾಣ ರಸ್ತೆಯಲ್ಲಿ ವೇಗಮಿತಿ ಪಾಲನೆಗೆ ಪೊಲೀಸರ ಆದ್ಯತೆ
- ಮಿತಿ ಮೀರಿದ ವೇಗ ಪತ್ತೆಗೆ ಸ್ವಯಂಚಾಲಿತ ಕ್ಯಾಮೆರಾ ನೆರವು ಪಡೆದ ಪೊಲೀಸರು

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ ವಾಹನಗಳು ಅತಿವೇಗವಾಗಿ ಚಲಿಸುತ್ತಿದ್ದು ಈ ಮಾರ್ಗದಲ್ಲಿ ವರ್ಷದಿಂದ ವರ್ಷಕ್ಕೆ ಅಪಘಾತಗಳ ಸಂಖ್ಯೆ ಹೆಚ್ಚುತ್ತಿವೆ. ಅಪಘಾತ ಪ್ರಕರಣಗಳನ್ನು ಕಡಿಮೆ ಮಾಡಲು ನಗರ ಸಂಚಾರ ಪೊಲೀಸರು ಕ್ರಮ ಕೈಗೊಂಡಿದ್ದಾರೆ.

ಈ ರಸ್ತೆಯಲ್ಲಿ ಪ್ರತಿ ಗಂಟೆಗೆ 80 ಕಿ.ಮೀಗಿಂತ ಹೆಚ್ಚಿನ ವೇಗದಲ್ಲಿ ಚಲಿಸುವ ವಾಹನಗಳ ವಿರುದ್ಧ ಅತಿವೇಗದ ಚಾಲನೆ ಪ್ರಕರಣಗಳನ್ನು ದಾಖಲಿಸಿಕೊಂಡು ದಂಡ ವಿಧಿಸಲಾಗುವುದು ಎಂದು ಸಂಚಾರ ಪೊಲೀಸರು ಎಚ್ಚರಿಸಿದ್ದಾರೆ.

‘ರಸ್ತೆ ಸುರಕ್ಷತೆ ಹೆಚ್ಚಿಸುವ ನಿಟ್ಟಿನಲ್ಲಿ ವಿಮಾನ ನಿಲ್ದಾಣ ರಸ್ತೆಯಲ್ಲಿ ಅತಿವೇಗದ ಚಾಲನೆಯನ್ನು ಪತ್ತೆ ಹಚ್ಚುವ ಕ್ಯಾಮೆರಾ ಅಳವಡಿಸಲಾಗಿದೆ. ಕ್ಯಾಮೆರಾಗಳು ಸ್ವಯಂ ಚಾಲಿತವಾಗಿ ಅತಿವೇಗದ ವಾಹನಗಳನ್ನು ಕಂಡುಹಿಡಿಯುವ ಸಾಮರ್ಥ್ಯ ಹೊಂದಿವೆ’ ಎಂದು ಪೊಲೀಸರು ಹೇಳಿದರು.

‘ವಿಮಾನ ನಿಲ್ದಾಣ ರಸ್ತೆಯಲ್ಲಿ ಈ ವರ್ಷದ ಜನವರಿ 1ರಿಂದ ಏಪ್ರಿಲ್ 30ರವರೆಗೆ 322 ಅಪಘಾತಗಳು ಸಂಭವಿಸಿವೆ. ಇದರಲ್ಲಿ 30 ಮಂದಿ ಮೃತಪಟ್ಟಿದ್ದಾರೆ. 11 ಮಂದಿ ಗಾಯಗೊಂಡಿದ್ದಾರೆ’ ಎಂದು ಪೊಲೀಸರು ಹೇಳಿದರು.

ವಾಹನ ಸಂಚಾರ ನಿರ್ಬಂಧ: ಕಾಮಗಾರಿ ಹಿನ್ನೆಲೆಯಲ್ಲಿ ಹೆಬ್ಬಾಳ ಮೇಲ್ಸೇತುವೆಯ ಕೆಆರ್ ಪುರ ಅಪ್ ರ‍್ಯಾಂಪ್ ಅನ್ನು ಮುಚ್ಚಲಾಗಿದ್ದು, ಮಂಗಳವಾರದಿಂದ ನಾಗವಾರ ಕಡೆಯಿಂದ ಹೆಬ್ಬಾಳ ಮೇಲ್ಸೇತುವೆ ಕಡೆಗೆ ಬರುವ ಎಲ್ಲ ಮಾದರಿ ವಾಹನಗಳ ಸಂಚಾರವನ್ನು ಮೇಲ್ಸೇತುವೆಯಲ್ಲಿ ನಿರ್ಬಂಧಿಸಲಾಗಿದೆ.

ಏಪ್ರಿಲ್ 17ರಿಂದ ಕೆ.ಆರ್.ಪುರ ಲೂಪ್ ಸೇರುವ ಟ್ರ್ಯಾಕ್‌ನಲ್ಲಿ ದ್ವಿಚಕ್ರ ವಾಹನಗಳನ್ನು ಹೊರತು ಪಡಿಸಿ ಎಲ್ಲ ಮಾದರಿ ವಾಹನ ಸಂಚಾರವನ್ನು ಈ ಹಿಂದೆ ನಿರ್ಬಂಧಿಸಲಾಗಿತ್ತು.

ಪರ್ಯಾಯ ಮಾರ್ಗ: ನಾಗವಾರ (ಹೊರವರ್ತುಲ ರಸ್ತೆ) ಕಡೆಯಿಂದ ನಗರದ ಒಳಗೆ ಮೇಖ್ರಿ ವೃತ್ತದ ಮೂಲಕ ಸಂಚರಿಸುವ ವಾಹನಗಳು ಹೆಬ್ಬಾಳ ವೃತ್ತದಲ್ಲಿ ಮೇಲ್ಸೇತುವೆ ಕೆಳಗಿನ ರಸ್ತೆಯಿಂದ ಬಲಕ್ಕೆ ತಿರುವು ಪಡೆದು ಕೊಡಿಗೆಹಳ್ಳಿ ಜಂಕ್ಷನ್ ಬಳಿ ಯೂಟರ್ನ್ ಪಡೆದು, ಸರ್ವಿಸ್ ರಸ್ತೆಯಿಂದ ಹೆಬ್ಬಾಳ ಮೇಲ್ಸೇತುವೆ ರ‍್ಯಾಂಪ್ ಮೂಲಕ ನಗರದ ಕಡೆಗೆ ಚಲಿಸಬಹುದು.

ಕೆ.ಆರ್.ಪುರ ನಾಗವಾರದ ಕಡೆಯಿಂದ ನಗರದ ಕಡೆಗೆ ಬರುವ ವಾಹನಗಳು ಐಟಿಸಿ ಮುಕುಂದ ಥಿಯೇಟರ್ ರಸ್ತೆ, ಲಿಂಗರಾಜಪುರ ಮೇಲ್ಸೇತುವೆ ಮಾರ್ಗ, ನಾಗವಾರ, ಟ್ಯಾನರಿ ರಸ್ತೆ ಮಾರ್ಗವಾಗಿ ನಗರ ಪ್ರವೇಶಿಸಬಹುದಾಗಿದೆ.

ಹೆಗಡೆನಗರ– ಥಣಿಸಂದ್ರ ಕಡೆಯಿಂದ ಬರುವ ವಾಹನಗಳು ಜಿಕೆವಿಕೆ ಜಕ್ಕೂರು ರಸ್ತೆಯ ಮೂಲಕ ನಗರ ಪ್ರವೇಶಿಸಬಹುದು.

ಕೆ.ಆರ್.ಪುರ ಕಡೆಯಿಂದ ಹೆಬ್ಬಾಳ ಮಾರ್ಗವಾಗಿ ಯಶವಂತಪುರ ಕಡೆಗೆ ಚಲಿಸುವ ವಾಹನಗಳು ಹೆಬ್ಬಾಳ ಮೇಲ್ಸೇತುವೆ ಕೆಳಗಿನ ರಸ್ತೆಯಿಂದ ನೇರವಾಗಿ ಬಿಇಎಲ್ ವೃತ್ತ ತಲುಪಿ, ಎಡಕ್ಕೆ ತಿರುವು ಪಡೆದು ಸದಾಶಿವನಗರ ಜಂಕ್ಷನ್‌ನಲ್ಲಿ ಬಲಕ್ಕೆ ತಿರುವು ಪಡೆದು ಐಐಎಸ್‌ಸಿ ಮೂಲಕ ಚಲಿಸಬಹುದು ಎಂದು ಪೊಲೀಸರು ತಿಳಿಸಿದ್ದಾರೆ.

ವಿದೇಶದಿಂದ ನಿಷೇಧಿತ ಮಾದಕ ವಸ್ತು ತರಿಸಿ ಸ್ಥಳೀಯರಿಗೆ ಪೂರೈಕೆ

ಎಂಟು ಡ್ರಗ್ಸ್ ಪೆಡ್ಲರ್‌ಗಳ ಬಂಧನ

ಪ್ರಜಾವಾಣಿ ವಾರ್ತೆ



ಆಗಸ್ಟಿನ್ ನಾನ್‌ಸೋ



ಉದ್ರಿಕ್ ಫೆಡಲೀಸ್



ಎರೆಮನ್ ಸ್ಮಾರ್ಟ್

ಜಪ್ತಿ ಮಾಡಿಕೊಂಡ ಮಾದಕ ವಸ್ತು

ಬೆಂಗಳೂರು: ಸಿಸಿಬಿಯ ಮಾದಕ ದ್ರವ್ಯ ನಿಗ್ರಹ ದಳದ ಅಧಿಕಾರಿಗಳು ಸಂಪಿಗೆಹಳ್ಳಿ, ವಿ.ವಿ. ಪುರ, ಕಾಟನ್‌ಪೇಟೆ ಹಾಗೂ ಕೊತ್ತನೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಿ, ನೈಜಿರಿಯಾದ ಮೂವರು ವ್ಯಕ್ತಿಗಳು ಸೇರಿದಂತೆ ಒಟ್ಟು ಎಂಟು ಮಂದಿ ಡ್ರಗ್ಸ್ ಪೆಡ್ಲರ್‌ಗಳನ್ನು ಬಂಧಿಸಿದ್ದಾರೆ.

ಬಂಧಿತರಿಂದ ₹2.74 ಕೋಟಿ ಮೌಲ್ಯದ ನಿಷೇಧಿತ ಮಾದಕ ವಸ್ತುಗಳನ್ನು ಜಪ್ತಿ ಮಾಡಿಕೊಂಡಿದ್ದಾರೆ.

ನೈಜಿರಿಯಾದ ಆಗಸ್ಟಿನ್ ನಾನ್‌ಸೋ (39), ಉದ್ರಿಕ್ ಫೆಡಲೀಸ್ (34), ಎರೆಮನ್ ಸ್ಮಾರ್ಟ್ (40) ಸೇರಿದಂತೆ ಎಂಟು ಮಂದಿಯನ್ನು ಬಂಧಿಸಿದ್ದಾರೆ.

‘ಸಂಪಿಗೆಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮೂವರು ವಿದೇಶಿ ಪ್ರಜೆಗಳು ಎಂಡಿಎಂಎ ಕ್ರಿಸ್ಟಲ್, ಕೊಕೇನ್ ಮಾರಾಟ ಮಾಡುತ್ತಿರುವ ಖಚಿತ ಮಾಹಿತಿ ಸಿಕ್ಕಿತ್ತು. ಕಾರ್ಯಾಚರಣೆ ನಡೆಸಿ, ₹50 ಲಕ್ಷ ಮೌಲ್ಯದ ನಿಷೇಧಿತ ಮಾದಕ ವಸ್ತುಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

‘ವಾಣಿಜ್ಯ ಹಾಗೂ ವೈದ್ಯಕೀಯ ವೀಸಾದ ಮೇಲೆ ಭಾರತಕ್ಕೆ ಬಂದಿದ್ದ ಆರೋಪಿಗಳು ಬೆಂಗಳೂರಿನಲ್ಲಿ ನೆಲೆಸಿದ್ದರು. ಗೋವಾ, ಮುಂಬೈ ಹಾಗೂ ದೆಹಲಿಯಲ್ಲಿ ನೆಲೆಸಿದ್ದ ನೈಜಿರಿಯಾ ಪ್ರಜೆಗಳಿಂದಲೇ ಮಾದಕ ವಸ್ತುಗಳನ್ನು ತಂದು ನಗರದ ಗ್ರಾಹಕರಿಗೆ ಪೂರೈಸುತ್ತಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಎಂಡಿಎಂಎ ಕ್ರಿಸ್ಟಲ್ ಹಾಗೂ 1 ಗ್ರಾಂ ಕೊಕೇನ್ ಅನ್ನು ₹10ರಿಂದ 12 ಸಾವಿರಕ್ಕೆ ಮಾರಾಟ ಮಾಡುತ್ತಿದ್ದರು. ಬಂದ ಹಣದಿಂದ ಮೋಜಿನ ಜೀವನ ನಡೆಸುತ್ತಿದ್ದರು’ ಎಂದು ಪೊಲೀಸರು ಹೇಳಿದರು.

ಆರೋಪಿಗಳ ವಿರುದ್ಧ ಸಂಪಿಗೆಹಳ್ಳಿ ಪೊಲೀಸ್ ಠಾಣೆಯಲ್ಲಿ ಎನ್‌ಡಿಪಿಎಸ್ ಕಾಯ್ದೆ ಅಡಿ ಪ್ರಕರಣ ದಾಖಲು ಮಾಡಲಾಗಿದೆ.

ವಿ.ವಿ. ಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಿಸಿಬಿ ಪೊಲೀಸರು ಕಾರ್ಯಾಚರಣೆ ನಡೆಸಿ, ಒಬ್ಬ ಡ್ರಗ್ಸ್ ಪೆಡ್ಲರ್‌ನನ್ನು ಬಂಧಿಸಿದ್ದಾರೆ.

‘ಬಂಧಿತನಿಂದ ₹10 ಲಕ್ಷ ಮೌಲ್ಯ 5 ಕೆ.ಜಿ. ಗಾಂಜಾ, 7 ಎಲ್‌ಎಸ್‌ಡಿ ಸ್ಟ್ರಿಪ್ಸ್, 25 ಗ್ರಾಂ ಚರಸ್, 1 ಮೊಬೈಲ್ ಹಾಗೂ ಒಂದು ಕಾರನ್ನು ಜಪ್ತಿ ಮಾಡಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಬಂಧಿತ ಆರೋಪಿಯು ವಿದೇಶದಲ್ಲಿರುವ ತನ್ನ ಸ್ನೇಹಿತ ಹಾಗೂ ಸ್ಥಳೀಯ ಡ್ರಗ್ಸ್ ಪೆಡ್ಲರ್‌ಗಳಿಂದ ನಿಷೇಧಿತ ಮಾದಕ ವಸ್ತುಗಳನ್ನು ಖರೀದಿಸಿ ಗ್ರಾಹಕರಿಗೆ ಮಾರಾಟ ಮಾಡುತ್ತಿದ್ದ’ ಎಂದು ತಿಳಿಸಿದರು.

ಕಾಟನ್‌ಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಒಬ್ಬನನ್ನು ಬಂಧಿಸಿ, ₹ 14 ಲಕ್ಷ ಮೌಲ್ಯದ 7 ಕೆ.ಜಿ ಗಾಂಜಾ ಜಪ್ತಿ ಮಾಡಿಕೊಳ್ಳಲಾಗಿದೆ.

ಕೊತ್ತನೂರು ಠಾಣಾ ವ್ಯಾಪ್ತಿಯಲ್ಲಿ ಒಬ್ಬ ಡ್ರಗ್ಸ್ ಪೆಡ್ಲರ್‌ನನ್ನು ಬಂಧಿಸಿ, ₹2 ಕೋಟಿ ಮೌಲ್ಯದ 2 ಕೆಜಿ ಹ್ಯಾಶಿಸ್ ಆಯಿಲ್, 716 ಗ್ರಾಂ ಚರಸ್ ಹಾಗೂ ಒಂದು ಮೊಬೈಲ್ ಜಪ್ತಿ ಮಾಡಿಕೊಳ್ಳಲಾಗಿದೆ. ಈತ ಆಂಧ್ರಪ್ರದೇಶದಿಂದ ಮಾದಕ ವಸ್ತು ಖರೀದಿಸಿ ನಗರದ ಗ್ರಾಹಕರಿಗೆ ಪೂರೈಸುತ್ತಿದ್ದ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ರೈಲಿಗೆ ಸಿಲುಕಿ 46 ಕುರಿಗಳ ಸಾವು

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಇಲ್ಲಿನ ನಿಡವಂದ-ದಾಬಸ್ ಪೇಟೆ ರೈಲು ನಿಲ್ದಾಣಗಳ ನಡುವೆ ಮಂಗಳವಾರ ಚಲಿಸುತ್ತಿದ್ದ ರೈಲಿಗೆ ಸಿಲುಕಿ 46 ಕುರಿಗಳು ಮೃತಪಟ್ಟಿವೆ.

ತುಮಕೂರು ಜಿಲ್ಲೆಯ, ಶಿರಾ ತಾಲ್ಲೂಕಿನ ದೊಡ್ಡ ಆಲದ ಮರದ ಚನ್ನಹಳ್ಳಿ ಗ್ರಾಮದ ಕುರಿಗಾಹಿ ದೇವರಾಜು ಪೆಮ್ಮನಹಳ್ಳಿ ಹತ್ತಿರದ ಕೆರೆ ಅಂಗಳದಲ್ಲಿ ಕುರಿ ಮೇಯಿಸುತ್ತಿದ್ದರು. ಮಧ್ಯಾಹ್ನ 3ರ ಸುಮಾರಿಗೆ ಮಳೆ ಬಂದಿತ್ತು. ಕೆರೆ ಅಂಗಳದಲ್ಲಿ ಮೇಯುತ್ತಿದ್ದ ಕುರಿಗಳು ರೈಲ್ವೆ ಹಳಿಯತ್ತ ಬಂದವು. ಬೆಂಗಳೂರು ಕಡೆಯಿಂದ ತುಮಕೂರು ಕಡೆಗೆ ಬಂದ ರೈಲಿನ ಅಡಿಗೆ ಕುರಿಗಳು ಸಿಕ್ಕಿದವು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಕುರಿಗಾಹಿಯು ಸತ್ತ ಕುರಿಗಳನ್ನು ಮಾರಿ, ನಷ್ಟ ಕಡಿಮೆ ಮಾಡಿಕೊಳ್ಳುತ್ತಿದ್ದರು. ಇದೇ ಸಂದರ್ಭದಲ್ಲಿ ಸ್ಥಳಕ್ಕೆ ಬಂದ ರೈಲ್ವೆ ಅಧಿಕಾರಿಗಳು, ಕುರಿಗಾಹಿಯನ್ನು ಬೆದರಿಸಿ ಕೆಲವು ಕುರಿ ತೆಗೆದುಕೊಂಡು ಹೋಗಿದ್ದಕ್ಕೆ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.



ಸತ್ತು ಬಿದ್ದಿರುವ ಕುರಿಗಳು

ಶಾಲೆಗೆ ಹುಸಿ ಬಾಂಬ್ ಬೆದರಿಕೆ

ಪ್ರಜಾವಾಣಿ ವಾರ್ತೆ

ಹಾರೋಹಳ್ಳಿ: ತಾಲ್ಲೂಕಿನ ಕಗ್ಗಲೀಪುರ ಪೊಲೀಸ್ ಠಾಣೆ ವ್ಯಾಪ್ತಿಯ ಸೋಮನಹಳ್ಳಿ ಬಳಿಯ ಎಡಿಫೈ ಶಾಲೆಗೆ ಸೋಮವಾರ ತಡರಾತ್ರಿ ಬಾಂಬ್ ಬೆದರಿಕೆಯ ಇ- ಮೇಲ್ ಬಂದಿದೆ.

ಆಡಳಿತ ಮಂಡಳಿ ಕಗ್ಗಲೀಪುರ ಪೊಲೀಸ್ ಠಾಣೆಗೆ ದೂರು ನೀಡಿದೆ.

ಬಾಂಬ್ ನಿಷ್ಕ್ರಿಯ ದಳದೊಂದಿಗೆ ರಾಮನಗರ ಎಎಸ್‌ಪಿ ಸುರೇಶ್ ನೇತೃತ್ವದ ತಂಡ ಶಾಲೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿತು. ಆದರೆ, ಅದು ಹುಸಿ ಬೆದರಿಕೆ ಎಂಬುದು ಗೊತ್ತಾಯಿತು.

‘ಸನ್ಮಾರ್ಗ ಬೋಧಿಸುವ ಪೌರಾಣಿಕ ನಾಟಕ’

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಸತ್ಯ, ನ್ಯಾಯ, ಪ್ರಾಮಾಣಿಕತೆಯನ್ನು ರಂಗಭೂಮಿ, ಪೌರಾಣಿಕ ನಾಟಕಗಳಿಂದ ಕಲಿಯಬಹುದು ಎಂದು ಶಾಸಕ ಮುನಿರತ್ನ ಅಭಿಪ್ರಾಯಪಟ್ಟರು.

ಹಿರಿಯ ರಂಗಭೂಮಿ ಕಲಾವಿದ, ನಗರಸಭೆ ಮಾಜಿ ಉಪಾಧ್ಯಕ್ಷ ಮುನಿವೆಂಕಟಪ್ಪ–ಪುಟ್ಟಮ್ಮ ಸವಿ ನೆನಪಿಗಾಗಿ ವಿನಾಯಕ ಕೃಪಾ ಪೋಷಿತ ನಾಟಕ ಮಂಡಳಿಯು ಕೆಂಗುಂಟೆಯ ಆಟದ ಮೈದಾನದಲ್ಲಿ ಹಮ್ಮಿಕೊಂಡಿದ್ದ ‘ದಾನಶೂರ ವೀರಕರ್ಣ’ ಅಥವಾ ‘ವೃಷಕೇತು ಪಟ್ಟಾಭಿಷೇಕ’ ಪೌರಾಣಿಕ ನಾಟಕವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮುನಿ ವೆಂಕಟಪ್ಪ ಅವರು 50ಕ್ಕೂ ಹೆಚ್ಚು ಶ್ರೀರಾಮ, ಶ್ರೀಕೃಷ್ಣನ ಪಾತ್ರವನ್ನು ಅಭಿನಯಿಸುವ ಮೂಲಕ ರಂಗಭೂಮಿಯನ್ನು ಶ್ರೀಮಂತಗೊಳಿಸಿದ್ದರು. ಜೊತೆಗೆ ಸಮಾಜ ಮುಖಿ ಸೇವೆಯನ್ನು ಮಾಡಿದ್ದರು ಎಂದು ನೆನಪು ಮಾಡಿಕೊಂಡರು.

ಬೆಂಗಳೂರು ಕೇಂದ್ರ ಜಿಲ್ಲಾ ಬಿಜೆಪಿ ಎಸ್.ಸಿ. ಮೋರ್ಚಾ ಉಪಾಧ್ಯಕ್ಷ ಎಂ. ಮಂಜುನಾಥ್, ಬಿಜೆಪಿ ನಾಯಕ ಕೆ.ಎಸ್. ಯೋಗೇಶ್, ನಗರ ಮಾಜಿ ಸದಸ್ಯ ಹನುಮೇಗೌಡ. ವಾರ್ಡ್ ಬಿಜೆಪಿ ಅಧ್ಯಕ್ಷ ಶಿವಶಂಕರ್, ಜಿಮ್ ರವಿಗೌಡ, ಎಂ.ಆರ್. ಕುಮಾರ್, ರಾಮಣ್ಣ ಅವರು ಮಾತನಾಡಿದರು.

ರಂಗಭೂಮಿ ಕಲಾವಿದ ಮುನಿವೆಂಕಟಪ್ಪ–ಪುಟ್ಟಮ್ಮ ನೆನಪಿಗಾಗಿ ವಿನಾಯಕ ಕೃಪಾ ಪೋಷಿತ ನಾಟಕ ಮಂಡಳಿ ಹಮ್ಮಿಕೊಂಡಿದ್ದ ‘ದಾನಶೂರ ವೀರಕರ್ಣ’ ಅಥವಾ ‘ಋಷಿಕೇತು ಪಟ್ಟಾಭಿಷೇಕ’ ಎಂಬ ಪೌರಾಣಿಕ ನಾಟಕವನ್ನು ಶಾಸಕ ಮುನಿರತ್ನ ಉದ್ಘಾಟಿಸಿ ಮಾತನಾಡಿದರು.

ಆರೋಪಿಯನ್ನು ಬಂಧಿಸಿದ ಪೊಲೀಸರು

ನಟಿ ಛಾಯಾಸಿಂಗ್ ತವರು ಮನೆಯಲ್ಲಿ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟಿ ಛಾಯಾಸಿಂಗ್ ತಾಯಿ ಮನೆಯಲ್ಲಿ ಚಿನ್ನಾಭರಣ ಕಳವು ಮಾಡಿದ್ದ ಕೆಲಸದಾಕೆಯನ್ನು ಬಸವೇಶ್ವರನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಎನ್‌ಜಿಒಎಸ್ ಕಾಲೊನಿ ನಿವಾಸಿ ಉಷಾ (43) ಬಂಧಿತ ಮಹಿಳೆ.

ಆರೋಪಿಯಿಂದ ₹4 ಲಕ್ಷ ಮೌಲ್ಯದ 66 ಗ್ರಾಂ ಚಿನ್ನ ಮತ್ತು 155 ಗ್ರಾಂ ಬೆಳ್ಳಿ ಸಾಮಗ್ರಿ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

‘ಎನ್‌ಎಚ್‌ಸಿಎಸ್ ಲೇಔಟ್‌ನಲ್ಲಿ ವಾಸವಾಗಿರುವ ಛಾಯಾಸಿಂಗ್ ಅವರ ತಾಯಿ ಚಮನ್ ಲತಾ ಸಿಂಗ್ ಮನೆಯಲ್ಲಿ 2 ವರ್ಷಗಳಿಂದ ಆರೋಪಿ ಕೆಲಸ ಮಾಡುತ್ತಿದ್ದಳು. ಈ ವೇಳೆ ಹಂತ-ಹಂತವಾಗಿ ಮನೆಯಲ್ಲಿದ್ದ ಚಿನ್ನಾಭರಣ ಕಳವು ಮಾಡಿದ್ದಳು’ ಎಂದು ಪೊಲೀಸರು ಹೇಳಿದರು.

ಆರೋಪಿಯಿಂದ ಜಪ್ತಿ ಮಾಡಿದ್ದ ಆಭರಣವನ್ನು ನಟಿ ಛಾಯಾಸಿಂಗ್ ಅವರಿಗೆ ನಗರ ಪೊಲೀಸ್ ಆಯುಕ್ತ ಬಿ.ದಯಾನಂದ್ ಹಸ್ತಾಂತರಿಸಿದರು.

‘ಮನೆ ಕೆಲಸದಾಕೆ ಮೇಲೆ ಅನುಮಾನ ವ್ಯಕ್ತಪಡಿಸಿ ಚಮನ್ ಲತಾಸಿಂಗ್ ಅವರು ದೂರು ನೀಡಿದ್ದರು. ದೂರು ಆಧರಿಸಿ ತನಿಖೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು’ ಎಂದು ಪೊಲೀಸರು ಹೇಳಿದರು.

‘ಪಡೆದಿದ್ದ ಸಾಲಗಳನ್ನು ತೀರಿಸುವ ಸಲುವಾಗಿ ಮಾಲೀಕರ ಮನೆಯಲ್ಲಿ ಆಭರಣ ಮತ್ತು ಹಣ ಕಳವು ಮಾಡಿದ್ದಾಗಿ ಆರೋಪಿ ತಪ್ಪೊಪ್ಪಿಕೊಂಡಿದ್ದಾಳೆ’ ಎಂದು ಪೊಲೀಸರು ತಿಳಿಸಿದ್ದಾರೆ.

ನಕಲಿ ಕೀ ಬಳಸಿ ಚಿನ್ನಾಭರಣ ಕಳ್ಳತನ

ಪ್ರಕಾಶ್

ನಗರದ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯ ಮನೆಗಳಲ್ಲಿ ನಕಲಿ ಕೀ ಬಳಸಿ ಚಿನ್ನಾಭರಣ ಹಾಗೂ ನಗದು ಕಳವು ಮಾಡುತ್ತಿದ್ದ ಆರೋಪಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಪ್ರಕಾಶ್ (44) ಬಂಧಿತ ಆರೋಪಿ.

‘ಡ್ರಾಯರ್‌ನಲ್ಲಿ ಇಡಲಾಗಿದ್ದ ಚಿನ್ನವನ್ನು ಕಳವು ಮಾಡಲಾಗಿದೆ ಎಂದು ಮನೆ ಮಾಲೀಕ ದೂರು ನೀಡಿದ್ದರು. ಪ್ರಕರಣವನ್ನು ಸಿಸಿಬಿಗೆ ವರ್ಗಾವಣೆ ಮಾಡಲಾಗಿತ್ತು. ಸಿಸಿಬಿ ಪೊಲೀಸರು ಕಾರ್ಯಾಚರಣೆ ನಡೆಸಿ, ಆರೋಪಿಯನ್ನು ಬಂಧಿಸಿದ್ದಾರೆ. ಬಂಧಿತನಿಂದ 422 ಗ್ರಾಂ ಚಿನ್ನಾಭರಣ ಹಾಗೂ ಒಂದು ಬೈಕ್ ಅನ್ನು ಜಪ್ತಿ ಮಾಡಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಆರೋಪಿ ಬಂಧನದಿಂದ ಬೇಗೂರು, ಚಂದ್ರಾಲೇಔಟ್, ಎಚ್‌ಎಸ್‌ಆರ್ ಲೇಔಟ್, ಹುಳಿಮಾವು, ಕುಮಾರಸ್ವಾಮಿ ಲೇಔಟ್ ಠಾಣಾ ವ್ಯಾಪ್ತಿಯಲ್ಲಿ ನಡೆಸಿದ್ದ ಆರು ಕಳ್ಳತನ ಪ್ರಕರಣಗಳು ಪತ್ತೆಯಾಗಿವೆ’ ಎಂದು ಹೇಳಿದರು.

ಆರೋಪಿ ಉಷಾಳಿಂದ ಜಪ್ತಿ ಮಾಡಿಕೊಂಡಿದ್ದ ಆಭರಣಗಳವನ್ನು ನಟಿ ಛಾಯಾ ಸಿಂಗ್ ಅವರಿಗೆ ನಗರ ಪೊಲೀಸ್ ಆಯುಕ್ತ ಬಿ.ದಯಾನಂದ್ ಅವರು ಮಂಗಳವಾರ ಮರಳಿಸಿದರು.

ಕೃಷ್ಣನ ದರ್ಶನ ಪಡೆದ ರವಿಶಾಸ್ತ್ರಿ

ಪ್ರಜಾವಾಣಿ ವಾರ್ತೆ

ಉಡುಪಿ: ಮಾಜಿ ಕ್ರಿಕೆಟಿಗ ರವಿ ಶಾಸ್ತ್ರಿ ಅವರು ಮಂಗಳವಾರ ಕೃಷ್ಣ ಮಠಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದರು. ಬಳಿಕ ಪರ್ಯಾಯ ಪುತ್ತಿಗೆ ಮಠಾಧೀಶರಾದ ಸುಗುಣೇಂದ್ರ ತೀರ್ಥ ಶ್ರೀಗಳು ಹಾಗೂ ಕಿರಿಯ ಯತಿ ಸುಶ್ರೀಂದ್ರ ತೀರ್ಥ ಶ್ರೀಗಳನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು.

ಈ ಸಂದರ್ಭ ಪರ್ಯಾಯ ಶ್ರೀಗಳ ಮುಖ್ಯ ಯೋಜನೆಗಳಲ್ಲೊಂದಾದ ಕೋಟಿಗೀತಾ ಲೇಖನ ಯಜ್ಞದ ದೀಕ್ಷೆ ಸ್ವೀಕರಿಸಿ ಮೆಚ್ಚುಗೆ ವ್ಯಕ್ತಪಡಿಸಿದ ರವಿ ಶಾಸ್ತ್ರಿ, ಕೃಷ್ಣ ಭಕ್ತರು ಸ್ವಯಂಸ್ಫೂರ್ತಿಯಿಂದ ಗೀತಾ ಲೇಖನ ಯಜ್ಞ ಸಂಕಲ್ಪ ಮಾಡಬೇಕು ಎಂದು ಕರೆ ನೀಡಿದರು.

ಸುಗುಣೇಂದ್ರ ತೀರ್ಥ ಶ್ರೀಗಳು ಮಾತನಾಡಿ, ಉಡುಪಿಯ ಬಾಲಕೃಷ್ಣನಿಗೆ ನೂರನೇ ಅಲಂಕಾರ ನಡೆದಿದ್ದು ಈ ಸಂದರ್ಭದಲ್ಲಿ ಖ್ಯಾತ ಕ್ರಿಕೆಟಿಗ ರವಿ ಶಾಸ್ತ್ರಿ ದೇವರ ದರ್ಶನ ಪಡೆದಿರುವುದು ಯೋಗಾಯೋಗ ಎಂದರು.

ಈ ಸಂದರ್ಭ ಮಠದ ಕಾರ್ಯದರ್ಶಿ ಪ್ರಸನ್ನ ಆಚಾರ್ಯ, ವಾದಿರಾಜ ಪೆಜತ್ತಾಯ, ಲಾತವ್ಯ ಆಚಾರ್ಯ, ವಿನಯ ಬನ್ನಂಜೆ ಇದ್ದರು.



ಮಾಜಿ ಕ್ರಿಕೆಟಿಗ ರವಿಶಾಸ್ತ್ರಿ ಅವರು ಪರ್ಯಾಯ ಪುತ್ತಿಗೆ ಮಠಾಧೀಶ ಸುಗುಣೇಂದ್ರ ತೀರ್ಥ ಶ್ರೀಗಳಿಂದ ಕೋಟಿ ಗೀತ ಲೇಖನ ದೀಕ್ಷೆ ಪಡೆದರು

ತಂತ್ರಜ್ಞಾನ



ಸತ್ತವರ ನೆರಳು: ಡೀಪ್‌ಫೇಕ್ ರಿಸರೆಕ್ಷನ್



ಕೊಳ್ಳೇಗಾಲ ಶರ್ಮ

ಸತ್ತವರ ನೆರಳು ಕಾಡುತ್ತದಷ್ಟೆ ಅಲ್ಲ, ಅದು ಕೆಲವು ಕಂಪೆನಿಗಳಿಗೆ ಕಾಸನ್ನೂ ಮಾಡಿಕೊಡಬಹುದು. ಹೌದು, ಸತ್ತವರ ಸುಳ್ಳು ಚಿತ್ರಗಳನ್ನು, ವಿಡಿಯೊಗಳನ್ನು ಮಾಡುವ ವ್ಯಾಪಾರ ಆರಂಭವಾಗಿದೆ. 'ಸಿಲಿಕಾನ್ ಇಂಟೆಲಿಜೆನ್ಸ್' ಎನ್ನುವ ಚೀನೀ ಕಂಪೆನಿಯೊಂದು ಡೀಪ್ ಫೇಕ್ ತಂತ್ರಜ್ಞಾನವನ್ನು ಬಳಸಿ, ಸತ್ತವರಿಗೆ ಮರು ಹುಟ್ಟು ನೀಡುತ್ತಿದೆ. 'ಡೀಪ್‌ಫೇಕ್ ರಿಸರೆಕ್ಷನ್' ಎಂದು ಕರೆಯುವ ಈ ತಂತ್ರಜ್ಞಾನವನ್ನು ಬಳಸಿಕೊಂಡು ಸತ್ತವರ ಜೊತೆಗೆ ಅವರು ಇನ್ನೂ ಬದುಕಿಯೇ ಇದ್ದಾರೇನೋ ಎನ್ನುವಂತೆ ಸಂವಾದಿಸಬಹುದು ಎಂದು 'ಎಂಐಟಿ ಟೆಕ್ನಾಲಜಿ ರಿವ್ಯೂ' ಪತ್ರಿಕೆ ವರದಿ ಮಾಡಿದೆ.

'ಡೀಪ್‌ಫೇಕ್ ರಿಸರೆಕ್ಷನ್' ಎನ್ನುವುದು ಡೀಪ್‌ಫೇಕ್ ತಂತ್ರಜ್ಞಾನದ ಇನ್ನೊಂದು ಬಳಕೆ. 'ಡೀಪ್‌ಫೇಕ್' ಎಂದರೆ ಗೊತ್ತಿರಬೇಕು – ಸಂಪೂರ್ಣ ಸುಳ್ಳು ಚಿತ್ರ, ಧ್ವನಿಗಳನ್ನು ಸೃಷ್ಟಿಸುವ ತಂತ್ರಜ್ಞಾನ. ಫೇಸ್‌ಬುಕ್‌ನಲ್ಲಿ ಇದರ ಹಲವು ಅವತಾರಗಳನ್ನು ನೀವು ಕಂಡಿರುತ್ತೀರಿ. ನಿಮ್ಮ ಚಿತ್ರವನ್ನು ಕೊಟ್ಟು, ಇನ್ನು ಐವತ್ತು ವರ್ಷಗಳಾದ ನಂತರ ನೀವು ಹೇಗಿರುತ್ತೀರಿ – ಎಂದು ತೋರಿಸುವ ಚಿತ್ರಗಳನ್ನು ಸೃಷ್ಟಿಸಿರುತ್ತೀರಿ. ಅಥವಾ ಹಿಂದಿನ ಜನ್ಮದಲ್ಲಿ ನೀವು ಏನಾಗಿದ್ದಿರಬಹುದು ಎಂದು ಯಾವುದೋ ರಾಜನ ದಿರಿಸನ್ನು ತೊಡಿಸಿದ ಚಿತ್ರಗಳನ್ನೂ ಗಮನಿಸಿರುತ್ತೀರಿ. ಇತ್ತೀಚೆಗೆ ಕನ್ನಡದ ನಟಿಯೊಬ್ಬಳ ಡೀಪ್‌ಫೇಕ್ ವಿಡಿಯೊವೊಂದು ಸುದ್ದಿ ಮಾಡಿತ್ತು. ಅಶ್ಲೀಲವಾದೊಂದು ವಿಡಿಯೊದಲ್ಲಿ ಇದ್ದದ್ದು ತಾನಲ್ಲ, ಅದು ಡೀಫ್ ಫೇಕ್ ತಂತ್ರಜ್ಞಾನದಿಂದ ಸೃಷ್ಟಿಸಿದ ಸುಳ್ಳು ವಿಡಿಯೊ ಎಂದು ಆಕೆ ದೂರಿದ್ದಳು.

> ಸತ್ತವರ ಚಿತ್ರ, ಧ್ವನಿಗಳನ್ನು ಬಳಸಿಕೊಂಡು, ಅವರಂತೆಯೇ ನಡೆ, ನುಡಿಯುವ ಡೀಪ್‌ಫೇಕ್ ಚಿತ್ರಗಳು ಬರಲಿವೆ.

ಸಿನಿಮಾದಲ್ಲಿ ಬಳಸುವ ಗ್ರಾಫಿಕ್ಸ್, ಯಾಂತ್ರಿಕ ಬುದ್ಧಿಮತ್ತೆಯ ತಂತ್ರಗಳ ಜೊತೆಗೆ ಒಂದಿಷ್ಟು ಕಲ್ಪನೆ ಬೆರೆತರೆ ಡೀಪ್‌ಫೇಕ್ ತಂತ್ರಜ್ಞಾನ ಸಿದ್ಧ. ಅಮಿತಾಭ್ ಬಚ್ಚನ್ನರ ಧ್ವನಿಯಲ್ಲಿ ಕನ್ನಡದ ಕಗ್ಗವನ್ನು ಕೇಳಿಸಬಹುದು. ಅಥವಾ ಅಮಿತಾಭ್ ಬಚ್ಚನ್ನರೇ ಎದುರು ಬಂದು ನಿಂತು ಕಗ್ಗವನ್ನು ಹಾಡಿದಂತೆ ವಿಡಿಯೊ ಮಾಡಬಹುದು. ಆತನದ್ದೇ ಹಾವಭಾವ, ಧ್ವನಿ; ಆದರೆ ಆತನಲ್ಲ. ಹೀಗೆ ಭ್ರಮಾಚಿತ್ರಗಳನ್ನು, ವಿಡಿಯೊಗಳನ್ನು ರೂಪಿಸಬಹುದು. ಈ ಬಗೆಯಲ್ಲಿ ರೋಬಾಟು ಸುದ್ದಿನಿರೂಪಕರನ್ನು ಸೃಷ್ಟಿಸಿದ್ದೂ ಆಗಿದೆ. ಕೆಲವು ತಿಂಗಳ ಹಿಂದೆ ಕನ್ನಡದ ಎಲ್ಲ ಟಿವಿ ಚಾನೆಲ್ಲುಗಳಲ್ಲಿಯೂ ಇಂತಹ ವರ್ಚುವಲ್ ಸುದ್ದಿವಾಚಕಿಯರು, ಸುದ್ದಿಯನ್ನು ಓದಿದ್ದು ನಾವು ಕಂಡಿದ್ದೆವು.

ಕೃತಕ ಬುದ್ಧಿಮತ್ತೆ ಅಥವಾ ಎಐ ತಂತ್ರಜ್ಞಾನದಲ್ಲಿ ಸುಧಾರಣೆಯಾಗುತ್ತಿದ್ದಂತೆ, ಡೀಪ್‌ಫೇಕ್ ತಂತ್ರಜ್ಞಾನ ಕೂಡ ಸುಧಾರಿಸಿದೆ. ಸುದ್ದಿ ವಾಚಕಿಯರಂತೆ ನಾವು ಬರೆದ ಚಿತ್ರಗಳಿಗೆ ಮಾನವ ಸಹಜವಾದ ಹಾವಭಾವಗಳನ್ನು, ಧ್ವನಿಯನ್ನು ನೀಡಬಹುದಷ್ಟೆ ಅಲ್ಲ. ಕೆಲವು ಭಾವಚಿತ್ರಗಳು ಹಾಗೂ ಧ್ವನಿಮಾದರಿಗಳನ್ನು ಬಳಸಿಕೊಂಡು ಎಂದೋ ಮರಣಿಸಿದವರ ವಿಡಿಯೊಗಳನ್ನೂ ರೂಪಿಸಬಹುದು. ವಾಟ್ಸ್‌ಆ್ಯಪ್‌ನಲ್ಲಿ ಇತ್ತೀಚೆಗೆ ಶಿವರಾಮ ಕಾರಂತರದು ಇಂತಹುದೊಂದು ವಿಡಿಯೋ ಹರಿದಾಡಿತ್ತು.

ಇಂತಹ ಡೀಪ್‌ಫೇಕ್ ತಂತ್ರಜ್ಞಾನದಿಂದ ಏನು ಲಾಭ? ಸಿನಿಮಾ ತಯಾರಿಸಬಹುದು. ಯಾರದ್ದೋ ಬಾಯಿಯಲ್ಲಿ ಇನ್ನೇನನ್ನೋ ಹೇಳಿಸಿ ಮೋಸ ಮಾಡಬಹುದು. ಅಥವಾ ಆ ನಟಿಯ ಅಶ್ಲೀಲಚಿತ್ರವನ್ನು ತಯಾರಿಸಿದಂತೆ ಕೆಟ್ಟ ಉದ್ದೇಶಕ್ಕೂ ಬಳಸಿಕೊಳ್ಳಬಹುದು. ಒಟ್ಟಾರೆ ಜನರಿಗೆ ಉಪಯುಕ್ತ ಎನ್ನಿಸುವಂತಹುದು ಏನೂ ಇಲ್ಲ ಎನ್ನುವ ಭಾವನೆ ಇದೆ. ಇದನ್ನು ಸುಳ್ಳೆನ್ನಿಸುತ್ತಿದೆ ಡೀಪ್‌ಫೇಕ್ ರಿಸರೆಕ್ಷನ್ ತಂತ್ರಜ್ಞಾನ.

ಚೀನಾದ ಸಿಲಿಕಾನ್ ಇಂಟೆಲಿಜೆನ್ಸ್ ಕಂಪೆನಿಯ ಸಹಸ್ಥಾಪಕ ಸುನ್ ಕಾಇಗೆ ಹೀಗೊಂದು ಯೋಚನೆ ಬಂದಿತು. ಸಂಕಟದ ಸಮಯದಲ್ಲಿ ತನ್ನ ಭಾವನೆಗಳನ್ನು ಹೇಳಿಕೊಳ್ಳಲು ತಾಯಿ ಬೇಕು ಎನ್ನಿಸಿತ್ತಂತೆ. ಆದರೆ ತಾಯಿ ಸತ್ತಿದ್ದಳು. ಸುನ್ ಕಂಪೆನಿ ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುತ್ತಿದ್ದರಿಂದ, ತನ್ನ ತಾಯಿಯ ಕೆಲವು ಭಾವಚಿತ್ರಗಳು ಹಾಗೂ ಧ್ವನಿ ಮಾದರಿಯ ನೆರವಿನಿಂದ ಸುನ್ ತಾಯಿಯ ಡೀಪ್‌ಫೇಕ್ ಅವತಾರವನ್ನು ಸೃಷ್ಟಿಸಿದ. ಇದು ಕೇವಲ ವಿಡಿಯೊವಲ್ಲ. ಕೇಳಿದ ಪ್ರಶ್ನೆಗೆ ಉತ್ತರ ನೀಡುವ ಅಥವಾ ಪ್ರಶ್ನಿಸುವ ಸತ್ತವರ ನೆರಳು.'ಊಟ ಮಾಡಿದೆಯಾ? ರುಚಿಯಾಗಿತ್ತಾ?' ಎಂದೆಲ್ಲ ಪ್ರೀತಿಯಿಂದ ವಿಚಾರಿಸಿಕೊಳ್ಳುವ ವಿಡಿಯೊ. 'ಇಲ್ಲ' ಎಂದರೆ ಸಂದರ್ಭಕ್ಕೆ ತಕ್ಕಂತೆ ತಾಯಿಯ ಧ್ವನಿಯಲ್ಲಿಯೇ ಮಾತನಾಡಿ, ಸಂತೈಸಬಲ್ಲ ಡೀಪ್‌ಫೇಕ್ ಅವತಾರ. ಸುಖ, ದುಃಖ ಹಂಚಿಕೊಳ್ಳಲು ಇದು ಈಗ ನನಗೆ ನೆರವಾಗಿದೆ ಎನ್ನುತ್ತಾರೆ, ಸುನ್.

ಸಿಲಿಕಾನ್ ಇಂಟೆಲಿಜೆನ್ಸ್ ಕಂಪೆನಿ ಸುನ್ ಅಲ್ಲದೆ ಇನ್ನೂ ಎರಡು ಸಾವಿರ ಗ್ರಾಹಕರಿಗೆ ಇಂತಹ ಡೀಪ್‌ಫೇಕ್ ತಂತ್ರಜ್ಞಾನವನ್ನು ಒದಗಿಸಿದೆಯಂತೆ. ಅವೆಲ್ಲವೂ ಕಣ್ಮರೆಯಾದ ಪ್ರೀತಿಪಾತ್ರರ ಅಥವಾ ತಾವು ಜೊತೆಗಿರಲಿ ಎಂದು ಹಂಬಲಿಸುವ ವ್ಯಕ್ತಿಗಳ ಡೀಪ್ ಫೇಕ್. ಶಾರುಖ್ ಖಾನಿನೊಟ್ಟಿಗೆ ಮಾತನಾಡಬೇಕಾದಲ್ಲಿ, ಆತನನ್ನು ಭೇಟಿಯಾಗಬೇಕಿಲ್ಲ. ಡೀಪ್‌ಫೇಕ್ ನಿಮ್ಮ ಮನೆಯಲ್ಲಿಯೇ, ನಿಮ್ಮ ಕಂಪ್ಯೂಟರಿನಲ್ಲಿಯೇ ನಿಮ್ಮೊಂದಿಗೆ ಕನ್ನಡದಲ್ಲಿಯೇ ಮಾತನಾಡುವ ಶಾರುಖ್ ಖಾನನನ್ನು ತಯಾರಿಸಿ ಕೊಡಬಲ್ಲುದು. ಇದು ಭ್ರಾಮಕವಲ್ಲವೇ? ಇದರಿಂದ ಒಳಿತಾದೀತೋ? ಕೆಟ್ಟದಾದೀತೋ? ಗೊತ್ತಿಲ್ಲ. ಅಷ್ಟೇ ಏಕೆ. ಈ ಡೀಪ್ ಫೇಕ್ ಅವತಾರಗಳು ಕೆಲವರಿಗೆ ವಿಚಿತ್ರವೆನ್ನಿಸಬಹುದು. ಇನ್ನು ಕೆಲವರಿಗೆ ನಿಜ ಎನ್ನಿಸಬಹುದು. ಯಾರಿಗೆ ಹೇಗನ್ನಿಸುತ್ತದೆ ಎನ್ನುವುದರ ಮೇಲೆ ಅವರ ನಡವಳಿಕೆಯನ್ನು ಅದು ಪ್ರಭಾವಿಸಬಹುದು ಎಂದು ಇಂತಹ ಡೀಪ್ ಫೇಕ್ ರಿಸರೆಕ್ಷನ್ ಬಗ್ಗೆ ಅಧ್ಯಯನ ಮಾಡಿದ ಮನೋವಿಜ್ಞಾನಿಗಳ ಅಂಬೋಣ. ಕೆಲವರಿಗೆ ಇದು ದುಃಖದಿಂದ ಸಾಂತ್ವನ ನೀಡಬಹುದು. ಇನ್ನು ಕೆಲವರಿಗೆ ಇದು ಭ್ರಮೆಯನ್ನು ಹೆಚ್ಚಿಸಬಹುದು.

ನಿತ್ಯಜೀವನದಲ್ಲಿಯೂ ಇಂತಹ ಡೀಪ್‌ಫೇಕನ್ನು ಬಳಸಬಹುದು. 2018ರಲ್ಲಿ ಅಮೆರಿಕೆಯ ಪಾರ್ಕ್‌ಲ್ಯಾಂಡ್ ಎಂಬಲ್ಲಿ ಶಾಲೆಯೊಂದರಲ್ಲಿ ಮಾನಸಿಕವಾಗಿ ಅಸ್ವಸ್ಥನಾಗಿದ್ದವನೊಬ್ಬ ಮಕ್ಕಳ ಮೇಲೆ ಗುಂಡುಗಳ ಮಳೆ ಸುರಿದಿದ್ದ. ಹಲವು ಮಕ್ಕಳು ಸಾವನ್ನಪ್ಪಿದ್ದರು. ಇಂತಹ ಸತ್ತ ಮಗುವೊಂದನ್ನು ಡೀಪ್‌ಫೇಕ್ ತಂತ್ರಜ್ಞಾನದಿಂದ ಪುನರುಜ್ಜೀವನಗೊಳಿಸಿದ ಪೊಲೀಸರು, ಬಂದೂಕುಗಳ ಜೊತೆಗೆ ಬದುಕುವುದು ಅಪಾಯಕಾರಿ ಎಂದು ಜಾಹೀರಾತನ್ನು ನೀಡಿದ್ದರು. ಎರಡು ವರ್ಷಗಳ ಹಿಂದೆ ನೆದರ್ಲೆಂಡ್ಸ್‌ನಲ್ಲಿ ಒಬ್ಬ ಯುವಕನ ಕೊಲೆ ನಡೆದಿತ್ತು. ಅಲ್ಲಿನ ಪೊಲೀಸರು ಆ ಯುವಕನನ್ನು ಡೀಪ್‌ಫೇಕ್ ತಂತ್ರಜ್ಞಾನದಿಂದ ಪುನರುಜ್ಜೀವನಗೊಳಿಸಿ, ತನ್ನ ಕೊಲೆಗಾರನ ಬಗ್ಗೆ ಮಾಹಿತಿ ಕೊಡಿ ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿಕೊಳ್ಳುವಂತೆ ಮಾಡಿದ್ದರು.

ನಮ್ಮಲ್ಲಿ ಈ ತಂತ್ರಜ್ಞಾನ ಬೇಕೇ ಎನ್ನುವ ಪ್ರಶ್ನೆಯೇ ಇಲ್ಲ. ಏಕೆಂದರೆ ಸತ್ತವರ ಭಾವಚಿತ್ರಗಳಿಗೆ ಬಣ್ಣ ಹಾಕಿಸಿ, ತಿದ್ದಿ, ತೀಡಿ, ಸುಂದರಗೊಳಿಸುವ ಅಭ್ಯಾಸ ಈಗಾಗಲೇ ಇದೆ. ಇನ್ನು ಡೀಪ್‌ಫೇಕ್ ರಿಸರೆಕ್ಷನ್ ಬಂದರೆ ಬಹುಶಃ ಅದಕ್ಕೂ ದೊಡ್ಡ ಮಾರುಕಟ್ಟೆ ಸಿದ್ಧವಾಗಬಹುದೇನೋ? ಕೆಲವೇ ವರ್ಷಗಳ ಹಿಂದೆ ಬಹಳ ದುಬಾರಿಯಾಗಿದ್ದ ಈ ತಂತಜ್ಞಾನದ ಬೆಲೆ ಈಗ ಕೈಗೆಟುಕುವುಂತಿದೆ. ನಮ್ಮಂತಹ ದೊಡ್ಡ ದೇಶದಲ್ಲಿ ಕೆಲವೇ ಶತಾಂಶ ಮಂದಿಗೆ ಈ ಹುಚ್ಚು ಹಿಡಿದರೂ, ದೊಡ್ಡ ಮಾರುಕಟ್ಟೆ ಸಿಗುವುದು ಖಂಡಿತ. ಸತ್ತವರ ನೆರಳು ಹೀಗೆ ಕಾಸು ಹುಟ್ಟಿಸುವ ಉದ್ಯಮವಾಗಬಹುದು.

ಗಿಡಮರಗಳಿಗೂ ಕ್ಯಾನ್ಸರ್ ?

ನೂರ್ ನವಾಜ್ ಎ. ಎಸ್.

ಸಾಮಾನ್ಯವಾಗಿ ಕ್ಯಾನ್ಸರ್ ಗೆಡ್ಡೆಗಳು ಉಂಟಾಗುವುದೇ ದೇಹದ ಯಾವುದೋ ಒಂದು ಭಾಗದ ಜೀವಕೋಶಗಳ ಅನಿಯಮಿತ ಅಥವಾ ಅನಿಯಂತ್ರಿತ ಗುಣೀಕೃತ ವಿಭಜನೆಯಿಂದ. ಇದು ದೇಹಕ್ಕೆ ಬೇಡವಾದ ಹೆಚ್ಚುವರಿ ಬೆಳವಣಿಗೆಯ ಒಂದು ರೂಪ. ಇದನ್ನೇ ನಾವು 'ಕ್ಯಾನ್ಸರ್' ಎನ್ನುವುದಾದರೆ, ಹೌದು ಗಿಡ-ಮರಗಳಿಗೂ ಕ್ಯಾನ್ಸರ್ ಬರುತ್ತದೆ. ಹಾಗಾದರೆ ಗಿಡ-ಮರಗಳು ಇದನ್ನು ನಿಭಾಯಿಸುವ ತಂತ್ರಗಾರಿಕೆ ಏನು? ಗಿಡ-ಮರಗಳಿಗೆ ಕಾಡುವ ಕ್ಯಾನ್ಸರ್‌ನಿಂದ ಮುಕ್ತಿ ಪಡೆಯುವ ಶಕ್ತಿಯು ಅವುಗಳಲ್ಲೇ 'ಸೆಲ್ಫ್ ಪ್ರೊಗ್ರಾಂ' ಆಗಿದೆಯೆ? ಅಥವಾ ಮನುಷ್ಯರಂತೆ ಅವುಗಳೂ ಸಾವಿಗೀಡಾಗುತ್ತವೆಯೆ?

ಸಸ್ಯಗಳಲ್ಲಿ ಕಾಣುವ ಗೆಡ್ಡೆಗಳಿಗೂ ಹಾಗೂ ಮನುಷ್ಯರನ್ನು ಕಾಡುವ ಕ್ಯಾನ್ಸರ್ ಗೆಡ್ಡೆಗಳಿಗೂ ಹೆಚ್ಚು ವ್ಯತ್ಯಾಸಗಳೇನಿಲ್ಲ. ಆದರೆ ಅದರ ಪರಿಣಾಮ ಮಾತ್ರ ವಿಭಿನ್ನವಾಗಿತ್ತವೆ. ಸಸ್ಯಗಳಲ್ಲಿ ಮತ್ತು ಪ್ರಾಣಿಗಳಲ್ಲಿ ಉಂಟಾಗುವ ಕ್ಯಾನ್ಸರ್ ಗೆಡ್ಡೆಗಳು ಜೀವಕೋಶಗಳ ವಿಭಜನೆಯ ಪ್ರತಿಫಲವೇ ಆಗಿರುತ್ತದೆ.

ಸಸ್ಯಗಳಲ್ಲಿ ಮತ್ತು ಪ್ರಾಣಿಗಳಲ್ಲಿ ಬೆಳವಣಿಗೆಯು ಶರೀರದ ಜೀವಕೋಶಗಳ ವಿಭಜನೆಯಾಗಿ ಅಂಗಾಂಶಗಳಾಗಿ ತದನಂತರ ಅಂಗಾಂಗಗಳಾಗುತ್ತವೆ. ಇದಕ್ಕೆ ಪೂರಕವಾಗಿ ಕೆಲಸ ಮಾಡುವುದು 'ಆಕ್ಸಿನ್' ಮತ್ತು 'ಸೈಟೋಕೈನಿನ್' ಎಂಬ ಎರಡು ಹಾರ್ಮೋನುಗಳು. ಇವುಗಳ ಉತ್ಪಾದನೆಯಲ್ಲಿ ಸ್ವಲ್ಪ ಏರುಪೇರಾದರೂ ಗೆಡ್ಡೆಗಳು ಬೆಳೆಯುವುದು ಕಾಯಂ. ಈ ಕೋಶ ವಿಭಜನೆಯನ್ನು ನಿಯಂತ್ರಿಸುವುದು ತಮ್ಮ ವಂಶವಾಹಿಯಲ್ಲಿರುವ ಡಿಎನ್‌ಎ ಜೀನ್(ಗುಣಾಣು)ಗಳು. ಇವಲ್ಲದೇ, 'ಈಸ್ಟ್ರೋಜೆನ್' ಹಾರ್ಮೋನಿನ ಕೆಲಸ ಕೂಡ ಇದೇ. ಈ ಎಲ್ಲಾ ಹಾರ್ಮೋನುಗಳು ಸಮತೋಲನದಲ್ಲಿ ಉತ್ಪಾದನೆಯಾದರೆ ಕ್ರಿಯೆಗಳು ಸುಗಮವಾಗಿ ನಡೆದರೆ ಆರೋಗ್ಯವಾಗಿರುತ್ತದೆ. ಆದರೆ ಕೆಲವೊಮ್ಮೆ ಇವುಗಳ ಉತ್ಪಾದನೆಯ ಪ್ರಮಾಣದ ಲಯತಪ್ಪಿದರೆ ಜೀವಕೋಶಗಳು ಅಸಮತೋಲನದಿಂದ ಕೋಶದ ಇತರೆ ಪ್ರಕ್ರಿಯೆಗಳು ಉಲ್ಬಣಗಳ್ಳುತ್ತವೆ. ಆಗ ಕೋಶಗಳು ಅನಿಯಮಿತವಾಗಿ ವಿಭಜನೆಯಾಗಲು ಪ್ರಾರಂಭಿಸುತ್ತವೆ. ಇದು ಕೆಲವೊಮ್ಮೆ ಹಠಾತ್ ರೂಪಾಂತರಗೊಂಡ ಡಿಎನ್‌ಎ(ಮ್ಯುಟೇಷನ್) ಯಿಂದಲೂ ಆಗಲು ಸಾಧ್ಯ. ಸಸ್ಯಗಳಲ್ಲಿ ಹೀಗಾಗುವುದು ಅತಿ ವಿರಳವಾದರೂ ಇದನ್ನು ಸರಿಪಡಿಸಿಕೊಳ್ಳಲು ಸಸ್ಯಗಳು ತಮ್ಮ ವರ್ಣತಂತುಗಳಲ್ಲಿ ಹೆಚ್ಚುವರಿ ಮಾದರಿಗಳು ಡಿಎನ್‌ಎಯ ಕಾರ್ಬನ್ ಕಾಪಿಗಳನ್ನು ಅಡಗಿಸಿಟ್ಟಿರುತ್ತವೆ. ಅದರಲ್ಲೆ ಕ್ಯಾನ್ಸರ್ ರೋಗದ ನ್ಯೂನತೆಯನ್ನು ಸರಿಪಡಿಸುವ ಪ್ರೊಗ್ರಾಮ್ ಕೂಡ ಅಡಗಿರುತ್ತದೆ. ಸಸ್ಯಗಳಲ್ಲಿ ಕ್ಯಾನ್ಸರ್ ಗೆಡ್ಡೆ ಉಂಟುಮಾಡುವ ಕೆಲವು ಸೂಕ್ಷ್ಮಾಣುಜೀವಾಣುಗಳನ್ನು ನೋಡುವುದಾದರೆ ಬ್ಯಾಕ್ಟೀರಿಯಾ, ಶಿಲೀಂದ್ರ ಹಾಗು ವೈರಾಣುಗಳದ್ದು ಮೇಲುಗೈ.

'ಅಗ್ರೊಬ್ಯಾಕ್ಟಿರಿಯಂ ಟುಮೆಫೇಶಿಯನ್ಸ್' ಎನ್ನುವ ಬ್ಯಾಕ್ಟಿರಿಯವು, 'ಕ್ರೌನ್ ಗಾಲ್' ಎಂಬ ಕ್ಯಾನ್ಸರನ್ನು ಉಂಟುಮಾಡುತ್ತವೆ. ಈ ಬ್ಯಾಕ್ಟೀರಿಯವು ನೈಸರ್ಗಿಕದತ್ತವಾದ ನಮಗೆ ದೊರೆತ ಒಂದು ಸ್ವಾಭಾವಿಕ ಜೆನೆಟಿಕ್ ಎಂಜಿನಿಯರ್. ಇದರ ಸಹಾಯವಿಲ್ಲದೇ ನಮ್ಮ ಫಾರ್ಮಾ ಕಂಪನಿಗಳು ಯಾವುದೇ ಔಷಧವನ್ನು ತಯಾರಿಸಲು ಅಸಾಧ್ಯವೇ. ಇದು ಮಾಡುವ ಸೋಂಕಿನಲ್ಲಿ ಒಂದು ಬ್ಯಾಕ್ಟಿರಿಯಾ ಹೊರಗಿನ ಜೀವಿಯೊಂದು ತನ್ನ ಜೀವಕೋಶದ ವಂಶವಾಹಿಯಲ್ಲಿನ ಡಿಎನ್‌ಎಯನ್ನು ಅತಿಥೇಯ (ಹೋಸ್ಟ್) ಜೀವಕೋಶಗಳೊಳಗೆ ತುರುಕಿಸುತ್ತದೆ. ಸ್ವಾಭಾವಿಕವಾಗಿ ಜೀವಕೋಶವು ವಿಭಜನೆಗೆ ಒಳಗಾದಾಗ ತನ್ನ ಮೂಲ ಡಿಎನ್‌ಎ ಪ್ರತಿಗಳನ್ನು (ರೆಪ್ಲಿಕೇಷನ್) ತಯಾರಿಸುತ್ತದೆ. ಆದರೆ, ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಸಸ್ಯದ ತಾಯಿಕೋಶವಲ್ಲದೆ ಇನ್ನೊಂದು ಪರಕೀಯ ಜೀವಿಯಿಂದ ಬಲವಂತವಾಗಿ ಪರಕೀಯ ಗುಣಾಣುಗಳು ಹೊಕ್ಕುವುದು ಅತಿ ವಿರಳ, ವಿಶೇಷ ವಿದ್ಯಮಾನ. ಇದರಿಂದ ಸಸ್ಯಗಳ ಜೀವಕೋಶಗಳ ಚಟುವಟಿಕೆಗಳನ್ನು ಹೈಜಾಕ್ ಮಾಡಿ ನಂತರ ತನ್ನದೇ ರೀತಿಯಲ್ಲಿ ಹತೋಟಿ ಮಾಡಿ ಬೆಳವಣಿಗೆ ಕುಂಠಿತಗೊಳಿಸುತ್ತದೆ. ಹೀಗೆ ಬ್ಯಾಕ್ಟೀರಿಯಾದ ಗುಣಾಣುಗಳು ತನ್ನದೇ ರೀತಿಯಲ್ಲಿ ತನಗೆ ಬೇಕಾದಂತೆ ಕೋಶವಿಭಜನೆಗೆ ಮುನ್ನುಡಿ ಬರೆಯುತ್ತದೆ. ಇಲ್ಲಿ ಒಂದು ಜೀವಿಯು ಇನ್ನೊಂದು ಜೀವಿಯನ್ನು ನಿಯಂತ್ರಣದಲ್ಲಿರಿಸಿ ಆತಿಥೇಯ ಜೀವಿಯಲ್ಲಿ ಆಶ್ರಯ ಪಡೆದು ಅದನ್ನು ಸಾಯಲು ಬಿಡದೆ ಬದುಕಲು ಬಿಡದೇ ಜೀವನ ಸಾಗಿಸುತ್ತದೆ.

'ಉಸ್ಟಿಲಾಗೋ' (ಉಸ್ಟಿಲಾಗೋ ಮೇಡಿಸ್) ಶಿಲೀಂಧ್ರ, ಇದೂ ಇದೇ ಪ್ರಕಾರದ ಕ್ಯಾನ್ಸರ್ ಗೆಡ್ಡೆಗಳನ್ನು ಉಂಟುಮಾಡುತ್ತದೆ. ಇದು ಇತಿಹಾಸದಲ್ಲಿ ನೋಡುವುದಾದರೆ ಮೆಕ್ಸಿಕೊ ದೇಶದ ಜನರ ಮುಖ್ಯ ಆಹಾರವಾಗಿದ್ದ ಜೋಳದಿಂದ ತಯಾರಾಗುವ 'ಹುಟ್ಲೊಕೊಚೆ' ಎಂಬ ಖಾದ್ಯದ ರುಚಿಯನ್ನೇ ಬದಲಿಸಿದಕ್ಕೆ ಬಹಳ ನಷ್ಟವಾಗಿತ್ತು. ಇಷ್ಟೇ ಅಲ್ಲದೇ, ಜೆಮಿನಿ ವೈರಾಣುಗಳ ಗುಂಪಿಗೆ ಸೇರುವ ಒಂದು ವೈರಸ್ 'ನಾನೇನು ಕಮ್ಮಿ ಇಲ್ಲ' ಎನ್ನುವಂತೆ ಬಹುತೇಕ ಗಿಡ-ಮರಗಳಿಗೆ ಕ್ಯಾನ್ಸರ್ ಗೆಡ್ಡೆಗಳನ್ನು ಉಂಟುಮಾಡಿದ್ದೂ ಇದೆ. ಅಷ್ಟೇ ಏಕೆ, ಬೀಡಿ, ಸೀಗರೆಟ್ ಸೇದಿದರೆ ಕ್ಯಾನ್ಸರ್ ಬರಿಸುವ ಬೆಳೆಯಾದ ತಂಬಾಕಿಗೂ ಕ್ಯಾನ್ಸರ್ ರೋಗ ಬರುತ್ತದೆಂದರೆ ನಂಬಲೇಬೇಕು.

ಮನುಷ್ಯನಿಗೆ ತಲೆದೋರುವ ಮಿದುಳಿನ ಗೆಡ್ಡೆಯೂ ಒಂದು ದೊಡ್ಡ ಸಮಸ್ಯೆಯೇ. ಅಲ್ಲದೇ ಈ ರೋಗದಿಂದ ಶೇ 95ರಷ್ಟು ಜನರು ಬದುಕುಳಿಯುವ ಸಾಧ್ಯತೆ ಕಡಿಮೆ. ಆದರೆ, ಸಸ್ಯಗಳಲ್ಲಿ ಹಾಗಾಗದಂತೆ ತಡೆಯಲು ಮತ್ತು ರೋಗವನ್ನು ಹತ್ತಿಕ್ಕಲು ಅವುಗಳ ಜೀವಕೋಶಗಳಲ್ಲಿ ತಂತ್ರಗಾರಿಕೆಯು ಅಳವಡಿಕೆಯಾಗಿದೆ. ಹಾಗಾಗಿ ಸಸ್ಯಗಳು ಇಂತಹ ಗೆಡ್ಡೆಗಳನ್ನು ಸಾಯಿಸಿ ಹೊಸದಾಗಿ ಚಿಗುರೊಡೆದು ಬದುಕಬಲ್ಲ ಸಾಮರ್ಥ್ಯವನ್ನು 'ಟೋಟಿಪೊಟೆನ್ಸಿ' ಎನ್ನುವುದು. ಸರಿಯಾಗಿ ಅರ್ಥ ಮಾಡಿಕೊಳ್ಳುವುದಾದರೆ ಸಾಮಾನ್ಯಕ್ಕಿಂತ ಹೆಚ್ಚು ಜೀವಕೋಶಗಳು ಗಿಡ-ಮರಗಳಲ್ಲೇನಾದರೂ ಉತ್ಪತ್ತಿಯಾದರೆ ಉದಾಹರಣೆಗೆ ಎಲೆಗಳಲ್ಲಿ ಅವಶ್ಯಕತೆಗಿಂತ ಹೆಚ್ಚು ಜೀವಕೋಶ ವಿಭಜನೆಯಾದರೆ ಸಸ್ಯವು ಅದನ್ನು ತಂತಾನೆ ಇತರೆ ರಚನೆಗಳಿಗೆ ಉಪಯೋಗಿಸಿಕೊಳ್ಳುತ್ತದೆ. ಇಂತಹ ಸಂಕುಚಿತ ಎಲೆಗಳು ಎಲೆಯ ಸಾಮಾನ್ಯ ರಚನೆಯನ್ನು ಮಾಡಿ ರೋಗವೇ ಇಲ್ಲದಂತೆ ಸರಿಪಡಿಸುವ ಅದ್ಭುತ ಸಾಮರ್ಥ್ಯ ಗಿಡ-ಮರಗಳಿಗಿದೆ.

ಸಸ್ಯಜೀವಕೋಶಗಳ ಹೊರಗವಚ ಕೋಶಭಿತ್ತಿ(ಸೆಲ್‌ವಾಲ್)ಯಿಂದ ಆವೃತಗೊಂಡಿರುವುದರಿಂದ ಸಸ್ಯದ ಒಂದು ಭಾಗದಲ್ಲಿ ಹೂವು ಅಥವಾ ಹಣ್ಣು ಅಥವಾ ಎಲೆ-ಕಾಂಡದಲ್ಲಿ ಕಾಣಿಸಿಕೊಂಡ ಕ್ಯಾನ್ಸರ್ ಗೆಡ್ಡೆಯು ಅಷ್ಟು ಸುಲಭವಾಗಿ ಇತರೆ ಭಾಗಗಳಿಗೆ ಪಸರಿಸುವುದು ಅಸಾಧ್ಯ. ಇದರ ಹಿಂದಿನ ತಂತ್ರಗಾರಿಕೆ ಎಂದರೆ ಸಸ್ಯ ಜೀವಕೋಶಗಳ ಮಧ್ಯದಲ್ಲಿ ಕೇವಲ ಆಹಾರದ ಕಣಗಳು ಮತ್ತು ನೀರು ಸರಬರಾಜಾಗುತ್ತದೆ. ಇದರಿಂದ ಗೆಡ್ಡೆ ಉಂಟುಮಾಡುವ ಇತರೆ ಶತ್ರುಗಳನ್ನು ಫಿಲ್ಟರ್ ಮಾಡಿ ಹೊಡೆದೋಡಿಸುತ್ತದೆ. ಏರುಪೇರಾದ ಹಾರ್ಮೋನುಗಳ ಉತ್ಪಾದನೆ ಮತ್ತು 'ಮುಟೇಷನ್'(ಜೀವಕೋಶದಲ್ಲಿನ ಸ್ವಯಂ ಬದಲಾವಣೆ) ನಂತಹ ಸಮಸ್ಯೆಗಳು ಸಸ್ಯಗಳ ಜೀವಕೋಶಗಳ ಸಾಮರ್ಥ್ಯವನ್ನು ಕುಗ್ಗಿಸುವುದು ಕ್ಯಾನ್ಸರ್‌ಗೆ ಕಾರಣ. ಆದರೆ ಕೋಶಭಿತ್ತಿ ಹಾಗೂ ಸಸ್ಯಗಳ ಇತರ ರಚನೆಗಳು ಮುಂಬರುವ ಕ್ಯಾನ್ಸರ್ ಗೆಡ್ಡೆಗಳಿಂದ ನಾಶಪಡಿಸಿ ಆರೋಗ್ಯವನ್ನು ಕಾಪಾಡಿಕೊಳ್ಳುವ 'ಸೆಲ್ಫ್ ಪ್ರೊಗ್ರಾಂ' ಹೊಂದಿವೆ. ಔಷಧೀಯ ವಿಜ್ಞಾನದ ಪ್ರಕಾರ ಮನುಷ್ಯರಲ್ಲಿ ಕ್ಯಾನ್ಸರ್‌ನಿಂದ ಸಂಪೂರ್ಣ ಗುಣಮುಖರಾಗುವ ಸಾಧ್ಯತೆ ಕೇವಲ ಶೇ 0.1 ಅಷ್ಟೇ. ಸಸ್ಯಗಳ ಈ ಅದ್ಭುತ ಸಾಮರ್ಥ್ಯ ಪ್ರಾಣಿಗಳಿಗೂ ದಕ್ಕಿರುತ್ತಿದ್ದರೆ ಕ್ಯಾನ್ಸರನ್ನು ಸುಲಭವಾಗಿ ಗುಣಪಡಿಸಬಹುದಿತ್ತಲ್ಲವೇ?

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ -ವಿಜ್ಞಾನ

ಜೀವ ಕ್ರಿಯೆಗಳು

4) ದ್ಯುತಿಸಂಶ್ಲೇಷಣೆ ಪ್ರಕ್ರಿಯೆ ನಡೆದಾಗ ಯಾವೆಲ್ಲಾ ಘಟನೆಗಳು ಜರುಗುತ್ತವೆ?

ಉತ್ತರ:– ದ್ಯುತಿಸಂಶ್ಲೇಷಣೆ ಪ್ರಕ್ರಿಯೆ ನಡೆದಾಗ ಈ ಕೆಳಗಿನ ಘಟನೆಗಳು ಜರುಗುತ್ತವೆ:–

1) ಕ್ಲೋರೋಫಿಲ್ ನಿಂದಾ ಶಕ್ತಿ ಹೀರುತ್ತದೆ

2) ಬೆಳಕಿನ ಶಕ್ತಿಯು ರಾಸಾಯನಿಕ ಶಕ್ತಿಯಾಗಿ ಪರಿವರ್ತನೆಯಾಗುವುದು ಮತ್ತು ನೀರಿನ ಅಣುಗಳು ಹೈಡ್ರೋಜನ್ ಮತ್ತು ಆಕ್ಸಿನ್ ಆಗಿ ವಿಭಜಿಸಲ್ಪಡುವುದು.

3) ಕಾರ್ಬನ್ ಡೈ ಆಕ್ಸೈಡ್ ಕಾರ್ಬೋಹೈಡ್ರೇಟ್ ಆಗಿ ಪರಿವರ್ತಿಸಲ್ಪಡುವುದು

ಈ ಹಂತಗಳು ಒಂದಾದ ನಂತರ ಒಂದರಂತೆ ತಕ್ಷಣವೇ ಜರುಗುವುದಿಲ್ಲ. ಉದಾಹರಣೆಗೆ ಮರಭೂಮಿಯ ಸಸ್ಯಗಳು ರಾತ್ರಿ ವೇಳೆಯಲ್ಲಿ ಕಾರ್ಬನ್ ಡೈ ಆಕ್ಸೈಡ್ ಅನ್ನು ತೆಗೆದುಕೊಂಡು ಮಧ್ಯಂತರ ವಸ್ತುವೊಂದನ್ನು ತಯಾರಿಸುತ್ತದೆ, ನಂತರ ಹಗಲಿನ ವೇಳೆಯಲ್ಲಿ ಕ್ಲೋರೋಫಿಲ್ ಹೀರಿಕೊಂಡ ಶಕ್ತಿಯು ಈ ವಸ್ತುವಿನ ಮೇಲೆ ವರ್ತಿಸುತ್ತದೆ.

3) ತೆರೆದ ಪತ್ರರಂಧ್ರವನ್ನು ತೋರಿಸುವ ಚಿತ್ರವನ್ನು ಬರೆದು ಕೆಳಗಿನ ಭಾಗಗಳನ್ನು ಗುರುತಿಸಿ (ಜೂನ್ 2019)

1) ಕಾವಲು ಕೋಶ 2) ಪತ್ರರಂಧ್ರ 3) ಕ್ಲೋರೋ ಪ್ಲಾಸ್ಟ್

ಉತ್ತರ:–



ಬಹು ಆಯ್ಕೆ ಪ್ರಶ್ನೆಗಳು

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ಸಣ್ಣ ಕರಳಿನಲ್ಲಿರುವ ಕಂಡುಬರುವ ಕೊಬ್ಬುಗಳು ದೊಡ್ಡದೊಡ್ಡ ದುಂಡುಕಣಗಳ ರೂಪದಲ್ಲಿದ್ದು ಕಿಣ್ವಗಳಿಗೆ ಅದರ ಮೇಲೆ ವರ್ತಿಸುವುದು ಕಷ್ಟವಾಗುತ್ತದೆ. ....ದ ಲವಣಗಳು ಅವುಗಳನ್ನು ಚಿಕ್ಕಚಿಕ್ಕ ದುಂಡುಕಣಗಳಾಗಿ ವಿಭಜಿಸಿ ಕಿಣ್ವಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತವೆ

ಎ) ಪಿತ್ತರಸ ಬಿ) ರಕ್ತ

ಸಿ) ಮೂತ್ರ ಡಿ) ಹೃದಯ

ಉತ್ತರ:– (ಎ) ಪಿತ್ತರಸ

2) ಕರಳಿನ ರಸದಲ್ಲಿರುವ ಕಿಣ್ವಗಳು ಪ್ರೋಟೀನ್ ಅನ್ನು ಏನನ್ನಾಗಿ ಪರಿವರ್ತಿಸುತ್ತವೆ?

ಎ) ಅಮಿನೋ ಆಮ್ಲ ಬಿ) ಗ್ಲಿಸರಾಲ್

ಸಿ) ಗ್ಲುಕೋಸ್ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– (ಎ) ಅಮಿನೋ ಆಮ್ಲ

3) ರಕ್ತವು ಆಹಾರವನ್ನು ಹೀರಿಕೊಳ್ಳಲು ಸಹಾಯ ಮಾಡುವ ವಿಲ್ಲೈಗಳು ಎಲ್ಲಿವೆ?

ಎ) ಜಠರ ಬಿ) ವಪೆ

ಸಿ) ಗುದದ್ವಾರ ಡಿ) ಸಣ್ಣ ಕರಳು

ಉತ್ತರ:– (ಡಿ) ಸಣ್ಣ ಕರಳು

4) ಆಕ್ಸಿಜನ್ ಬಳಕೆಯಿಂದ ನಡೆಯುವ ಪೈರುವೇಟ್ ವಿಭಜನೆಯು ಎಲ್ಲಿ ನಡೆಯುತ್ತದೆ?

ಎ) ಗುದನಾಳ ಬಿ) ಅಮಿಬಾ

ಸಿ) ಮೈಟೋಕಾಂಡ್ರಿಯಾ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– (ಸಿ) ಮೈಟೋಕಾಂಡ್ರಿಯಾ

5) ಮಾನವನ ಹೃದಯದಲ್ಲಿ ಎಲ್ಲಿ ಅನಿಲಗಳ ವಿನಿಮಯ ನಡೆಯುತ್ತದೆ?

ಎ) ಶ್ವಾಸ ನಾಳ ಬಿ) ಮೃದ್ವಸ್ಥಿಯ ಉಂಗುರ

ಸಿ) ಮೂಗಿನ ದ್ವಾರ ಡಿ) ಗಾಳಿ ಗೂಡು

ಉತ್ತರ:– (ಡಿ) ಗಾಳಿಗೂಡು

6) ಶ್ವಾಸನಾಳದ ಮೇಲ್ಭಾಗವು .... ಎಂಬ ಸಣ್ಣ ಕೂದಲಿನಂತಹ ರಚನೆಗಳನ್ನು ಹೊಂದಿದೆ, ಇವು ಉಚ್ಛ್ವಾಸದ ಗಾಳಿಯಲ್ಲಿರಬಹುದಾದ ಸೂಕ್ಷ್ಮ ಜೀವಿಗಳು, ಧೂಳು, ಮತ್ತು ಇತರೇ ಹಾನಿಕಾರಕ ಕಣಗಳನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ. ಧೂಮ್ರಪಾನವು ಈ ಕೂದಲನ್ನು ನಾಶ ಮಾಡುತ್ತದೆ

ಎ) ಸಿಲಿಯಾ(Cilia) ಬಿ) ನ್ಯೂಕ್ಲಿಯಸ್

ಸಿ) ಜಾಕ್‌ರಿ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– (ಎ) ಸಿಲಿಯಾ (Cilia)

7) ಮಾನವನ ಜಠರವು ....ಉತ್ಪಾದಿಸುತ್ತದೆ. ಹಾಗೂ ಅದು ಜೀರ್ಣ ಕ್ರಿಯೆಯಲ್ಲಿ ಸಹಾಯ ಮಾಡುತ್ತದೆ.

ಎ) ಆಮ್ಲಜನಕ ಬಿ) ಸಾರಜನಕ

ಸಿ) ಹೈಡ್ರೋಕ್ಲೋರಿಕ್ ಆಮ್ಲ ಡಿ) ಪೊಟಾಷಿಯಂ ಸಲ್ಫೇಟ್

ಉತ್ತರ:– (ಸಿ) ಹೈಡ್ರೋಕ್ಲೋರಿಕ್ ಆಮ್ಲ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಸಣ್ಣ ಕರಳಿನ ಬತ್ತಿಯಲ್ಲಿರುವ ಗ್ರಂಥಿಗಳು ರಸವನ್ನು ಸ್ರವಿಸುತಿದ್ದು ಅವು ಸ್ರವಿಸುವ ಕಿಣ್ವಗಳು ಈ ಕೆಳಗಿನವುಗಳನ್ನು ಏನನ್ನಾಗಿ ಪರಿವರ್ತಿಸುತ್ತವೆ?

ಅ) ಪ್ರೋಟೀನ್ (ಬ) ಸಂಕೀರ್ಣ ಕಾರ್ಬೋಹೈಡ್ರೇಟ್ (ಕ) ಕೊಬ್ಬು

ಉತ್ತರ:– ಸಣ್ಣ ಕರಳಿನ ಬತ್ತಿಯಲ್ಲಿರುವ ಗ್ರಂಥಿಗಳು ರಸವನ್ನು ಸ್ರವಿಸುತಿದ್ದು ಅವು ಸ್ರವಿಸುವ ಕಿಣ್ವಗಳು

ಅ) ಪ್ರೋಟೀನ್‌ಗಳನ್ನು ಅಮಿನೋ ಆಮ್ಲಗಳಾಗಿ ಪರಿವರ್ತಿಸುತ್ತದೆ

ಬಿ) ಸಂಕೀರ್ಣ ಕಾರ್ಬೋಹೈಡ್ರೇಟ್‌ಗಳನ್ನು ಗ್ಲುಕೋಸ್‌ಗಳಾಗಿ ಪರಿವರ್ತಿಸುತ್ತವೆ

ಕ) ಕೊಬ್ಬನ್ನು ಕೊಬ್ಬಿನ ಆಮ್ಲ ಮತ್ತು ಗ್ಲಿಸರಾಲ್ ಆಗಿ ಪರಿವರ್ತಿಸುತ್ತವೆ.

2) ಯಾವುದಕ್ಕೆ ವಾಯುವಿಕೆ ಉಸಿರಾಟ ಎನ್ನುವರು?

ಉತ್ತರ:– ಮೈಟ್ರೋಕಾಂಡ್ರಿಯಾದಲ್ಲಿ ಆಕ್ಸಿಜನ್ ಬಳಸಿ ಪೈರುವೇಟ್ ಅಣುವನ್ನು ವಿಭಜಿಸಿ ಮೂರು ಕಾರ್ಬನ್ ಡೈ ಆಕ್ಸೈಡ್ ಅಣುವನ್ನು ಉಂಟು ಮಾಡಲಾಗುತ್ತದೆ ಅಲ್ಲದೇ ನೀರನ್ನು ಬಿಡುಗಡೆ ಮಾಡಲಾಗುತ್ತದೆ. ಈ ಪ್ರಕ್ರಿಯೆ ಗಾಳಿಯ(ಆಕ್ಸಿಜನ್) ಉಪಸ್ಥಿತಿಯಲ್ಲಿ ನಡೆಯುವುದರಿಂದ ಇದನ್ನು ವಾಯುವಿಕೆ ಉಸಿರಾಟ

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC BIOLOGY

MOLECULAR BASIS OF INHERITANCE

36. The gene I that controls the ABO blood grouping in human beings has three alleles- I^A, I^B and i.

(a) How many different genotypes are likely to be present in the human population?

(b) Also, how many phenotypes are likely to be present in the human population?

Ans:- (a) Genotypes - Six

($I^A I^A$, I^A i, I^B i, $I^B I^B$, $I^A I^B$ ii)]

(b) Phenotypes – Four (A, B, AB and O).

37. When red flowered *Antirrhinum* plant was crossed with a flowered *Antirrhinum* plant, the F_1 offspring had pink flowers. Mention

(a) the genotype of F_1 plants and

(b) the reason why it did not bear the parental red or white flower colour.

Ans:- (a) **Genotype of F_1 Offspring.**

Rr (or) RW (Pink Flower).

(b) The two alleles of red flower and white flower traits show incomplete dominance resulting in the appearance of pink flower.

38. If a true breeding homozygous Pea plant with green pods and axial flowers as dominant characters is crossed with a recessive homozygous Pea plant with yellow pods and terminal flowers, what would be the

(a) Genotype of the two parents

(b) Phenotype and genotype of F_1 offspring

(c) Phenotypic distribution ratio in F_2 population.

Ans:- Symbol for (i) Green Pod-G

(ii) Yellow pod-g.

Symbol for (i) Axial Flower-A

(ii) Terminal Flower-a.

(a) **Genotype of Parents GGAA, ggaa**

(b) **Phenotype of F_1 Offspring,** Green pod and axial pod

Genotype of F_1 Offspring. Gg Aa.

(c) **Phenotypic Ratio in F_2 Generation.**

9 (green axial) : 3 (green terminal) :

3 (yellow axial) : 1 (yellow terminal).



39. Which Mendel's law of inheritance is universally acceptable and without any exception. State the law.

Ans:- Law of segregation - According to law of segregation, the two factors or alleles of a character present in an individual do not get mixed up but remain distinct and separate from each other at the time of gamete formation so that a gamete carries a single factor and is always pure for it.

Some questions for extra information:-

1. Write a note on blood group testing.

Ans:- The different blood groups in man can be identified by a simple test called as agglutinization test.

The antiserum A and B are raised against the corresponding antigens. A drop of each of antisera A and B are taken on separate clean slides. The blood of man to be identified is taken out by pricking the fingertip with sterile needle. A drop of blood is placed by the side of each of these antisera, then the blood and serum on both the slides are mixed with separate needles.

If the blood group shows coagulation with antiserum A, The blood group is identified as A.

If clumping is seen with antiserum B, the blood group is B.

If clumping is seen in both the antisera, the blood group identified as AB.

If there is no clumping with either A or B antisera the blood group is O.

2. Write a note on Red Green colour blindness.

Ans:- Red green colour blindness is an example of sex linked genetic disease in humans.

Usually men suffer more from this disease than women because of their hemizygous nature. The X– linked recessive gene for colour blindness follows criss – cross inheritance or skip generation pattern during this transmission from one generation to the next. This is of two types, they are – Monochromatism and Dichromatism.

A person with Monochromatism is totally colourblind even in the bright light. Such individuals are called monochromats.

A person with Dichromatism is partially colourblind. Such individuals are called Dichromats. There are three defects in these individuals. They are – Protanopia, Deuteronopia, Tritanopia

(i) Protanopia – an individual cannot recognise red and green colour.

(ii) Deuteronopia – an individual fails to distinguish red- green colours in the visible light. This disease is also called Daltonism.

(iii) Tritanopia - an individual cannot distinguish between green and blue colours.

3. What is the importance of Mendelism?

Ans:- The importance of Mendelism are –

(1) Improvement of plants – Hybridisation is used for obtaining improved varieties of plants. This process results in combinations of desirable characters of two or more species of varieties. In other words, desirable characters of one species are transferred to the other. Laws of inheritance have helped the plant breeders in this regard.

(Contd...)

‘ರೇವಣ್ಣ ಪ್ರಕರಣದ ಹಿಂದೆ ದೊಡ್ಡ ತಿಮಿಂಗಿಲ’

ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ.ಕೆ ಆರೋಪ • ಯಾರನ್ನೂ ವಹಿಸಿಕೊಳ್ಳುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಎಚ್‌.ಡಿ. ಕುಮಾರಸ್ವಾಮಿ

ಬೆಂಗಳೂರು: ಮಾಜಿ ಸಚಿವ ಎಚ್‌.ಡಿ.ರೇವಣ್ಣ ಅವರ ಬಂಧನ ರಾಜಕೀಯ ಪ್ರೇರಿತವಾಗಿದ್ದು, ಪ್ರಕರಣದ ಹಿಂದೆ ದೊಡ್ಡ ತಿಮಿಂಗಿಲವೇ ಇದೆ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ ಆರೋಪಿಸಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ಆಡಿಯೊ ಮೂಲಕ ಸಿಕ್ಕಿಬಿದ್ದ ದೊಡ್ಡ ತಿಮಿಂಗಿಲವನ್ನು ಬಿಟ್ಟು ದೇವರಾಜೇಗೌಡ ಅವರನ್ನು ಬಂಧಿಸಿದ್ದಾರೆ. ಒಂದು ತಿಂಗಳಿನಿಂದ ಎಲ್ಲಾ ಬೆಳವಣಿಗೆ ಆಯಿತು ಎನ್ನುವುದು ಗೊತ್ತಿದೆ ಎಂದರು.

‘ದೇವೇಗೌಡರ ಕುಟುಂಬಕ್ಕೆ ಕಳಂಕ ತರಲು ಈ ರೀತಿ ಮಾಡಿದ್ದಾರೆ. ರೇವಣ್ಣ ಕುಟುಂಬ ಮುಗಿಸಲು ನಾನು ಸಂಚು ಮಾಡಿದ್ದೇನೆ ಎಂಬಂತೆ ಅಪಪ್ರಚಾರ ಮಾಡುತ್ತಿದ್ದಾರೆ. ನಾನು ಎಂದಿಗೂ ನ್ಯಾಯ ಹಾಗೂ ನೊಂದ ಮಹಿಳೆಯರ ಪರ ಇದ್ದೇನೆ’ ಎಂದು ಹೇಳಿದರು.

‘ಪ್ರಕರಣದಲ್ಲಿ ಯಾರನ್ನೂ ವಹಿಸಿಕೊಳ್ಳುವ ಪ್ರಶ್ನೆ ಇಲ್ಲ. ವಿಡಿಯೊದಲ್ಲಿ ಇರುವ ಮಹಿಳೆಯರ ಕುಟುಂಬಗಳ ಬಗ್ಗೆ ಸರ್ಕಾರಕ್ಕೆ ಅನುಕಂಪ ಇಲ್ಲ. ಮಹಿಳೆಯರಿಗೆ ನ್ಯಾಯಸಿಗಬೇಕು. ಒಬ್ಬರು ಹೆಣ್ಣುಮಗಳಿಗೆ ಹೆದರಿಸಿ ಅವರಿಂದ ದೂರು ಪಡೆಯಲು ಪ್ರಯತ್ನಿಸಿದ್ದಾರೆ. ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ಆ ಮಹಿಳೆ ದೂರು ಕೊಟ್ಟಿದ್ದಾರೆ. ಮಫ್ತಿಯಲ್ಲಿ ಅವರ ಮನೆ ಬಳಿ ಹೋಗಿ ಹೆದರಿಸಿದವರು ಯಾರು ಎನ್ನುವುದಕ್ಕೆ ಗೃಹ ಸಚಿವರು ಉತ್ತರಿಸಲಿ. ಸರ್ಕಾರಕ್ಕೆ ಬದ್ಧತೆ ಇದ್ದರೆ ಸೂಕ್ತ ತನಿಖೆ ನಡೆಸಬೇಕು. ರೇವಣ್ಣ ಸುತ್ತ ತನಿಖೆ ಗಿರಕಿ ಆಗುತ್ತಿದೆ’ ಎಂದರು.

‘ಬಿಜೆಪಿ ಮಾಜಿ ಶಾಸಕರೊಬ್ಬರ ಎಡಬಲದಲ್ಲಿ ಇದ್ದ ಇಬ್ಬರನ್ನು ಹಿಡಿಯಲಾಗಿದೆ. ಇನ್ನೊಂದು ವಾರದಲ್ಲಿ ಮುಖ್ಯವಾದವರನ್ನು ಹಿಡಿಯಲಾಗುತ್ತದೆ ಎಂದು ಕಾಂಗ್ರೆಸ್ ಶಾಸಕರು ಹೇಳಿದ್ದಾರೆ. ಎಸ್‌ಐಟಿ ತನಿಖೆಯ ಎಲ್ಲಾ ಅಂಶಗಳು ಇವರಿಗೆ ಹೇಗೆ ಸೋರಿಕೆ ಆಗುತ್ತಿವೆ?. ಪ್ರಜ್ವಲ್ ರೇವಣ್ಣ ಅವರ ವಿಡಿಯೊಗಳು ಹೊರಬರುತ್ತವೆ ಎಂದು ಸಮಯದ ಸಮೇತ ಪೋಸ್ಟ್ ಹಾಕಿದ್ದ ನವೀನ್ ಗೌಡ ಈಗ ಜೆಡಿಎಸ್ ಶಾಸಕರಿಗೆ ಪೆನ್‌ಡ್ರೈವ್ ಕೊಟ್ಟಿದ್ದೇನೆ ಎಂದು ಹೇಳಿದ್ದಾನೆ. ಇಂತಹ ವಿಚಾರಗಳು ಎಸ್‌ಐಟಿ ಅಧಿಕಾರಿಗಳಿಗೆ ಗೊತ್ತಿಲ್ಲವೇ ಎಂದು ಪ್ರಶ್ನಿಸಿದ ಅವರು ಎಸ್‌ಐಟಿ ಅಧಿಕಾರಿಗಳು ನಿಷ್ಪಕ್ಷಪಾತವಾಗಿ ತನಿಖೆ ನಡೆಸಬೇಕು’ ಎಂದು ಒತ್ತಾಯಿಸಿದರು.

‘ಯಾವ ತಿಮಿಂಗಿಲವಾದರೂ ಹಿಡಿಯಲಿ, ಅವರೇ ನುಂಗಲಿ’

ಡಿ.ಕೆ. ಶಿವಕುಮಾರ್

‘ಪೆನ್‌ ಡ್ರೈವ್ ಪ್ರಕರಣದಲ್ಲಿ ಕುಮಾರಸ್ವಾಮಿ ಯಾವ ತಿಮಿಂಗಿಲವನ್ನಾದರೂ ಹಿಡಿಯಲಿ. ಹಿಡಿದು, ಬಿಡುವ ಅವರೇ ನುಂಗಿಕೊಳ್ಳಲಿ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ಪೆನ್‌ ಡ್ರೈವ್ ಪ್ರಕರಣದ ಹಿಂದೆ ದೊಡ್ಡ ತಿಮಿಂಗಿಲವಿದೆ’ ಎಂಬ ಎಚ್‌.ಡಿ.ಕೆ ಹೇಳಿಕೆ ಕುರಿತು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ಅವರಿಗೆ ಯಾರನ್ನು ಹಿಡಿದು ಒಳಗೆ ಹಾಕಬೇಕು ಅನ್ನಿಸುತ್ತದೋ ಅವರನ್ನು ಹಾಕಿಸಲಿ. ನಾನು ನಿರ್ದೇಶಕನೂ ಅಲ್ಲ, ನಿರ್ಮಾಪಕನೂ ಅಲ್ಲ. ನಾನು ಕೇವಲ ಪ್ರದರ್ಶಕ ಅಷ್ಟೇ’ ಎಂದರು.

ಬೆಲೆ ತೆರಲು ಸಿದ್ಧ: ಶಾಸಕರು, ಸಚಿವರಿಂದ ಮಾತನಾಡಿಸುತ್ತಿರುವವರು ಯಾರು ಎಂಬ ಪ್ರಶ್ನೆಗೆ, ‘ಬೇರೆಯವರಿಂದ ಮಾತನಾಡಿಸುವ, ಪ್ರತಿಭಟನೆ ಮಾಡಿಸುವ, ಬೇರೆಯವರ ಮೇಲೆ ಅನಗತ್ಯ ಆರೋಪ ಮಾಡುವ ಅಗತ್ಯ ನನಗಿಲ್ಲ’ ಎಂದು ಹೇಳಿದರು.

‘ರಾಜಕೀಯ ಪಕ್ಷದ ಅಧ್ಯಕ್ಷನಾಗಿ ಚುನಾವಣಾ ಪ್ರಚಾರದಲ್ಲಿ ನಿರತನಾಗಿದ್ದೇನೆ. ಈ ಪ್ರಕರಣದಲ್ಲಿ ಸಣ್ಣ ಹಸ್ತಕ್ಷೇಪವಿದ್ದರೂ ಬೆಲೆ ತೆರಲು ನಾನು ಸಿದ್ಧ, ಈಗ ಆ ವಿಚಾರ ಮಾತನಾಡುವುದಿಲ್ಲ. ಸಮಯ ಎಲ್ಲದಕ್ಕೂ ಉತ್ತರ ನೀಡಲಿದೆ’ ಎಂದರು.

ರೇವಣ್ಣ ನೋಯಿಸಿ ಬೇಸರವಾಗುತ್ತದೆ: ದೇವೇಗೌಡರ ಕುಟುಂಬಕ್ಕೆ ಕಳಂಕ ತರಲು ರೇವಣ್ಣ ಅವರನ್ನು ಬಂಧಿಸಲಾಗಿತ್ತು ಎಂಬ ಆರೋಪದ ಬಗ್ಗೆ ಕೇಳಿದಾಗ, ‘ರೇವಣ್ಣ ಅವರ ಪರಿಸ್ಥಿತಿ ನೋಡಿ ನನಗೂ ಬೇಸರವಾಗುತ್ತಿದೆ. ಅವರದು ದೊಡ್ಡ ಕುಟುಂಬ, ಈ ರೀತಿ ಆಗಬಾರದು ಎಂದು ಬಯಸುತ್ತೇನೆ. ಅವರು ಏನಾದರೂ ಬಯಸಲಿ. ನಾನು ಮಾತ್ರ ಕೆಟ್ಟದ್ದು ಬಯಸಲ್ಲ’ ಎಂದರು.

‘ನಾನು ಪ್ರಕೃತಿ ನಿಯಮ, ನ್ಯಾಯದ ಮೇಲೆ ನಂಬಿಕೆ ಇಟ್ಟವನು. ನಾನು ರಾಜಕೀಯ ಪದ್ಧತಿಗೆ ಗುರಿಯಾಗಿ ನೋವು ಅನುಭವಿಸಿದವನು. ಆಗ ಎಷ್ಟು ಧೈರ್ಯವಾಗಿ, ಆತ್ಮವಿಶ್ವಾಸದಿಂದ ಇದ್ದೆ ಎಂಬುದು ನನಗಷ್ಟೇ ಗೊತ್ತಿದೆ. ಬೇರೆಯವರಿಗೆ ಕೆಟ್ಟದ್ದು ಬಯಸಲ್ಲ, ಬ್ರದರ್ ಕುಮಾರಣ್ಣನಿಗೆ ವಿಧಾನಸಭೆಯಲ್ಲೇ ಉತ್ತರ ನೀಡುತ್ತೇನೆ’ ಎಂದರು.

‘ಎಚ್‌ಡಿಕೆ ಬಳಿ ದಾಖಲೆ ಇದ್ದರೆ ನೀಡಲಿ’

ಸತೀಶ ಜಾರಕಿಹೊಳಿ

ಬೆಂಗಳೂರು: ‘ಸಂಸದ ಪ್ರಜ್ವಲ್ ರೇವಣ್ಣಗೆ ಸಂಬಂಧಿಸಿದ ಪೆನ್‌ಡ್ರೈವ್ ಪ್ರಕರಣದಲ್ಲಿ ಯಾರದ್ದಾದರೂ ಕೈವಾಡ ಕುರಿತಂತೆ ಎಚ್‌.ಡಿ.ಕುಮಾರಸ್ವಾಮಿ ಅವರ ಬಳಿ ಸಾಕ್ಷ್ಯ ಇದ್ದರೆ ಮುಖ್ಯಮಂತ್ರಿಯವರಿಗೆ ನೀಡಲಿ’ ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

‘ನನ್ನ ಬಳಿಯೂ ಪೆನ್‌ಡ್ರೈವ್ ಸಾಕ್ಷ್ಯವಿದೆ, ತನಿಖೆ ಮಾಡಿಸುತ್ತಾರಾ’ ಎಂಬ ಕುಮಾರಸ್ವಾಮಿ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಅವರು, ‘ದಾಖಲೆ ನೀಡಬೇಕು, ಮಾತನಾಡುವುದು ಕರೆಯಲ್ಲಿ ಮುಚ್ಚಿಟ್ಟು ಏನೋ ವ್ಯವಹಾರ ಮಾಡಿದರು ಎನ್ನುವ ಗಾದೆ ಮಾತಿನಂತಾಗುತ್ತದೆ’ ಎಂದರು.

‘ಪೆನ್ ಡ್ರೈವ್ ಪ್ರಕರಣದ ಕುರಿತು ನಿತ್ಯವೂ ಮಾತನಾಡಲು ಆಗುವುದಿಲ್ಲ. ಸಂತ್ರಸ್ತ ಮಹಿಳೆಯರು ನೀಡಿದ ದೂರುಗಳನ್ನು ಆಧರಿಸಿ ವಿಶೇಷ ತನಿಖಾ ತಂಡ (ಎಸ್‌ಐಟಿ) ತನಿಖೆ ನಡೆಸುತ್ತಿದೆ. ಎಲ್ಲ ಪ್ರಕರಣಗಳನ್ನೂ ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂಬುದು ಸರಿಯಲ್ಲ ಎಂದರು.

ಶಾಸಕ ರೇವಣ್ಣ ಬಿಡುಗಡೆ, ಆರತಿ ಬೆಳಗಿ ಸ್ವಾಗತ

ಪ್ರಜಾವಾಣಿ ವಾರ್ತೆ

ಎಚ್‌.ಡಿ.ರೇವಣ್ಣ

ಬೆಂಗಳೂರು: ಮಹಿಳೆ ಅಪಹರಣ ಪ್ರಕರಣದ ಆರೋಪಿಯಾಗಿ ನ್ಯಾಯಾಂಗ ಬಂಧನದಲ್ಲಿದ್ದ ಹೊಳೆನರಸೀಪುರ ಕ್ಷೇತ್ರದ ಜೆಡಿಎಸ್ ಶಾಸಕ ಎಚ್‌.ಡಿ.ರೇವಣ್ಣ ಅವರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ಮಂಗಳವಾರ ಬಿಡುಗಡೆಗೊಂಡಿದ್ದು, ಅವರು ಪದ್ಮನಾಭನಗರದ ಎಚ್‌.ಡಿ.ದೇವೇಗೌಡರ ನಿವಾಸಕ್ಕೆ ತೆರಳಿದಾಗ ಕುಟುಂಬಸ್ಥರು ಆರತಿ ಬೆಳಗಿ ಸ್ವಾಗತಿಸಿದರು.

ದೇವೇಗೌಡರ ನಿವಾಸದ ಬಳಿ ಅಪಾರ ಅಭಿಮಾನಿಗಳು ಜಮಾಯಿಸಿದ್ದರು. ರೇವಣ್ಣ ಅವರ ಕಾರಿನಿಂದ ಇಳಿಯುತ್ತಿದ್ದಂತೆಯೇ ಘೋಷಣೆ ಕೂಗಿ ಸಂಭ್ರಮಿಸಿದರು. ಇದೇ ವೇಳೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು.

ರೇವಣ್ಣಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಸೋಮವಾರ ಷರತ್ತು ಬದ್ಧ ಜಾಮೀನು ಮಂಜೂರು ಮಾಡಿತ್ತು. ₹5 ಲಕ್ಷ ಮೊತ್ತದ ವೈಯಕ್ತಿಕ ಬಾಂಡ್ ಹಾಗೂ ಇಷ್ಟೇ ಮೊತ್ತಕ್ಕೆ ಇಬ್ಬರ ಭದ್ರತೆ, ಪಾಸ್‌ಪೋರ್ಟ್ ಅನ್ನು ನ್ಯಾಯಾಲಯಕ್ಕೆ ಒಪ್ಪಿಸುವುದು ಸೇರಿದಂತೆ ವಿವಿಧ ಷರತ್ತುಗಳನ್ನು ಪೂರ್ಣಗೊಳಿಸಿದ ಬಳಿಕ ಮಧ್ಯಾಹ್ನದ ವೇಳೆಗೆ ಕಾರಾಗೃಹದಿಂದ ಬಿಡುಗಡೆಯಾದರು.

ಕಾರಾಗೃಹದ ಎದುರು ಅಭಿಮಾನಿಗಳು ಜಮಾಯಿಸಿದ್ದರು. ಜೈಲಿನಿಂದ ಹೊರ ಬರುತ್ತಿದ್ದಂತೆಯೇ ಅಭಿಮಾನಿಗಳು ಹಾಗೂ ಕಾರ್ಯಕರ್ತರು ಸಂಭ್ರಮಿಸಿದರು. ಇದೇ ವೇಳೆ ರೇವಣ್ಣ ಅವರು ಗಳಗಳನೆ ಕಣ್ಣೀರು ಹಾಕಿದರು.

ಲಘು ಲಾಠಿ ಪ್ರಹಾರ: ಕಾರಾಗೃಹದ ಬಳಿ ಕಾರ್ಯಕರ್ತರನ್ನು ಚದುರಿಸಲು ಪೊಲೀಸರು ಲಘು ಲಾಠಿಪ್ರಹಾರ ನಡೆಸಿದರು. ಕಿಚ್ಚಿಗೆದ್ದ ಕಾರ್ಯಕರ್ತರು, ಪೊಲೀಸರ ವಿರುದ್ಧ ಆಕ್ರೋಶ ಹೊರಹಾಕಿದರು.

‘ಕಾನೂನಿನ ಮೇಲೆ ಅಪಾರ ಗೌರವವಿದೆ. ನ್ಯಾಯಾಲಯದ ಆದೇಶ ಪಾಲಿಸುತ್ತೇನೆ. ನನಗೆ ದೇವರ ಮೇಲೆ ನಂಬಿಕೆ ಇದೆ. ಆರೋಪದಿಂದ ಮುಕ್ತನಾಗುತ್ತೇನೆ’ ಎಂದು ಎಚ್‌.ಡಿ.ರೇವಣ್ಣ ಪ್ರತಿಕ್ರಿಯಿಸಿದರು. ರೇವಣ್ಣ ಸಂಜೆ ನಗರದ ಕೆಲವು ದೇವಸ್ಥಾನಗಳಿಗೆ ತೆರಳಿ ಪೂಜೆ ಸಲ್ಲಿಸಿದರು.

ತುರ್ತು ವಿಚಾರಣೆಗೆ ನಕಾರ

ಬೆಂಗಳೂರು: ‘ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಪ್ರಕರಣವನ್ನು ಸ್ವತಂತ್ರ ತನಿಖಾ ಸಂಸ್ಥೆಯಿಂದ ತನಿಖೆ ನಡೆಸಲು ನಿರ್ದೇಶಿಸಬೇಕು’ ಎಂದು ಕೋರಿದ್ದ ಅರ್ಜಿಯ ತುರ್ತು ವಿಚಾರಣೆಗೆ ಹೈಕೋರ್ಟ್ ನಿರಾಕರಿಸಿದೆ.

ಈ ಸಂಬಂಧ ‘ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ’ (ಕೆಆರ್‌ಎಸ್‌ಪಿ) ಉಪಾಧ್ಯಕ್ಷ ಎಸ್‌.ಎಚ್‌.ಲಿಂಗೇಗೌಡ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ರಜಾಕಾಲದ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಜ್ಯೋತಿ ಮೂಲಿಮನಿ ಮಂಗಳವಾರ ವಿಚಾರಣೆ ನಡೆಸಿದರು.

ಅರ್ಜಿದಾರರ ಪರ ವಕೀಲ ಜಿ.ಆರ್‌.ಮೋಹನ್, ‘ಹಲವು ಮಹಿಳೆಯರನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ. ಸಾಕ್ಷ್ಯ ನಾಶ ಮಾಡಲಾಗುತ್ತಿದೆ. ಇದನ್ನು ಗಂಭೀರವಾಗಿ ಪರಿಗಣಿಸಿ ಸ್ವತಂತ್ರ ತನಿಖಾ ಸಂಸ್ಥೆಯಿಂದ ತನಿಖೆ ನಡೆಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಮನವಿ ಮಾಡಿದರು. ಆದರೆ, ಇದಕ್ಕೆ ನ್ಯಾಯಪೀಠ, ‘ತುರ್ತು ವಿಚಾರಣೆಯ ಅವಶ್ಯಕತೆ ಇಲ್ಲ’ ಎಂದು ಪ್ರತಿಕ್ರಿಯಿಸಿ ಮುಂದೂಡಿತು.

ಏನಿದು ಅರ್ಜಿ?: ಪ್ರಕರಣ ಸಂಬಂಧ ಹೊಳೆನರಸೀಪುರ ಪೊಲೀಸ್ ಠಾಣೆಯಲ್ಲಿ ಕೆಆರ್‌ಎಸ್ ದೂರು ದಾಖಲಿಸಿತ್ತು. ಹೊಳೆನರಸೀಪುರ ಪೊಲೀಸರು, ‘ಈಗಾಗಲೇ ದೂರು ದಾಖಲಾಗಿದ್ದು, ಮತ್ತೊಂದು ದಾಖಲಿಸಿಕೊಳ್ಳುವುದಿಲ್ಲ’ ಎಂಬ ಹಿಂಬರಹ ನೀಡಿದ್ದರು. ‘ಈ ಹಿಂಬರಹ ರದ್ದುಪಡಿಸಿ ದೂರು ದಾಖಲಿಸಲು ಪೊಲೀಸರಿಗೆ ನಿರ್ದೇಶಿಸಬೇಕು’ ಎಂದು ಕೋರಿ ಕೆಆರ್‌ಎಸ್‌ಪಿ ಈ ಅರ್ಜಿ ಸಲ್ಲಿಸಿತ್ತು.

ಸಫಾರಿ... ಮೈಸೂರು ಜಿಲ್ಲೆಯ ನಾಗರಹೊಳೆ ಅರಣ್ಯ ಪ್ರದೇಶದಲ್ಲಿ ವನ್ಯಜೀವಿಗಳಿಗೆ ನೀರು, ಆಹಾರದ ಲಭ್ಯತೆ ಕುರಿತು ಪರಿಶೀಲನೆಗೆ ತೆರಳಿದ್ದ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರಿಗೆ ಕಬಿನಿ ಹಿನ್ನೀರಿನ ಸಫಾರಿ ಮಾರ್ಗದಲ್ಲಿ ಹುಲಿ ಕಾಣಿಸಿಕೊಂಡಿತು

ಪೆನ್‌ಡ್ರೈವ್ ಹಂಚಿಕೆ ಪ್ರಕರಣ: ಎಸ್‌ಐಟಿ ತಂಡದಿಂದ ದಾಳಿ

ಪ್ರೀತಂ ಆಪ್ತರ ಹೋಟೆಲ್‌ನಲ್ಲಿ ಶೋಧ

ಪ್ರಜಾವಾಣಿ ವಾರ್ತೆ

ಹಾಸನ: ಪೆನ್‌ಡ್ರೈವ್ ಹಂಚಿಕೆ ಪ್ರಕರಣದ ಹಿನ್ನೆಲೆಯಲ್ಲಿ ಮಂಗಳವಾರ ನಗರಕ್ಕೆ ಬಂದ ಎಸ್‌ಐಟಿ ಅಧಿಕಾರಿಗಳು ತನಿಖೆ ಚುರುಕುಗೊಳಿಸಿದ್ದಾರೆ. ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ ಆಪ್ತರ ನಿವಾಸ, ಹೋಟೆಲ್ ಹಾಗೂ ಬಾರ್‌ಗಳಲ್ಲಿ ಪರಿಶೀಲನೆ ನಡೆಸಿದ್ದಾರೆ.

ಬೆಂಗಳೂರಿನಿಂದ ಎರಡು ವಾಹನಗಳಲ್ಲಿ ಬಂದಿದ್ದ ಎಸ್‌ಐಟಿ ಅಧಿಕಾರಿಗಳು, ಪ್ರೀತಂಗೌಡ ಆಪ್ತ ಕಿರಣ್ ಅವರ ಹೋಟೆಲ್ ಶ್ರೀಕೃಷ್ಣದಲ್ಲಿ ಪರಿಶೀಲನೆ ನಡೆಸಿದ್ದಾರೆ. ಪ್ರಕರಣದ ಇನ್ನೊಬ್ಬ ಆರೋಪಿ ಶರತ್ ಒಡೆತನದ ಕ್ವಾಲಿಟಿ ಬಾರ್ ಮೇಲೂ ದಾಳಿ ನಡೆಸಿದ್ದಾರೆ. ಅಲ್ಲದೆ ಪುನೀತ್ ನಿವಾಸದಲ್ಲಿಯೂ ಪರಿಶೀಲನೆ ನಡೆಸಿದರು.

ಇದೇ ವೇಳೆ, ನಗರದ ರವೀಂದ್ರ ನಗರದಲ್ಲಿರುವ ವಕೀಲ ಜಿ. ದೇವರಾಜೇಗೌಡ ಅವರ ನಿವಾಸದಲ್ಲೂ ಎಸ್‌ಐಟಿ ಅಧಿಕಾರಿಗಳು ಪರಿಶೀಲನೆ ನಡೆಸಿದರು.

ದೇವರಾಜೇಗೌಡ ಪೊಲೀಸ್ ವಶಕ್ಕೆ: ಮಹಿಳೆಯ ಮೇಲಿನ ಲೈಂಗಿಕ ದೌರ್ಜನ್ಯ ಹಾಗೂ ಜಾತಿನಿಂದನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತರಾಗಿರುವ ವಕೀಲ, ಬಿಜೆಪಿ ಮುಖಂಡ ಜಿ. ದೇವರಾಜೇಗೌಡ ಅವರನ್ನು ಮಂಗಳವಾರ ಬೆಳಿಗ್ಗೆ ಪೊಲೀಸರು ವಶಕ್ಕೆ ಪಡೆದರು.

ನ್ಯಾಯಾಂಗ ಬಂಧನದಲ್ಲಿದ್ದ ದೇವರಾಜೇಗೌಡ ಅವರನ್ನು ಇಲ್ಲಿನ ಜಿಲ್ಲಾ ಕಾರಾಗೃಹದಿಂದ ತಮ್ಮ ಜೊತೆಗೆ ಕರೆದೊಯ್ದ ಹೊಳೆನರಸೀಪುರ ಪೊಲೀಸರು ಪ್ರಕರಣದ ಸಂಬಂಧ ವಿಚಾರಣೆ ನಡೆಸುತ್ತಿದ್ದಾರೆ. ಮಂಗಳವಾರ ಬೆಳಿಗ್ಗೆಯಿಂದ ಬುಧವಾರ ರಾತ್ರಿಯವರೆಗೆ ದೇವರಾಜೇಗೌಡರನ್ನು ಪೊಲೀಸ್ ಕಸ್ಟಡಿಗೆ ನೀಡಿ, ನ್ಯಾಯಾಲಯ ಆದೇಶಿಸಿತ್ತು.

ಈ ವೇಳೆ ಮಾತನಾಡಿದ ದೇವರಾಜೇಗೌಡ, ‘ಪೊಲೀಸರು ಅವರ ಪ್ರಕ್ರಿಯೆಗಳನ್ನು ಮಾಡುತ್ತಾರೆ ಬಿಡಿ’ ಎಂದಷ್ಟೇ ಹೇಳಿ ತೆರಳಿದರು.

ಹಾಸನಕ್ಕೆ ಐಜಿಪಿ ಅಮಿತ್ ಸಿಂಗ್ ಭೇಟಿ: ದಕ್ಷಿಣ ವಲಯ ಐಜಿಪಿ ಅಮಿತ್ ಸಿಂಗ್ ಮಂಗಳವಾರ ನಗರಕ್ಕೆ ಭೇಟಿ ನೀಡಿದ್ದು, ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯದ ವಿಡಿಯೊ ಪ್ರಕರಣದ ತನಿಖೆಯ ಕುರಿತು ಅಧಿಕಾರಿಗಳ ಜೊತೆಗೆ ಸುದೀರ್ಘ ಚರ್ಚೆ ನಡೆಸಿದರು.

ಜಾಮೀನು ಅರ್ಜಿ ವಜಾ: ಸಂಸದ ಪ್ರಜ್ವಲ್ ರೇವಣ್ಣ ಅವರದ್ದು ಎನ್ನಲಾದ ಅಶ್ಲೀಲ ವಿಡಿಯೊ ಹಂಚಿಕೆ ಆರೋಪದಡಿ ಬಂಧಿತರಾಗಿರುವ ಲಿಖಿತ್‌ಗೌಡ ಹಾಗೂ ಚೇತನ್ ಅವರ ಜಾಮೀನು ಅರ್ಜಿಯನ್ನು ಇಲ್ಲಿನ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ವಜಾಗೊಳಿಸಿದೆ.

ಪ್ರಜಾವಾಣಿ
ಪತ್ರಿಕೆ ಚಂದಾದಾರಿಕೆ/ವಿತರಣೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ಸಂಪರ್ಕಿಸಿ
(ವಿಳಂಬವಾಗಿ ಪತ್ರಿಕೆ ತಲುಪುವುದು, ಪತ್ರಿಕೆ ತಲುಪದೇ ಇರುವುದು, ನಿಯಮಿತವಾಗಿ ಪತ್ರಿಕೆ ಪೂರೈಕೆ ಆಗದಿರುವುದು)
: 9008366666
: support@deccanherald.co.in

ಬಿ.ಎಸ್‌.ಸ್ವಾಮಿ, ರಾಮಸ್ವಾಮಿಗೆ ‘ಅ.ನ.ಕೃ ಪ್ರಶಸ್ತಿ’



ರಾಮಸ್ವಾಮಿ

ಬಿ.ಎಸ್‌.ಸ್ವಾಮಿ

ಬೆಂಗಳೂರು: ಅ.ನ.ಕೃ ಪ್ರತಿಷ್ಠಾನ ನೀಡುವ ‘ಅ.ನ.ಕೃ ಪ್ರಶಸ್ತಿ’ಗೆ ಲೇಖಕರಾದ ಎಸ್‌.ಆರ್‌.ರಾಮಸ್ವಾಮಿ ಹಾಗೂ ಬಿ.ಎಸ್‌.ಸ್ವಾಮಿ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿಯು ತಲಾ ₹50 ಸಾವಿರ ನಗದು ಒಳಗೊಂಡಿದೆ.

2022 ಮತ್ತು 2023ನೇ ಸಾಲಿನ ಪ್ರಶಸ್ತಿಯನ್ನು ಪ್ರತಿಷ್ಠಾನ ಪ್ರಕಟಿಸಿದೆ. ಎಸ್‌.ಆರ್‌.ರಾಮಸ್ವಾಮಿ ಅವರು ‘ಉತ್ಥಾನ’ ಪತ್ರಿಕೆಯ ಗೌರವ ಸಂಪಾದಕರಾಗಿದ್ದಾರೆ. ಬಿ.ಎಸ್‌.ಸ್ವಾಮಿ ಅವರು ಆಕಾಶವಾಣಿಯಲ್ಲಿ ಕಾರ್ಯಕ್ರಮ ಸಂಯೋಜಕರಾಗಿ ಕಾರ್ಯನಿರ್ವಹಿಸಿ, ನಿವೃತ್ತರಾಗಿದ್ದಾರೆ.

ಇದೇ 19ರಂದು ಬಸವನಗುಡಿಯ ನ್ಯಾಷನಲ್ ಕಾಲೇಜಿನಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ. ವಕೀಲ ಅಶೋಕ್ ಹಾರನಹಳ್ಳಿ ಸಮಾರಂಭದ ಅಧ್ಯಕ್ಷತೆ ವಹಿಸುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

ವಿವಿಧೆಡೆ ಗುಡುಗು ಸಹಿತ ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ

ಮೈಸೂರು/ಹುಬ್ಬಳ್ಳಿ: ಮೈಸೂರು ಹಾಗೂ ಮಂಡ್ಯ ಜಿಲ್ಲೆಗಳಲ್ಲಿ ಸೋಮವಾರ ತಡರಾತ್ರಿಯಿಂದ ಮಂಗಳವಾರ ಮುಂಜಾನೆವರೆಗೂ ಸುರಿದ ಹದವಾದ ಮಳೆಯು ಬಿಸಿಲಿನ ಬೇಗೆಯಿಂದ ಕಂಗೆಟ್ಟಿದ್ದ ಜನರಿಗೆ ತಂಪೆರೆಯಿತು.

ಧಾರವಾಡ, ಉತ್ತರ ಕನ್ನಡ ಮತ್ತು ಬೆಳಗಾವಿ ಜಿಲ್ಲೆಯಲ್ಲಿ ಮಂಗಳವಾರ ಸಂಜೆ ಧಾರಾಕಾರ ಮಳೆ ಆಯಿತು. ಧಾರವಾಡ ನಗರ ಸೇರಿ ಜಿಲ್ಲೆಯ ಹುಬ್ಬಳ್ಳಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಮಳೆಯಾಗಿದ್ದು, ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗಿದೆ. ಉತ್ತರ ಕನ್ನಡ ಜಿಲ್ಲೆಯ ವಿವಿಧೆಡೆ ಗುಡುಗು ಸಹಿತ ಮಳೆಯಾಯಿತು.

ಮಂಡ್ಯದ ಫ್ಯಾಕ್ಟರಿ ವೃತ್ತದ ಸಮೀಪ ಬಿರುಗಾಳಿ, ಮಳೆ ವೇಳೆ ಬೆಂಗಳೂರಿನಿಂದ ಮೈಸೂರಿನತ್ತ ತೆರಳುತ್ತಿದ್ದ ಮೆಮೊ ರೈಲು ಎಂಜಿನ್ ಮೇಲೆ ಮರದ ರೆಂಬೆ ಬಿದ್ದು ಲೋಕೊ ಪೈಲಟ್ ಎಂ.ಎನ್. ಪ್ರಸಾದ್ ಗಾಯಗೊಂಡರು. ಮತ್ತೊಬ್ಬ ಲೋಕೊ ಪೈಲಟ್ ರೈಲು ಚಲಾಯಿಸಿಕೊಂಡು ಹೋಗಿದ್ದಾರೆ. ಘಟನೆ ನಡೆದಾಗ ರೈಲಿನಲ್ಲಿ 500 ಮಂದಿ ಪ್ರಯಾಣಿಕರಿದ್ದರು. ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ ಎಂದು ಪೊಲೀಸರು ತಿಳಿಸಿದರು.

ಹುಬ್ಬಳ್ಳಿಯಲ್ಲಿ ಮಂಗಳವಾರ ಮಳೆಯಿಂದ ಜಲಾವೃತಗೊಂಡ ಕೊಯಿನ್ ರಸ್ತೆಯಲ್ಲಿ ವಾಹನ ಸವಾರರು ಸಾಗಿದರು –ಪ್ರಜಾವಾಣಿ ಚಿತ್ರ

ಮಂಡ್ಯ ಜಿಲ್ಲೆಯ ವಿವಿಧೆಡೆ ಧಾರಾಕಾರ ಮಳೆಯಾಗಿದೆ. ಜಿಲ್ಲೆಯಲ್ಲಿ 24 ಗಂಟೆಗಳಲ್ಲಿ ಸರಾಸರಿ 3.17 ಸೆಂ.ಮೀ. ಮಳೆಯಾಗಿದೆ. ಸೋಮವಾರ ರಾತ್ರಿ ಶ್ರೀರಂಗಪಟ್ಟಣ ತಾಲ್ಲೂಕಿನ ಹೊಸಹಳ್ಳಿ, ಕೆ.ಆರ್‌. ಪೇಟೆ ತಾಲ್ಲೂಕಿನ ಹರಳಹಳ್ಳಿ ಹಾಗೂ ಮಳವಳ್ಳಿ ತಾಲ್ಲೂಕಿನ ನೆಲಮಾಕನಹಳ್ಳಿಯಲ್ಲಿ ತಲಾ 12 ಸೆಂ.ಮೀ. ಮಳೆ ಬಿದ್ದಿದೆ. ಶ್ರೀರಂಗಪಟ್ಟಣದ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ರಸ್ತೆ ಜಲಾವೃತವಾಗಿತ್ತು. ಕೊಡಗು ಜಿಲ್ಲೆಯ ಬಹುತೇಕ ಕಡೆ ಸಾಧಾರಣ ಮಳೆ ಬಿದ್ದಿದೆ.

ಬೆಳಗಾವಿ ತಾಲ್ಲೂಕು, ಬೈಲಹೊಂಗಲ, ಚನ್ನಮ್ಮನ ಕಿತ್ತೂರು, ನಿಪ್ಪಾಣಿ ತಾಲ್ಲೂಕಿನ ವಿವಿಧೆಡೆ ಒಂದು ಗಂಟೆ ಹದವಾದ ಮಳೆ ಸುರಿಯಿತು.

ಕಲಬುರಗಿ ವರದಿ: ಕಲಬುರಗಿ ನಗರ ಸೇರಿದಂತೆ ಜಿಲ್ಲೆಯ ಚಿತ್ತಾಪುರ, ಕಾಳಗಿ, ಚಿಂಚೋಳಿ ತಾಲ್ಲೂಕಿನಲ್ಲಿ ಮಂಗಳವಾರ ಗುಡುಗು, ಮಿಂಚು ಸಹಿತ ಉತ್ತಮ ಮಳೆ ಆಯಿತು. ಇದರಿಂದಾಗಿ ಬಿಸಿಲಿನಿಂದ ಕಂಗೆಟ್ಟಿದ್ದ ಜನರಿಗೆ ತಂಪು ನೀಡಿತು.

ಕುಂದಾಪುರ ವರದಿ(ಉಡುಪಿ ಜಿಲ್ಲೆ): ತಾಲ್ಲೂಕಿನ ಸಿದ್ದಾಪುರದಲ್ಲಿ ಸಿಡಿಲು ಬಡಿದು ಸುರೇಶ್ ಶೆಟ್ಟಿ (38) ಎಂಬವರು ಮೃತಪಟ್ಟಿದ್ದಾರೆ.

ಉಡುಪಿ ಜಿಲ್ಲೆಯಾದ್ಯಂತ ಮಂಗಳವಾರ ಸಂಜೆ ಬಿರುಗಾಳಿ ಸಹಿತ ಬಿರುಸಿನ ಮಳೆ ಸುರಿಯಿತು. ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ತಾಲ್ಲೂಕಿನಲ್ಲಿ ಮಳೆಯಾಗಿದೆ.

ಶಿವಮೊಗ್ಗದಲ್ಲಿ ನಗರವೂ ಸೇರಿದಂತೆ ಜಿಲ್ಲೆಯ ವಿವಿಧೆಡೆ ಮಂಗಳವಾರ ಸಂಜೆ ಕೆಲಹೊತ್ತು ಬಿರುಸಿನ ಮಳೆಯಾಗಿದೆ.

ಇಂದು ಕೆಲವೆಡೆ ಭಾರಿ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದಲ್ಲಿ ಬುಧವಾರವೂ ಮಳೆ ಮುಂದುವರಿಯಲಿದ್ದು, ಕೆಲವೆಡೆ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕೊಡಗು, ಮೈಸೂರು ಹಾಗೂ ಮಂಡ್ಯ ಜಿಲ್ಲೆಗೆ ‘ಆರೆಂಜ್ ಅಲರ್ಟ್’ ನೀಡಲಾಗಿದೆ. ಈ ಜಿಲ್ಲೆಗಳ ಜತೆಗೆ ಚಾಮರಾಜನಗರ, ಶಿವಮೊಗ್ಗ, ಬಳ್ಳಾರಿ ಹಾಗೂ ಹಾಸನ ಜಿಲ್ಲೆಯ ಕೆಲ ಸ್ಥಳಗಳಲ್ಲಿ ಭಾರಿ ಗಾಳಿ (40ರಿಂದ 50 ಕಿ.ಮೀ. ವೇಗ) ಹಾಗೂ ಗುಡುಗು ಸಹಿತ ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ರಾಮನಗರ, ಚಿಕ್ಕಮಗಳೂರು, ತುಮಕೂರು, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ ಹಾಗೂ ದಾವಣಗೆರೆ ಜಿಲ್ಲೆಯ ಕೆಲವು ಸ್ಥಳಗಳಲ್ಲಿ ಜೋರು ಗಾಳಿಯೊಂದಿಗೆ ಮಳೆಯಾಗುವ ಸಂಭವವಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಹೇಳಿದೆ.

ಇದೇ 21ರವರೆಗೂ ರಾಜ್ಯದ ವಿವಿಧೆಡೆ ಮಳೆಯಾಗುವ ಸಾಧ್ಯತೆಯಿದೆ. ಬೆಂಗಳೂರಿನಲ್ಲಿ ಮೋಡಕವಿದ ವಾತಾವರಣ ಇರಲಿದ್ದು, ಸಂಜೆ ಅಥವಾ ರಾತ್ರಿ ಅವಧಿಯಲ್ಲಿ ಗುಡುಗು ಸಹಿತ ಮಳೆಯಾಗುವ ಸಂಭವವಿದೆ. ಮುಂದಿನ ಐದು ದಿನಗಳಲ್ಲಿ ರಾಜ್ಯದಾದ್ಯಂತ ಗರಿಷ್ಠ ತಾಪಮಾನ 2ರಿಂದ 4 ಡಿಗ್ರಿ ಸೆಲ್ಸಿಯಸ್ ಇಳಿಕೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಬಿಟ್ ಕಾಯಿನ್ ಅಕ್ರಮ: ಐಪಿಎಸ್ ಅಧಿಕಾರಿ ವಿಚಾರಣೆ

ಬೆಂಗಳೂರು: ಬಿಟ್ ಕಾಯಿನ್ ಅಕ್ರಮ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ವಿಶೇಷ ತನಿಖಾದಳದ (ಎಸ್‌ಐಟಿ) ಅಧಿಕಾರಿಗಳು, ಐಪಿಎಸ್ ಅಧಿಕಾರಿ ಸಂದೀಪ್ ಪಾಟೀಲ ಅವರನ್ನು ಮಂಗಳವಾರ ವಿಚಾರಣೆಗೆ ಒಳಪಡಿಸಿದರು.

ಹಿಂದೆಯೂ ಸಂದೀಪ್ ಪಾಟೀಲ ಅವರನ್ನು ವಿಚಾರಣೆ ನಡೆಸಿದ್ದ ಎಸ್‌ಐಟಿ, ಮತ್ತೆ ವಿಚಾರಣೆ ಹಾಜರಾಗಲು ನೋಟಿಸ್ ಜಾರಿಗೊಳಿಸಿತ್ತು. ಮಂಗಳವಾರ, ಎಸ್‌ಐಟಿ ಮುಖ್ಯಸ್ಥ ಮನೀಶ್ ಕರ್ಬೀಕರ್ ಒಂದು ತಾಸು ವಿಚಾರಣೆ ನಡೆಸಿದರು.

ಕೆ.ಜಿ.ನಗರ, ಅಶೋಕನಗರ, ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿದ್ದ ನಾಲ್ಕು ಪ್ರಕರಣಗಳ ಪೈಕಿ ಎರಡು ಪ್ರಕರಣಗಳಲ್ಲಿ ಹಿಂದೆ ಸಂದೀಪ್ ಪಾಟೀಲ ಹೇಳಿಕೆ ದಾಖಲಿಸಲಾಗಿತ್ತು. ಈಗ ಉಳಿದ ಪ್ರಕರಣಗಳಲ್ಲಿ ಹೇಳಿಕೆ ದಾಖಲಿಸಿಕೊಳ್ಳಲಾಯಿತು.

‘ಪ್ರಮುಖ ಆರೋಪಿ ಶ್ರೀಕಿ, ಮೂವರು ಇನ್‌ಸ್ಪೆಕ್ಟರ್‌ಗಳು, ಖಾಸಗಿ ಸೈಬರ್ ಲ್ಯಾಬ್ ಮಾಲೀಕ ಸೇರಿ ಐವರನ್ನು ಬಂಧಿಸಲಾಗಿದೆ. ತಲೆ ಮರೆಸಿಕೊಂಡಿದ್ದ ಡಿವೈಎಸ್ಪಿ ಶ್ರೀಧರ್ ಪೂಜಾರ್ ಅವರಿಗಾಗಿ ಶೋಧ ನಡೆದಿದೆ’ ಎಂದು ಮೂಲಗಳು ಹೇಳಿವೆ.

ಪ್ರಕರಣದಲ್ಲಿ ಹಿರಿಯ ಐಪಿಎಸ್ ಅಧಿಕಾರಿಯೊಬ್ಬರ ಪುತ್ರನ ವಿಚಾರಣೆ ಸೋಮವಾರ ನಡೆದಿತ್ತು. ಶ್ರೀಕಿಯ ಸ್ನೇಹಿತನೂ ಆದ ಈತ ಇತ್ತೀಚೆಗೆ ₹47 ಲಕ್ಷ ಬೆಲೆ ಬಾಳುವ ಐಷಾರಾಮಿ ಕಾರು ಖರೀದಿಸಿದ್ದ ಎಂದು ತಿಳಿಸಿವೆ.

ಮೇಲ್ಮನೆ ಚುನಾವಣೆ: ಪೆನ್‌ಡ್ರೈವ್ ಪ್ರಕರಣ ಪರಿಣಾಮ ಬೀರದು- ಸಿ.ಎಂ

‘ಜೆಡಿಎಸ್–ಬಿಜೆಪಿ ಮೈತ್ರಿಯಿಂದ ತೊಂದರೆಯಿಲ್ಲ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣ ವಿಧಾನಪರಿಷತ್ ಚುನಾವಣೆ ಮೇಲೆ ಪರಿಣಾಮ ಬೀರುವುದಿಲ್ಲ ಮತ್ತು ಜೆಡಿಎಸ್- ಬಿಜೆಪಿ ಮೈತ್ರಿಯಿಂದ ಕಾಂಗ್ರೆಸ್‌ಗೆ ಯಾವ ತೊಂದರೆಯೂ ಆಗುವುದಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಲ್ಲಿ ಪತ್ರಕರ್ತರೊಂದಿಗೆ ಮಂಗಳವಾರ ಮಾತನಾಡಿ, ‘ಪೆನ್‌ಡ್ರೈವ್ ಪ್ರಕರಣಕ್ಕೂ ಈ ಚುನಾವಣೆಗೂ ಸಂಬಂಧವಿಲ್ಲ. ಪದವೀಧರರು ಹಾಗೂ ಶಿಕ್ಷಕರ ಕ್ಷೇತ್ರದ ಮತದಾರರು ಪ್ರಬುದ್ಧರು. ಯಾರು ಸರಿ, ಯಾರು ಸರಿ ಇಲ್ಲ ಎನ್ನುವುದನ್ನು ನಿರ್ಧರಿಸುತ್ತಾರೆ. 10 ವರ್ಷಗಳಿಂದ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರದ ವೈಫಲ್ಯಗಳೇನು, ನಮ್ಮ ಸರ್ಕಾರದ ಸಾಧನೆ ಏನು ಎಂಬುದನ್ನು ತುಲನೆ ಮಾಡುವ ಶಕ್ತಿ ಅವರಿಗಿದೆ’ ಎಂದು ಹೇಳಿದರು.

‘ವಿಧಾನಪರಿಷತ್ ಚುನಾವಣೆಯಲ್ಲೂ ಕಾಂಗ್ರೆಸ್ ಪರ ವಾತಾವರಣವಿದೆ’ ಎಂದರು.

ಒಟ್ಟು 40 ನಾಮಪತ್ರ

ಬೆಂಗಳೂರು: ವಿಧಾನ ಪರಿಷತ್‌ನ ಪದವೀಧರರು ಮತ್ತು ಶಿಕ್ಷಕರ ತಲಾ ಮೂರು ಕ್ಷೇತ್ರಗಳಿಗೆ ನಡೆಯುತ್ತಿರುವ ಚುನಾವಣೆಯಲ್ಲಿ ಮಂಗಳವಾರದವರೆಗೆ 29 ಅಭ್ಯರ್ಥಿಗಳು ಒಟ್ಟು 40 ನಾಮಪತ್ರಗಳನ್ನು ಸಲ್ಲಿಸಿದ್ದಾರೆ.

ಗುರುವಾರದಿಂದ ನಾಮಪತ್ರ ಸಲ್ಲಿಕೆ ಆರಂಭವಾಗಿತ್ತು. ಈವರೆಗೆ 28 ಪುರುಷರು ಮತ್ತು ಓರ್ವ ಮಹಿಳೆ ನಾಮಪತ್ರ ಸಲ್ಲಿಸಿದ್ದಾರೆ ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

ಈವರೆಗೆ ಕಾಂಗ್ರೆಸ್‌ನ ಐವರು, ಬಿಜೆಪಿಯ ಮೂವರು ಮತ್ತು ಜೆಡಿಎಸ್‌ನ ಒಬ್ಬರು ನಾಮಪತ್ರ ಸಲ್ಲಿಸಿದ್ದಾರೆ. ಮಾನ್ಯತೆ ಪಡೆದ ವಿವಿಧ ರಾಜಕೀಯ ಪಕ್ಷಗಳ 20 ಅಭ್ಯರ್ಥಿಗಳು ಉಮೇದುವಾರಿಕೆ ಸಲ್ಲಿಸಿದ್ದಾರೆ.

ಪ್ರತಾಪ್ ರೆಡ್ಡಿ ₹115 ಕೋಟಿ ಒಡೆಯ

ಕಲಬುರಗಿ: ಈಶಾನ್ಯ ಪದವೀಧರ ಕ್ಷೇತ್ರದ ಚುನಾವಣೆಗೆ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಎನ್. ಪ್ರತಾಪ್ ರೆಡ್ಡಿ ಅವರ ಆಸ್ತಿಯ ಮೌಲ್ಯ ₹ 115.35 ಕೋಟಿಯಷ್ಟಿದೆ.

ಪ್ರತಾಪ್ ರೆಡ್ಡಿ ಅವರ ಬಳಿ ₹ 3.65 ಲಕ್ಷ ನಗದು ಇದೆ. ₹ 51.19 ಲಕ್ಷದ ಬಿಎಂಡಬ್ಲ್ಯು ಕಾರು, ₹35.81 ಲಕ್ಷದ ಇನ್ನೋವಾ ಕಾರು, ₹ 6.37 ಲಕ್ಷದ ಮಾರುತಿ ಸೆಲೆರಿಯೊ, ₹ 67.74 ಲಕ್ಷದ ಲೆಕ್ಸ್ ಕಾರು ಹಾಗೂ ₹ 38.92 ಲಕ್ಷ ಮೌಲ್ಯದ ಫಾರ್ಚೂನರ್ ಕಾರು ಹೊಂದಿದ್ದಾರೆ. ಬೆಲೆ ಬಾಳುವ ಚಿನ್ನಾಭರಣ ಸಹ ಇದೆ. ₹ 14.57 ಕೋಟಿ ಚರಾಸ್ತಿ ಹಾಗೂ ₹ 100.78 ಕೋಟಿ ಸ್ಥಿರಾಸ್ತಿಯೊಂದಿಗೆ ಒಟ್ಟು ₹ 115.35 ಕೋಟಿ ಸಂಪತ್ತು ಹೊಂದಿದ್ದಾರೆ. ₹ 13.83 ಕೋಟಿ ಸಾಲವೂ ಇದೆ ಎಂದು ಚುನಾವಣೆಯ ನಾಮಪತ್ರ ಸಲ್ಲಿಕೆಯಲ್ಲಿ ಘೋಷಿಸಿಕೊಂಡಿದ್ದಾರೆ.

ಕಲಬುರಗಿಯಲ್ಲಿ ಒಂದು ಮತ್ತು ಬಳ್ಳಾರಿಯಲ್ಲಿ ಎರಡು ಪ್ರಕರಣಗಳು ದಾಖಲಾಗಿದ್ದು, ನ್ಯಾಯಾಲಯದಲ್ಲಿ ವಿಚಾರಣೆಯ ಹಂತದಲ್ಲಿವೆ ಎಂದು ಹೇಳಿಕೊಂಡಿದ್ದಾರೆ.

ಪತ್ನಿ ಎನ್.ಶೈಲಜಾ ರೆಡ್ಡಿ ಅವರ ಬಳಿ ₹ 1.50 ಲಕ್ಷ ನಗದು ಸೇರಿ ₹ 4.06 ಕೋಟಿ ಚರಾಸ್ತಿ ಹಾಗೂ ₹ 102.85 ಕೋಟಿ ಸ್ಥಿರಾಸ್ತಿ ಇದೆ. ಮಗ ಎನ್. ಹರ್ಷವರ್ಧನ್ ರೆಡ್ಡಿ ಬಳಿ ₹54.51 ಲಕ್ಷ ಚರಾಸ್ತಿ ಹಾಗೂ ₹49.94 ಲಕ್ಷ ಸ್ಥಿರಾಸ್ತಿ ಇದೆ.

ಮರಿತಿಬ್ಬೇಗೌಡರ ಕುಟುಂಬದ ಆಸ್ತಿ ₹10.58 ಕೋಟಿ

ಮೈಸೂರು: ವಿಧಾನಪರಿಷತ್ ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ ಕುಟುಂಬ ₹10.58 ಕೋಟಿ ಮೌಲ್ಯದ ಆಸ್ತಿ ಹೊಂದಿದ್ದು, 3.2 ಕೆ.ಜಿ. ಬಂಗಾರವಿದೆ.

ನಾಮಪತ್ರದೊಂದಿಗೆ ಕುಟುಂಬದ ಆಸ್ತಿ ವಿವರದ ಪ್ರಮಾಣಪತ್ರವನ್ನು ಅವರು ಸಲ್ಲಿಸಿದ್ದಾರೆ. ಅದರಂತೆ ಅವರ ಬಳಿ ₹8.28 ಕೋಟಿ ಮೌಲ್ಯದ ಸ್ಥಿರಾಸ್ತಿ ಹಾಗೂ ₹2.30 ಕೋಟಿ ಚರಾಸ್ತಿ ಇದೆ. ಎಂ.ಎ. ಸ್ನಾತಕೋತ್ತರ ಪದವೀಧರರಾದ ಅವರು, ಕೃಷಿಕನೂ ಆಗಿದ್ದೇನೆ ಎಂದು ತಿಳಿಸಿದ್ದಾರೆ. ಕ್ರಿಮಿನಲ್ ಪ್ರಕರಣವಿಲ್ಲ.

ಚರಾಸ್ತಿ ವಿವರ: ₹28.98 ಲಕ್ಷ , ಅವರ ಪತ್ನಿ ಎಂ.ಎಸ್. ವಿಜಯಾ ₹1.32 ಕೋಟಿ, ಪುತ್ರ ಆರ್ಯನ್ ರಾಜೀವ್ ಗೌಡ ₹29.47 ಲಕ್ಷ ಹಾಗೂ ಪುತ್ರಿ ವೈಭವಾ ₹40.50 ಲಕ್ಷ ಚರಾಸ್ತಿ ಹೊಂದಿದ್ದಾರೆ.

ನೈರುತ್ಯ ಶಿಕ್ಷಕರ ಕ್ಷೇತ್ರದಲ್ಲೂ ಬಂಡಾಯ

ಮಂಗಳೂರು: ನೈರುತ್ಯ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯಲ್ಲಿ ತಾವು ಸ್ಪರ್ಧಿಸುವುದಾಗಿ ಬಿಜೆಪಿ ಟಿಕೆಟ್ ಆಕಾಂಕ್ಷಿ, ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ನ ಮಾಜಿ ಸದಸ್ಯ ಎಸ್‌.ಆರ್‌. ಹರೀಶ್ ಆಚಾರ್ಯ ತಿಳಿಸಿದರು.

ಬಿಜೆಪಿಯು ಈ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಟ್ಟಿದ್ದು, ಜೆಡಿಎಸ್ ಹಾಲಿ ಸದಸ್ಯ ಭೋಜೇಗೌಡ ನಾಮಪತ್ರ ಸಲ್ಲಿಸಿದ್ದಾರೆ.

‘ರಾಷ್ಟ್ರೀಯ ಪಕ್ಷಗಳು ಶಿಕ್ಷಕರ ಹಾಗೂ ಪದವೀಧರ ಕ್ಷೇತ್ರಗಳಿಗೆ ಪ್ರಾತಿನಿಧ್ಯ ನೀಡದೆ, ಕರಾವಳಿ ಜಿಲ್ಲೆಗಳನ್ನು ನಿರ್ಲಕ್ಷ್ಯ ಮಾಡಿವೆ. ಈ ಭಾಗದ ಶಿಕ್ಷಕರು ಮತ್ತು ಪದವೀಧರರ ಸ್ವಾಭಿಮಾನ ಮತ್ತು ಪ್ರಾತಿನಿಧ್ಯದ ಪ್ರತೀಕವಾಗಿ ನೈರುತ್ಯ ಶಿಕ್ಷಕರ ಕ್ಷೇತ್ರದ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದೇನೆ’ ಎಂದು ಹರೀಶ್ ಆಚಾರ್ಯ ಮಂಗಳವಾರ ತಿಳಿಸಿದರು.

‘ನನ್ನ ಸ್ಪರ್ಧೆ ಪಕ್ಷೇತರವೂ ಅಲ್ಲ, ಬಿಜೆಪಿಯ ಬಂಡಾಯವೂ ಅಲ್ಲ. ಪಕ್ಷಾತೀತವಾಗಿ, ಕ್ಷೇತ್ರದ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದೇನೆ ಅಷ್ಟೇ’ ಎಂದರು.

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ
ನವನಗರ, ಹುಬ್ಬಳ್ಳಿ – 580025. ದೂರವಾಣಿ: 0836-2222392
ಇ–ಮೇಲ್: kslu.registrar@gmail.com ವೆಬ್‌ಸೈಟ್: www.kslu.karnataka.gov.in
ಸಂಖ್ಯೆ: ಕರಾಕಾವಿ/ಕು.ಸ/ಟೆ.ಪ್ರ/2024–25/227 ದಿನಾಂಕ: 09–05–2024
ಟೆಂಡರ್ ತಿದ್ದುಪಡಿ ಪ್ರಕಟಣೆ
ಉಲ್ಲೇಖ: 1) ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: ಕರಾಕಾವಿ/ಕು.ಸ/ಟೆ.ಪ್ರ/2023–24/3316 ದಿನಾಂಕ: 13–03–2024
2) ಈ ಕಚೇರಿ ಟೆಂಡರ್ ಮುಂದೂಡಿಕೆ ಪ್ರಕಟಣೆ ಸಂಖ್ಯೆ: ಕರಾಕಾವಿ/ಕು.ಸ/ಟೆ.ಪ್ರ/2024–25/123 ದಿನಾಂಕ: 23–04–2024
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಲಾ–ಕೆಎಲ್‌ಎಮ್/67/2023 ದಿನಾಂಕ: 02–05–2024
ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ Construction of Karnataka State Law University Building at Navanagar, Hubballi **(Work Indent No. KSLU/2023-24/BD/WORK_INDENT10)** ಕಾಮಗಾರಿಗಾಗಿ ಉಲ್ಲೇಖ (1) ರಡಿ ಟೆಂಡರ್ ಆಹ್ವಾನಿಸಲಾಗಿರುತ್ತದೆ ಹಾಗೂ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಉಲ್ಲೇಖ (2) ರಡಿ ಟೆಂಡರ್‌ನ್ನು ಅನಿರ್ದಿಷ್ಟವಾಗಿ ಮುಂದೂಡಲಾಗಿರುತ್ತದೆ. ಈಗ ಟೆಂಡರ್‌ನ ದಿನಾಂಕಗಳು ಈ ಕೆಳಗಿನಂತೆ ಇರುತ್ತವೆ.
ಗುತ್ತಿಗೆದಾರರು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ವಿವರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾದ ದಿನಾಂಕ: **14–05–2024 ರಂದು ಸಂಜೆ 4.00 ಗಂಟೆಯಿಂದ.** ಟೆಂಡರ್‌ನ ಬಿಡ್ ಪೂರ್ವಭಾವಿ ಸಭೆಯ ದಿನಾಂಕ: **05–06–2024 ರಂದು ಬೆಳಿಗ್ಗೆ 11.30 ಗಂಟೆಗೆ.** ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ: **10–06–2024 ರಂದು ಸಂಜೆ 5.30 ಗಂಟೆಯವರೆಗೆ.** ಬಿಡ್ ಸಲ್ಲಿಸಲು ಅಂತಿಮ ದಿನಾಂಕ: **11–06–2024.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **12–06–2024.** ಆರ್ಥಿಕ ಬಿಡ್ ತೆರೆಯುವ ದಿನಾಂಕ: **14–06–2024.**
ಉಲ್ಲೇಖ (1) ರ ಟೆಂಡರ್ ಪ್ರಕಟಣೆಯಲ್ಲಿ ಇಎಂಡಿ ಮೊತ್ತ ರೂ. 39,49,000.00 ಎಂದು ನಮೂದಿಸಿದ್ದು, **ರೂ. 35,98,000.00** ಗಳು ಎಂದು ಓದಿಕೊಳ್ಳುವುದು.
ಸಹಿ/–
ಕುಲಸಚಿವರು
ವಾಸಾಸಂಇ/ಧಾರವಾಡ/03/ಅಡ್ವರ್ಟೋರ್/2024–25

ಕರ್ನಾಟಕ ಸರ್ಕಾರ
ಉಪನಿರ್ದೇಶಕರು (ಆಡಳಿತ) ರವರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ದಾವಣಗೆರೆ ಜಿಲ್ಲೆ,
ಸಂಖ್ಯೆ:–ಆ3/ದೂರು/ಅಗೈಹಾ/42/2022–23 ದಿನಾಂಕ: 13.05.2024
ತಿಳುವಳಿಕೆ ಪತ್ರ
ಶ್ರೀ ಹೆಚ್ ಶ್ರೀನಿವಾಸ, ಸಹ ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಎಸ್.ಒ.ಜಿ ಕಾಲೋನಿ, ಎಸ್. ಎಂ. ಬಡಾವಣೆ, ದಾವಣಗೆರೆ ದಕ್ಷಿಣ ವಲಯ ಆದ ನಿಮ್ಮ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಈ ಕಛೇರಿ ಪತ್ರ ಸಂಖ್ಯೆ: ಆ3/ದೂರು/ಅಗೈಹಾ/42/2022–23 ದಿನಾಂಕ: 23.03.2023 ರಲ್ಲಿ ಅಮಾನತ್ತುಗೊಳಿಸಿ ಆದೇಶಿಸಲಾಗಿರುತ್ತದೆ, ನಂತರ ನಿಮ್ಮ ಆರೋಪಗಳ ಸಂಬಂಧ ದಿನಾಂಕ: 10.10.2023 ರಂದು ಕ.ನಾ.ಸೇ.ನಿ (ಸಿಸಿಎ) 1957 ರ ನಿಯಮ 11 ರಡಿ ಆರೋಪ ಪಟ್ಟಿಯನ್ನು ಜಾರಿಗೊಳಿಸಲಾಗಿರುತ್ತದೆ, ನಂತರ ಈ ಕಛೇರಿ ಪತ್ರ ಸಂಖ್ಯೆ: ಆ3/ದೂರು/ಅಗೈಹಾ/42/2022–23 ದಿನಾಂಕ: 13.10.2023 ರಲ್ಲಿ ನಿಮ್ಮ ವಿರುದ್ಧದ ಆರೋಪಗಳ ವಿಚಾರಣೆಯನ್ನು ಕಾಯ್ದಿರಿಸಿ ಸದರಿ ಅಮಾನತ್ತನ್ನು ತೆರವುಗೊಳಿಸಿ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಆಶ್ರಯ ಕಾಲೋನಿ, ಕೆ.ಎನ್ ಹಳ್ಳಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ ಇಲ್ಲಿಗೆ ಸೇವೆ ಪುನರ್ ಸ್ಥಾಪಿಸಿ ಆದೇಶಿಸಲಾಗಿರುತ್ತದೆ.
ಸದರಿ ಆರೋಪ ಪಟ್ಟಿ ಹಾಗೂ ಪುನರ್‌ಸ್ಥಾಪನೆ ಆದೇಶವನ್ನು ಜಾರಿಮಾಡಲು ಕ್ಷೇತ್ರ ಶಿಕ್ಷಣಾಧಿಕಾರಿಗಳು, ದಾವಣಗೆರೆ ದಕ್ಷಿಣ ವಲಯ ರವರು ಸಿಬ್ಬಂದಿ ನಿಯೋಜಿಸಿ ನೀವು ರಜಾ ಅರ್ಜಿಯಲ್ಲಿ ನೀಡಿರುವ ವಿಳಾಸಕ್ಕೆ ಅನೇಕ ಬಾರಿ ಭೇಟಿ ನೀಡಿದಾಗ್ಯೂ ಸಹ ನೀವು ಲಭ್ಯವಾಗಿರುವುದಿಲ್ಲ, ನೋಂದಣಿ ಅಂಚೆ ಮೂಲಕವೂ ಸಹ ಕಳುಹಿಸಲಾಗಿರುತ್ತದೆ ಮತ್ತು ಸದರಿ ಆರೋಪ ಪಟ್ಟಿ ಹಾಗೂ ಪುನರ್‌ಸ್ಥಾಪನೆ ಆದೇಶವನ್ನು ನಿಮ್ಮ ಮನೆಯ ಬಾಗಿಲಿಗೆ ಅಂಟಿಸಲಾಗಿರುತ್ತದೆ.
ಆದ್ದರಿಂದ ನಿಮ್ಮ ಮೇಲಿನ ಆರೋಪಗಳ ಕುರಿತು/ಪುನರ್‌ಸ್ಥಾಪಿಸಿದ ಸ್ಥಳದ ಕರ್ತವ್ಯಕ್ಕೆ ಹಾಜರಾಗದಿರುವ ಕುರಿತು ಅನಧಿಕೃತ ಗೈರುಹಾಜರಿ ಎಂಬುದಾಗಿ ಪರಿಗಣಿಸಬಾರದೆಂಬುದಕ್ಕೆ ಈ ತಿಳುವಳಿಕೆ ಪತ್ರ ಪ್ರಕಟಣೆಗೊಂಡ 07 ದಿನದೊಳಗಾಗಿ ಸಮಜಾಯಿಷಿ ಸಲ್ಲಿಸಿ, ಕರ್ತವ್ಯಕ್ಕೆ ಹಾಜರಾಗಲು ತಿಳಿಸಿದೆ. ಒಂದು ವೇಳೆ ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ ನಿಮಗೆ ಸೇವೆಯಲ್ಲಿ ಮುಂದುವರೆಯಲು ಇಚ್ಛೆ ಇಲ್ಲವೆಂದು ಭಾವಿಸಿ ನಿಯಮಾನುಸಾರ ಸಿಸಿಎ ನಿಯಮಗಳಡಿಯಲ್ಲಿ ಕಲ್ಪಿಸಲಾಗಿರುವ ಅವಕಾಶಗಳನ್ವಯ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂಬ ವಿಷಯವನ್ನು ನಿಮ್ಮ ಗಮನಕ್ಕೆ ತರಲಾಗಿದೆ.
ವಾಸಾಇ/ದಾವಣಗೆರೆ/12/ಕೆಎಸ್‌ಎಂಸಿಎ/2024–25
ಸಹಿ/– ಶಿಸ್ತು ಪ್ರಾಧಿಕಾರಿ ಮತ್ತು ಉಪನಿರ್ದೇಶಕರು (ಆಡಳಿತ), ಶಾಲಾ ಶಿಕ್ಷಣ ಇಲಾಖೆ, ದಾವಣಗೆರೆ.

ಖಾಲಿಸ್ತಾನ ಪರ ಗೋಡೆ ಬರಹ: ಮೂವರ ಬಂಧನ

ಚಂಡೀಗಢ (ಪಿಟಿಐ): ಪಂಜಾಬ್‌ನ ಬಠಿಂಡಾ ಮತ್ತು ದೆಹಲಿಯಲ್ಲಿ ಖಾಲಿಸ್ತಾನ ಪರ ಘೋಷಣೆಗಳನ್ನು ಬರೆದ ಆರೋಪದ ಮೇರೆಗೆ ನಿಷೇಧಿತ 'ಸಿಖ್ ಫಾರ್ ಜಸ್ಟಿಸ್' ಸಂಘಟನೆಯ ಮೂವರನ್ನು ಪಂಜಾಬ್ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಗುಪ್ತಚರ ದಳದ ಘಟಕ ಹಾಗೂ ಬಠಿಂಡಾ ಪೊಲೀಸರ ಜಂಟಿ ಕಾರ್ಯಾಚರಣೆಯಲ್ಲಿ ಈ ಮೂವರನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಮಹಾ ನಿರ್ದೇಶಕ ಗೌರವ್ ಯಾದವ್ ತಿಳಿಸಿದ್ದಾರೆ.

ಏಪ್ರಿಲ್ 27ರಂದು ಬಠಿಂಡಾದ ನ್ಯಾಯಾಲಯ ಹಾಗೂ ಜಿಲ್ಲಾ ಆಡಳಿತ ಆವರಣಗಳಲ್ಲಿರುವ ಗೋಡೆಗಳ ಮೇಲೆ ಖಾಲಿಸ್ತಾನ ಪರ ಘೋಷಣೆಗಳನ್ನು ಬರೆಯಲಾಗಿತ್ತು. ಅಲ್ಲದೆ, ಮೇ 9 ರಂದು ಇದೇ ರೀತಿಯ ಘೋಷಣೆಗಳು ದೆಹಲಿಯ ಝಂಡೇವಾಲನ್ ಮತ್ತು ಕರೋಲ್ ಬಾಗ್ ಮೆಟ್ರೊ ನಿಲ್ದಾಣಗಳಲ್ಲೂ ಕಂಡುಬಂದಿದ್ದವು.

'ಬಿಜೆಪಿಯಿಂದ ನೀತಿ ಸಂಹಿತೆ ಉಲ್ಲಂಘನೆ ತಡೆಯಿರಿ'

ನವದೆಹಲಿ (ಪಿಟಿಐ): ದೇಶದಲ್ಲಿ ಈಗ ಮಾದರಿ ನೀತಿ ಸಂಹಿತೆಯು 'ಮೋದಿ ನೀತಿ ಸಂಹಿತೆ'ಯಾಗಿ ಮಾರ್ಪಟ್ಟಿದೆ ಎಂದು ಆರೋಪಿಸಿರುವ ಟಿಎಂಸಿ, ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಬಿಜೆಪಿ ನಾಯಕರಿಂದ ನಡೆಯುತ್ತಿರುವ ಚುನಾವಣಾ ನೀತಿ ಸಂಹಿತೆಯ 'ಘೋರ ಉಲ್ಲಂಘನೆ'ಯನ್ನು ತಡೆಯಬೇಕು ಎಂದು ಚುನಾವಣಾ ಆಯೋಗವನ್ನು (ಇ.ಸಿ) ಮಂಗಳವಾರ ಒತ್ತಾಯಿಸಿದೆ.

ಚುನಾವಣಾ ಆಯೋಗಕ್ಕೆ ಈ ವಿಷಯದ ಬಗ್ಗೆ ಮನವಿಪತ್ರ ಸಲ್ಲಿಸಿದ ನಂತರ ಟಿಎಂಸಿಯ ರಾಜ್ಯಸಭೆ ಸದಸ್ಯರಾದ ಸಾಕೇತ್ ಗೋಖಲೆ ಮತ್ತು ಸಾಗರಿಕಾ ಘೋಷ್ ಅವರು, ಮಾದರಿ ನೀತಿ ಸಂಹಿತೆ ಉಲ್ಲಂಘನೆಗಳ ಬಗ್ಗೆ ಪ್ರಧಾನಿ ಮೋದಿ ವಿರುದ್ಧ ಆಯೋಗವು ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ ಎಂದು ಮಾಧ್ಯಮ ಪ್ರತಿನಿಧಿಗಳ ಎದುರು ಅಸಮಾಧಾನ ವ್ಯಕ್ತಪಡಿಸಿದರು.

ಪೆಟ್ರೋಲ್ ಪಂಪ್ ಮೇಲೆ ಬೃಹತ್ ಜಾಹೀರಾತು ಫಲಕ ಕುಸಿದ ಘಟನೆ

ಮುಂಬೈ: ಸಾವಿನ ಸಂಖ್ಯೆ 14ಕ್ಕೆ ಏರಿಕೆ

ಜಾಹೀರಾತು ಫಲಕದ ಕೆಳಗೆ ಸಿಲುಕಿರುವ ಜನರ ರಕ್ಷಣಾ ಕಾರ್ಯಾಚರಣೆ ನಡೆಸುತ್ತಿರುವ ಸಿಬ್ಬಂದಿ –ಎಎಫ್‌ಪಿ ಚಿತ್ರ

ಮುಂಬೈ (ಪಿಟಿಐ): ಭಾರಿ ಬಿರುಗಾಳಿ ಸಹಿತ ಮಳೆಗೆ ಮುಂಬೈನ ಚೆಡ್ಡಾನಗರದಲ್ಲಿ ಪೆಟ್ರೋಲ್ ಪಂಪ್ ಮೇಲೆ ಬಿದ್ದ ಬೃಹತ್ ಜಾಹೀರಾತು ಫಲಕದ ಕೆಳಗೆ ಸಿಲುಕಿ ಸಾವಿಗೀಡಾದವರ ಸಂಖ್ಯೆ 14ಕ್ಕೆ ಏರಿಕೆಯಾಗಿದೆ. 75 ಜನರು ಘಟನೆಯಲ್ಲಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಈವರೆಗೆ ಫಲಕದ ಅಡಿ ಸಿಲುಕಿದ್ದ ಒಟ್ಟು 89 ಜನರನ್ನು ಹೊರತೆಗೆಯಲಾಗಿದ್ದು, ಈ ಪೈಕಿ 14 ಜನರು ಸಾವಿಗೀಡಾಗಿದ್ದಾರೆ. ರಕ್ಷಣಾ ಕಾರ್ಯಾಚರಣೆ ಮುಂದುವರೆದಿದ್ದು, ಹೋರ್ಡಿಂಗ್ ಅಡಿ ಇನ್ನೂ ಎಷ್ಟು ಜನರು ಸಿಲುಕಿದ್ದಾರೆ ಎಂಬುದು ತಿಳಿದುಬಂದಿಲ್ಲ.

ಗಾಯಾಳುಗಳನ್ನು ಸ್ಥಳೀಯ ಆಸ್ಪತ್ರೆಗಳಿಗೆ ದಾಖಲಿಸಲಾಗಿದ್ದು, ಒಬ್ಬ ಗಾಯಾಳುವಿನ ಸ್ಥಿತಿ ಗಂಭೀರವಾಗಿದೆ. ಒಟ್ಟು 32 ಜನರು ಈವರೆಗೆ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ.

ಸೋಮವಾರ ಮುಂಬೈಯಲ್ಲಿ ದೂಳು ಸಹಿತ ಬಿರುಗಾಳಿ ಮತ್ತು ಮಳೆ ಸುರಿಯುತ್ತಿದ್ದ ವೇಳೆ ಘಾಟ್‌ಕೋಪರ್‌ನಲ್ಲಿ ಅಕ್ರಮವಾಗಿ ಇರಿಸಲಾಗಿದ್ದ 120 ಚದರ ಅಡಿ ಎತ್ತರ ಮತ್ತು 120 ಅಡಿ ಅಗಲವಿದ್ದ ಜಾಹೀರಾತು ಫಲಕವು ಪೆಟ್ರೋಲ್ ಪಂಪ್ ಮೇಲೆ ಬಿದ್ದಿದೆ. ಘಟನೆಗೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಮುಂಬೈ ಪೊಲೀಸ್ ಕಮಿಷನರ್ ವಿವೇಕ್ ಫಣ್ಸಾಲ್ಕರ್ ತಿಳಿಸಿದ್ದಾರೆ.

ಘಟನೆ ನಡೆದ ಸ್ಥಳದಲ್ಲಿ 12 ಅಗ್ನಿಶಾಮಕ ವಾಹನಗಳು, ಎತ್ತರ ರಕ್ಷಣಾ ಸಿಬ್ಬಂದಿ ಮತ್ತು 100 ಸಿಬ್ಬಂದಿಯೊಂದಿಗೆ 2 ಎನ್‌ಡಿಆರ್‌ಎಫ್ ಪಡೆಗಳು ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ನಡೆಸಿವೆ. ಇದರೊಂದಿಗೆ 2 ಹೆವಿ ಡ್ಯೂಟಿ ಕ್ರೇನ್, 2 ಹೈಡ್ರಾ ಕ್ರೇನ್, 2 ಮಣ್ಣು ಅಗೆಯುವ ಯಂತ್ರ ಮತ್ತು 25 ಆಂಬುಲೆನ್ಸ್‌ಗಳನ್ನು ಕಾರ್ಯಾಚರಣೆಯಲ್ಲಿ ಬಳಸಲಾಗುತ್ತಿದೆ.

ಬೃಹತ್ ಮತ್ತು ಭಾರವಾದ ಫಲಕವನ್ನು ಎತ್ತಿ ರಕ್ಷಣಾ ಕಾರ್ಯಾಚರಣೆ ನಡೆಸುವುದು ಹರಸಾಹಸವಾಗಿತ್ತು. ಹೀಗಾಗಿ ತಲಾ 500 ಟನ್ ತೂಕದ ಎರಡು ಕ್ರೇನ್‌ಗಳನ್ನು ಎರಡೂ ಬದಿಯಿಂದ ಹೋರ್ಡಿಂಗ್ ಅನ್ನು 3.5 ರಿಂದ 4 ಅಡಿ ಎತ್ತರ ಎತ್ತಿದ ಬಳಿಕ ರಕ್ಷಣಾ ಸಿಬ್ಬಂದಿ ವಾಹನಗಳೂ ಹೋಗಿ ಹೋರ್ಡಿಂಗ್ ಕೆಳಗೆ ಸಿಲುಕಿದ ಜನರನ್ನು ರಕ್ಷಿಸಿದ್ದಾರೆ.

ಪ್ರಕರಣದ ನಂತರ ನಗರದೆಲ್ಲೆಡೆ ಅಕ್ರಮ ಫಲಕಗಳನ್ನು ತೆರವುಗೊಳಿಸಲಾಗುತ್ತಿದೆ.

ಫಲಕ ಅಕ್ರಮ; ಆರೋಪಿ ನಾಪತ್ತೆ

ಘಟನೆಗೆ ಸಂಬಂಧಿಸಿದಂತೆ 'ಇಗೊ ಮೀಡಿಯಾ ಪ್ರೈವೆಟ್ ಲಿಮಿಟೆಡ್ ಮಾಲೀಕ ಭವೇಶ್ ಭಿಂಡೆ ಮತ್ತು ಇತರರ ವಿರುದ್ಧ ಪಂತ್ ನಗರ ಪೊಲೀಸ್ ಠಾಣೆಯಲ್ಲಿ ಕೊಲೆ ಸೇರಿದಂತೆ ಇತರ ಸೆಕ್ಷನ್‌ಗಳಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅತ್ಯಾಚಾರ ಪ್ರಕರಣವೊಂದರ ಆರೋಪಿಯೂ ಆಗಿರುವ ಭಿಂಡೆ ತಲೆಮರೆಸಿಕೊಂಡಿದ್ದಾರೆ.

ಜಾಹೀರಾತು ಫಲಕವು ಅಕ್ರಮವಾಗಿದ್ದು, ಅದನ್ನು ಅಳವಡಿಸಲು ಯಾವುದೇ ಅಧಿಕೃತ ಅನುಮತಿ ಪಡೆದಿಲ್ಲ. ನಿರಾಕ್ಷೇಪಣಾ ಪತ್ರವನ್ನೂ ಪಡೆದಿಲ್ಲ ಎಂದಿದ್ದಾರೆ.

ಜಾಹೀರಾತು ಫಲಕ ಅಳವಡಿಕೆಗೆ ಅನುಮತಿ ನೀಡುವ ಅಧಿಕಾರ ಪಾಲಿಕೆಯದಾಗಿದ್ದರೂ ಪೊಲೀಸ್ ಅಧಿಕಾರಿ ಹೊರಗೆ ಇದಕ್ಕೆ ಅನುಮತಿ ನೀಡಿದ್ದಾರೆ. 40 ಅಡಿ ಫಲಕಕ್ಕೆ ಕಾಗದಗಳ ಮೇಲೆ ಅನುಮತಿ ನೀಡಲಾಗಿದೆ. ಆದರೆ ಕುಸಿದು ಬಿದ್ದಿರುವ ಫಲಕವು ಅನುಮತಿ ಇರುವುದಕ್ಕಿಂತ 3 ಪಟ್ಟಿಗೂ ಹೆಚ್ಚು ದೊಡ್ಡದಾಗಿದೆ. ಮುಂಬೈನ ವಿವಿಧೆಡೆ 400ಕ್ಕೂ ಹೆಚ್ಚು ಅಕ್ರಮ ಫಲಕಗಳಿವೆ ಬಹುದು ಎಂದು ಬಿಜೆಪಿ ಮುಖಂಡ ಕಿರೀಟ್ ಸೋಮಯ್ಯ ಕಿಡಿಕಾರಿದ್ದಾರೆ.

ಸುದ್ದಿ 2 ನಿಮಿಷ

ಅಬಕಾರಿ ಹಗರಣ: ಎಎಪಿ ಕೂಡ ಆರೋಪಿ–ಕೋರ್ಟ್‌ಗೆ ಇ.ಡಿ ಹೇಳಿಕೆ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಆಮ್ ಆದ್ಮಿ ಪಕ್ಷವನ್ನು (ಎಎಪಿ) ಆರೋಪಿಯಾಗಿ ಹೆಸರಿಸಲಾಗುವುದು ಎಂದು ಜಾರಿ ನಿರ್ದೇಶನಾಲಯವು (ಇ.ಡಿ) ದೆಹಲಿ ಹೈಕೋರ್ಟ್‌ಗೆ ಮಂಗಳವಾರ ತಿಳಿಸಿತು.

ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧಿತರಾಗಿರುವ ದೆಹಲಿಯ ಮಾಜಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರಿಗೆ ಜಾಮೀನು ನಿರಾಕರಿಸುವಂತೆ ವಿರೋಧಿಸುವ ಸಂದರ್ಭದಲ್ಲಿ ಇ.ಡಿ ಪರ ವಕೀಲರು ಕೋರ್ಟ್‌ಗೆ ಈ ಕುರಿತು ಮಾಹಿತಿ ನೀಡಿದರು.

ಪ್ರಕರಣ ಕುರಿತು ದೋಷಾರೋಪ ಪಟ್ಟಿ ಸಲ್ಲಿಸುವಾಗ ಎಎಪಿ ಅನ್ನೂ ಸಹ ಆರೋಪಿಯಾಗಿ ಹೆಸರಿಸಲಾಗುವುದು ಎಂದು ವಕೀಲರು, ಈ ಪ್ರಕರಣ ನಡೆಸುತ್ತಿರುವ ನ್ಯಾಯಮೂರ್ತಿ ಸ್ವರ್ಣಕಾಂತಾ ಶರ್ಮಾ ಅವರಿಗೆ ತಿಳಿಸಿದರು.

ಸಿಸೋಡಿಯಾ ಅವರಿಗೆ ಜಾಮೀನು ನೀಡಬೇಕು ಎಂದು ವಾದಿಸಿದ ಅವರ ಪರ ವಕೀಲರು, 'ಹಣ ಅಕ್ರಮ ವರ್ಗಾವಣೆ ಹಾಗೂ ಭ್ರಷ್ಟಾಚಾರ ಪ್ರಕರಣ ಸಂಬಂಧ ಇ.ಡಿ. ಇನ್ನೂ ಜನರನ್ನು ಬಂಧಿಸುತ್ತಿದೆ. ವಾದ ಮುಗಿಯುವ ಯಾವುದೇ ಸೂಚನೆಗಳಿಲ್ಲ' ಎಂದು ತಿಳಿಸಿದರು.

ಎಲ್ಗಾರ್ ಪರಿಷತ್ ಪ್ರಕರಣ ಗೌತಮ್ ನವಲಾಖಾಗೆ ಜಾಮೀನು

ನವದೆಹಲಿ: ಸಾಮಾಜಿಕ ಕಾರ್ಯಕರ್ತ ಗೌತಮ್ ನವಲಾಖಾ ಅವರಿಗೆ ಎಲ್ಗಾರ್ ಪರಿಷತ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಮಂಗಳವಾರ ಜಾಮೀನು ಮಂಜೂರು ಮಾಡಿದೆ.

ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್ ಮತ್ತು ಎಸ್.ವಿ.ಎನ್. ಭಟ್ಟಿ ಅವರು ಇದ್ದ ವಿಭಾಗೀಯ ಪೀಠವು ಜಾಮೀನು ಮಂಜೂರು ಮಾಡಿ, ಗೃಹಬಂಧನದ ವೆಚ್ಚವಾಗಿ ನವಲಾಖಾ ಅವರು ₹20 ಲಕ್ಷವನ್ನು ರಾಷ್ಟ್ರೀಯ ತನಿಖಾ ಸಂಸ್ಥೆಗೆ ನೀಡಬೇಕು ಎಂದು ಸೂಚಿಸಿದೆ.

ನವಲಾಖಾ ಅವರು ನಾಲ್ಕು ವರ್ಷಗಳಿಂದ ಬಂಧನದಲ್ಲಿ ಇದ್ದಾರೆ, ಅವರಿಗೆ 72 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿದೆ. ಅವರ ವಿರುದ್ಧ ದೋಷಾರೋಪ ನಿಗದಿ ಆಗಿಲ್ಲ. 370ಕ್ಕೂ ಹೆಚ್ಚು ಸಾಕ್ಷಿಗಳನ್ನು ಪರಿಗಣಿಸಬೇಕಿರುವ ಕಾರಣ ವಿಚಾರಣೆಯು ಪೂರ್ಣಗೊಳ್ಳಲು ವರ್ಷಗಳೇ ಬೇಕಾಗುತ್ತದೆ ಎಂದು ಪೀಠವು ಹೇಳಿದೆ.

ನವಲಾಖಾ ಅವರ ಬಿಡುಗಡೆಯನ್ನು ವಿರೋಧಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಅವರು, 'ನವಲಾಖಾ ಅವರು ರಾಷ್ಟ್ರವಿರೋಧಿ, ಅವರು ಕಾಶ್ಮೀರವನ್ನು ಭಾರತದಿಂದ ಪ್ರತ್ಯೇಕಿಸಲು ಆಗ್ರಹಿಸುತ್ತಿದ್ದರು' ಎಂದರು.

ಪರೀಕ್ಷಾ ಹಂತದಲ್ಲೇ ಸ್ಥಾವರದಲ್ಲಿ ದೋಷ

ಹಿಮಾಚಲ ಪ್ರದೇಶ: ಹೊಸ ಯೋಜನೆಗಳಿಗೆ ಅನುಮತಿ ನೀಡದಂತೆ ಪರಿಸರವಾದಿಗಳ ಆಗ್ರಹ

ಮುಖ್ಯಾಂಶಗಳು
- 25 ಮೆಗಾವಾಟ್ ಸಾಮರ್ಥ್ಯದ ಲಂಬಾಡಗ್ ಜಲ ವಿದ್ಯುತ್ ಯೋಜನೆ
- ಮೇಘಾ ಎಂಜಿನಿಯರಿಂಗ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್‌ನಿಂದ ನಿರ್ಮಾಣ

ನವದೆಹಲಿ (ಪಿಟಿಐ) : ಹಿಮಾಚಲ ಪ್ರದೇಶದಲ್ಲಿ 25 ಮೆಗಾವಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯದ ಲಂಬಾಡಗ್ ಜಲ ವಿದ್ಯುತ್ ಯೋಜನೆಯಲ್ಲಿ ಪರೀಕ್ಷಾ ಹಂತದಲ್ಲೇ ದೋಷ ಕಂಡುಬಂದಿದೆ. ಮೇ 10ರಂದು ಸ್ಥಾವರದ ಪೆನ್‌ಸ್ಟಾಕ್‌ನಲ್ಲಿ (ಜಲಚಕ್ರಕ್ಕೆ ನೀರು ಪಂಪ್ ಮಾಡುವ ಪೈಪ್) ಸೋರಿಕೆ ಕಂಡುಬಂದಿದೆ. ಇದರಿಂದಾಗಿ ಕಾಂಗ್ರಾ ಜಿಲ್ಲೆಯ ಮುಲ್ತಾನ್ ಗ್ರಾಮದಲ್ಲಿ ಆಸ್ತಿಪಾಸ್ತಿಗಳಿಗೆ ಗಮನಾರ್ಹ ಹಾನಿಯಾಗಿದೆ ಎಂದು ಪರಿಸರವಾದಿಗಳ ಸತ್ಯಶೋಧನಾ ತಂಡದಿಂದ ತಿಳಿದುಬಂದಿದೆ.

'ಹಿಮಧಾರಾ ಎನ್ವಿರಾನ್ಮೆಂಟ್ ರಿಸರ್ಚ್ ಆ್ಯಂಡ್ ಕಲೆಕ್ಟಿವ್' ತಂಡದ ಮೂವರು ಸದಸ್ಯರು ಕಳೆದ ಶನಿವಾರ ಆ ಪ್ರದೇಶಕ್ಕೆ ಭೇಟಿ ನೀಡಿ, ಹಾನಿ ಕುರಿತು ಸಾಕ್ಷ್ಯ ಸಂಗ್ರಹಿಸಿದ್ದಾರೆ.

ಸ್ಥಾವರದ ಪೆನ್‌ಸ್ಟಾಕ್‌ನಿಂದ ಕೆಸರು ಮಿಶ್ರಿತ ನೀರು ಚಿಮ್ಮಿ ಗ್ರಾಮದ 80 ಕುಟುಂಬಗಳ ಮೇಲೆ ಪರಿಣಾಮ ಬೀರಿದೆ. 25 ಮೆಗಾವಾಟ್ ಮತ್ತು ಅದಕ್ಕಿಂತ ಹೆಚ್ಚಿನ ಸಾಮರ್ಥ್ಯದ ಹೊಸ ಜಲ ವಿದ್ಯುತ್ ಯೋಜನೆಗಳಿಗೆ ನಿಷೇಧ ಹೇರುವಂತೆ ಪರಿಸರವಾದಿಗಳು ಬೇಡಿಕೆಯಿಟ್ಟಿದ್ದಾರೆ.

ಲಂಬಾಡಗ್ ನದಿಯ ಮೇಲೆ ನಿರ್ಮಿಸಲಾದ ಈ ಯೋಜನೆಯು ಬಿಯಾಸ್ ಹಾಗೂ ಅದರ ಉಪನದಿಗಳ 40 ಯೋಜನೆಗಳಲ್ಲೊಂದಾಗಿದೆ. ಇದರ 19 ಯೋಜನೆಗಳು ಭೂಗತ ಹಾಗೂ ಗಮನಾರ್ಹವಾದ ಉತ್ಖನನದೊಂದಿಗೆ 25 ಮೆಗಾವಾಟ್ ಮತ್ತು ಅದಕ್ಕಿಂತ ಹೆಚ್ಚಿನ ಸಾಮರ್ಥ್ಯ ಹೊಂದಿವೆ.

ಮೇಘಾ ಎಂಜಿನಿಯರಿಂಗ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್‌ನಿಂದ ಕಾರ್ಯಗತಗೊಳ್ಳುತ್ತಿರುವ ಯೋಜನೆಯಲ್ಲಿ ಆರಂಭದಲ್ಲೇ ಸೋರಿಕೆ ಕಂಡುಬಂದಿದೆ. ಸೋರಿಕೆಯ ಪ್ರಮಾಣ ಸಣ್ಣ ಪ್ರಮಾಣದಲ್ಲಿದ್ದು, ಸುರಕ್ಷತಾ ಪರಿಶೀಲನೆಯ ನಂತರ ಕಾರ್ಯಾರಂಭ ಮಾಡಲಾಗುವುದು ಎಂದು ಕಂಪನಿಯು ಜನರಿಗೆ ಭರವಸೆ ನೀಡಿದೆ.

ಮೇ 10ರಂದು ನಡೆದ ಈ ಘಟನೆಯಿಂದಾಗಿ ಮುಲ್ತಾನ್ ಮಾರುಕಟ್ಟೆ ಮತ್ತು 4 ಹೆಕ್ಟೇರ್ ಕೃಷಿಭೂಮಿ ಮೇಲೆ ಪರಿಣಾಮ ಬೀರಿದ್ದು, ಈ ಪ್ರದೇಶದಲ್ಲಿ 6 ಅಡಿಗಳಷ್ಟು ಕೆಸರು ಆವರಿಸಿಕೊಂಡಿರುವುದನ್ನು ತಂಡ ಪತ್ತೆಹಚ್ಚಿದೆ. ಜಲಾಶಯ ಸಂಪೂರ್ಣವಾಗಿ ಬರಿದಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದರೂ ನೀರು ಸೋರಿಕೆ ಮುಂದುವರಿದಿದೆ ಎಂದು ತಂಡ ಹೇಳಿದೆ.

ಮಳೆ: ಕೇರಳದ ಎರಡು ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್'

ತಿರುವನಂತಪುರ(ಪಿಟಿಐ): ಕೇರಳದಾದ್ಯಂತ ಉತ್ತಮ ಮಳೆಯಾಗುತ್ತಿರುವ ನಡುವೆಯೇ, ಭಾರತೀಯ ಹವಾಮಾನ ಇಲಾಖೆಯು(ಐಎಂಡಿ) ಕೇರಳದ 2 ಜಿಲ್ಲೆಗಳಿಗೆ ಮಂಗಳವಾರ 'ಆರೆಂಜ್ ಅಲರ್ಟ್' ಘೋಷಣೆ ಮಾಡಿದೆ.

ಕೇರಳದ ಪಟ್ಟಣಂತಿಟ್ಟ ಮತ್ತು ಇಡುಕ್ಕಿ ಜಿಲ್ಲೆಗಳಲ್ಲಿ 6 ಸೆಂ.ಮೀನಿಂದ 11 ಸೆಂ.ಮೀವರೆಗೆ ಮಳೆಯಾಗುವ ಸಾಧ್ಯತೆ ಇದೆ ಎಂದು ಐಎಂಡಿ ಮುನ್ಸೂಚನೆ ನೀಡಿದೆ. ಅಲ್ಲದೆ, ರಾಜ್ಯದ ದಕ್ಷಿಣ ಭಾಗದಲ್ಲಿರುವ 8 ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಿದೆ. ತಿರುವನಂತಪುರ, ಕೊಲ್ಲಂ, ಪಟ್ಟಣಂತಿಟ್ಟ, ಇಡುಕ್ಕಿ, ಪಾಲಕ್ಕಾಡ್, ಮಲಪ್ಪುರಂ ಮತ್ತು ವಯನಾಡು ಭಾಗದ ಒಂದೆರಡು ಸ್ಥಳಗಳಲ್ಲಿ ಅಬ್ಬರದ ಬಿರುಗಾಳಿ–ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆ ಇರುವುದಾಗಿಯೂ ಅಂದಾಜಿಸಿದೆ.

ಇದರ ನಡುವೆಯೇ, ಅರಬ್ಬಿ ಸಮುದ್ರದಲ್ಲಿ ಭಾರಿ ಎತ್ತರದ ಅಲೆಗಳು ಏಳಲಿರುವ ಕಾರಣ ಕೇರಳ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರವು-(ಕೆಎಸ್‌ಡಿಎಂಎ) ಮೀನುಗಾರರು, ಸಮುದ್ರ ತೀರದ ನಿವಾಸಿಗಳು ಹಾಗೂ ಪ್ರವಾಸಿಗರಿಗೆ ನೀರಿಗಿಳಿಯದಂತೆ ಮುನ್ನೆಚ್ಚರಿಕೆ ನೀಡಿದೆ.

ಸಲ್ಮಾನ್ ಖಾನ್ ನಿವಾಸದೆದುರು ನಡೆದಿದ್ದ ಗುಂಡಿನ ದಾಳಿ ಪ್ರಕರಣ

ಬಿಷ್ಣೋಯಿ ಗ್ಯಾಂಗ್ ಸದಸ್ಯನ ಬಂಧನ

ಮುಂಬೈ (ಪಿಟಿಐ): ಬಾಲಿವುಡ್ ಸೂಪರ್‌ಸ್ಟಾರ್ ಸಲ್ಮಾನ್ ಖಾನ್ ಅವರ ನಿವಾಸದ ಹೊರಗೆ ಗುಂಡಿನ ದಾಳಿ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಲಾರೆನ್ಸ್ ಬಿಷ್ಣೋಯಿ ಗ್ಯಾಂಗ್‌ನ ಮತ್ತೊಬ್ಬ ಸದಸ್ಯ ಹರಪಾಲ್ ಸಿಂಗ್ (34) ಎಂಬಾತನನ್ನು ಬಂಧಿಸಿದ್ದು, ಇಲ್ಲಿನ ನ್ಯಾಯಾಲಯವು ಆತನನ್ನು ಇದೇ 22ರವರೆಗೆ ಮುಂಬೈ ಪೊಲೀಸರ ವಶಕ್ಕೆ ಒಪ್ಪಿಸಿ ಮಂಗಳವಾರ ಆದೇಶಿಸಿದೆ.

ಆರೋಪಿಯು ಹರಿಯಾಣದ ಫತೇಹಾಬಾದ್ ನಿವಾಸಿಯಾಗಿದ್ದು, ಆತನನ್ನು ಮುಂಬೈ ಅಪರಾಧ ವಿಭಾಗದ ಪೊಲೀಸರು ಫತೇಹಾಬಾದ್‌ನಲ್ಲಿ ಸೋಮವಾರ ಬಂಧಿಸಿದ್ದರು ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಆರೋಪಿಯನ್ನು ಮುಂಬೈಗೆ ಕರೆತಂದ ಬಳಿಕ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ಪೊಲೀಸರು ವಿಚಾರಣೆ ಸಲುವಾಗಿ ಆರೋಪಿಯನ್ನು 14 ದಿನಗಳ ಕಾಲ ತಮ್ಮ ಕಸ್ಟಡಿಗೆ ಕೊಡುವಂತೆ ಕೋರಿದ್ದರು.

ಈ ಪ್ರಕರಣದಲ್ಲಿ ಈಗಾಗಲೇ ಬಂಧಿತನಾಗಿರುವ ಆರೋಪಿಯೊಬ್ಬ ವಿಚಾರಣೆ ಸಂದರ್ಭದಲ್ಲಿ ಹರಪಾಲ್ ಸಿಂಗ್ ಹೆಸರನ್ನ ಹೇಳಿದ್ದಾನೆ ಎಂದು ಪ್ರಾಸಿಕ್ಯೂಷನ್ ತಿಳಿಸಿದೆ. ಈ ಪ್ರಕರಣಕ್ಕ ಸಂಬಂಧಿಸಿದಂತೆ ಇಲ್ಲಿಯವರೆಗೆ ಬಂಧಿತರಾಗಿರುವವರಲ್ಲಿ ಸಿಂಗ್ ಆರನೇ ಆರೋಪಿ.

ಮುಂಬೈನ ಬಾಂದ್ರಾ ಪ್ರದೇಶದ ಗ್ಯಾಲಕ್ಸಿ ಅಪಾರ್ಟ್‌ಮೆಂಟ್‌ನಲ್ಲಿರುವ ಸಲ್ಮಾನ್ ಖಾನ್ ಅವರ ನಿವಾಸದ ಹೊರಗೆ ಏಪ್ರಿಲ್ 14ರಂದು ಮೋಟರ್ ಸೈಕಲ್‌ನಲ್ಲಿ ಬಂದ ಇಬ್ಬರು ವ್ಯಕ್ತಿಗಳು ಗುಂಡು ಹಾರಿಸಿ ಪರಾರಿಯಾಗಿದ್ದರು.

ಈ ಪ್ರಕರಣದಲ್ಲಿ ಬಂಧಿತನಾಗಿರುವ ಬಿಷ್ಣೋಯಿ ಗ್ಯಾಂಗ್‌ನ ಮತ್ತೊಬ್ಬ ಸದಸ್ಯ ಮೊಹಮ್ಮದ್ ರಫೀಲ್ ಚೌಧರಿ ಎಂಬಾತ ವಿಚಾರಣೆ ಸಮಯದಲ್ಲಿ ಸಿಂಗ್ ಹೆಸರು ಹೇಳಿದ್ದ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಖಾನ್ ಅವರ ನಿವಾಸದ ಸುತ್ತಲೂ ಸುತ್ತಾಡುತ್ತಿರುವಂತೆ ಚೌಧರಿ ಅವರಿಗೆ ಸೂಚಿಸಿದ್ದ ಸಿಂಗ್, ಅವರಿಗೆ ₹2–3 ಲಕ್ಷ ಪಾವತಿಸಿದ್ದರು ಎಂದು ಪೊಲೀಸರು ಹೇಳಿದ್ದಾರೆ.

ಏಪ್ರಿಲ್ 14ರಂದು ಗುಂಡಿನ ದಾಳಿ ನಡೆದ 48 ಗಂಟೆಗಳಲ್ಲಿ ಆಪಾದಿತ ಶೂಟರ್‌ಗಳಾದ ಬಿಹಾರ ಮೂಲದ ಸಾಗರ್‌ಪಾಲ್ ಮತ್ತು ವಿಕ್ಕಿ ಗುಪ್ತಾ ಅವರನ್ನು ಪೊಲೀಸರು ಗುಜರಾತಿನಲ್ಲಿ ಬಂಧಿಸಿದ್ದರು. ಈ ಶೂಟರ್‌ಗಳಿಗೆ ಶಸ್ತ್ರಾಸ್ತ್ರಗಳನ್ನು ಪೂರೈಸಿದ್ದ ಸೋನು ಬಿಷ್ಣೋಯ್ ಮತ್ತು ಅನುಜ್ ಥಾಪನ್ ಎಂಬುವರನ್ನು ಪಂಜಾಬಿನಲ್ಲಿ ಬಂಧಿಸಲಾಗಿತ್ತು.

ಮೇ 1ರಂದು ಪೊಲೀಸ್ ಲಾಕಪ್‌ನಲ್ಲಿ ಥಾಪನ್ ನೇಣು ಹಾಕಿಕೊಂಡು ಮೃತಪಟ್ಟಿದ್ದರು.

ರಾಜ್ಯಸಭೆ ಸದಸ್ಯೆ ಮೇಲೆ ಹಲ್ಲೆ ಪಕ್ಷದಿಂದ ಕಠಿಣ ಕ್ರಮ–ಎಎಪಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಆಪ್ತ ಕಾರ್ಯದರ್ಶಿ ಬಿಭವ್ ಕುಮಾರ್ ಅವರು ರಾಜ್ಯಸಭೆ ಸದಸ್ಯೆ ಸ್ವಾತಿ ಮಾಲಿವಾಲ್ ಜೊತೆ 'ಅನುಚಿತವಾಗಿ' ವರ್ತಿಸಿರುವುದು ನಿಜ. ಈ ಪ್ರಕರಣದಲ್ಲಿ ಪಕ್ಷ ಕಠಿಣ ಕ್ರಮ ಜರುಗಿಸಲಿದೆ ಎಂದು ಎಎಪಿ ತಿಳಿಸಿದೆ.

ಸೋಮವಾರ ಪೊಲೀಸರಿಗೆ ಕರೆ ಮಾಡಿದ್ದ ಸ್ವಾತಿ ಮಾಲಿವಾಲ್, ಮುಖ್ಯಮಂತ್ರಿಯವರ ಕಚೇರಿಯ ಸಿಬ್ಬಂದಿ ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ತಿಳಿಸಿದ್ದಾರೆ. ಪೊಲೀಸ್ ಠಾಣೆಗೆ ಹೋಗಿದ್ದರೂ ದೂರು ದಾಖಲಿಸಿರಲಿಲ್ಲ.

ಈ ಕುರಿತು ಸ್ವಾತಿ ಮಾಲಿವಾಲ್, ಮುಖ್ಯಮಂತ್ರಿಗಳ ಕಚೇರಿ ಅಥವಾ ಎಎಪಿಯಿಂದ ಯಾವುದೇ ಹೇಳಿಕೆ ಹೊರಬಿದ್ದಿಲ್ಲ. ಈ ಮಧ್ಯೆ, ಎಎಪಿಯ ಹಿರಿಯ ನಾಯಕ, ರಾಜ್ಯಸಭೆ ಸದಸ್ಯ ಸಂಜಯ್ ಕುಮಾರ್, 'ಇದು ಖಂಡನಾರ್ಹ ಘಟನೆ' ಎಂದು ಹೇಳಿದ್ದಾರೆ.

'ಸೋಮವಾರ ಮಾಲಿವಾಲ್ ಅವರು ಕೇಜ್ರಿವಾಲ್ ಭೇಟಿಗೆ ಅವರ ನಿವಾಸಕ್ಕೆ ಹೋಗಿದ್ದರು. ಆಗ, ಬಿಭವ್ ಕುಮಾರ್ ಅನುಚಿತವಾಗಿ ವರ್ತಿಸಿದ್ದಾರೆ. ಘಟನೆಯು ಕೇಜ್ರಿವಾಲ್ ಅವರ ಗಮನಕ್ಕೂ ಬಂದಿದ್ದು, ಕಠಿಣಕ್ರಮ ಜರುಗಿಸುವರು' ಎಂದು ಸಂಜಯ್ ಕುಮಾರ್ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಮೋದಿ ಸ್ಪರ್ಧೆ ನಿರ್ಬಂಧ ಕೋರಿದ್ದ ಅರ್ಜಿ ತಿರಸ್ಕೃತ

ನವದೆಹಲಿ (ಪಿಟಿಐ): ಚುನಾವಣಾ ಪ್ರಚಾರ ರ‍್ಯಾಲಿಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ದ್ವೇಷ ಭಾಷಣಗಳನ್ನು ಮಾಡುತ್ತಿದ್ದಾರೆ ಮತ್ತು ನೀತಿ ಸಂಹಿತೆಯನ್ನು ಉಲ್ಲಂಘಿಸಿದ್ದಾರೆ. ಹೀಗಾಗಿ ಅವರನ್ನು ಚುನಾವಣೆಯಲ್ಲಿ ಸ್ಪರ್ಧಿಸದಂತೆ ನಿರ್ಬಂಧಿಸಬೇಕು ಎಂದು ಕೋರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ತಿರಸ್ಕರಿಸಿದೆ.

ಫಾತಿಮಾ ಎಂಬುವವರು ಈ ಅರ್ಜಿ ಸಲ್ಲಿಸಿದ್ದರು. ಜನಪ್ರತಿನಿಧಿ ಕಾಯ್ದೆ ಅಡಿ ಮೋದಿ ಅವರನ್ನು ಚುನಾವಣೆಯಿಂದ ಆರು ವರ್ಷ ಕಾಲ ನಿಷೇಧಿಸುವಂತೆ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಬೇಕು ಎಂದು ಅವರು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದ್ದರು.

ತಮ್ಮ ದೂರುಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲಿಸುವಂತೆ ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಎಸ್.ಸಿ. ಶರ್ಮ ಅವರಿದ್ದ ಪೀಠವು ಅರ್ಜಿದಾರರಿಗೆ ಹೇಳಿತು. ಬಳಿಕ ಅರ್ಜಿದಾರರು ತಮ್ಮ ಅರ್ಜಿಯನ್ನು ಹಿಂಪಡೆದರು.

ರಾಷ್ಟ್ರನಾಯಕರ ಹೆಸರು ದುರ್ಬಳಕೆ ಆರೋಪ; 'ಸುಪ್ರೀಂ'ನಿಂದ ಅರ್ಜಿ ವಜಾ

ನವದೆಹಲಿ (ಪಿಟಿಐ): ರಾಷ್ಟ್ರನಾಯಕರು, ಸ್ವಾತಂತ್ರ್ಯ ಹೋರಾಟಗಾರರ ಹೆಸರನ್ನು ವೈಯಕ್ತಿಕ ಲಾಭಕ್ಕಾಗಿ ದುರ್ಬಳಕೆ ಮಾಡಿಕೊಳ್ಳುವವರಿಗೆ ಕಡಿವಾಣ ಹಾಕುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಸುಪ್ರೀಂ ಕೋರ್ಟ್ ಮಂಗಳವಾರ ತಳ್ಳಿಹಾಕಿದೆ.

ಈ ಅರ್ಜಿಯು ರಾಜಕೀಯ ಪ್ರೇರಿತವಾಗಿದೆ ಎಂದು ಅಭಿಪ್ರಾಯಪಟ್ಟ ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಸಂದೀಪ್ ಮೆಹ್ತಾ ಅವರಿದ್ದ ಪೀಠವು, ಈ ಕೋರ್ಟ್ ಏಕೆ ರಾಜಕೀಯ ಅಖಾಡವಾಗಿ ಬದಲಾಗಿದೆ ಎಂದು ಪ್ರಶ್ನಿಸಿತು. ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗ್ ಅವರ ಹೆಸರನ್ನು ಚುನಾವಣಾ ಪ್ರಚಾರದಲ್ಲಿ ಬಳಸುತ್ತಿದ್ದಾರೆ ಎಂದು ಅರ್ಜಿಯಲ್ಲಿ ಆರೋಪಿಸಲಾಗಿತ್ತು.

'ಯಾರೋ ಒಬ್ಬರನ್ನು ಗುರಿಯಾಗಿಸಿಕೊಂಡು ಈ ಅರ್ಜಿಯನ್ನು ಸಲ್ಲಿಸಲಾಗಿದೆ' ಎಂದು ಪೀಠ ಹೇಳಿತು. ಅರ್ಜಿ ವಿಚಾರಣೆ ನಡೆಸಲು ಪೀಠ ನಿರಾಸಕ್ತಿ ತೋರಿದ ಕಾರಣ ಅರ್ಜಿದಾರರು ಅರ್ಜಿಯನ್ನು ಹಿಂಪಡೆದರು.

ರಾಷ್ಟ್ರನಾಯಕರ ಹೆಸರನ್ನು ವೈಯಕ್ತಿಕ ಲಾಭಕ್ಕಾಗಿ ಬಳಸುವುದನ್ನು ವಾಕ್ ಸ್ವಾತಂತ್ರ್ಯ ಎಂದು ಪರಿಗಣಿಸಲಾಗುವುದಿಲ್ಲ ಎಂದು ಪ್ರತಿಪಾದಿಸಿ ವಿನಯ್ ಪಾಠಕ್ ಎಂಬುವವರು ಈ ಅರ್ಜಿ ಸಲ್ಲಿಸಿದ್ದರು.

ಇ.ಡಿ ವಿಚಾರಣೆಗೆ ಹಾಜರಾದ ಆಲಂ

ರಾಂಚಿ (ಪಿಟಿಐ): ಜಾರ್ಖಂಡ್ ಸಚಿವ ಹಾಗೂ ಕಾಂಗ್ರೆಸ್ ಮುಖಂಡ ಆಲಂಗೀರ್ ಆಲಂ ಅವರು ಮಂಗಳವಾರ ಇಲ್ಲಿನ ಇ.ಡಿ ಕಚೇರಿಗೆ ಬಂದು ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ವಿಚಾರಣೆ ಎದುರಿಸಿದರು.

ಬೆಳಿಗ್ಗೆ 11 ಗಂಟೆ ಸುಮಾರಿಗೆ ಇ.ಡಿ ಕಚೇರಿಯ ಬಳಿ ಬಂದ ಅವರು, ವಿಚಾರಣೆಗೆ ತೆರಳುವ ಮುನ್ನ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು. 'ನಾನು ಕಾನೂನಿನಗೆ ಬದ್ಧನಾಗಿದ್ದೇನೆ. ಇದಕ್ಕಾಗಿ ವಿಚಾರಣೆ ಎದುರಿಸಲು ಇಲ್ಲಿಗೆ ಬಂದಿದ್ದೇನೆ' ಎಂದರು.

ಆಲಂ ಅವರ ಆಪ್ತ ಕಾರ್ಯದರ್ಶಿ ಸಂಜೀವ್ ಕುಮಾರ್ ಲಾಲ್ (52) ಅವರ ಮನೆಕೆಲಸದ ವ್ಯಕ್ತಿ ಜಹಂಗೀರ್‌ಗೆ ಸಂಬಂಧಿಸಿದ ಸ್ಥಳದಲ್ಲಿ ₹32 ಕೋಟಿಗೂ ಹೆಚ್ಚು ಹಣ ಪತ್ತೆಯಾಗಿತ್ತು. ಈ ಹಿನ್ನೆಲೆಯಲ್ಲಿ ಸಂಜೀವ್ ಕುಮಾರ್ ಅವರನ್ನು ಕಳೆದ ವಾರ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಬಂಧಿಸಿದ್ದರು. ಅಲ್ಲದೆ, ಹಣ ಅಕ್ರಮ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿ ಹೇಳಿಕೆ ದಾಖಲಿಸಲು ಮಂಗಳವಾರ ಇ.ಡಿ ಕಚೇರಿಗೆ ಬರಬೇಕು ಎಂದು ಸಚಿವ ಆಲಂ ಅವರಿಗೆ ನೋಟಿಸ್ ನೀಡಲಾಗಿತ್ತು.

ಮಾಝಿ ಶರಣಾಗತಿ

ಕೋಲ್ಕತ್ತಾ (ಪಿಟಿಐ): ಪಶ್ಚಿಮ ಬಂಗಾಳದ ಬಹುಕೋಟಿ ಕಲ್ಲಿದ್ದಲು ಕಳ್ಳತನ ಹಗರಣದ ಪ್ರಮುಖ ಆರೋಪಿ ಅನೂಪ್ ಮಾಝಿ ಮಂಗಳವಾರ ಆಸನ್‌ಸೋಲ್‌ನಲ್ಲಿ ಸಿಬಿಐ ಕೋರ್ಟ್ ಎದುರು ಶರಣಾಗಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಮಾಝಿ ಅಲಿಯಾಸ್ ಲಾಲಾ ಕೆಲ ಸಮಯದಿಂದ ತಲೆಮರೆಸಿಕೊಂಡಿದ್ದರು.

ಇದಕ್ಕೂ ಮುನ್ನ ಮಾಝಿ ತನಿಖೆಗೆ ಸಹಕರಿಸುತ್ತಿದ್ದ ಕಾರಣ ಅವರ ಬಂಧನಕ್ಕೆ ಸುಪ್ರೀಂ ಕೋರ್ಟ್ ಮಧ್ಯಂತರ ತಡೆ ನೀಡಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಈವರೆಗೆ ನಾಲ್ವರನ್ನು ಬಂಧಿಸಲಾಗಿದ್ದು, ಮೂವರು ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ.

ಪ್ರಕರಣದ ಬಗ್ಗೆ ಸಿಬಿಐ 2020ರಿಂದ ತನಿಖೆ ನಡೆಸುತ್ತಿದ್ದು, ಈ ವರ್ಷ ಮೇ 21ರಂದು ದೋಷಾರೋಪ ಪಟ್ಟಿ ಸಲ್ಲಿಸಲಿದೆ ಎಂದು ಅಧಿಕಾರಿಗಳು ತಿಳಿಸಿದರು.

ಕೆನ್ಯಾಕ್ಕೆ ಭಾರತದಿಂದ ನೆರವು ರವಾನೆ

ನವದೆಹಲಿ (ಪಿಟಿಐ): ಪ್ರವಾಹ ಪೀಡಿತ ಕೆನ್ಯಾಗೆ 40 ಟನ್‌ನಷ್ಟು ಪರಿಹಾರ ಸಾಮಗ್ರಿಗಳು ಹಾಗೂ ಔಷಧವನ್ನು ಭಾರತ ಮಂಗಳವಾರ ರವಾನಿಸಿದೆ. ಅಗತ್ಯ ಸರಕುಗಳನ್ನು ಸೇನಾ ವಿಮಾನದ ಮೂಲಕ ಆಫ್ರಿಕಾ ಖಂಡದ ದೇಶಕ್ಕೆ ಕಳುಹಿಸಲಾಯಿತು.

'ಎರಡನೇ ಬಾರಿ 40 ಟನ್ ಪರಿಹಾರ ಸಾಮಗ್ರಿಗಳು ಮತ್ತು ಔಷಧಗಳನ್ನು ಕೀನ್ಯಾಗೆ ಕಳುಹಿಸಲಾಗಿದೆ. ಈ ಐತಿಹಾಸಿಕ ಪಾಲುದಾರಿಕೆಗೆ ನಿಂತಿದ್ದು, ವಿಶ್ವಕ್ಕೇ ವಿಶ್ವಬಂಧು' ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ.

ಕಳೆದವಾರ ಮೊದಲ ಹಂತದ ಪರಿಹಾರ ಸಾಮಗ್ರಿಗಳು ತಲುಪಿದ್ದವು. ವಿವಿಧ ಭಾಗಗಳಲ್ಲಿ ಉಂಟಾಗಿರುವ ಪ್ರವಾಹದಿಂದ ಕೆನ್ಯಾ ಸರ್ಕಾರದ ಅಂಕಿ–ಅಂಶಗಳ ಪ್ರಕಾರ ಕನಿಷ್ಠ 267 ಜನ ಸಾವಿಗೀಡಾಗಿದ್ದಾರೆ.

ಸಂದೇಶ್‌ಖಾಲಿಯಲ್ಲಿ ಮತ್ತೆ ಪ್ರತಿಭಟನೆ

ಕೋಲ್ಕತ್ತ (ಪಿಟಿಐ): ಸ್ಥಳೀಯ ಶಾಸಕ ಹಾಗೂ ಟಿಎಂಸಿ ಮುಖಂಡರ ಮೇಲೆ ಮುಗಿಬಿದ್ದ ಪ್ರಕರಣದಲ್ಲಿ ಭಾನುವಾರ ಬಂಧನವಾದ ನಾಲ್ವರು ಮಹಿಳೆಯರನ್ನು ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿ ಸಂದೇಶ್‌ಖಾಲಿಯಲ್ಲಿ ಸೋಮವಾರದಿಂದ ಆರಂಭವಾಗಿರುವ ಪ್ರತಿಭಟನೆಯು ಮಂಗಳವಾರವೂ ಮುಂದುವರಿಯಿತು.

ಬಂಧಿತ ಮಹಿಳೆಯರು ಬಿಜೆಪಿಯೊಂದಿಗೆ ನಂಟು ಹೊಂದಿದ್ದಾರೆ ಎಂಬ ಆರೋಪವಿದೆ. ಸ್ಥಳೀಯ ನ್ಯಾಯಾಲಯವು ಸೋಮವಾರ ಈ ನಾಲ್ವರು ಮಹಿಳೆಯರನ್ನು ನಾಲ್ಕು ದಿನಗಳ ಕಾಲ ಪೊಲೀಸ್ ವಶಕ್ಕೆ ಒಪ್ಪಿಸಿದೆ ಎಂದು ಪೊಲೀಸ್ ಅಧಿಕಾರಿ ಮಾಹಿತಿ ನೀಡಿದ್ದಾರೆ.

ನಾಲ್ವರು ಮಹಿಳೆಯರ ಬಂಧನ ವಿರೋಧಿಸಿ ಸೋಮವಾರ ಪ್ರತಿಭಟನೆ ಕೈಗೊಂಡ ಪ್ರತಿಭಟನಕಾರರು, ಸಂದೇಶ್‌ಖಾಲಿಯಲ್ಲಿ ಟೈರ್‌ಗಳಿಗೆ ಬೆಂಕಿ ಹಚ್ಚಿ, ರಸ್ತೆ ತಡೆ ನಡೆಸಿದರು. ಜೊತೆಗೆ ಬಿಜೆಪಿ ಮುಖಂಡರ ವ್ಯಕ್ತಿತ್ವಕ್ಕೆ ಚ್ಯುತಿ ತರುವಂತೆ ಇರುವ ವಿಡಿಯೊಗಳ ಹಂಚಿಕೆ ಬಗ್ಗೆಯೂ ಪ್ರತಿಭಟನಕಾರರು ಅಸಮಾಧಾನ ವ್ಯಕ್ತಪಡಿಸಿದರು. ಅಲ್ಲದೆ, ಪೊಲೀಸರು ತಮ್ಮ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಸ್ಥಳೀಯ ಮಹಿಳೆಯರು ದೂರಿದ್ದಾರೆ.

ಏನಿದು ಪ್ರಕರಣ: ಸಂದೇಶ್‌ಖಾಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಥಳೀಯ ಬಿಜೆಪಿ ಮುಖಂಡರ ವ್ಯಕ್ತಿತ್ವಕ್ಕೆ ಚ್ಯುತಿ ತರುವಂತಿರುವ ವಿಡಿಯೊಗಳನ್ನು ಹರಿಬಿಟ್ಟಿದ್ದನ್ನು ವಿರೋಧಿಸಿ ಭಾನುವಾರ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ಕೈಗೊಂಡಿದ್ದರು. ಈ ವೇಳೆ ಲೈಂಗಿಕ ದೌರ್ಜನ್ಯ ಪ್ರಕರಣಗಳಿಗೆ ಸಂಬಂಧಿಸಿ ಟಿಎಂಸಿ ನಾಯಕರು ಸುಳ್ಳು ಮಾಹಿತಿ ಹರಡುತ್ತಿದ್ದಾರೆ ಎಂದು ಆರೋಪಿಸಿ ಟಿಎಂಸಿಯ ಸ್ಥಳೀಯ ಶಾಸಕ ಸುಕುಮಾರ್ ಮಹತಾ ಅವರ ಮೇಲೆ ಪ್ರತಿಭಟನಕಾರರು ಮುಗಿಬಿದ್ದಿದ್ದರು. ಜೊತೆಗೆ ಸ್ಥಳೀಯ ಟಿಎಂಸಿ ಕಾರ್ಯಕರ್ತನ ಮೇಲೆ ಹಲ್ಲೆ ನಡೆಸಿದ್ದಾರೆ ಎಂಬ ಆರೋಪ ಕೇಳಿಬಂದಿತ್ತು. ಈ ಮೇರೆಗೆ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ನಾಲ್ವರು ಮಹಿಳೆಯರನ್ನು ಬಂಧಿಸಿದ್ದರು.

4 ಆಸ್ಪತ್ರೆಗಳಿಗೆ ಬಾಂಬ್ ಬೆದರಿಕೆ

ನವದೆಹಲಿ (ಪಿಟಿಐ): ದೆಹಲಿಯ ನಾಲ್ಕು ಆಸ್ಪತ್ರೆಗಳಿಗೆ ಬಾಂಬ್ ಬೆದರಿಕೆ ಇ–ಮೇಲ್ ಸಂದೇಶವನ್ನು ಮಂಗಳವಾರ ಕಳಿಸಲಾಗಿತ್ತು. ಇದು ಹುಸಿ ಬಾಂಬ್ ಸಂದೇಶ ಎಂದು ತಿಳಿದುಬಂದಿದೆ. ಈಚೆಗೆ ಈ ರೀತಿಯ ಬೆದರಿಕೆಗಳು ಪುನರಾವರ್ತನೆಯಾಗುತ್ತಿದ್ದು, ಎರಡು ದಿನಗಳ ಕೆಳಗಷ್ಟೇ ಇಲ್ಲಿಯ 20 ಆಸ್ಪತ್ರೆಗಳಿಗೆ ಬೆದರಿಕೆ ಸಂದೇಶ ಕಳಿಸಲಾಗಿತ್ತು.

ಜಿಟಿಬಿ ಆಸ್ಪತ್ರೆ, ದಾದಾ ದೇವ್ ಆಸ್ಪತ್ರೆ, ಹೆಡ್ಗೆವಾರ್ ಆಸ್ಪತ್ರೆ ಮತ್ತು ದೀಪ್ ಚಂದ್ರ ಬಂಧು ಆಸ್ಪತ್ರೆಗಳಲ್ಲಿ ಬಾಂಬ್ ಇರಿಸಿರುವುದಾಗಿ ಇ–ಮೇಲ್ ಸಂದೇಶ ಬಂದದ್ದಾಗಿ ದೆಹಲಿ ಅಗ್ನಿಶಾಮಕ ದಳದ ಅಧಿಕಾರಿಗಳು ತಿಳಿಸಿದ್ದಾರೆ. ಬಾಂಬ್ ನಿಷ್ಕ್ರಿಯ ಪಡೆ, ಬಾಂಬ್ ಪತ್ತೆ ತಂಡ, ಅಗ್ನಿಶಾಮಕ ದಳ ಮತ್ತು ಸ್ಥಳೀಯ ಪೊಲೀಸರು ಸ್ಥಳಗಳಿಗೆ ಧಾವಿಸಿ ಶೋಧಕಾರ್ಯ ನಡೆಸಿದರು. ಈ ವೇಳೆ ಶಂಕಾಸ್ಪದ ವಸ್ತುಗಳು ಪತ್ತೆಯಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಆಸ್ಪತ್ರೆಯ ವೈದ್ಯರೊಬ್ಬರಿಗೆ ಬೆದರಿಕೆ ಇ– ಮೇಲ್ ತಲುಪಿತು. ಪೊಲೀಸರು ಮತ್ತು ಬಾಂಬ್ ನಿಷ್ಕ್ರಿಯ ತಂಡವು ಆಸ್ಪತ್ರೆಯಲ್ಲಿ ತಪಾಸಣೆ ನಡೆಸಿದವು. ನಾವೂ ತಪಾಸಣೆ ನಡೆಸಿದೆವು' ಎಂದು ಹೆಡ್ಗೆವಾರ್ ಆಸ್ಪತ್ರೆಯ ಭದ್ರತಾ ಅಧಿಕಾರಿ ವಿ.ಕೆ. ಶರ್ಮಾ ತಿಳಿಸಿದ್ದಾರೆ.

ಶಾಲೆ, ಆಸ್ಪತ್ರೆ, ವಿಮಾನ ನಿಲ್ದಾಣ ಸೇರಿ ಕಳೆದ ಒಂದು ತಿಂಗಳಲ್ಲಿ ಬಾಂಬ್ ಬೆದರಿಕೆ ಸಂದೇಶ ಬಂದಿರುವುದು ಇದು ನಾಲ್ಕನೇ ಬಾರಿ.

ತ್ರಿಪುರಾ: ಜೈಲಿನಿಂದ ಕೈದಿ ಪರಾರಿ

ಅಗರ್ತಲಾ (ಪಿಟಿಐ): ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ನಿಷೇಧಿತ 'ನ್ಯಾಷನಲ್ ಲಿಬರೇಷನ್ ಫ್ರಂಟ್ ಆಫ್ ತ್ರಿಪುರಾ' ಸಂಘಟನೆಯ ಸದಸ್ಯ ತ್ರಿಪುರದಲ್ಲಿರುವ ಸಿಪಾಹಿಜಲಾ ಜಿಲ್ಲೆಯಲ್ಲಿರುವ ಕೇಂದ್ರೀಯ ಕಾರಾಗೃಹದಿಂದ ತಪ್ಪಿಸಿಕೊಂಡಿದ್ದಾನೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಆತ ಹೇಗೆ ತಪ್ಪಿಸಿಕೊಂಡಿರಬಹುದು ಎಂಬುದರ ಪರಿಶೀಲನೆಗಾಗಿ ಸಿ.ಸಿ.ಟಿ.ವಿ. ಕ್ಯಾಮೆರಾಗಳ ಪರಿಶೀಲನೆ ನಡೆಸಲಾಗಿದೆ. ಆತ ಬೆಳಗಿನ ಜಾವ ತಪ್ಪಿಸಿಕೊಂಡಿರಬಹುದು ಎಂದು ಹಿರಿಯ ಪೊಲೀಸ್ ಅಧಿಕಾರಿ ಮಾಹಿತಿ ನೀಡಿದ್ದಾರೆ.

ಮಂಗಳವಾರ ಬೆಳಿಗ್ಗೆ ಕಾರಾಗೃಹದಲ್ಲಿರುವ ಕೈದಿಗಳ ಲೆಕ್ಕಾಚಾರದ ವೇಳೆ ಸ್ವರ್ಣ ಕುಮಾರ್ ತ್ರಿಪುರಾ–ಜೈಲಿನಿಂದ ನಾಪತ್ತೆಯಾಗಿರುವುದು ಗೊತ್ತಾಗಿದೆ ಎಂದು ಸಿಪಾಹಿಜಲಾ ಜಿಲ್ಲಾ ಮ್ಯಾಜಿಸ್ಟ್ರೇಟ್ ನಾಗೇಶ್ ಕುಮಾರ್ ತಿಳಿಸಿದ್ದಾರೆ.

ದಕ್ಷಿಣ ತ್ರಿಪುರದ ಸಾಂತ್ರಿಬಜಾರ್ ಪ್ರದೇಶದಲ್ಲಿ ನಡೆದ ಕೊಲೆ ಪ್ರಕರಣದಲ್ಲಿ ಸ್ವರ್ಣ ಕುಮಾರ್ ಬಂಧನವಾಗಿತ್ತು. ಆತ ತಪ್ಪಿಸಿಕೊಂಡಿರುವ ಬಗ್ಗೆ ಎಲ್ಲಾ ಠಾಣೆಗಳಿಗೆ ಮಾಹಿತಿ ನೀಡಲಾಗಿದ್ದು, ಆತನ ಬಂಧನಕ್ಕಾಗಿ ತೀವ್ರ ಶೋಧ ಕಾರ್ಯಾಚರಣೆ ಕೈಗೊಳ್ಳಲಾಗಿದೆ ಎಂದು ನಾಗೇಶ್ ಕುಮಾರ್ ತಿಳಿಸಿದ್ದಾರೆ.

ಕವಿತಾ ನ್ಯಾಯಾಂಗ ಬಂಧನ ವಿಸ್ತರಣೆ

ಕೆ.ಕವಿತಾ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಿಆರ್‌ಎಸ್ ನಾಯಕಿ ಕೆ. ಕವಿತಾ ಅವರ ನ್ಯಾಯಾಂಗ ಬಂಧನವನ್ನು ದೆಹಲಿ ನ್ಯಾಯಾಲಯವು ಮಂಗಳವಾರ ಮೇ 20ರವರೆಗೆ ವಿಸ್ತರಿಸಿದೆ.

ಕೆ. ಕವಿತಾ ಅವರ ನ್ಯಾಯಾಂಗ ಬಂಧನದ ಅವಧಿ ಮಂಗಳವಾರ ಕೊನೆಗೊಂಡಿದ್ದರಿಂದಾಗಿ ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಸಿಬಿಐ ಮತ್ತು ಇ.ಡಿ ತನಿಖೆ ನಡೆಸುವ ಪ್ರಕರಣಗಳಿಗೆ ಸಂಬಂಧಿಸಿದ ವಿಶೇಷ ನ್ಯಾಯಾಧೀಶರಾದ ಕಾವೇರಿ ಬವೇಜಾ, ನ್ಯಾಯಾಂಗ ಬಂಧನದ ಅವಧಿ ವಿಸ್ತರಿಸಿ ಆದೇಶ ಹೊರಡಿಸಿದರು.

ಜೊತೆಗೆ ಈ ಪ್ರಕರಣ ಸಂಬಂಧ ಜಾರಿ ನಿರ್ದೇಶನಾಲಯವು (ಇ.ಡಿ) ಶುಕ್ರವಾರ ಹೊಸದಾಗಿ ಸಲ್ಲಿಸಿರುವ ದೋಷಾರೋಪಪಟ್ಟಿಯನ್ನು ಪರಿಗಣಿಸಬಹುದೇ ಎಂಬುದರ ಆದೇಶವನ್ನು ಮೇ 20ಕ್ಕೆ ಕಾಯ್ದಿರಿಸಿದೆ. ಕವಿತಾ ಅವರನ್ನು ವಿಚಾರಣೆಗೊಳಪಡಿಸಲು ಅಗತ್ಯವಿರುವ ಸಾಕ್ಷ್ಯಾಧಾರಗಳು ದೋಷಾರೋಪ ಪಟ್ಟಿಯಲ್ಲಿವೆ ಎಂದು ಜಾರಿ ನಿರ್ದೇಶನಾಲಯ ಮಂಗಳವಾರ ವಾದಿಸಿತು.

ದೆಹಲಿ ಅಬಕಾರಿ ನೀತಿಯಲ್ಲಿ ನಡೆದಿದೆ ಎನ್ನಲಾದ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯವು ಈವರೆಗೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸೇರಿ 18 ಮಂದಿಯನ್ನು ಬಂಧಿಸಿದೆ. ಈ ಪೈಕಿ ಕೇಜ್ರಿವಾಲ್ ಅವರಿಗೆ ಸುಪ್ರೀಂ ಕೋರ್ಟ್ ಜಾಮೀನು ನೀಡಿದೆ. ಜೊತೆಗೆ ಈ ಪ್ರಕರಣ ಸಂಬಂಧ ಇ.ಡಿ ಈವರೆಗೆ 7 ಆರೋಪ ಪಟ್ಟಿಗಳನ್ನು ಸಲ್ಲಿಸಿದೆ.

ಅಪಹೃತವಾಗಿದ್ದ ಮಗುವಿನ ರಕ್ಷಣೆ

ಜೈಪುರ (ಪಿಟಿಐ) : ಕೋಟಾ ರೈಲ್ವೆ ನಿಲ್ದಾಣದಿಂದ ಅಪಹರಣಕ್ಕೊಳಗಾಗಿದ್ದ ನಾಲ್ಕು ವರ್ಷದ ಮಗು ಸೇರಿದಂತೆ ಇಬ್ಬರು ಮಕ್ಕಳನ್ನು ಜೈಪುರದಲ್ಲಿ ರಕ್ಷಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಿಳೆಯೊಬ್ಬರೂ ಸೇರಿ ಐವರನ್ನು ಬಂಧಿಸಲಾಗಿದೆ ಎಂದು ಶುಕ್ರವಾರ ಪೊಲೀಸರು ತಿಳಿಸಿದ್ದಾರೆ.

ಪೊಲೀಸರು ತಿಳಿಸಿರುವಂತೆ 4 ವರ್ಷದ ಬಾಲಕನನ್ನು ಮೇ 5ರ ರಾತ್ರಿ ಅಪಹರಿಸಿದ ಹರಿಯಾಣದ ಗುಂಪು ಭೋಪಾಲ್‌ಗೆ ಕರೆದೊಯ್ದಿತ್ತು. ಅಲ್ಲಿಂದ ಜೈಪುರಕ್ಕೆ ಕರೆತಂದ ನಂತರ ರೈಲ್ವೆ ಪೊಲೀಸರು ಮಗುವನ್ನು ವಶಪಡಿಸಿಕೊಂಡಿದ್ದಾರೆ.

ಇದೇ ವೇಳೆ, 10 ವರ್ಷದ ಹಿಂದೆ ಅಪಹರಣಕ್ಕೊಳಗಾಗಿದ್ದ ಸುಮಾರು 15 ವರ್ಷ ವಯಸ್ಸಿನ ಬಾಲಕನನ್ನು ಕೂಡ ಇದೇ ಅಪಹರಣಕಾರರ ಗುಂಪಿನಿಂದ ವಶಪಡಿಸಿಕೊಳ್ಳಲಾಗಿದೆ. ಈ ಮಕ್ಕಳನ್ನು ಸಾಹಸ ಪ್ರದರ್ಶನ ಹಾಗೂ ಭಿಕ್ಷಾಟನೆಗೆ ಬಳಸಿಕೊಳ್ಳಲಾಗುತ್ತಿತ್ತು ಎಂದು ಪೊಲೀಸ್ ಹೆಚ್ಚುವರಿ ಮಹಾನಿರ್ದೇಶಕ ಅನಿಲ್ ಪಾಲಿವಾಲ್ ತಿಳಿಸಿದ್ದಾರೆ.

ರೈಲ್ವೆ ನಿಲ್ದಾಣದಲ್ಲಿ ನಾಲ್ಕು ವರ್ಷದ ಮಗುವಿನ ತಂದೆ ಟಿಕೆಟ್ ಪಡೆಯಲು ಒಂಟಿಯಾಗಿ ಬಿಟ್ಟು ಹೋದಾಗ ಅಪರಿಚಿತ ವ್ಯಕ್ತಿಗಳು ಅಪಹರಿಸಿದ್ದರು.

ಮಗುವಿನ ತಂದೆ 5 ನಿಮಿಷಗಳ ಬಳಿಕ ಹಿಂದಿರುಗಿದ್ದಾರೆ. ಮಗು ಕಾಣದಿದ್ದಾಗ ಪೊಲೀಸರಿಗೆ ತಿಳಿಸಿದ್ದಾರೆ. ನಂತರ ಸಿ.ಸಿ.ಟಿ.ವಿ. ದೃಶ್ಯಾವಳಿಗಳನ್ನು ಪರಿಶೀಲಿಸಲಾಗಿದೆ. ಈ ಕುರಿತು ವಿಸ್ತೃತವಾದ ತನಿಖೆ ನಡೆಸಲಾಗಿದೆ ಮತ್ತು ಆರೋಪಿಗಳು ರಸ್ತೆ ಮೂಲಕ ಭೋಪಾಲ್‌ಗೆ ತೆರಳಿರುವುದು ಕಂಡುಬಂದಿದೆ ಎಂದು ಪಾಲಿವಾಲ್ ತಿಳಿಸಿದ್ದಾರೆ.

'4 ರಿಂದ ಮರಾಠ ಮೀಸಲಾತಿ ಹೋರಾಟ'

ಛತ್ರಪತಿ ಸಂಭಾಜಿನಗರ (ಪಿಟಿಐ): 'ಮರಾಠ ಸಮುದಾಯದ ಮೀಸಲಾತಿಗೆ ಒತ್ತಾಯಿಸಿ ಲೋಕಸಭಾ ಚುನಾವಣೆಯ ಫಲಿತಾಂಶ ಪ್ರಕಟವಾಗುವ ದಿನವಾದ ಜೂನ್ 4ರಿಂದ ಮತ್ತೆ ಹೋರಾಟ ಆರಂಭಿಸಲಾಗುವುದು' ಎಂದು ಮೀಸಲಾತಿ ಹೋರಾಟಗಾರ ಮನೋಜ್ ಜರಾಂಗೆ ಮಂಗಳವಾರ ಎಚ್ಚರಿಕೆ ನೀಡಿದ್ದಾರೆ.

'ಜೂನ್ 4ರ ಬೆಳಿಗ್ಗೆ 9 ಹಂಟೆಗೆ ಅನಿರ್ದಿಷ್ಟಾವಧಿ ನಿರಶನದೊಂದಿಗೆ ಪ್ರತಿಭಟನೆ ಆರಂಭಿಸುತ್ತೇವೆ. ಈ ಪ್ರತಿಭಟನೆಯು ಶಾಂತಿಯುತವಾಗಿರಲಿದೆ. ಆದರೆ, ಅದಕ್ಕೂ ಮುಂಚಿತವಾಗಿಯೇ ಸರ್ಕಾರ ಕ್ರಮ ಕೈಗೊಳ್ಳಲಿದೆ' ಎಂದರು.

ಶಿವಾಜಿ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಜರಾಂಗೆ, 'ಶಿಕ್ಷಣ ಸಂಸ್ಥೆಗಳಲ್ಲಿ ದಾಖಲಾತಿ, ಸರ್ಕಾರಿ ಕೆಲಸಗಳಿಗೆ ನೇಮಕಾತಿಯಲ್ಲಿ ಮರಾಠ ಸಮುದಾಯಕ್ಕೆ ಮೀಸಲಾತಿ ನೀಡಲು ಒತ್ತಾಯಿಸಿ ಜೂನ್ 8ರಂದು ರ‍್ಯಾಲಿ ಆಯೋಜಿಸಲಾಗುವುದು' ಎಂದರು.

ಮೋದಿ ನಾಮಪತ್ರ; ಬಲ ಪ್ರದರ್ಶನ

ವಾರಾಣಸಿ: ಕೇಂದ್ರದ ಹಲವು ಸಚಿವರು, ಮುಖ್ಯಮಂತ್ರಿಗಳು, ಎನ್‌ಡಿಎ ಮಿತ್ರ ಪಕ್ಷಗಳ ನಾಯಕರು ಭಾಗಿ

ವಾರಾಣಸಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ವಾರಾಣಸಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ಮಂಗಳವಾರ ನಾಮಪತ್ರ ಸಲ್ಲಿಸಿದರು. ಈ ವೇಳೆ ಎನ್‌ಡಿಎ ಕೂಟದ ಹಲವು ಮುಖಂಡರು, ಕೇಂದ್ರ ಸಚಿವರು ಮತ್ತು ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ಪಾಲ್ಗೊಂಡು ಶಕ್ತಿ ಪ್ರದರ್ಶನ ನಡೆಸಿದರು.

‘ಕಾಶಿಯೊಂದಿಗಿನ ನನ್ನ ಸಂಬಂಧವು ಅದ್ಭುತವಾದದ್ದು, ಬೇರ್ಪಡಿಸಲಾಗದಂಥದ್ದು ಮತ್ತು ಹೋಲಿಕೆಗೆ ನಿಲುಕದ್ದು’ ಎಂದು ಪ್ರಧಾನಿ ಮೋದಿ ನಾಮಪತ್ರ ಸಲ್ಲಿಕೆಗೂ ಮುನ್ನ ‘ಎಕ್ಸ್’ ನಲ್ಲಿ ಪೋಸ್ಟ್ ಮಾಡಿದ್ದರು.

ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಕೇಂದ್ರ ಸಚಿವರಾದ ಅಮಿತ್ ಶಾ, ರಾಜನಾಥ್ ಸಿಂಗ್, ಹರ್‌ದೀಪ್ ಸಿಂಗ್ ಪುರಿ, ಅನುಪ್ರಿಯಾ ಪಟೇಲ್ ಸೇರಿದಂತೆ ಹಲವರು ಪ್ರಧಾನಿ ಮೋದಿ ಜತೆಗೂಡಿದ್ದರು. ಅನಾರೋಗ್ಯದ ಕಾರಣ ನೀಡಿದ್ದ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಗೈರಾಗಿದ್ದರು.

ಬಿಳಿ ಕುರ್ತಾ, ಪೈಜಾಮಾ ಮತ್ತು ನೀಲಿ ವೇಯ್ಸ್ಟ್ ಕೋಟ್ ಧರಿಸಿದ್ದ ಪ್ರಧಾನಿ ಮೋದಿ, ವಾರಾಣಸಿ ಜಿಲ್ಲಾಧಿಕಾರಿ ಕಚೇರಿ ಬಳಿ ಬರುವ ಹೊತ್ತಿಗೆ ಅಲ್ಲಿ ದೊಡ್ಡ ಸಂಖ್ಯೆಯಲ್ಲಿ ಜನ ನೆರೆದಿದ್ದರು. ಪ್ರಧಾನಿ ಅವರತ್ತ ಕೈ ಬೀಸಿದರು.

ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ, ಮೇಘಾಲಯ ಮುಖ್ಯಮಂತ್ರಿ ಕಾನ್ರಾಡ್ ಸಂಗ್ಮಾ, ಎನ್‌ಸಿಪಿ ಮುಖಂಡ ಪ್ರಫುಲ್ ಪಟೇಲ್, ಟಿಡಿಪಿ ಮುಖ್ಯಸ್ಥ ಚಂದ್ರಬಾಬು ನಾಯ್ಡು, ಜನಸೇನಾ ಮುಖ್ಯಸ್ಥ ಪವನ್ ಕಲ್ಯಾಣ್, ಹಿಂದೂಸ್ಥಾನ್ ಅವಾಮಿ ಮೋರ್ಚಾ (ಜಾತ್ಯತೀತ) ಸ್ಥಾಪಕ ಜಿತನ್ ರಾಮ್ ಮಾಂಝಿ, ರಾಷ್ಟ್ರೀಯ ಲೋಕ ಮೋರ್ಚಾ ಮುಖ್ಯಸ್ಥ ಉಪೇಂದ್ರ ಕುಶ್ವಾಹ, ಉತ್ತರ ಪ್ರದೇಶದ ಸಚಿವ ಸಂಜಯ್ ನಿಶಾದ್, ಓಂಪ್ರಕಾಶ್ ರಾಜ್‌ಭರ್, ಜಯಂತ್ ಚೌಧರಿ, ಚಿರಾಗ್ ಪಾಸ್ವಾನ್, ಅನ್ಬುಮಣಿ ರಾಮದಾಸ್, ಜಿ.ಕೆ.ವಾಸನ್, ದೇವನಾಥನ್ ಯಾದವ್ ಅವರು ಜಿಲ್ಲಾಧಿಕಾರಿ ಕಚೇರಿ ಬಳಿ ನೆರೆದಿದ್ದರು.

ನಾಮಪತ್ರ ಸಲ್ಲಿಕೆಯ ನಂತರ ಪ್ರಧಾನಿ ಮೋದಿ ಅವರು ಬಿಜೆಪಿ ಕಾರ್ಯಕರ್ತರ ಸಭೆ ನಡೆಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ವಾರಾಣಸಿ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದರು —ಪಿಟಿಐ ಚಿತ್ರ

ಗಂಗಾ ಆರತಿ ನೆರವೇರಿಸಿದ ಪ್ರಧಾನಿ

ಪ್ರಧಾನಿ ನರೇಂದ್ರ ಮೋದಿ ಅವರು ನಾಮಪತ್ರ ಸಲ್ಲಿಕೆಗೂ ಮುನ್ನ ಗಂಗಾ ನದಿಯ ದಡದಲ್ಲಿರುವ ದಶಾಶ್ವಮೇಧ ಘಾಟ್‌ನಲ್ಲಿ ಪೂಜೆ ಸಲ್ಲಿಸಿದರು. ವೇದಮಂತ್ರಗಳ ಪಠಣದ ನಡುವೆ ಅವರು ಘಾಟ್‌ನಲ್ಲಿ ಗಂಗಾ ಆರತಿ ನೆರವೇರಿಸಿದರು.

ದಶಾಶ್ವಮೇಧ ಘಾಟ್‌ನಿಂದ ಅವರು ಕ್ರೂಸ್‌ನಲ್ಲಿ ನಮೋ ಘಾಟ್‌ಗೆ ಪ್ರಯಾಣಿಸಿದರು. ನಂತರ ಕಾಲಭೈರವ ದೇವಸ್ಥಾನಕ್ಕೆ ತೆರಳಿ, ಪೂಜೆ ಸಲ್ಲಿಸಿದರು. ಈ ವೇಳೆ ಯೋಗಿ ಆದಿತ್ಯನಾಥ ಅವರು ಪ್ರಧಾನಿ ಜತೆಗಿದ್ದರು.

₹3 ಕೋಟಿ ಆಸ್ತಿ ಘೋಷಣೆ

ವಾರಾಣಸಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಒಟ್ಟು ₹3 ಕೋಟಿ ಮೌಲ್ಯದ ಆಸ್ತಿ ಹೊಂದಿದ್ದಾರೆ. ನಾಮಪತ್ರದೊಂದಿಗೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಈ ವಿವರಗಳಿದ್ದು, ಆಸ್ತಿಯಲ್ಲಿ ಹೆಚ್ಚಿನ ಪಾಲು ನಿಶ್ಚಿತ ಠೇವಣಿಗಳದ್ದಾಗಿದೆ.

ಚುನಾವಣಾ ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟವಾಗಿರುವ ಪ್ರಮಾಣ ಪತ್ರದ ಪ್ರಕಾರ, ಪ್ರಧಾನಿಯ ಒಟ್ಟು ಆಸ್ತಿ ಮೌಲ್ಯ ₹3.02 ಕೋಟಿ. ಅದರಲ್ಲಿ ₹2.85 ಕೋಟಿ ಎಸ್‌ಬಿಐನಲ್ಲಿ ನಿಶ್ಚಿತ ಠೇವಣಿಯಾಗಿದೆ.

₹2.67 ಲಕ್ಷ ಮೌಲ್ಯದ 45 ಗ್ರಾಂನ ನಾಲ್ಕು ಚಿನ್ನದ ಉಂಗುರ, ₹52,920 ನಗದು, ₹9.12 ಲಕ್ಷದ ರಾಷ್ಟ್ರೀಯ ಉಳಿತಾಯ ಪತ್ರ (ಎನ್‌ಎಸ್‌ಸಿ ಬಾಂಡ್) ಮತ್ತು ಕಳೆದ ಆರ್ಥಿಕ ವರ್ಷದ ಆದಾಯ ತೆರಿಗೆ ಕಡಿತದ ಮೊತ್ತವಾದ ₹3.33 ಲಕ್ಷ ಇರುವುದಾಗಿ ಘೋಷಿಸಿಕೊಂಡಿದ್ದಾರೆ. ಪ್ರಮಾಣ ಪತ್ರದ ಪ್ರಕಾರ, ನರೇಂದ್ರ ಮೋದಿ ಬಳಿ ಯಾವುದೇ ಸ್ಥಿರಾಸ್ತಿ ಇಲ್ಲ. ಪತ್ನಿ ಹೆಸರನ್ನು ಜಶೋದಾ ಬೆನ್ ಎಂದು ನಮೂದಿಸಲಾಗಿದೆ.

ಪ್ರಧಾನಿ ಅವರು 2014ರಲ್ಲಿ ₹ 1.65 ಕೋಟಿ, 2019ರಲ್ಲಿ ₹ 2.5 ಕೋಟಿ ಆಸ್ತಿ ಘೋಷಿಸಿದ್ದರು.

ಮುಹೂರ್ತ ನಿಗದಿ ಮಾಡಿದ್ದ ಶಾಸ್ತ್ರಿ ಭಾಗಿ

ಪಂಡಿತ್ ಜ್ಞಾನೇಶ್ವರ್ ಶಾಸ್ತ್ರಿ, ಆರ್‌ಎಸ್‌ಎಸ್ ಮುಖಂಡ ಬೈಜನಾಥ ಪಟೇಲ್, ಲಾಲ್‌ಚಂದ್ ಕುಶ್ವಾಹ ಮತ್ತು ಸಂಜಯ್ ಸೋನ್‌ಕರ್ ಅವರು ಪ್ರಧಾನಿಯ ನಾಮಪತ್ರಕ್ಕೆ ಸೂಚಕರಾಗಿದ್ದಾರೆ ಎಂದು ವಾರಾಣಸಿ ಜಿಲ್ಲಾ ಬಿಜೆಪಿ ಘಟಕದ ಮಾಧ್ಯಮ ಸಹ ಉಸ್ತುವಾರಿ ಅರವಿಂದ ಮಿಶ್ರಾ ಹೇಳಿದ್ದಾರೆ.

ಇವರ ಪೈಕಿ ಶಾಸ್ತ್ರಿ, ಅಯೋಧ್ಯೆಯ ಬಾಲರಾಮನ ಪ್ರಾಣ ಪ್ರತಿಷ್ಠಾಪನೆಗೆ ಮುಹೂರ್ತ ನಿಗದಿ ಮಾಡಿದವರಾದರೆ, ಲಾಲ್‌ಚಂದ್ ಕುಶ್ವಾಹ ಒಬಿಸಿ ಮುಖಂಡರಾಗಿದ್ದಾರೆ. ದಲಿತ ಸಮುದಾಯಕ್ಕೆ ಸೇರಿದ ಸಂಜಯ್ ಸೋನ್‌ಕರ್ ವಾರಾಣಸಿ ಬಿಜೆಪಿ ಘಟಕದ ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ. ಸೂಚಕರ ಪೈಕಿ ಶಾಸ್ತ್ರಿ ಮತ್ತು ಪಟೇಲ್ ನಾಮಪತ್ರ ಸಲ್ಲಿಕೆಯ ವೇಳೆ ಹಾಜರಿದ್ದರು.

ದತ್ತು ಪಡೆದಿದ್ದ ವಾರಾಣಸಿಯ ಹಳ್ಳಿಗಳನ್ನು ಪ್ರಧಾನಿ ಮೋದಿ ಕೈಬಿಟ್ಟಿದ್ದೇಕೆ: ಕಾಂಗ್ರೆಸ್ ಪ್ರಶ್ನೆ

‘ಗಂಗಾ ಮತ್ತಷ್ಟು ಮಲಿನವಾಗಿದ್ದು ಏಕೆ?’

ನವದೆಹಲಿ (ಪಿಟಿಐ): ವಾರಾಣಸಿಯಲ್ಲಿ ಪ್ರಧಾನಿ ದತ್ತು ಪಡೆದಿದ್ದ ಹಳ್ಳಿಗಳನ್ನು ಕೈಬಿಟ್ಟಿದ್ದು ಏಕೆ, ₹20 ಸಾವಿರ ಕೋಟಿ ಖರ್ಚು ಮಾಡಿದರೂ ಗಂಗಾ ನದಿ ಮತ್ತಷ್ಟು ಮಲಿನಗೊಂಡಿರುವುದು ಏಕೆ ಎಂದು ಕಾಂಗ್ರೆಸ್ ಪಕ್ಷವು ಪ್ರಧಾನಿ ನರೇಂದ್ರ ಮೋದಿ ಅವರನ್ನು ಮಂಗಳವಾರ ಪ್ರಶ್ನಿಸಿದೆ.

ಮೋದಿ ನಾಮಪತ್ರ ಸಲ್ಲಿಸಿದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಅವರಿಗೆ ಹಲವು ಪ್ರಶ್ನೆಗಳನ್ನು ಕೇಳಿದ್ದು, ‘ನಿರ್ಗಮಿತ’ ಪ್ರಧಾನಿಯು ವಾರಾಣಸಿಯಲ್ಲಿನ ಅವರ ವೈಫಲ್ಯಗಳಿಗೆ ಉತ್ತರಿಸಬೇಕು ಎಂದಿದೆ.

ಈ ಬಗ್ಗೆ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಕಾಂಗ್ರೆಸ್ ಮುಖಂಡ ಜೈರಾಮ್ ರಮೇಶ್, ‘2014ರಲ್ಲಿ ಮೋದಿ ವಾರಾಣಸಿಗೆ ಬಂದಾಗ, ‘ಗಂಗಾ ಮಾತೆಯು ನನ್ನನ್ನು ಕರೆದಿದ್ದಾಳೆ’ ಎಂದು ಹೇಳಿದ್ದರು ಮತ್ತು ಪವಿತ್ರ ಗಂಗೆಯ ನೀರನ್ನು ಸ್ವಚ್ಛಗೊಳಿಸುವುದಾಗಿ ಭರವಸೆ ನೀಡಿದ್ದರು. ಆದರೆ, ಅಧಿಕಾರಕ್ಕೆ ಬಂದ ನಂತರ ಚಾಲ್ತಿಯಲ್ಲಿದ್ದ ‘ಆಪರೇಷನ್ ಗಂಗಾ’ ಅನ್ನು ‘ನಮಾಮಿ ಗಂಗಾ’ ಎಂದು ಬದಲಾಯಿಸಿದರು’ ಎಂದು ಉಲ್ಲೇಖಿಸಿದ್ದಾರೆ.

‘ಹತ್ತು ವರ್ಷಗಳಲ್ಲಿ ‘ನಮಾಮಿ ಗಂಗಾ’ ಯೋಜನೆಗಾಗಿ ಬೊಕ್ಕಸದಿಂದ ₹20 ಸಾವಿರ ಕೋಟಿ ಖರ್ಚು ಮಾಡಲಾಗಿದೆ. ಅದರ ಫಲಶ್ರುತಿ ಇಲ್ಲಿದೆ: ಮಲಿನಗೊಂಡ ನದಿ ಪ್ರಾಂತ್ಯಗಳ ಸಂಖ್ಯೆಯು ಶೇ 51ರಿಂದ ಶೇ 66ಕ್ಕೆ ಏರಿಕೆಯಾಗಿರುವುದು; ಗಂಗೆಯ ನೀರಿನಲ್ಲಿ ಅಪಾಯಕಾರಿ ಬ್ಯಾಕ್ಟೀರಿಯಾದ ಪ್ರಮಾಣವು ಸುರಕ್ಷತಾ ಮಟ್ಟಕ್ಕಿಂತ ಶೇ 40ರಷ್ಟು ಹೆಚ್ಚಳವಾಗಿದೆ ಎಂದು ನಿಗಾ ಕೇಂದ್ರಗಳು ವರದಿ ಮಾಡಿರುವುದು ಮತ್ತು ಪ್ರತಿಜೀವಾಣುಗಳಿಗೆ ನಿರೋಧಕಶಕ್ತಿ ಬೆಳೆಸಿಕೊಂಡ ಬ್ಯಾಕ್ಟೀರಿಯಾ ನದಿಯ ನೀರಿನಲ್ಲಿ ಕಂಡುಬಂದಿರುವುದು’ ಎಂದು ತಿಳಿಸಿದ್ದಾರೆ.

‘ಹಾಗಿದ್ದರೆ, ತೆರಿಗೆದಾರರ ₹20 ಸಾವಿರ ಕೋಟಿ ಎಲ್ಲಿ ಹೋಯಿತು? ಅದರಲ್ಲಿ ಎಷ್ಟು ಹಣವನ್ನು ಕೆಟ್ಟ ನಿರ್ವಹಣೆ ಮತ್ತು ಭ್ರಷ್ಟಾಚಾರ ನುಂಗಿಹಾಕಿತು? ಗಂಗಾ ಮಾತೆಯ ವಿಚಾರದಲ್ಲೂ ಸುಳ್ಳು ಹೇಳುವ ಮನುಷ್ಯನನ್ನು ವಾರಾಣಸಿಯ ಜನ ಹೇಗೆ ನಂಬುವುದು’ ಎಂದು ಪ್ರಶ್ನಿಸಿದ್ದಾರೆ.

‘ಹಳ್ಳಿಗಳನ್ನು ಕೈಬಿಟ್ಟ ಪ್ರಧಾನಿ’: ‘ವಾರಾಣಸಿಯ ಹೊರಭಾಗದಲ್ಲಿರುವ 8 ಹಳ್ಳಿಗಳನ್ನು ಪ್ರಧಾನಿ ದತ್ತು ಪಡೆದಿದ್ದರು. ಅವುಗಳಿಗೆ ‘ಸ್ಮಾರ್ಟ್’ ಶಾಲೆಗಳು, ಆರೋಗ್ಯ ಸೌಲಭ್ಯ, ವಸತಿ ಸೌಲಭ್ಯಗಳನ್ನು ಒದಗಿಸುವ ಭರವಸೆ ನೀಡಲಾಗಿತ್ತು. ಆದರೆ, 10 ವರ್ಷಗಳ ನಂತರ, 2024ರ ಮಾರ್ಚ್‌ನಲ್ಲಿ ವಾಸ್ತವಿಕ ಸ್ಥಿತಿಯನ್ನು ಪರಿಶೀಲಿಸಿದರೆ, ಹಳ್ಳಿಗಳಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಆಗಿಲ್ಲ ಎನ್ನುವುದು ಕಂಡುಬರುತ್ತದೆ’ಎಂದುಟೀಕಿಸಿದ್ದಾರೆ.

‘ದೊಮ್ರಿ ಗ್ರಾಮದಲ್ಲಿ ಪಕ್ಕಾ ಮನೆಗಳೇ ಇಲ್ಲ. ನಾಗೇಪುರದಲ್ಲಿ ಅತ್ಯಂತ ಕಳಪೆ ರಸ್ತೆಗಳಿವೆ. ಜೋಗಪುರ ಮತ್ತು ಜಯಪುರದ ದಲಿತರ ಮನೆಗಳಲ್ಲಿ ಶೌಚಾಲಯವಾಗಲಿ, ನೀರಿನ ಸೌಲಭ್ಯವಾಗಲಿ ಇಲ್ಲ. ಪ್ರಮುಖವಾದ ‘ನಲ್ ಸೆ ಜಲ್’ ಯೋಜನೆಯು ಪರಂಪುರ ಗ್ರಾಮವನ್ನು ತಲುಪಿಯೇ ಇಲ್ಲ’ ಎಂದಿದ್ದಾರೆ.

‘ಮೋದಿ ದತ್ತು ಪಡೆದ ಹಳ್ಳಿಗಳು ತನ್ನ ಕ್ಷೇತ್ರದ ಜನರೆಡೆಗಿನ ಅವರ ಕರ್ತವ್ಯ ಪ್ರಜ್ಞೆ ಅಥವಾ ಅದರ ಕೊರತೆಯ ಬಗ್ಗೆ ಅನೇಕ ವಿಷಯಗಳನ್ನು ತಿಳಿಸುತ್ತದೆ. ಪ್ರಧಾನಿ ತಾವು ದತ್ತು ಪಡೆದ ಹಳ್ಳಿಗಳನ್ನು ಕೈಬಿಟ್ಟಿದ್ದು ಏಕೆ? ಇದು ‘ಮೋದಿ ಗ್ಯಾರಂಟಿ’ಯ ನಿಜವಾದ ಮುಖವೇ? ಎಂದು ಪ್ರಶ್ನಿಸಿದ್ದಾರೆ.

‘ಗೋಡ್ಸೆ ಬಗೆಗಿನ ಅಭಿಮಾನ ಬಹಿರಂಗಪಡಿಸುವರೇ?’



ಜೈರಾಮ್ ರಮೇಶ್

‘ಪ್ರಧಾನಿ ಅವರು ವಾರಾಣಸಿಯಲ್ಲಿ ಮಹಾತ್ಮ ಗಾಂಧಿ ಅವರ ಪರಂಪರೆಯನ್ನು ನಾಶ ಮಾಡಲು ನಿರ್ಧರಿಸಿರುವುದು ಏಕೆ’ ಎಂದು ಜೈರಾಮ್ ರಮೇಶ್ ಪ್ರಶ್ನಿಸಿದ್ದಾರೆ.

‘ಆಚಾರ್ಯ ವಿನೋಭಾ ಭಾವೆ ಅವರು ಸ್ಥಾಪಿಸಿದ, ರಾಜೇಂದ್ರ ಪ್ರಸಾದ್, ಲಾಲ್ ಬಹದ್ದೂರ್ ಶಾಸ್ತ್ರಿ ಮತ್ತು ಜಯಪ್ರಕಾಶ್ ನಾರಾಯಣ್‌ರಂಥವರು ಒಡನಾಟ ಹೊಂದಿದ್ದ ‘ಸರ್ವ ಸೇವಾ ಸಂಘ’ವನ್ನು ನಾಶ ಮಾಡುವ ಮಟ್ಟಕ್ಕೆ ಅವರು ರಾಷ್ಟ್ರ ಪಿತ ಗಾಂಧಿಯೆಡೆಗಿನ ತಮ್ಮ ದುರುದ್ದೇಶಪೂರಿತ ದ್ವೇಷವನ್ನು ಕೊಂಡೊಯ್ದರು’ ಎಂದು ತಿಳಿಸಿದ್ದಾರೆ.

‘ವಾರಾಣಸಿಯ ರೈಲ್ವೆ ನಿಲ್ದಾಣಕ್ಕೆ ಹೊಂದಿಕೊಂಡಿದ್ದ 13 ಎಕರೆ ಪ್ರದೇಶದಲ್ಲಿ ಅದು ಇತ್ತು. ಆ ಜಾಗವು ಸಂಸ್ಥೆಗೇ ಸೇರಿತ್ತು. ಆದರೆ, ಸಂಸ್ಥೆಯನ್ನು ಆಗಸ್ಟ್ 2023ರಲ್ಲಿ ಅಲ್ಲಿಂದ ಖಾಲಿ ಮಾಡಿಸಿ, ಜಾಗವನ್ನು ಭಾರತೀಯ ರೈಲ್ವೆಗೆ ನೀಡಲಾಯಿತು. ಅದರ ಒಂದು ಪಾರ್ಶ್ವದಲ್ಲಿದ್ದ ಗಾಂಧಿ ವಿದ್ಯಾ ಸಂಸ್ಥಾನವನ್ನು ಮಾತ್ರ ಮುಟ್ಟಿಲ್ಲ. ಏಕೆಂದರೆ, ಅದು ಈಗಾಗಲೇ ಆರ್‌ಎಸ್‌ಎಸ್ ಸ್ವಾಧೀನಕ್ಕೊಳಪಟ್ಟಿದೆ. ವಿದೇಶಗಳಲ್ಲಿ ಗಾಂಧಿಯನ್ನು ಹೊಗಳಿ, ಸ್ವದೇಶದಲ್ಲಿ ಗಾಂಧಿಯ ಸಂಸ್ಥೆಗಳನ್ನು ನಾಶ ಮಾಡುವ ಬೂಟಾಟಿಕೆ ಏಕೆ? ಗಾಂಧಿಗಿಂತ ಗೋಡ್ಸೆ ಬಗೆಗಿನ ತಮ್ಮ ಅಭಿಮಾನವನ್ನು ಪ್ರಧಾನಿ ಬಹಿರಂಗವಾಗಿ ವ್ಯಕ್ತಪಡಿಸುವರೇ’ ಎಂದು ಪ್ರಶ್ನಿಸಿದ್ದಾರೆ.

‘ರಾಮನನ್ನು ಮತ್ತೆ ಟೆಂಟ್‌ಗೆ ಕಳಿಸಲು ಕಾಂಗ್ರೆಸ್ ಯತ್ನ’

ಗಿರಿಡೀಹ್ (ಜಾರ್ಖಂಡ್) (ಪಿಟಿಐ): ಕಾಂಗ್ರೆಸ್ ಪಕ್ಷವು ನಾಚಿಕೆಗೇಡಿನ ರಾಜಕಾರಣದಲ್ಲಿ ತೊಡಗಿದ್ದು, ಬಾಲರಾಮನನ್ನು ಮತ್ತೆ ಟೆಂಟ್‌ಗೆ ಕಳಿಸಲು ತಂತ್ರ ಹೂಡುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಆರೋಪಿಸಿದರು.

ಜಾರ್ಖಂಡ್‌ನ ಗಿರಿಡೀಹ್‌ನಲ್ಲಿ ಚುನಾವಣಾ ಪ್ರಚಾರ ನಡೆಸಿದ ಅವರು, ‘ರಾಮ ಮಂದಿರದ ಬಗ್ಗೆ ಕಾಂಗ್ರೆಸ್ ನಾಯಕರು ನಾಚಿಕೆಗೇಡಿನ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಅವರ ಮುಖಂಡರು ಬಾಲರಾಮನನ್ನು ಮತ್ತೆ ಟೆಂಟ್‌ಗೆ ಕಳಿಸಲು ಯೋಜಿಸುತ್ತಿದ್ದು, ಸುಪ್ರೀಂ ಕೋರ್ಟ್ ತೀರ್ಪಿನ ವಿರುದ್ಧ ಮಾತನಾಡುತ್ತಿದ್ದಾರೆ’ ಎಂದು ಹೇಳಿದರು.

ಬಾಬ್ರಿ ಮಸೀದಿಯನ್ನು ಕೆಡವಿದ ನಂತರ ಬಾಲರಾಮನ ವಿಗ್ರಹವನ್ನು ಟೆಂಟ್ ಅಡಿಯಲ್ಲಿ ಇಡಲಾಗಿತ್ತು. ‘ಕಾಂಗ್ರೆಸ್ ಮತ್ತೆ ಆ ಸ್ಥಳಕ್ಕೆ ಬೀಗ ಹಾಕಲು ಹೊರಟಿದೆ. ಅಂಥ ಭ್ರಷ್ಟರನ್ನು ಸೋಲಿಸಿ’ ಎಂದು ಮತದಾರರಲ್ಲಿ ಕೇಳಿಕೊಂಡರು.

‘ಕಾಂಗ್ರೆಸ್ ನಕ್ಸಲರಿಗೆ ಬೆಂಬಲ ನೀಡಿತು. ಆದರೆ ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ನಕ್ಸಲರ ಹಾವಳಿಯನ್ನು ಹತ್ತಿಕ್ಕಿತು’ ಎಂದರು. ಜಾರ್ಖಂಡ್‌ನಲ್ಲಿ ಬುಡಕಟ್ಟು ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿರುವ ಪ್ರದೇಶಗಳು ನಕ್ಸಲಿಸಂನಿಂದ ಸಾಕಷ್ಟು ತೊಂದರೆ ಅನುಭವಿಸಿದೆ. ನಾನು ಇನ್ನೊಂದು ಅವಧಿಗೆ ಪ್ರಧಾನಿಯಾದರೆ, ದೇಶವನ್ನು ನಕ್ಸಲಿಸಂ ಮತ್ತು ಭಯೋತ್ಪಾದನೆಯಿಂದ ಮುಕ್ತಗೊಳಿಸುತ್ತೇನೆ’ ಎಂಬುದನ್ನು ಪುನರುಚ್ಚರಿಸಿದರು.

ಪ್ರಚಾರ

ಗುರುಗ್ರಾಮ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಾಜ್ ಬಬ್ಬರ್ ಮಂಗಳವಾರ ಪ್ರಚಾರ ನಡೆಸುತ್ತಿದ್ದಾಗ ಅಭಿಮಾನಿಗಳು ಅವರೊಂದಿಗೆ ಸೆಲ್ಫಿ ತೆಗೆಸಿಕೊಂಡರು —ಪಿಟಿಐ ಚಿತ್ರ

‘ಪ್ರತಿ ಮತಗಟ್ಟೆಯ ಮತ ಪ್ರಮಾಣ ಪ್ರಕಟಿಸಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರತಿ ಮತಗಟ್ಟೆಯಲ್ಲಿ ದಾಖಲಾದ ಮತ ಪ್ರಮಾಣವನ್ನು ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸುವಂತೆ ಸಾಮಾಜಿಕ ಕಾರ್ಯಕರ್ತರ ತಂಡವೊಂದು ಚುನಾವಣಾ ಆಯೋಗವನ್ನು ಮಂಗಳವಾರ ಆಗ್ರಹಿಸಿದೆ. ಪ್ರಜಾಪ್ರಭುತ್ವವು ಉತ್ತಮವಾಗಿ ಕಾರ್ಯನಿರ್ವಹಿಸಬೇಕಾದರೆ ಚುನಾವಣಾ ಪ್ರಕ್ರಿಯೆ ಮೇಲೆ ಸಾರ್ವಜನಿಕರು ವಿಶ್ವಾಸ ಇರಿಸುವುದು ಬಹಳ ಮುಖ್ಯ ಎಂದು ತಂಡವು ಹೇಳಿದೆ.

ಈ ಹಿನ್ನೆಲೆಯಲ್ಲಿ, ಸಾಮಾಜಿಕ ಕಾರ್ಯಕರ್ತರಾದ ಅಂಜಲಿ ಭಾರದ್ವಾಜ್, ಅಶೋಕ್ ಶರ್ಮ, ಶಬ್ನಮ್ ಹಶ್ಮಿ, ನವಶರಣ್ ಸಿಂಗ್ ಮತ್ತು ಅಮೃತಾ ಜೋಹ್ರಿ ಅವರು ಚುನಾವಣಾ ಆಯುಕ್ತರನ್ನು ಭೇಟಿಯಾಗಿ, 4,000ಕ್ಕೂ ಹೆಚ್ಚು ಜನರ ಸಹಿ ಇರುವ ಮನವಿ ಪತ್ರವನ್ನು ಅವರಿಗೆ ನೀಡಿದ್ದಾರೆ.

ಫಾರ್ಮ್‌– 17ಸಿ ಭಾಗ– 1ರಲ್ಲಿ (ಮತ ದಾಖಲಾತಿ ಪ್ರಕಟಣೆ) ಮತ ಚಲಾವಣೆಯಾದ ನಿಖರ ದಾಖಲೆಗಳನ್ನು ಪ್ರಕಟಿಸಬೇಕು ಎಂದು ಆಗ್ರಹಿಸಿರುವ ಅವರು, ಮತ ಪ್ರಮಾಣ ಪ್ರಕಟಿಸುವಲ್ಲಿ ಆಯೋಗವು ವಿಳಂಬ ಮಾಡಿದ್ದರ ಕುರಿತು ಮತ್ತು ಪರಿಷ್ಕೃತ ಮತಪ್ರಮಾಣದಲ್ಲಿ ಶೇ 6ರಷ್ಟು ಮತ ಹೆಚ್ಚಳವಾಗಿದ್ದರ ಕುರಿತು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಮತ ಪ್ರಮಾಣದಲ್ಲಿ ವ್ಯತ್ಯಾಸ ಕಂಡುಬಂದಿದ್ದರಿಂದ ಜನರಲ್ಲಿ ಆಯೋಗದ ಬಗ್ಗೆ ಅಪನಂಬಿಕೆ ಮೂಡುವಂತಾಗಿದೆ ಎಂದು ಅವರು ಪತ್ರದಲ್ಲಿ ಹೇಳಿದ್ದಾರೆ.

ಏಪ್ರಿಲ್ 19ರಂದು ಮೊದಲ ಹಂತದ ಮತದಾನ ನಡೆಯಿತು. ಶೇ 60ರಷ್ಟು ಮತದಾನ ನಡೆದಿದೆ ಎಂದು ಅದೇ ದಿನ ಸಂಜೆ ಆಯೋಗವು ಪ್ರಕಟಣೆ ಹೊರಡಿಸಿತ್ತು. ಆದರೆ, 11 ದಿನಗಳ ಬಳಿಕ ಪರಿಷ್ಕೃತ ಮತ ಪ್ರಮಾಣ ಬಿಡುಗಡೆ ಮಾಡಿದ ಆಯೋಗವು, ಶೇ 66.71ರಷ್ಟು ಮತದಾನ ಆಗಿದೆ ಎಂದು ಪ್ರಕಟಣೆ ಹೊರಡಿಸಿತು.

ಈ ಹಿನ್ನೆಲೆಯಲ್ಲಿ ಮೊದಲ ಮೂರು ಹಂತಗಳ ಮತದಾನ ನಡೆದ ಎಲ್ಲಾ ಮತಗಟ್ಟೆಗಳಲ್ಲಿ ದಾಖಲಾದ ಮತ ಪ್ರಮಾಣವನ್ನು ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು. ಮುಂದಿನ ಹಂತಗಳ ಮತದಾನದ ಮಾಹಿತಿಯೂ ಮತದಾನ ನಡೆದ 48 ಗಂಟೆಯೊಳಗೆ ಸಾರ್ವಜನಿಕರಿಗೆ ದೊರಕುವಂತೆ ಮಾಡಬೇಕು ಎಂದು ಕಾರ್ಯಕರ್ತರ ತಂಡವು ಮನವಿಪತ್ರದಲ್ಲಿ ಹೇಳಿದೆ.

ಪ್ರತಿ ಮತಗಟ್ಟೆಯಲ್ಲಿ ದಾಖಲಾದ ಮತ ಪ್ರಮಾಣವನ್ನು ಮತದಾನ ನಡೆದ 48 ಗಂಟೆಗಳಲ್ಲಿ ಪ್ರಕಟಿಸುವಂತೆ ಆಯೋಗಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಸಂಸ್ಥೆ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಮೇ 17ರಂದು ನಡೆಸುವುದಾಗಿ ಸುಪ್ರೀಂಕೋರ್ಟ್ ಹೇಳಿದೆ.

ಮೋದಿಗಾಗಿ ಅಡುಗೆ ಮಾಡಲು ಸಿದ್ಧ: ಮಮತಾ

ಕೋಲ್ಕತ್ತ (ಪಿಟಿಐ): ‘ಪ್ರಧಾನಿ ನರೇಂದ್ರ ಮೋದಿ ಬಯಸಿದರೆ ಅವರಿಗಾಗಿ ಅಡುಗೆ ತಯಾರಿಸಲು ಸಿದ್ಧ. ಆದರೆ, ನಾನು ಸಿದ್ಧಪಡಿಸಿದ್ದನ್ನು ಅವರು ತಿನ್ನುತ್ತಾರೋ ಇಲ್ಲವೊ ಗೊತ್ತಿಲ್ಲ’ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

‘ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರು ಹಿಂದೂಗಳು ಮಾಂಸಾಹಾರ ಸೇವಿಸದ ಅವಧಿಯಲ್ಲಿ ಮೀನು ಖಾದ್ಯ ತಿಂದಿದ್ದಾರೆ’ ಎಂದು ಪ್ರಧಾನಿ ಕೆಲ ದಿನಗಳ ಹಿಂದೆ ಟೀಕಿಸಿದ್ದರು. ಅದಕ್ಕೆ ವ್ಯಂಗ್ಯವಾಗಿ ಪ್ರತಿಕ್ರಿಯಿಸಿ ಮಮತಾ ಈ ಮಾತು ಹೇಳಿದ್ದಾರೆ.

ಕೋಲ್ಕತ್ತದಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಮಮತಾ ಬ್ಯಾನರ್ಜಿ, ಪ್ರಧಾನಿ ಮೋದಿ ಅವರು ಜನರ ಆಹಾರ ಪದ್ಧತಿ ಕುರಿತು ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡು, ‘ಪ್ರಧಾನಿಗಾಗಿ ನಾನು ಆಹಾರ ತಯಾರಿಸಲು ಸಿದ್ಧ’ ಎಂದರು.

‘ಬಾಲಕಿ ಆಗಿದ್ದಾಗಿನಿಂದಲೂ ನಾನು ಅಡುಗೆ ಸಿದ್ಧಪಡಿಸುತ್ತಿದ್ದೇನೆ. ನನ್ನ ಅಡುಗೆಗೆ ಶ್ಲಾಘನೆಯೂ ದೊರೆತಿದೆ. ಪ್ರಧಾನಿ ಇಷ್ಟಪಡುವುದನ್ನೇ ನಾನು ತಯಾರಿಸುತ್ತೇನೆ. ಆದರೆ, ಮೋದಿಜೀ ನಾನು ತಯಾರಿಸಿದ ಆಹಾರ ಸ್ವೀಕರಿಸುವರೇ, ನನ್ನ ಮೇಲೆ ಅವರಿಗೆ ನಂಬಿಕೆ ಇದೆಯಾ?‘ ಎಂದರು.

‘ಸಸ್ಯಾಹಾರವಾದ ಧೋಕ್ಲಾ, ಮಾಂಸಾಹಾರವಾದ ಮೀನು ಸಾರು ಎರಡನ್ನೂ ನಾನು ಇಷ್ಟಪಡುತ್ತೇನೆ. ಹಿಂದೂಗಳ ಭಿನ್ನ ಸಮುದಾಯಗಳು ತಮ್ಮದೇ ಆದ ಸಂಪ್ರದಾಯ, ಆಹಾರ ಪದ್ಧತಿ ಹೊಂದಿವೆ. ಅವರ ಮೇಲೆ ನಿರ್ಬಂಧ ಹೇರಲು ಬಿಜೆಪಿಯವರು ಯಾರು? ಈ ಧೋರಣೆಯು ಬಿಜೆಪಿಯವರಿಗೆ ಭಾರತದ ವೈವಿಧ್ಯ ಕುರಿತು ಇರುವ ಕನಿಷ್ಠ ಜ್ಞಾನ, ಕಾಳಜಿಯನ್ನು ತೋರಿಸುತ್ತದೆ’ ಎಂದು ಮಮತಾ ಟೀಕಿಸಿದರು.

‘ಇದೊಂದು ರಾಜಕೀಯ ಕಾರ್ಯಸೂಚಿ’

ಮಮತಾ ಅವರ ಹೇಳಿಕೆಗೆ ರಾಜಕೀಯ ವಲಯದಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ‘ಇದೊಂದು ರಾಜಕೀಯ ಕಾರ್ಯಸೂಚಿ’ ಎಂದು ಬಿಜೆಪಿ ಟೀಕಿಸಿದರೆ, ‘ಟಿಎಂಸಿ ಮತ್ತು ಬಿಜೆಪಿ ನಡುವಣ ಹೊಂದಾಣಿಕೆಗೆ ನಿದರ್ಶನ’ ಎಂದು ಸಿಪಿಎಂ ವ್ಯಾಖ್ಯಾನಿಸಿದೆ.

‘ಮಮತಾ ಬ್ಯಾನರ್ಜಿ ಅವರು ಪ್ರಧಾನಿಗೆ ಮೀನು, ಅನ್ನ ಬಡಿಸಲು ಬಯಸಿದ್ದಾರೆ. ಒಳ್ಳೆಯ ಚಿಂತನೆ. ಅದಕ್ಕೂ ಮೊದಲು ಅವರು ತಮ್ಮ ಸಂಪುಟದ ಸಚಿವ ಫಿರ್ಹಾದ್ ಹಕೀಂ ಅವರಿಗೆ ಹಂದಿ ಮಾಂಸದ ಖಾದ್ಯ ತಿನ್ನಿಸಲಿ. ಇದರಿಂದ ಮೂರು ಉದ್ದೇಶ ಈಡೇರಲಿವೆ. ಜಾತ್ಯತೀತತೆ ದೃಢಪಡುತ್ತದೆ. ಸೇವೆ ಮನೆಯಿಂದಲೇ ಆರಂಭವಾಗುತ್ತದೆ ಹಾಗೂ ಮೆಚ್ಚುಗೆಯೂ ದೊರೆಯುತ್ತದೆ’ ಎಂದು ರಾಜ್ಯ ಬಿಜೆಪಿ ಮಾಜಿ ಅಧ್ಯಕ್ಷ ತಥಾಗತ್ ರಾಯ್ ‘ಎಕ್ಸ್’ ವೇದಿಕೆಯಲ್ಲಿ ಸಲಹೆ ಮಾಡಿದ್ದಾರೆ.

ಸಿಪಿಎಂ ನಾಯಕ ವಿಕಾಸ್ ಭಟ್ಟಾಚಾರ್ಯ ಅವರು, ‘ಅಣ್ಣ–ತಂಗಿಯಾಗಿ ಮಮತಾ ಅವರು ಖಂಡಿತವಾಗಿ ಪ್ರಧಾನಿಗೆ ಆಹಾರ ಬಡಿಸಬಹುದು’ ಎಂದು ಹೇಳಿದ್ದಾರೆ. ರಾಜ್ಯದ ಕಾಂಗ್ರೆಸ್ ಘಟಕವು ‘ದೀದಿಭಾಯ್–ಮೋದಿಭಾಯ್’ ಎಂದು ವ್ಯಂಗ್ಯವಾಡಿದ್ದರ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ದೇಶವನ್ನು ಇಂದಿನ ಸ್ಥಿತಿಗೆ ತರಲು ಮೋದಿ–ಮಮತಾ ಸಮಾನ ಹೊಣೆಗಾರರು. ಇಬ್ಬರೂ ರಾಜಕೀಯವನ್ನು ಧರ್ಮದೊಂದಿಗೆ ಮಿಶ್ರಣ ಮಾಡುತ್ತಿದ್ದಾರೆ’ ಎಂದು ಟೀಕಿಸಿದ್ದಾರೆ.

ಬಿಜೆಪಿಗೆ ನನ್ನ ಬಗ್ಗೆ ಭಯ: ಕೇಜ್ರಿವಾಲ್

ಚಂಡೀಗಢ (ಪಿಟಿಐ): ‘ಬಿಜೆಪಿಗೆ ನನ್ನ ಬಗ್ಗೆ ಭಯವಿದೆ. ಆದ್ದರಿಂದಲೇ ಜೈಲಿಗೆ ಕಳುಹಿಸಿದೆ’ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮಂಗಳವಾರ ಆರೋಪಿಸಿದರು.

ಕುರುಕ್ಷೇತ್ರದಲ್ಲಿ ಚುನಾವಣಾ ಪ್ರಚಾರದಲ್ಲಿ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಅವರು, ‘ಮಾರ್ಚ್ 16 ರಂದು ಲೋಕಸಭಾ ಚುನಾವಣೆಯ ವೇಳಾಪಟ್ಟಿ ಪ್ರಕಟವಾಗುತ್ತದೆ. ಮಾರ್ಚ್ 21 ರಂದು ಅವರು ನನ್ನನ್ನು ಜೈಲಿಗೆ ಕಳುಹಿಸುತ್ತಾರೆ. ಕೇಜ್ರಿವಾಲ್ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಳ್ಳಬಾರದು ಎಂಬುದು ಅವರ ಉದ್ದೇಶವಾಗಿತ್ತು’ ಎಂದು ಟೀಕಿಸಿದರು.

ಜೈಲಿನಿಂದ ಬಿಡುಗಡೆಯಾದ ಬಳಿಕ ಕೇಜ್ರಿವಾಲ್ ಅವರು ಹರಿಯಾಣದಲ್ಲಿ ನಡೆಸಿದ ಮೊದಲ ಪ್ರಚಾರ ಸಭೆ ಇದು. ಎಎಪಿಯು ಸುಶೀಲ್ ಗುಪ್ತಾ ಅವರನ್ನು ಇಲ್ಲಿಂದ ಕಣಕ್ಕಿಳಿಸಿದೆ. ಹರಿಯಾಣದ 10 ಲೋಕಸಭಾ ಕ್ಷೇತ್ರಗಳಿಗೆ ಮೇ 25 ರಂದು ಮತದಾನ ನಡೆಯಲಿದೆ.

ಚುಟುಕು

ಕಂಗನಾ, ತಿವಾರಿ ನಾಮಪತ್ರ ಸಲ್ಲಿಕೆ

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶದ ಮಂಡಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿರುವ ಬಾಲಿವುಡ್ ನಟಿ ಕಂಗನಾ ರನೌತ್ ಅವರು ಮಂಗಳವಾರ ನಾಮಪತ್ರ ಸಲ್ಲಿಸಿದರು.

‘ಇದು ಇಲ್ಲಿಂದ ನಾಮಪತ್ರ ಸಲ್ಲಿಸಲು ನನಗೆ ಲಭಿಸಿದ ಮೊದಲ ಮತ್ತು ಕೊನೆಯ ಅವಕಾಶ ಅಲ್ಲ ಎಂದು ಭಾವಿಸುತ್ತೇನೆ. ಭವಿಷ್ಯದಲ್ಲಿ ಮಂಡಿ ಕ್ಷೇತ್ರದಿಂದ ಇನ್ನಷ್ಟು ಸಲ ನಾಮಪತ್ರ ಸಲ್ಲಿಸುವ ಅವಕಾಶಗಳು ಸಿಗಲಿವೆ’ ಎಂದು ಕಂಗನಾ ವಿಶ್ವಾಸ ವ್ಯಕ್ತಪಡಿಸಿದರು.

ಹಿಮಾಚಲ ಪ್ರದೇಶ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಜೈರಾಮ್ ಠಾಕೂರ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ರಾಜೀವ್ ಬಿಂದಲ್ ಅವರು ಕಂಗನಾಗೆ ಸಾಥ್ ನೀಡಿದರು.

‘ಪ್ರಧಾನಿ ನರೇಂದ್ರ ಮೋದಿ ಅವರು ಕಾಶಿಯಿಂದ (ವಾರಾಣಸಿ) ಮೂರನೇ ಬಾರಿಗೆ ನಾಮಪತ್ರ ಸಲ್ಲಿಸಿದ ದಿನದಂದೇ ಚೋಟಿ ಕಾಶಿಯಿಂದ (ಮಂಡಿ) ನಾಮಪತ್ರ ಸಲ್ಲಿಸುವ ಅವಕಾಶ ನನಗೆ ಲಭಿಸಿದ್ದು ಹೆಮ್ಮೆಯ ಸಂಗತಿ’ ಎಂದು ಹೇಳಿದರು.

ಚಂಡೀಗಢ ವರದಿ: ಕಾಂಗ್ರೆಸ್ ಪಕ್ಷದ ಚಂಡೀಗಢ ಕ್ಷೇತ್ರದ ಅಭ್ಯರ್ಥಿ ಮನೀಷ್ ತಿವಾರಿ ಅವರು ಮಂಗಳವಾರ ನಾಮಪತ್ರ ಸಲ್ಲಿಸಿದರು. ಪಕ್ಷದ ಚಂಡೀಗಢ ಘಟಕದ ಅಧ್ಯಕ್ಷ ಎಚ್.ಎಸ್.ಲಕ್ಕಿ ಹಾಗೂ ಇತರ ಮುಖಂಡರು ಜತೆಗಿದ್ದರು. ತಿವಾರಿ ಅವರು ಬಿಜೆಪಿಯ ಸಂಜಯ್ ಟಂಡನ್ ವಿರುದ್ಧ ಪೈಪೋಟಿ ನಡೆಸಲಿದ್ದಾರೆ.

‘ಚಂಡೀಗಢ ಕ್ಷೇತ್ರದ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದೆ. ಪ್ರಜಾಪ್ರಭುತ್ವದ ಉಳಿವಿಗಾಗಿ ಹೋರಾಟ ನಡೆಸಲು ನಿಮ್ಮ ಆಶೀರ್ವಾದ ಬೇಕಿದೆ’ ಎಂದು ತಿವಾರಿ ‘ಎಕ್ಸ್’ನಲ್ಲಿ ಬರೆದಿದ್ದಾರೆ.

4ನೇ ಹಂತ: ಶೇ 67.25 ಮತದಾನ

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆಯ ನಾಲ್ಕನೇ ಹಂತದಲ್ಲಿ ಶೇ 67.25 ಮತದಾನ ನಡೆದಿದೆ ಎಂದು ಚುನಾವಣಾ ಆಯೋಗ ಮಾಹಿತಿ ನೀಡಿದೆ.

ಸೋಮವಾರ ನಡೆದ ನಾಲ್ಕನೇ ಹಂತದಲ್ಲಿ 10 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 96 ಕ್ಷೇತ್ರಗಳಿಗೆ ಮತದಾನ ನಡೆದಿತ್ತು. ಮೊದಲ ಮೂರು ಹಂತಗಳ ಮತದಾನ ಪ್ರಮಾಣಕ್ಕೆ ಹೋಲಿಸಿದರೆ ನಾಲ್ಕನೇ ಹಂತದಲ್ಲಿ ಮತದಾನ ಹೆಚ್ಚಿದೆ.

ಏಪ್ರಿಲ್ 19 ರಂದು ನಡೆದಿದ್ದ ಮೊದಲ ಹಂತದಲ್ಲಿ ಶೇ 66.14, ಏ.26 ರಂದು ನಡೆದಿದ್ದ ಎರಡನೇ ಹಂತದಲ್ಲಿ ಶೇ 66.71 ಹಾಗೂ ಮೇ 7 ರಂದು ನಡೆದಿದ್ದ ಮೂರನೇ ಹಂತದಲ್ಲಿ 65.68 ಶೇ ಮತದಾನ ಪ್ರಮಾಣ ದಾಖಲಾಗಿತ್ತು.

ಅಂಧ್ರಪ್ರದೇಶದಲ್ಲಿ ಶೇ 78 ಮತದಾನ (ಅಮರಾವತಿ ವರದಿ): ಆಂಧ್ರಪ್ರದೇಶದಲ್ಲಿ ನಡೆದ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಯಲ್ಲಿ ಶೇ 78 ಕ್ಕೂ ಅಧಿಕ ಮತದಾನ ದಾಖಲಾಗಿದೆ. ಆಂಧ್ರಪ್ರದೇಶ ವಿಧಾಸಭೆಯ 175 ಸ್ಥಾನಗಳು ಮತ್ತು ಲೋಕಸಭೆಯ 25 ಸ್ಥಾನಗಳಿಗೆ ಸೋಮವಾರ ಮತದಾನ ನಡೆದಿತ್ತು. 2019ರ ಚುನಾವಣೆಯಲ್ಲಿ ಇಲ್ಲಿ ಶೇ 79.83 ಮತದಾನ ಆಗಿತ್ತು.

ಬಿಜೆಪಿ ಮಾಜಿ ಶಾಸಕ ಕಾಂಗ್ರೆಸ್‌ಗೆ

ಚಂಡೀಗಢ (ಪಿಟಿಐ): ಪಾಣಿಪತ್ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಬಿಜೆಪಿಯ ರೋಹಿತ್ ರೆಡ್ಡಿ ಅವರು ಮಂಗಳವಾರ ಕಾಂಗ್ರೆಸ್ ಸೇರ್ಪಡೆಯಾದರು.

ರೋಹ್ಟಕ್‌ನಲ್ಲಿ ನಡೆದ ಸಮಾರಂಭದಲ್ಲಿ ಮಾಜಿ ಮುಖ್ಯಮಂತ್ರಿ ಭೂಪಿಂದರ್ ಸಿಂಗ್ ಹೂಡಾ ಅವರು ರೋಹಿತ್ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡರು.

ರೋಹಿತ್ ಅವರ ಸೇರ್ಪಡೆಯಿಂದ ಪಾಣಿಪತ್ ಪ್ರದೇಶದಲ್ಲಿ ಪಕ್ಷದ ಬಲ ಹೆಚ್ಚಿದೆ. ಯಾವುದೇ ಪೂರ್ವ ಷರತ್ತು ಇಲ್ಲದೆ ಪಕ್ಷಕ್ಕೆ ಸೇರಿರುವ ಅವರಿಗೆ ಸೂಕ್ತ ಸ್ಥಾನಮಾನ ನೀಡಲಾಗುವುದು ಎಂದು ಹೂಡಾ ತಿಳಿಸಿದರು.

ಹರಿಯಾಣದಲ್ಲಿ ಕಾಂಗ್ರೆಸ್ ಪರ ಅಲೆ ಇದ್ದು, ಎಲ್ಲ ಒಂಬತ್ತು ಸ್ಥಾನಗಳನ್ನೂ ಗೆಲ್ಲಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಚಟ್ಟದಲ್ಲಿ ಬಂದು ನಾಮಪತ್ರ ಸಲ್ಲಿಕೆ!

ಗೋರಕ್‌ಪುರ (ಪಿಟಿಐ): ಗೋರಕ್‌ಪುರ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯೊಬ್ಬರು ವಿನೂತನ ರೀತಿಯಲ್ಲಿ ನಾಮಪತ್ರ ಸಲ್ಲಿಸುವ ಮೂಲಕ ಗಮನ ಸೆಳೆದರು. ಪಕ್ಷೇತರ ಅಭ್ಯರ್ಥಿ ರಾಜನ್ ಯಾದವ್ ಮಂಗಳವಾರ ಚಟ್ಟದಲ್ಲಿ ಬಂದು ನಾಮಪತ್ರ ಸಲ್ಲಿಸಿದರು.

‘ಅರ್ಥಿ ಬಾಬಾ’ ಎಂದೇ ಹೆಸರಾದ ಯಾದವ್, ತಾವು ಎಂಬಿಎ ಪದವೀಧರ ಎಂದು ಹೇಳಿಕೊಂಡಿದ್ದಾರೆ. ಬೌದ್ಧ ಭಿಕ್ಕು ಎಂದು ಹೇಳಿಕೊಳ್ಳುವ, ಭಿಕ್ಷಾಟನೆ ಮಾಡಿ ಜೀವನ ನಡೆಸುವ ಅವರು, ಈ ಹಿಂದೆಯೂ ಹಲವು ಚುನಾವಣೆಗಳಲ್ಲಿ ಸ್ಪರ್ಧಿಸಿ ಪರಾಭವಗೊಂಡಿದ್ದರು.

ಸ್ಮಶಾನದಲ್ಲಿ ತನ್ನ ಚುನಾವಣಾ ಕಚೇರಿ ತೆರೆದಿರುವ ಯಾದವ್, ವಾಹನ ಸಂಚಾರ ದಂಡದಂತಹ ಸಮಸ್ಯೆಗಳ ಬಗ್ಗೆ ಹೋರಾಟ ನಡೆಸುವುದಾಗಿ ಹೇಳುತ್ತಾರೆ. ದೇಶದಲ್ಲಿ ಪ್ರಜಾಪ್ರಭುತ್ವ ಉಳಿಸಲು ಅವಿವಾಹಿತರಾಗಿ ಉಳಿಯುವುದಾಗಿ ಅವರು ಹೇಳಿದ್ದಾರೆ.

ಎಂಥಾ ಮಾತು!

ರಾಹುಲ್ ಗಾಂಧಿ ಅವರು ರಾಯ್‌ಬರೇಲಿಯಲ್ಲಿ ಸ್ಪರ್ಧಿಸುತ್ತಿರುವುದು ಉತ್ತರ ಪ್ರದೇಶದಲ್ಲಿ ‘ಇಂಡಿಯಾ’ ಮೈತ್ರಿಕೂಟಕ್ಕೆ ಹೆಚ್ಚಿನ ಲಾಭ ಉಂಟುಮಾಡಲಿದೆ. ರಾಹುಲ್ ಪರವಾಗಿ ನಾನು ರಾಯ್‌ಬರೇಲಿಯಲ್ಲಿ ಪ್ರಚಾರ ಕೈಗೊಂಡಿದ್ದು, ಅಲ್ಲಿ ಕಾಂಗ್ರೆಸ್ ಪರ ಅಲೆ ಇರುವುದನ್ನು ಗಮನಿಸಿದ್ದೇನೆ. ಎಲ್ಲ ಸಮುದಾಯಗಳ ಜನರೂ ರಾಹುಲ್‌ಗೆ ಮತ ಹಾಕಲಿದ್ದಾರೆ. ಉತ್ತರ ಪ್ರದೇಶದಲ್ಲಿ ಬಿಜೆಪಿ ಭಾರಿ ಹಿನ್ನಡೆ ಅನುಭವಿಸಲಿದೆ

ಸಚಿನ್ ಪೈಲಟ್, ಕಾಂಗ್ರೆಸ್ ಮುಖಂಡ

ಭಗವಾನ್ ರಾಮ ನಮ್ಮ ನಂಬಿಕೆಯ ಕೇಂದ್ರ ಎಂದು ನಾವು ಹೇಳಿದ್ದೆವು. ನಮಗೆ ಬಹುಮತ ಬಂದರೆ, ಅಯೋಧ್ಯೆಯಲ್ಲಿ ಭವ್ಯ ರಾಮಮಂದಿರವನ್ನು ನಿರ್ಮಿಸಲಾಗುವುದು ಎಂಬ ಭರವಸೆ ಕೊಟ್ಟಿದ್ದೆವು. ಈಗ ನೀವೆಲ್ಲರೂ ನೋಡಿದ್ದೀರಿ, ರಾಮಮಂದಿರ ನಿರ್ಮಾಣ ಕೆಲಸ ಪೂರ್ಣಗೊಂಡಿದೆ. ಭಗವಾನ್ ರಾಮನು ಗುಡಿಸಲಿನಿಂದ ಹೊರಬಂದು ಅರಮನೆ ಪ್ರವೇಶಿಸಿದ್ದಾನೆ ಎಂದು ನನಗನಿಸುತ್ತಿದೆ. ದೇಶದಲ್ಲಿ ರಾಮರಾಜ್ಯ ಆರಂಭವಾಗಲಿದೆ ಎಂಬುದು ನನ್ನ ದೃಢವಾದ ನಂಬಿಕೆ

ರಾಜನಾಥ್ ಸಿಂಗ್, ರಕ್ಷಣಾ ಸಚಿವ

ಕ್ಷೇತ್ರ ಮಹಾತ್ಮೆ

ಮುಂಬೈ ದಕ್ಷಿಣ (ಮಹಾರಾಷ್ಟ್ರ)



ಮುಂಬೈ ನಗರದ ಆರು ಲೋಕಸಭಾ ಕ್ಷೇತ್ರಗಳಲ್ಲಿ ಮುಂಬೈ ದಕ್ಷಿಣ ಕ್ಷೇತ್ರವೂ ಒಂದು. ಗೇಟ್‌ವೇ ಆಫ್ ಇಂಡಿಯಾ, ಬಿಎಸ್‌ಇ, ಮರೀನ್ ಡ್ರೈವ್ ಮತ್ತು ಛತ್ರಪತಿ ಶಿವಾಜಿ ರೈಲು ನಿಲ್ದಾಣ ಸೇರಿದಂತೆ ಹಲವು ಐತಿಹಾಸಿಕ ಹೆಗ್ಗುರುತುಗಳು ಈ ಕ್ಷೇತ್ರದ ವ್ಯಾಪ್ತಿಯಲ್ಲಿವೆ. ಮೇ 20 ರಂದು ಮತದಾನ ನಡೆಯಲಿರುವ ಇಲ್ಲಿ ಈ ಬಾರಿ ಶಿವಸೇನಾದ ಎರಡು ಬಣಗಳ ನಡುವೆ ನೇರ ಪೈಪೋಟಿ ಏರ್ಪಟ್ಟಿದೆ. ಶಿವಸೇನಾ ಉದ್ಧವ್ ಠಾಕ್ರೆ ಬಣದಿಂದ ಹಾಲಿ ಸಂಸದ ಅರವಿಂದ್ ಸಾವಂತ್ ಮತ್ತು ಏಕನಾಥ ಶಿಂದೆ ನೇತೃತ್ವದ ಬಣದಿಂದ ಯಾಮಿನಿ ಜಾಧವ್ ಅವರು ಅಖಾಡಕ್ಕಿಳಿದಿದ್ದಾರೆ. 2014 ಮತ್ತು 2019 ರಲ್ಲಿ ಇಲ್ಲಿಂದ ಗೆದ್ದಿದ್ದ ಅರವಿಂದ ಸಾವಂತ್, ‘ಹ್ಯಾಟ್ರಿಕ್’ ಜಯದ ನಿರೀಕ್ಷೆಯಲ್ಲಿದ್ದಾರೆ. ಈ ಕ್ಷೇತ್ರಕ್ಕೆ ಅಭ್ಯರ್ಥಿ ಆಯ್ಕೆಯ ಸಮಯದಲ್ಲಿ ಮಹಾ ವಿಕಾಸ್ ಆಘಾಡಿ (ಎವಿಎ)ಯಲ್ಲಿ ಸಾಕಷ್ಟು ಚರ್ಚೆ ನಡೆದಿತ್ತು. ಇದು ತನ್ನ ‘ಸಾಂಪ್ರದಾಯಿಕ ಭದ್ರಕೋಟೆ’ ಎಂದು ಹೇಳಿದ್ದ ಕಾಂಗ್ರೆಸ್, ಕ್ಷೇತ್ರವನ್ನು ಬಿಟ್ಟುಕೊಡಬೇಕು ಎಂದು ಪಟ್ಟುಹಿಡಿದಿತ್ತು. ಆದರೆ ಕಳೆದ ಎರಡು ಚುನಾವಣೆಗಳಲ್ಲಿ ಇಲ್ಲಿ ತಮ್ಮ ಅಭ್ಯರ್ಥಿ ಗೆದ್ದುದ್ದು, ಅವರಿಗೇ ಟಿಕೆಟ್ ನೀಡಬೇಕು ಎಂದು ಶಿವಸೇನಾ (ಯುಬಿಟಿ) ವಾದಿಸಿತ್ತು. ಕೊನೆಗೂ ಸಾವಂತ್ ಅವರಿಗೆ ಟಿಕೆಟ್ ಗಿಟ್ಟಿಸಿಕೊಳ್ಳಲು ಯಶಸ್ವಿಯಾಗಿತ್ತು. ಇಲ್ಲಿನ ಮತದಾರರಲ್ಲಿ ಶೇ 25 ರಷ್ಟು ಮುಸ್ಲಿಮರು ಇದ್ದು, ಫಲಿತಾಂಶವನ್ನು ನಿರ್ಧರಿಸುವಲ್ಲಿ ಅವರ ಮತಗಳು ನಿರ್ಣಾಯಕ ಪಾತ್ರ ವಹಿಸಲಿವೆ ಎಂದು ವಿಶ್ಲೇಷಿಸಲಾಗಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಜೀವನವು ಸಜೀವವಾಗಿ ಇರಬೇಕಾದರೆ, ಅದು ಪುರಾತನವಾದ ಸತ್ವಸಾರವನ್ನು ಕ್ಷಣಕ್ಷಣಕ್ಕೂ ಸಂಗ್ರಹಿಸುತ್ತಾ ನೂತನಕ್ಕೆ ಹರಿಯುತ್ತಿರಬೇಕು. -ಕುವೆಂಪು

ಖರ್ಗೆ ಪತ್ರಕ್ಕೆ ಆಯೋಗದ ಉತ್ತರ ಬೆದರಿಕೆಯ ಧಾಟಿ ಸರಿಯಲ್ಲ

ಕೇಂದ್ರ ಚುನಾವಣಾ ಆಯೋಗ ಹಾಗೂ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಡುವೆ ಲೋಕಸಭಾ ಚುನಾವಣೆಗೆ ಸಂಬಂಧಿಸಿದಂತೆ ಈಚೆಗೆ ಪತ್ರ ವ್ಯವಹಾರವೊಂದು ನಡೆದಿದೆ. ಲೋಕಸಭಾ ಚುನಾವಣೆಗೆ ಸಂಬಂಧಿಸಿದ ಕೆಲವು ಸಂಗತಿಗಳು, ಅವುಗಳನ್ನು ಆಯೋಗವು ನಿಭಾಯಿಸಿದ ಬಗೆಯ ಕುರಿತು ವಿರೋಧ ಪಕ್ಷಗಳು ಹೊಂದಿರುವ ಕಳವಳಗಳ ಬಗ್ಗೆ ಈ ಪತ್ರಗಳು ಜನರ ಗಮನ ಸೆಳೆಯುವ ಕೆಲಸ ಮಾಡಿವೆ. ವಾಸ್ತವದಲ್ಲಿ, ಕೆಲವು ವಿಷಯಗಳು ಸೃಷ್ಟಿಯಾಗಲು ಆಯೋಗವೇ ಕಾರಣವಾಗಿದೆ. ಅವುಗಳನ್ನು ಖರ್ಗೆ ಅವರು ಕೆಲವು ವಿರೋಧ ಪಕ್ಷಗಳ ನಾಯಕರಿಗೆ ಬರೆದ ಪತ್ರವೊಂದರಲ್ಲಿ ಉಲ್ಲೇಖಿಸಿದ್ದಾರೆ. ಮೊದಲ ಹಾಗೂ ಎರಡನೆಯ ಹಂತದಲ್ಲಿ ತಮ್ಮ ಮತದ ಹಕ್ಕು ಚಲಾಯಿಸಿದವರ ನಿಖರ ಪ್ರಮಾಣವನ್ನು ಆಯೋಗವು ಸಕಾಲದಲ್ಲಿ ಬಹಿರಂಗಪಡಿಸದೇ ಇರುವುದಕ್ಕೆ ಸಂಬಂಧಿಸಿದಂತೆ ಹಾಗೂ ಅವುಗಳನ್ನು ಬಹಿರಂಗಪಡಿಸಿದ ಬಗೆಯ ಕುರಿತಂತೆ ಖರ್ಗೆ ಅವರು ಆಕ್ಷೇಪ ಎತ್ತಿದ್ದಾರೆ. ಖರ್ಗೆ ಅವರು ಈ ವಿಚಾರವನ್ನು ಉಲ್ಲೇಖಿಸಿದ ಪತ್ರವು ಆಯೋಗವನ್ನು ಉದ್ದೇಶಿಸಿರಲಿಲ್ಲ. ಆದರೂ ಆಯೋಗವು ಆ ಪತ್ರದಲ್ಲಿನ ವಿಚಾರಗಳಿಗೆ ಉತ್ತರಿಸಿತು. ಆಯೋಗಕ್ಕೆ ಉತ್ತರ ನೀಡಿದ ಖರ್ಗೆ ಅವರು, ಪತ್ರದಲ್ಲಿ ಆಯೋಗವು ಪ್ರತಿಪಾದಿಸಿರುವ ಅಂಶಗಳನ್ನು ಪ್ರಶ್ನಿಸಿದರು, ಆ ಅಂಶಗಳ ಬಗ್ಗೆ ತಮ್ಮ ಕಳವಳ ದಾಖಲಿಸಿದರು.

ಚುನಾವಣಾ ಆಯೋಗವು ಟೀಕೆಗಳ ವಿಚಾರದಲ್ಲಿ ಅಸಹಿಷ್ಣು ಆಗಬಾರದು. ಬೆದರಿಸುವ ಧಾಟಿಯ ಮಾತುಗಳನ್ನು ಆಡುವುದರಿಂದ ಆಯೋಗದ ವಿಶ್ವಾಸಾರ್ಹತೆಗೆ ಇನ್ನಷ್ಟು ಪೆಟ್ಟು ಬೀಳುತ್ತದೆ

ಮತದಾನದ ಪ್ರಮಾಣಕ್ಕೆ ಸಂಬಂಧಿಸಿದ ದತ್ತಾಂಶದಲ್ಲಿನ ಲೋಪಗಳ ಬಗ್ಗೆ ಖರ್ಗೆ ಅವರು ತಮ್ಮ ಪತ್ರದಲ್ಲಿ ಉಲ್ಲೇಖಿಸಿದ್ದ ವಿಷಯಗಳು 'ಸ್ಪಷ್ಟನೆಯನ್ನು ಕೋರುವ ನೆಪದಲ್ಲಿ ಪಕ್ಷಪಾತಿಯಾದ ಸಂಕಥನಗಳನ್ನು ರೂಪಿಸುವ ಪ್ರಯತ್ನ' ಎಂದು ಆಯೋಗವು ಹೇಳಿತ್ತು. 'ಎಚ್ಚರಿಕೆ ವಹಿಸಬೇಕು ಮತ್ತು ಇಂತಹ ಹೇಳಿಕೆಗಳನ್ನು ನೀಡಬಾರದು' ಎಂದೂ ಖರ್ಗೆ ಅವರಿಗೆ ಹೇಳಿತ್ತು. ರಾಜಕೀಯ ನಾಯಕರನ್ನು ಉದ್ದೇಶಿಸಿ ಬರೆದ ಪತ್ರವನ್ನು ಬಹಿರಂಗಪಡಿಸಿದ್ದು 'ಅಪೇಕ್ಷಣೀಯ ಅಲ್ಲವೇ ಅಲ್ಲ' ಎಂದು ಹೇಳಿದ್ದ ಆಯೋಗ, ಈ ಕ್ರಮವು 'ಸುಗಮ, ಮುಕ್ತ ಹಾಗೂ ನ್ಯಾಯಸಮ್ಮತವಾಗಿ ಚುನಾವಣೆ ನಡೆಸುವ ಹಾದಿಯಲ್ಲಿ ಗೊಂದಲ ಸೃಷ್ಟಿಸುವ, ಅಡ್ಡಿಗಳನ್ನು ಸೃಷ್ಟಿಸುವ ನಡೆ' ಎಂದು ಕೋಪ ತೋರಿಸಿತ್ತು. ಖರ್ಗೆ ಅವರ ಪತ್ರವು ಅರಾಜಕ ವಾತಾವರಣವನ್ನು ಸೃಷ್ಟಿಸಬಹುದು, ಕಾಂಗ್ರೆಸ್ ಅಧ್ಯಕ್ಷರು ವ್ಯಂಗ್ಯದ ಮಾತುಗಳು ಹಾಗೂ ನಾಜೂಕಿನ ಆರೋಪಗಳ ಮೂಲಕ ತಪ್ಪು ಸಂಕಥನವನ್ನು ಸೃಷ್ಟಿಸುವ ಯತ್ನ ನಡೆಸಿದ್ದಾರೆ ಎಂದು ಹೇಳಿತ್ತು. ಖರ್ಗೆ ಅವರನ್ನು ಉದ್ದೇಶಿಸಿದ ಈ ಆರೋಪಗಳು ಬಹಳ ಗಂಭೀರ ಸ್ವರೂಪದವು. ಅಲ್ಲದೆ, ಚುನಾವಣಾ ಆಯೋಗವು ಇಂತಹ ಮಾತುಗಳನ್ನು ಆಡಿರುವುದು ಸರಿಯಲ್ಲ. ಚುನಾವಣೆಗಳಿಗೆ ಸಂಬಂಧಿಸಿದ ಹತ್ತು ಹಲವು ಸಂಗತಿಗಳನ್ನು ರಾಜಕೀಯ ಪಕ್ಷಗಳು ಆಯೋಗದ ಗಮನಕ್ಕೂ ಸಾರ್ವಜನಿಕರ ಗಮನಕ್ಕೂ ತರುತ್ತವೆ. ಅಲ್ಲದೆ, ಚುನಾವಣೆಯನ್ನು ನಡೆಸಿದ ಬಗೆಯನ್ನು ರಾಜಕೀಯ ಪಕ್ಷಗಳು ಟೀಕಿಸುತ್ತವೆ ಕೂಡ. ಇಂತಹ ಕಳವಳಗಳನ್ನು ಸಾರ್ವಜನಿಕವಾಗಿ ವ್ಯಕ್ತಪಡಿಸುವುದರಲ್ಲಿ ಯಾವ ತಪ್ಪೂ ಇಲ್ಲ. ಏಕೆಂದರೆ, ಚುನಾವಣೆ ಎನ್ನುವುದೇ ಸಾರ್ವಜನಿಕವಾಗಿ ನಡೆಯುವ ಒಂದು ಕ್ರಿಯೆ, ಪ್ರಕ್ರಿಯೆ. ಖರ್ಗೆ ಅವರು ಕೆಲ ರಾಜಕೀಯ ಮುಖಂಡರನ್ನು ಉದ್ದೇಶಿಸಿ ಬರೆದ ಪತ್ರದಲ್ಲಿ ಇರುವ ಅಂಶಗಳನ್ನು ಆಯೋಗಕ್ಕೆ ಆ ಮೊದಲೇ ತಿಳಿಸಲಾಗಿತ್ತು. ದತ್ತಾಂಶಗಳನ್ನು ಆಯೋಗವು ನಿರ್ವಹಿಸುತ್ತಿರುವ ಬಗೆಯ ಕುರಿತು ಸಾರ್ವಜನಿಕ ಟೀಕೆಗಳು ಕೂಡ ಇವೆ.

ಆಯೋಗಕ್ಕೆ ಉತ್ತರ ನೀಡಿರುವ ಖರ್ಗೆ ಅವರು, ಆಯೋಗವು ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಯ ಬಗ್ಗೆ ಮಾತನಾಡಿದ್ದರೂ, ಆಡಳಿತಾರೂಢ ಪಕ್ಷದ ನಾಯಕರು ಆಡಿರುವ ಕೋಮುವಾದಿ ಮಾತುಗಳ ವಿಚಾರವಾಗಿ ಆಯೋಗವು ತ್ವರಿತವಾಗಿ ಕ್ರಮ ಕೈಗೊಂಡಿಲ್ಲ ಎಂದು ಹೇಳಿದ್ದಾರೆ. ಆಯೋಗವು ಆಡಳಿತಾರೂಢ ಪಕ್ಷದ ಪರವಾಗಿ ವರ್ತಿಸಿದೆ, ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿಯ ಹಿರಿಯ ನಾಯಕರ ವಿರುದ್ಧದ ದೂರುಗಳನ್ನು ಆಧರಿಸಿ ಕ್ರಮ ಕೈಗೊಳ್ಳುತ್ತಿಲ್ಲ ಎಂಬ ಟೀಕೆಗೆ ಗುರಿಯಾಗಿದೆ. ಇದೇ ಸಂದರ್ಭದಲ್ಲಿ ಆಯೋಗವು ಅತಿದೊಡ್ಡ ವಿರೋಧ ಪಕ್ಷದ ನಾಯಕನಿಗೆ ಎಚ್ಚರಿಕೆ ನೀಡುವ ಕೆಲಸ ಮಾಡಿದೆ! ಆಯೋಗವು ಟೀಕೆಗಳ ವಿಚಾರದಲ್ಲಿ ಅಸಹಿಷ್ಣು ಆಗಬಾರದು. ಎಲ್ಲ ಪಕ್ಷಗಳ ಮಾತುಗಳಿಗೆ ಹಾಗೂ ಅವು ವ್ಯಕ್ತಪಡಿಸುವ ಕಳವಳಗಳಿಗೆ ಆಯೋಗವು ಸೂಕ್ತ ರೀತಿಯಲ್ಲಿ ಸ್ಪಂದಿಸಬೇಕು. ಬೆದರಿಸುವ ಧಾಟಿಯ ಮಾತುಗಳನ್ನು ಆಡುವುದರಿಂದ ಆಯೋಗದ ವಿಶ್ವಾಸಾರ್ಹತೆಗೆ ಇನ್ನಷ್ಟು ಪೆಟ್ಟು ಬೀಳುತ್ತದೆ.

ದಿನದ ಟ್ವೀಟ್

ವನ್ಯಜೀವಿಯ ಮೇಲೆ ಒತ್ತಡ ತರವಲ್ಲ

ರಾಜೀವ್ ಪ್ರತಾಪ್ ರೂಡಿ ಅವರೇ, ಪರಿಸರಸೂಕ್ಷ್ಮ ವಿಷಯಕ್ಕೆ ಸಂಬಂಧಿಸಿದ ನಿಮ್ಮ ನಡೆ ನೋಡಿ ನಿರಾಸೆಯಾಗಿದೆ. ಇದು ತಪ್ಪು ಸಂದೇಶವನ್ನು ನೀಡುತ್ತದೆ. ಜನಜಂಗುಳಿ, ಶಬ್ದ, ವಾಹನ ದಟ್ಟಣೆಯು ಆನೆಯ ಮೇಲೆ ಒತ್ತಡ ಉಂಟುಮಾಡುತ್ತವೆ. ದುರದೃಷ್ಟವಶಾತ್ ಮನುಷ್ಯರ ವಶದಲ್ಲಿರುವ ವನ್ಯಜೀವಿಗಳನ್ನು ಚುನಾವಣಾ ಪ್ರಚಾರದಿಂದ ದಯಮಾಡಿ ದೂರವಿಡಿ.

(ಬಿಹಾರದ ಸಾರಣ್ ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ರಾಜೀವ್ ಪ್ರತಾಪ್ ರೂಡಿ ಅವರು ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಆನೆಯನ್ನು ಬಳಸಿಕೊಂಡಿರುವುದಕ್ಕೆ ಪ್ರತಿಕ್ರಿಯೆ)

ಪ್ರೇರಣಾ ಸಿಂಗ್ ಬಿಂದ್ರಾ, ಲೇಖಕಿ

ಕಿಡಿನುಡಿ



ದೇವೇಗೌಡರ ಮನೆಯಿಂದಲೇ ಜೈಲಿಗೆ ಹೋದ ರೇವಣ್ಣ, ಜೈಲಿನಿಂದ ಬಿಡುಗಡೆಯಾದ ಮೇಲೂ ದೇವೇಗೌಡರ ಮನೆಗೆ ಹೋಗುವುದರ ಮುಖಾಂತರ ಒಂದು ಗುಪ್ತ ಸಂದೇಶವನ್ನು, 'ನಮ್ಮ ಕುಟುಂಬವೇ ಬೇರೆ, ರೇವಣ್ಣನವರ ಕುಟುಂಬವೇ ಬೇರೆ' ಎಂದಿದ್ದ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಹಾಗೂ ಅವರ ಅನುಯಾಯಿಗಳಿಗೆ ಕಳುಹಿಸಿದ್ದಾರೆಯೇ?
#PrajwalRevanna #ರೇವಣ್ಣಬಿಡುಗಡೆ

ಸುದರ್ಶನ್ ಜಯರಾಮು

25 ವರ್ಷಗಳ ಹಿಂದೆ

ಶನಿವಾರ, 15-5-1999

• ಶ್ರೀನಿವಾಸುಲು ನೇಮಕ ರದ್ದು ಊರ್ಜಿತ

ಬೆಂಗಳೂರು, ಮೇ 14– ರಾಜ್ಯದ ಪೊಲೀಸ್ ಮಹಾನಿರ್ದೇಶಕ ಹಾಗೂ ಮಹಾನಿರೀಕ್ಷಕ ಹುದ್ದೆಗೆ ಟಿ.ಶ್ರೀನಿವಾಸುಲು ಅವರನ್ನು ಸರ್ಕಾರ ನೇಮಕ ಮಾಡಿರುವುದನ್ನು ರದ್ದುಗೊಳಿಸಿ, ಹಿರಿಯ ಅಧಿಕಾರಿ ಸಿ.ದಿನಕರ್ ಸೇರಿದಂತೆ ಅರ್ಹರ ಹೆಸರು ಪರಿಶೀಲಿಸಿ ನೇಮಕ ಮಾಡಬೇಕೆಂದು ಹೈಕೋರ್ಟ್ ನೀಡಿದ್ದ ತೀರ್ಪನ್ನು ಸುಪ್ರೀಂ ಕೋರ್ಟ್ ಇಂದು ಎತ್ತಿಹಿಡಿದಿದೆ.

ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಸರ್ಕಾರ ಮತ್ತು ಪೊಲೀಸ್ ಮಹಾನಿರ್ದೇಶಕರಾದ ಟಿ.ಶ್ರೀನಿವಾಸುಲು ಅವರಿಂದ ಸುಪ್ರೀಂ ಕೋರ್ಟಿನಲ್ಲಿ ವಿಶೇಷ ಮನವಿ ಅರ್ಜಿ ಸಲ್ಲಿಸಲಾಗಿತ್ತು. ವಿಭಾಗೀಯ ನ್ಯಾಯಪೀಠ ಈ ಅರ್ಜಿಗಳನ್ನು ತಳ್ಳಿಹಾಕಿರುವುದರಿಂದ, ಸರ್ಕಾರ ಈಗ ಮಹಾನಿರ್ದೇಶಕ ಹಾಗೂ ಮಹಾನಿರೀಕ್ಷಕ ಹುದ್ದೆಗೆ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಬೇಕಾಗಿದೆ.

• ವಿಶೇಷ ನ್ಯಾಯಾಲಯ ರಚನೆ ಕ್ರಮ ಎತ್ತಿಹಿಡಿದ ಸುಪ್ರೀಂ ಕೋರ್ಟ್

ನವದೆಹಲಿ, ಮೇ 14 (ಪಿಟಿಐ, ಯುಎನ್ಐ)– ಎಐಎಡಿಎಂಕೆ ನಾಯಕಿ ಜಯಲಲಿತಾ ಹಾಗೂ ಇತರರ ವಿರುದ್ಧದ ಭ್ರಷ್ಟಾಚಾರ ಪ್ರಕರಣಗಳ ತ್ವರಿತ ವಿಚಾರಣೆಗೆ 1997ರಲ್ಲಿ ಮೂರು ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಿದ್ದ ತಮಿಳುನಾಡಿನ ಡಿಎಂಕೆ ನೇತೃತ್ವದ ಸರ್ಕಾರದ ಕ್ರಮವನ್ನು ಸುಪ್ರೀಂ ಕೋರ್ಟ್ ಇಂದು ಎತ್ತಿಹಿಡಿಯಿತು.

ಇದರಿಂದಾಗಿ, ಅದರ ಕ್ರಮಬದ್ಧತೆಯನ್ನು ಪ್ರಶ್ನಿಸಿದ್ದ ಜಯಲಲಿತಾ ಹಾಗೂ ವಿಶೇಷ ನ್ಯಾಯಾಲಯಗಳಿಂದ ಈ ಮೊಕದ್ದಮೆಗಳನ್ನು ಹಿಂತೆಗೆದುಕೊಂಡು ಇತರ ನಿತ್ಯದ ನ್ಯಾಯಾಲಯಗಳಿಗೆ ವರ್ಗಾಯಿಸಿ ಫೆಬ್ರುವರಿ 5ರಂದು ಅಧಿಸೂಚನೆ ಹೊರಡಿಸಿದ್ದ ಕೇಂದ್ರ ಸರ್ಕಾರಕ್ಕೆ ಮುಖಭಂಗವಾದಂತಾಗಿದೆ.

50 ವರ್ಷಗಳ ಹಿಂದೆ

ಬುಧವಾರ, 15-5-1974

• ಮುಂಬೈ ಬಳಿ ಗೂಡ್ಸ್ ಗಾಡಿಗಳ ಡಿಕ್ಕಿ: 9 ಮಂದಿಯ ಸಾವು

ನವದೆಹಲಿ, ಮೇ 14– ಒಂದು ವಾರದ ಹಿಂದೆ ದೇಶದಾದ್ಯಂತ ರೈಲ್ವೆ ಮುಷ್ಕರ ಆರಂಭ ಆದಾಗಿನಿಂದ ಈಚೆಗೆ ಸಂಭವಿಸಿದ ಮೊದಲ ದೊಡ್ಡ ರೈಲು ಅಪಘಾತದಲ್ಲಿ ಒಂಬತ್ತು ಮಂದಿ ಸತ್ತು, ಇತರ 10 ಮಂದಿ ಗಾಯಗೊಂಡರು.

ಮುಂಬಯಿಯಿಂದ ಸುಮಾರು ನೂರು ಕಿಲೊಮೀಟರ್ ದೂರದಲ್ಲಿಯ ಕರ್ಜಟ್ ಬಳಿ ನಿನ್ನೆ ರಾತ್ರಿ ಈ ಅಪಘಾತ ಸಂಭವಿಸಿತು. ಗೂಡ್ಸ್ ಗಾಡಿಯೊಂದಕ್ಕೆ ಡಿಕ್ಕಿ ಹೊಡೆದ ಬಳಿಕ ಇನ್ನೊಂದು ಗೂಡ್ಸ್ ಗಾಡಿಯ ಎರಡು ಎಂಜಿನ್‌ಗಳು ಕಂಬಿ ತಪ್ಪಿದವು. 15 ವ್ಯಾಗನ್‌ಗಳು ಉರುಳಿದವೆಂದೂ ಅಲ್ಲದೆ ಮೇಲ್ಗಡೆಯ ವಿದ್ಯುತ್ ಉಪಕರಣಕ್ಕೆ ಜಖಂ ಆಯಿತೆಂದೂ ಅಧಿಕೃತ ಮೂಲಗಳು ತಿಳಿಸಿವೆ.

ಸತ್ತವರಲ್ಲಿ ಐವರು ಪೊಲೀಸರೂ ಇದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಕಾಳ್ಗಿಚ್ಚಿನ ವಿದ್ಯಮಾನವು ಮಲೆನಾಡು, ಕರಾವಳಿಯ ಪರಿಸರ, ಜೀವನ ಸುರಕ್ಷತೆಗೆ ಭಂಗ ತರುತ್ತಿದೆ

ಅಗ್ನಿಪಾಶದಿಂದ ಪಾರಾಗುವುದೆಂತು?

ವಿಶ್ಲೇಷಣೆ

ಕೇಶವ ಎಚ್. ಕೊರ್ಸೆ

ಉತ್ತರದ ಹಿಮಾಲಯಶ್ರೇಣಿ ರಾಜ್ಯಗಳಲ್ಲಿ ಇತ್ತೀಚೆಗೆ ಕಾಳ್ಗಿಚ್ಚು ಉಂಟುಮಾಡಿದ ನಷ್ಟ ಅಪಾರ. ಉತ್ತರಾಖಂಡದಲ್ಲಂತೂ ಜೀವಹಾನಿಯೂ ಸಂಭವಿಸಿತು. ಇದರ ಉರಿ ಸುಪ್ರೀಂ ಕೋರ್ಟನ್ನೂ ತಲುಪಿ, ಬೆಂಕಿ ನಿಯಂತ್ರಣಕ್ಕೆ ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಸರ್ಕಾರಗಳಿಗೆ ಆದೇಶ ನೀಡಿದ್ದೂ ಆಯಿತು! ದಕ್ಷಿಣ ಭಾರತದ ಪಶ್ಚಿಮಘಟ್ಟದ ಕಾಡಿನಬೆಂಕಿಗೂ ಸಂಪೂರ್ಣ ಅನ್ವಯವಾಗುವ ಎಚ್ಚರಿಕೆಯಿದು.

ಏಕೆಂದರೆ, ಈ ವರ್ಷವೂ ನಾಡಿನ ಸಹ್ಯಾದ್ರಿ ತಪ್ಪಲಿನ ಮಲೆನಾಡು ಹಾಗೂ ಕರಾವಳಿಯಲ್ಲಿ ಕಾಡಿನಬೆಂಕಿ ಪ್ರಕರಣಗಳು ವ್ಯಾಪಕವಾಗಿ ಕಂಡುಬಂದಿವೆ. ಬೇಸಿಗೆಯ ಉರಿ, ಬಿಸಿಗಾಳಿಯ ತಾಪ, ಕ್ಷಾಮಕ್ಕೆ ತುತ್ತಾದ ಬೆಳೆ, ಕುಡಿಯುವ ನೀರಿನ ಬರ, ಮೇವಿನ ಕೊರತೆ- ಈ ಒಂದೊಂದೂ ಜನಜೀವನವನ್ನು ನಲುಗಿಸಿರುವಾಗ, ಅರಣ್ಯಗಳ ಬೆಂಕಿ ಸಂದರ್ಭಗಳು ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುವಂತೆ ಮಾಡಿವೆ. ನೈಸರ್ಗಿಕ ಪರಿಸರದ ಸಂರಚನೆ ಕುಸಿದು ಬದುಕು ಮೂರಾಬಟ್ಟೆಯಾಗುತ್ತಿರುವ ಪರಿಯಿದು. ಚುನಾವಣೆ ಮುಗಿದು ರಾಜಕೀಯ ಕಾವು ತಗ್ಗಿದ ಮೇಲಾದರೂ ಈ ಬವಣೆಯನ್ನು ತಣ್ಣಗಾಗಿಸುವ ಪ್ರಾಮಾಣಿಕ ಆಮೂಲಾಗ್ರ ಚಿಂತನೆ ಹಾಗೂ ಪ್ರಯತ್ನಗಳು ನಡೆಯಬೇಕಲ್ಲವೇ?

ಸೀಮಿತವಾಗಿ ಘಟಿಸುವ ಕಾಡಿನಬೆಂಕಿ ಸಹಜ ಎಂದೇ ಅರಣ್ಯಶಾಸ್ತ್ರ ಪ್ರತಿಪಾದಿಸುತ್ತದೆ. ಬೇಸಿಗೆಯಲ್ಲಿ ವಾತಾವರಣ ಹಾಗೂ ಮಣ್ಣಿನ ತೇವಾಂಶ ತೀರಾ ಕಡಿಮೆಯಾದಾಗ, ಅಲ್ಲಲ್ಲಿ ಬೆಂಕಿ ಬಿದ್ದು ಪಸರಿಸುವುದಿದೆ. ಅದು ಹೊಳೆ-ಕೆರೆಗಳ ಅಡೆತಡೆಯಿಂದಾಗಿಯೋ ಅಥವಾ ತಡೆಗೋಡೆಯಂತಹ ನಿತ್ಯಹರಿದ್ವರ್ಣ ಕಾಡಿನಪಟ್ಟಿಯಿಂದಾಗಿಯೋ ತಹಬಂದಿಗೆ ಬರುತ್ತದೆ. ಬೇಸಿಗೆಯಲ್ಲಿ ಸುರಿಯುವ ಹಠಾತ್ ಮಳೆಯಂತೂ ಕಾಳ್ಗಿಚ್ಚು ತಣಿಸುವ ಇಂದ್ರನ ವರವೆಂದೇ ಜನಸಾಮಾನ್ಯರ ನಂಬಿಕೆ. ಇತ್ತೀಚೆಗೆ ಬಂಡೀಪುರ, ನಾಗರಹೊಳೆ, ಬಿಳಿಗಿರಿರಂಗನಬೆಟ್ಟದಲ್ಲಿ ವ್ಯಾಪಿಸಿದ್ದ ಬೆಂಕಿಯನ್ನು ಆರಿಸಿದ್ದು ಮಳೆರಾಯನೇ ತಾನೆ? ಆ ಮಟ್ಟಿಗೆ ಕಾಡಿನಬೆಂಕಿಯನ್ನು ಪರಿಸರ ವ್ಯವಸ್ಥೆಯ ಭಾಗವೆಂದು ಒಪ್ಪಲು ಅಡ್ಡಿಯಿಲ್ಲ.

ಏಕೆಂದರೆ, ಬೆಂಕಿಯಿಂದಾಗಿಯೇ ವಿವಿಧ ಸಂಕೀರ್ಣ ಪಾರಿಸರಿಕ ಕ್ರಿಯೆಗಳು ಕಾಡಿನ ನೆಲದಲ್ಲಿ ಜರುಗುತ್ತವೆ. ಒಣಗಿದ ಮರಮಟ್ಟುಗಳು ಸುಟ್ಟು ಇದ್ದಿಲು ಹಾಗೂ ಬೂದಿಯಾಗುತ್ತವೆ. ಆ ಮೂಲಕ ಅಪಾರ ಪ್ರಮಾಣದ ಸಾವಯವ ಇಂಗಾಲ, ಕ್ಯಾಲ್ಸಿಯಂ, ಮೆಗ್ನೀಶಿಯಂ, ರಂಜಕ, ಗಂಧಕ, ಮ್ಯಾಂಗನೀಸ್‌ನಂತಹ ಲವಣಾಂಶಗಳು ಮೇಲ್ಮಣ್ಣನ್ನು ಸೇರಿ ಫಲವತ್ತಾಗಿಸುತ್ತವೆ. ನೈಸರ್ಗಿಕ ಸೂಕ್ಷ್ಮಾಣುಜೀವಿಗಳ ವೃದ್ಧಿ ಹಾಗೂ ನಿಯಂತ್ರಣವನ್ನೂ ಅದು ನಿರ್ವಹಿಸುತ್ತದೆ. ಗಾಳಿಯಲ್ಲಿರುವ ಸಾರಜನಕವು ನೀರಿನಲ್ಲಿ ಕರಗುವ ನೈಟ್ರೇಟ್ ಲವಣವಾಗಿ ಪರಿವರ್ತಿತವಾಗಿ, ಗಿಡಮರಗಳ ಬೇರು ಅದನ್ನು ಹೀರುವಲ್ಲೂ ಸುಟ್ಟ ಮೇಲ್ಮಣ್ಣು ಸಹಾಯ ಮಾಡಬಲ್ಲದು. ಬಿದಿರಿನಂಥ ಹುಲ್ಲಿನ ಬೇರು ಅಥವಾ ದಪ್ಪ ಹೊದಿಕೆಯ ಸಸ್ಯಪ್ರಭೇದಗಳ ಬೀಜಗಳು ಮೊಳಕೆಯೊಡೆದು ಸಸ್ಯಸಂಕುಲ ವೃದ್ಧಿಯಾಗಲೂ ಸೀಮಿತ ಪ್ರಮಾಣದ ಬೆಂಕಿಯಿಂದ ಅನುಕೂಲ ಆಗುತ್ತದೆ. ಇದರಿಂದಾಗಿಯೇ, ನಿಯಮಿತವಾದ ಅಗ್ನಿಯು ಅರಣ್ಯಸ್ನೇಹಿ ಎಂದು ವನವಾಸಿಗಳು ನಂಬಿರುವುದು, ಪರಿಸರವಿಜ್ಞಾನವೂ ಸಮರ್ಥಿಸಿರುವುದು.

ಆದರೆ, ಮಲೆನಾಡು ಹಾಗೂ ಕರಾವಳಿಯ ಇತ್ತೀಚಿನ ದಶಕಗಳ ಕಾಳ್ಗಿಚ್ಚು, ಯಾವ ಅರ್ಥದಲ್ಲೂ ಸಹಜ ಹಾಗೂ ಸೀಮಿತವಾಗಿ ಉಳಿದಿಲ್ಲ. ದುರುದ್ದೇಶಕ್ಕೆಂದೇ ಹಚ್ಚುವ ಬೆಂಕಿಯು ಪ್ರತಿವರ್ಷವೂ ಸಾವಿರಾರು ಎಕರೆ ಕಾಡನ್ನು ಭಸ್ಮ ಮಾಡುತ್ತಿದೆ. ಕಾಡಿನ ಮರ ಕದಿಯಲು, ಜಮೀನು ಅತಿಕ್ರಮಿಸಿ ಕಟ್ಟಡ ನಿರ್ಮಿಸಲು, ಶುಂಠಿ, ರಬ್ಬರ್, ಅಡಿಕೆಯಂಥ ವಾಣಿಜ್ಯಕೃಷಿ ವಿಸ್ತರಣೆ- ಅದೆಷ್ಟು ಕಾರಣಗಳು ಬೆಂಕಿ ಬೀಳಲು! ಇದರಿಂದಾಗಿಯೇ ಸಮೃದ್ಧ ಅರಣ್ಯ ಛಿದ್ರವಾಗುತ್ತಿದೆ, ವಿಸ್ತಾರ ಕಡಿಮೆಯಾಗುತ್ತಿದೆ. ಕೀಟ, ಪಕ್ಷಿ, ಸರೀಸೃಪ, ಸಸ್ತನಿ- ಇವೆಲ್ಲವುಗಳ ವಾಸಸ್ಥಾನ ಬೆಂಕಿಯಿಂದಾಗಿಯೇ ನಾಶವಾಗುತ್ತಿದೆ.

ಹೀಗೆ ನಿತ್ಯಹರಿದ್ವರ್ಣ ಕಾಡು ಕಣ್ಮರೆಯಾದಂತೆಲ್ಲ ಕುರುಚಲು ಕಾಡೇ ಅಲ್ಲಿ ಆಕ್ರಮಿಸುವುದು. ಮಲೆನಾಡಿನ ದಟ್ಟಡವಿಯಲ್ಲಿ ಮಾತ್ರ ಕಂಡುಬರುವ ನಾಗಕೇಸರ, ಮರದರಸಿನ, ಹೆಬ್ಬಲಸು, ಸೂರಂಟೆ, ರಾಮಪತ್ರೆ, ಜಾರಿಗೆಯಂಥ ಸಾವಿರಾರು ಪ್ರಭೇದಗಳು ವಿನಾಶದಂಚಿಗೆ ಸರಿಯುತ್ತಿರುವುದರ ಹಿಂದೆ ಈ ಕಾರಣವೂ ಇದೆ. ಅಲ್ಲೆಲ್ಲ ಬೆಂಕಿ ತಾಳಿಕೊಳ್ಳಬಲ್ಲ ಲಂಟಾನ, ಜಾಲಿ, ಪಾರ್ಥೇನಿಯಂ, ಯುಪಟೋರಿಯಂ ತರಹದ ಕಳೆ ವ್ಯಾಪಿಸುತ್ತಿದೆ. ಇನ್ನು, ಬೆಂಕಿಯಿಂದ ಅರ್ಧ ಸುಟ್ಟಮೇಲೂ ಚಿಗುರಬೇಕೆಂದರೆ, ಹೆಚ್ಚು ತೇವಾಂಶವಿರುವ ದಪ್ಪ ತೊಗಟೆಯ ಮತ್ತಿ, ಹೊನಗಲು, ಕವಲಿನಂಥ ಮರಗಳಿಗೆ ಮಾತ್ರ ಸಾಧ್ಯ! ಹಿಂದಿನ ಮೂರು ದಶಕಗಳಲ್ಲಿ ಜೀವವೈವಿಧ್ಯ ಭರಿತ ಸಹ್ಯಾದ್ರಿಯ ಕಾಡು ವೇಗವಾಗಿ ಕರಗುತ್ತಿರಲು ಕಾಡಿನಬೆಂಕಿಯೂ ಕೊಡುಗೆ ನೀಡಿದ್ದು ಈ ತೆರನಲ್ಲಿ.

ವನವಾಸಿಗರು ಹಾಗೂ ಕೃಷಿಕರು ಇದರಿಂದಾಗಿ ಎದುರಿಸುವ ಸಂಕಷ್ಟ ಅಷ್ಟಿಷ್ಟಲ್ಲ. ಜಲಾನಯನ ಪ್ರದೇಶದ ಕಾಡು ಭಸ್ಮವಾಗಿ, ಮೇಲ್ಮಣ್ಣು ಕೊಚ್ಚಿಹೋಗಿ, ಮಳೆನೀರು ಇಂಗದೆ, ಹೊಳೆ-ಕೆರೆಗಳು ಬತ್ತುತ್ತಿವೆ. ಕಾಡುಪ್ರಾಣಿಗಳ ವಾಸಸ್ಥಾನ ನಾಶವಾಗಿ ಹೊಲ, ತೋಟಗಳಿಗೆ ಕಾಡೆಮ್ಮೆ, ಹಂದಿ, ಮುಳ್ಳುಹಂದಿ, ಮಂಗನ ದಾಳಿ ಮಿತಿಮೀರುತ್ತಿದೆ. ಹಳ್ಳಿಗರಿಗೆ ಕಾನನದ ಜೇನು, ಅಂಟುವಾಳ, ಶೀಗೆಕಾಯಿ, ಮಿಡಿಮಾವು, ಹಸಿಸೊಪ್ಪು, ಉರುವಲಿನಂತಹವು ಅಲಭ್ಯವಾಗುತ್ತಿವೆ. ಹಳ್ಳಿಯಲ್ಲಿದ್ದೂ ಕಾಡಿನಿಂದ ಬೇರ್ಪಟ್ಟ ಅನಾಥ ಸ್ಥಿತಿ ಗ್ರಾಮೀಣ ಜನರದು! ಹೀಗಾಗಿ, ಅರಣ್ಯ ಪ್ರದೇಶಗಳನ್ನು ಬೆಂಕಿಯಿಂದ ರಕ್ಷಿಸುವ ಸಮಗ್ರನೀತಿಯನ್ನು ರಾಜ್ಯ ಸರ್ಕಾರ ಈಗಲಾದರೂ ರೂಪಿಸಬೇಕಿದೆ. ಈ ದಿಸೆಯಲ್ಲಿ ಶೀಘ್ರವಾಗಿ ಅನುಷ್ಠಾನಗೊಳಿಸಬೇಕಾದ ಮೂರು ಅಂಶಗಳನ್ನು ಇಲ್ಲಿ ಸ್ಥೂಲವಾಗಿ ಪ್ರಸ್ತಾಪಿಸಲಾಗಿದೆ.

ಒಂದು, ತಾಂತ್ರಿಕ ಮಾಹಿತಿ ಪೂರೈಕೆಯದು. ಅರಣ್ಯ ಇಲಾಖೆಗೆ ನಾಸಾ ಹಾಗೂ ಇಸ್ರೊ ಉಪಗ್ರಹಗಳ ಮಾಹಿತಿ ಈಗ ಲಭ್ಯವಾಗುತ್ತಿದ್ದರೂ, ಅವನ್ನು ತ್ವರಿತವಾಗಿ ವಿಶ್ಲೇಷಿಸಿ, ಅಗತ್ಯವಿದ್ದೆಡೆ ತಳಮಟ್ಟಕ್ಕೆ ಸಕಾಲದಲ್ಲಿ ಒದಗಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ, ಪ್ರತಿ ಜಿಲ್ಲೆಯಲ್ಲೂ ಕಾಡಿನಬೆಂಕಿ ಕುರಿತು ಸಮಗ್ರ ಮತ್ತು ಖಚಿತ ಮಾಹಿತಿ ಒದಗಿಸುವ ಉತ್ಕೃಷ್ಟ ಮಾಹಿತಿ ಕೇಂದ್ರಗಳನ್ನು ಸ್ಥಾಪಿಸುವ ಅಗತ್ಯವಿದೆ. ಈಗಾಗಲೇ ಜಿಲ್ಲಾ ಪಂಚಾಯಿತಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ 'ನೈಸರ್ಗಿಕ ಸಂಪನ್ಮೂಲ ಮಾಹಿತಿ ನಿರ್ವಹಣಾ ಕೇಂದ್ರ'ಗಳನ್ನೇ (ಎನ್ಆರ್‌ಡಿಎಂಎಸ್) ಈ ದಿಸೆಯಲ್ಲಿ ಮೇಲ್ದರ್ಜೆಗೆ ಏರಿಸಬಹುದು. ಮುಂಜಾಗರೂಕ 'ಬೆಂಕಿರೇಖೆ' ನಿರ್ಮಿಸುವುದು, ಬೆಂಕಿಯ ಪ್ರಸರಣ ತಡೆಯಬಲ್ಲ ನಿತ್ಯಹರಿದ್ವರ್ಣ ಪ್ರಭೇದಗಳನ್ನು ಆಯಕಟ್ಟಿನ ಜಾಗದಲ್ಲಿ ಬೆಳೆಸುವಂತಹ ತಾಂತ್ರಿಕ ಸಂಗತಿಗಳ ಕುರಿತಂತೆಲ್ಲ ಅವು ಮಾರ್ಗದರ್ಶನ ನೀಡಬಲ್ಲವು.

ಎರಡು, ಗ್ರಾಮ ಪಂಚಾಯಿತಿ ಹಾಗೂ ತಾಲ್ಲೂಕು ಮಟ್ಟದ 'ವಿಪತ್ತು ನಿಯಂತ್ರಣ ಕಾರ್ಯಪಡೆ'ಗಳನ್ನು ಸಬಲೀಕರಿಸಿ, ಅವುಗಳ ವ್ಯಾಪ್ತಿಯಲ್ಲಿ ಕಾಳ್ಗಿಚ್ಚನ್ನೂ ಆದ್ಯತಾ ವಿಷಯವಾಗಿ ಸೇರಿಸುವುದು. ಆ ಮೂಲಕ ಅರಣ್ಯ ಇಲಾಖೆಯ ಕಾರ್ಯಕ್ಕೆ ಕಂದಾಯ, ಪೊಲೀಸ್ ಹಾಗೂ ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದ ಇತರ ಇಲಾಖೆಗಳೂ ಬೆಂಕಿ ನಂದಿಸುವ ತುರ್ತುಕಾರ್ಯದಲ್ಲಿ ಪರಿಣಾಮಕಾರಿಯಾಗಿ ಕೈಜೋಡಿಸಲು ಸಾಧ್ಯ.

ಮೂರನೆಯದು ಹಾಗೂ ಪ್ರಮುಖವಾದದ್ದು, ಅರಣ್ಯ ರಕ್ಷಣೆಗೆ ತಳಮಟ್ಟದಲ್ಲಿ ಸ್ಥಳೀಯ ಜನರ ಸಹಭಾಗಿತ್ವ ಸಾಧಿಸುವುದು. ಈ ದಿಸೆಯಲ್ಲಿ ಅರಣ್ಯ ಇಲಾಖೆಯ ಈವರೆಗಿನ ಸಾಧನೆ ಕಡಿಮೆಯೇ. ವನವಾಸಿಗರು, ರೈತರು, ಕೂಲಿಕಾರರು, ಗ್ರಾಮ ಅರಣ್ಯ ಸಮಿತಿ, ಸ್ವಸಹಾಯ ಗುಂಪುಗಳು- ಹೀಗೆ ಎಲ್ಲರೂ ಜೊತೆಯಾದರೆ ಮಾತ್ರ ಕಾಡು ಉಳಿಯಬಹುದು. ವಸಾಹತುಶಾಹಿ ಕಾರ್ಯಶೈಲಿ ಕೈಬಿಟ್ಟು, ಸಮುದಾಯಪ್ರೇರಿತ ನೈಸರ್ಗಿಕ ಸಂಪನ್ಮೂಲ ನಿರ್ವಹಣೆಗೆ ಅರಣ್ಯ ಇಲಾಖೆ ಮುಂದಾದರೆ ಇದು ಸಾಧ್ಯ. ಜನಸಹಭಾಗಿತ್ವ ತತ್ವವು ಅರಣ್ಯ ಇಲಾಖೆಯ ಉನ್ನತ ಅಧಿಕಾರಿಗಳಿಂದ ತಳಮಟ್ಟದ ಸಿಬ್ಬಂದಿಯವರೆಗೆ ಮೈಗೂಡಬೇಕಾದ ಅಗತ್ಯವು ಯಾವುದೇ ಕಾಡಿನಲ್ಲಿ ಸಂಚರಿಸಿದರೂ ತೋರಬಲ್ಲದು!

ಅಮೆರಿಕದ ಕ್ಯಾಲಿಫೋರ್ನಿಯಾದಲ್ಲೋ ಅಥವಾ ನಮ್ಮದೇ ಹಿಮಾಲಯದ ದುರ್ಗಮ ಪ್ರದೇಶಗಳಲ್ಲೋ ಬೆಂಕಿ ಆರಿಸಲು ಹೆಲಿಕಾಪ್ಟರ್ ಸೇವೆಯಂಥ ವೆಚ್ಚದ ಸೌಕರ್ಯ ಬೇಕಾದೀತು. ಆದರೆ, ಸಹ್ಯಾದ್ರಿಯ ಅರಣ್ಯ ರಕ್ಷಣೆಗೆ ಈಗ ಅಗತ್ಯವಿರುವುದು ಸರ್ಕಾರಿ ಕಾರ್ಯ ಯೋಜನೆಗಳ ಪ್ರಾಮಾಣಿಕ ಅನುಷ್ಠಾನ ಮತ್ತು ಜನರ ನೈಜ ಪಾಲ್ಗೊಳ್ಳುವಿಕೆ ಮಾತ್ರ.

ಚುರುಮುರಿ

ಪೆನ್‌ಡ್ರೈವ್ ಪ್ರಾಬ್ಲಂ

• ಮಣ್ಣೆ ರಾಜು

'ಕೊರೊನಾ ವೈರಾಣುಗಿಂತ ಪೆನ್‌ಡ್ರೈವ್ ಹೈರಾಣ ಅಪಾಯಕಾರಿಯೇನ್ರೀ?' ಟಿ.ವಿ. ನ್ಯೂಸ್ ಆಫ್ ಮಾಡಿ ಸುಮಿ ಕೇಳಿದಳು.

'ಎರಡೂ ಡೇಂಜರ್ರೇ, ಒಂದು ಪ್ರಾಣಹಾನಿ, ಇನ್ನೊಂದು ಮಾನಹಾನಿ... ಆದರೆ ಸಾಮಾಜಿಕ ರಗಳೆಯಾದ ಪೆನ್‌ಡ್ರೈವ್ ಕೇಸ್ ಸಾಂಕ್ರಾಮಿಕ ರೋಗಕ್ಕಿಂತ ಅಪಾಯಕಾರಿಯಾಗಿ ಹರಡುತ್ತಾ ರಾಷ್ಟ್ರೀಯ ಸಮಸ್ಯೆ ಆಗಿಬಿಟ್ಟದೆಯಂತೆ. ಪೆನ್‌ಡ್ರೈವ್ ಪ್ರಾಬ್ಲಂ ತಡೆಗೆ ಸರ್ಕಾರ ಹೆಣಗಾಡುತ್ತಿದೆಯಂತೆ' ಅಂದ ಶಂಕ್ರಿ.

'ರಾಜಕಾರಣಿಗಳು, ಮೀಡಿಯಾ ದಿನಬೆಳಗಾದರೆ ಪೆನ್‌ಡ್ರೈವ್ ಪಾರಾಯಣ ಮಾಡುತ್ತಿದ್ದರೆ ಈ ರಗಳೆ ನಿಯಂತ್ರಣಕ್ಕೆ ಬಾರದೆ ಮತ್ತಷ್ಟು ಉಲ್ಬಣ ಆಗೋದಿಲ್ವೇನ್ರೀ? ಇವರೆಲ್ಲಾ ಪೆನ್‌ಡ್ರೈವ್ ಹಿಡಿದು ಹೀಗೇ ಲಾಂಗ್ ಡ್ರೈವ್ ಹೊರಟರೆ... ಈ ಪ್ರಕರಣದ ತರಹೇವಾರಿ ಪುಕಾರು ರಾಷ್ಟ್ರದ ಗಡಿ ದಾಟಿ ಜಾಗತಿಕ ಮಟ್ಟಕ್ಕೂ ಹರಡಿದರೆ ಮರ್ಯಾದೆ ಇರುತ್ತೇನ್ರೀ?'

'ಪೆನ್‌ಡ್ರೈವ್ ಕೇಸ್‌ನಿಂದ ರಾಜ್ಯದ ಜನ ತಲೆ ತಗ್ಗಿಸುವಂತಾಗಿದೆ. ಪ್ರಕರಣವನ್ನು ಸರ್ಕಾರ ಸಮರ್ಥವಾಗಿ ನಿಭಾಯಿಸುತ್ತಿಲ್ಲ ಎಂದು ವಿಪಕ್ಷದವರು ದಬಾಯಿಸುತ್ತಿದ್ದಾರೆ. ಗಂಭೀರವಾಗಿ ಪರಿಗಣಿಸಿದ್ದೇವೆ, ಪೆನ್‌ಡ್ರೈವ್ ಪೀಡೆಯನ್ನು ಬುಡಸಮೇತ ನಿರ್ಮೂಲನೆ ಮಾಡುತ್ತೇವೆ ಎಂದು ಆಡಳಿತ ಪಕ್ಷದವರು ಹೇಳುತ್ತಿದ್ದಾರೆ'.

'ಈ ಪೆನ್‌ಡ್ರೈವ್ ಪ್ರಕರಣವನ್ನು ಆಡಳಿತ, ವಿರೋಧ ಪಕ್ಷಗಳವರು ರಾಜಕೀಯ ಅಸ್ತ್ರ ಮಾಡಿಕೊಂಡು ಪ್ರಯೋಗಿಸುತ್ತಿರುವುದನ್ನು ನೋಡಿದರೆ ಈ ಪ್ರಕರಣ ಬಹು ದೊಡ್ಡ ಸಾರ್ವಜನಿಕ ಸಮಸ್ಯೆಯೇ ಆಗಿರಬಹುದು!'

'ಇರಬಹುದೇನೋ, ಪೆನ್‌ಡ್ರೈವ್ ಪ್ರಕರಣದಿಂದಲೇ ರಾಜ್ಯದಲ್ಲಿ ಬರಗಾಲ ಬಂದು ಕುಡಿಯುವ ನೀರಿಗೂ ಸಮಸ್ಯೆಯಾಗಿರಬಹುದು. ರಾಜ್ಯದ ಆರ್ಥಿಕ ಪರಿಸ್ಥಿತಿ ಮೇಲೆ ಪೆನ್‌ಡ್ರೈವ್ ದುಷ್ಪರಿಣಾಮ ಬೀರಿರಬಹುದು. ಕಾನೂನು ಸುವ್ಯವಸ್ಥೆ ಹಾಳಾಗಿರಬಹುದು, ಪದಾರ್ಥಗಳ ಬೆಲೆ ಏರಿಕೆಗೂ ಪೆನ್‌ಡ್ರೈವ್ ಕಾರಣವಾಗಿರಬಹುದು'.

'ಹೌದೌದು. ಈಗಿನ ನಗೆಪಾಟಲಿನ ಪರಿಸ್ಥಿತಿಗೆ ಪೆನ್‌ಡ್ರೈವೇ ಕಾರಣವಾಗಿದೆ. ಪೆನ್‌ಡ್ರೈವ್ ಓಟಕ್ಕೆ ಬ್ರೇಕ್ ಬೀಳುವವರೆಗೂ ನಾವು ತೆಪ್ಪಗಿರಬೇಕಷ್ಟೇ...' ಎಂದ ಶಂಕ್ರಿ.

ಸಂಗತ

ಶಾಲಾ ಶಿಕ್ಷಣ: ಗಟ್ಟಿಯಾಗಲಿ ಬೇರು

ಶೈಕ್ಷಣಿಕ ಗುಣಮಟ್ಟದ ನೈಜ ಸ್ಥಿತಿಯನ್ನು ಬಿಂಬಿಸುತ್ತಿರುವ ಎಸ್‌ಎಸ್‌ಎಲ್‌ಸಿ ಫಲಿತಾಂಶವನ್ನು ಒಪ್ಪಿಕೊಂಡು, ಗುಣಮಟ್ಟದ ಸವಾಲನ್ನು ಎದುರಿಸುವ ಮಾರ್ಗೋಪಾಯಗಳ ಬಗ್ಗೆ ಚಿಂತಿಸಬೇಕು

• ಎಚ್.ಬಿ.ಚಂದ್ರಶೇಖರ್

ವೆಬ್‌ಕಾಸ್ಟಿಂಗ್ ಕಾರಣದಿಂದ ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶ ಕುಸಿದಿದ್ದು, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಗ್ರೇಸ್ ಅಂಕಗಳನ್ನು ನೀಡಿ, ಫಲಿತಾಂಶವನ್ನು ಉತ್ತಮಪಡಿಸಲಾಗಿದೆ. ಅನೇಕರು ಈ ಕ್ರಮದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಇಲ್ಲೊಂದು ಸಂಗತಿಯನ್ನು ನಾವು ಗಮನಿಸಬೇಕು. ಪರೀಕ್ಷೆಯನ್ನು ಕಟ್ಟುನಿಟ್ಟಾಗಿ ನಡೆಸದ ಕಾರಣಕ್ಕೆ ಫಲಿತಾಂಶವು ಚೆನ್ನಾಗಿ ಬರುವುದು ಅಥವಾ ಪರೀಕ್ಷೆಯನ್ನು ಬಿಗಿಗೊಳಿಸಿದ ಕಾರಣಕ್ಕೆ ಕಡಿಮೆ ಫಲಿತಾಂಶ ಬರುವುದು, ಈ ಎರಡೂ ಸನ್ನಿವೇಶಗಳಲ್ಲಿ ತೊಂದರೆಗೆ ಒಳಗಾಗುವವರು ವಿದ್ಯಾರ್ಥಿಗಳು. ಪರೀಕ್ಷೆಯನ್ನು ಹೀಗೆಯೇ ನಡೆಸಿ ಎಂದು ವಿದ್ಯಾರ್ಥಿಗಳು ಒತ್ತಾಯಿಸುವುದಿಲ್ಲ. ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಅವರ ನೈಜ ಕಲಿಕೆಯನ್ನು ಪುರಸ್ಕರಿಸುವ ರೀತಿಯಲ್ಲಿ ಪರೀಕ್ಷೆಯನ್ನು ನಡೆಸಿರುವುದು ಉತ್ತಮವಾದ ಕ್ರಮವಾಗಿದೆ.

ಈ ಬಾರಿಯ ಫಲಿತಾಂಶವು ಶಿಕ್ಷಣದ ಗುಣಮಟ್ಟದ ವಾಸ್ತವಿಕ ಸ್ಥಿತಿಯನ್ನು ಬಿಂಬಿಸುತ್ತಿದೆ. ಕಹಿಯೆನಿಸುವ ಈ ಸತ್ಯವನ್ನು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಂಡಾಗ ಮಾತ್ರ ಅದರಿಂದ ಪಾರಾಗುವ ಮಾರ್ಗೋಪಾಯಗಳ ಬಗ್ಗೆ ಚಿಂತಿಸಲು ಸಾಧ್ಯ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಮೇಲೆ ನಮ್ಮೆಲ್ಲರ ಗಮನ ಒಂದಷ್ಟು ಹೆಚ್ಚಾಗಿಯೇ ಕೇಂದ್ರೀಕೃತವಾಗಿರುತ್ತದೆ. ಇಷ್ಟೇ ಗಮನವನ್ನು ನಾವು ಕೆಳ ಹಂತದ ತರಗತಿಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಕಲಿಕೆಯ ಮೇಲೂ ಹರಿಸಬೇಕಿದೆ. 1ರಿಂದ 8ನೇ ತರಗತಿವರೆಗಿನ ವಿದ್ಯಾರ್ಥಿಗಳನ್ನು 'ಪರೀಕ್ಷೆಯಲ್ಲಿ ಫೇಲು ಮಾಡುವಂತಿಲ್ಲ' ಎಂಬ ನಿಯಮವನ್ನು ರಾಜ್ಯದಲ್ಲಿ ನಾವು ಹೊಂದಿದ್ದೇವೆ. ನಿಧಾನ ಕಲಿಕೆಯ ವಿದ್ಯಾರ್ಥಿಗಳ ಬಗ್ಗೆ ಹೆಚ್ಚಿನ ಗಮನಹರಿಸಿ, ವಿಭಿನ್ನವಾಗಿ ಕಲಿಸಿ ಪಾಸು ಮಾಡಬೇಕು ಎಂಬುದನ್ನು ಮರೆತು, ಸಮರ್ಪಕವಾಗಿ ಕಲಿಯದವರ ಮೇಲೆ ಉದಾರ ಮನೋಭಾವ ತೋರಿ ಮುಂದಿನ ತರಗತಿಗೆ ಕಳುಹಿಸಲಾಗುತ್ತಿದೆಯೇ ಎಂಬ ಅನುಮಾನ ಕಾಡದಿರದು. ಇದರ ಫಲವಾಗಿ, ಎಸ್‌ಎಸ್‌ಎಲ್‌ಸಿ ತಲುಪಿದ ಕೆಲವು ವಿದ್ಯಾರ್ಥಿಗಳಲ್ಲಿ ಮೂಲಭೂತ ಕಲಿಕಾ ಕೌಶಲಗಳ ಕಲಿಕೆ ಸ್ಪಷ್ಟವಾಗಿ ಇರದು. ಆದಕಾರಣ, ಅಂತಹವರು ಎಸ್‌ಎಸ್‌ಎಲ್‌ಸಿ ಪಾಸು ಮಾಡಲು ತೊಂದರೆ ಅನುಭವಿಸುತ್ತಾರೆ. ಆ ಬಗೆಯ ವಿದ್ಯಾರ್ಥಿಗಳಿಗೆ ಕಲಿಸುವಂಥ ಪ್ರಯತ್ನದಲ್ಲಿ ಶಿಕ್ಷಕರು ಹೆಚ್ಚಿನ ಸವಾಲನ್ನು ಎದುರಿಸುತ್ತಾರೆ.

ಕನಿಷ್ಠ ಕಲಿಕಾ ಸಾಮರ್ಥ್ಯಗಳನ್ನೂ ಕಲಿಯದೇ ಇರುವ ಮಕ್ಕಳನ್ನು 5 ಮತ್ತು 8ನೇ ತರಗತಿಗಳಲ್ಲಿ ಫೇಲು ಮಾಡಿ, ಸಮರ್ಪಕವಾಗಿ ಕಲಿಸಿ, ನಂತರ ಅವರನ್ನು ಮುಂದಿನ ತರಗತಿಗೆ ಉತ್ತೀರ್ಣಗೊಳಿಸುವ ನಿಯಮ ಜಾರಿಗೆ ತರಬಹುದು. ಈ ಕುರಿತು ಕೇಂದ್ರ ಸರ್ಕಾರವು ಶಿಕ್ಷಣ ಹಕ್ಕು ಅಧಿನಿಯಮಕ್ಕೆ ತಿದ್ದುಪಡಿಯನ್ನು ತಂದಿದ್ದು, ರಾಜ್ಯ ಸರ್ಕಾರಗಳು ಇಚ್ಛಿಸಿದಲ್ಲಿ ಈ ನಿಯಮವನ್ನು ಅಳವಡಿಸಿಕೊಳ್ಳಬಹುದು. ಈ ನಿಯಮವು ಅಸ್ಸಾಂ, ದೆಹಲಿ ಮತ್ತು ಹರಿಯಾಣ ರಾಜ್ಯಗಳಲ್ಲಿ ಜಾರಿಯಲ್ಲಿದೆ. ಆದರೆ ಈ ನಿಯಮದ ಕಾರಣ ಒಡ್ಡಿ, ಕಲಿಸದೇ ಮಕ್ಕಳನ್ನು ಅನುತ್ತೀರ್ಣ ಮಾಡುವ ಪ್ರವೃತ್ತಿ ರೂಢಿಗೆ ಬರದಂತೆ ನೋಡಿಕೊಳ್ಳಬೇಕು.

ಶಿಕ್ಷಣ ಇಲಾಖೆ, ಸಾರ್ವಜನಿಕರು, ಪೋಷಕರು, ಜನಪ್ರತಿನಿಧಿಗಳು ಹಾಗೂ ಶಿಕ್ಷಕರ ಗಮನ ಎಸ್‌ಎಸ್‌ಎಲ್‌ಸಿ ಓದುತ್ತಿರುವ ವಿದ್ಯಾರ್ಥಿಗಳ ಮೇಲೆ ಹೆಚ್ಚಿರುತ್ತದೆ. ಈ ವಿದ್ಯಾರ್ಥಿಗಳಿಗೆ ಹೆಚ್ಚಿನ ತಯಾರಿ ನೀಡಿ, ಅವರನ್ನು ಎಸ್‌ಎಸ್‌ಎಲ್‌ಸಿಯ ಗಡಿ ದಾಟಿಸುವ ಸದುದ್ದೇಶವನ್ನು ಎಲ್ಲರೂ ಹೊಂದಿರುತ್ತಾರೆ. ಇದಕ್ಕಾಗಿ ಪಾಸಿಂಗ್ ಪ್ಯಾಕೇಜ್, ವಿಶೇಷ ತರಗತಿ, ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಮನೆಗಳಿಗೆ ಅಧಿಕಾರಿಗಳು, ಶಿಕ್ಷಕರ ನಿಯಮಿತ ಭೇಟಿಯಂತಹ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ. ಎಸ್‌ಎಸ್‌ಎಲ್‌ಸಿ ಹಂತಕ್ಕೆ ತೆಗೆದುಕೊಳ್ಳುವ ಕ್ರಮಗಳಲ್ಲಿ ಕನಿಷ್ಠ ಶೇ 50ರಷ್ಟನ್ನು 1ರಿಂದ 9ನೇ ತರಗತಿ ವಿದ್ಯಾರ್ಥಿಗಳ ಕಲಿಕೆಗೂ ತೆಗೆದುಕೊಂಡಿದ್ದಲ್ಲಿ ಶಿಕ್ಷಣದ ಗುಣಮಟ್ಟ ಉತ್ತಮಗೊಳ್ಳಲು ಸಹಕಾರಿಯಾಗುತ್ತಿತ್ತು ಎನಿಸದೇ ಇರದು.

ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶವೊಂದನ್ನೇ ಉತ್ತಮಪಡಿಸುವ ಕ್ರಮವು ಗಿಡದ ಬೇರನ್ನು ಅಗತ್ಯವಾದಷ್ಟು ಪ್ರಮಾಣದ ನೀರು, ಮಣ್ಣು, ಗೊಬ್ಬರದಿಂದ ಗಟ್ಟಿಗೊಳಿಸದೆ ಗಿಡದ ಮೇಲ್ಭಾಗಕ್ಕೆ ನೀರು, ಗೊಬ್ಬರ ಒದಗಿಸಿದಂತೆ ಆಗುತ್ತದೆ. ಈ ಕಾರಣದಿಂದ, ಆಯಾ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಲ್ಲಿ ಉತ್ತಮ ಕಲಿಕೆಯಾಗುವಂತೆ ಮಾಡುವುದರ ಜೊತೆಗೆ ಕೆಳಹಂತದ ತರಗತಿಗಳಲ್ಲಿನ ಬೋಧನೆ-ಕಲಿಕೆಯ ಪ್ರಕ್ರಿಯೆಯನ್ನು ಚುರುಕುಗೊಳಿಸಬೇಕು.

ಶಿಕ್ಷಕರು ಬೋಧನೆ-ಕಲಿಕೆಯ ಚಟುವಟಿಕೆಗಳಲ್ಲಿ ಏಕಾಗ್ರತೆಯಿಂದ ತೊಡಗಿಕೊಳ್ಳಲು ಸಾಧ್ಯವಾಗುವಂತೆ ಅನುಕೂಲಕರವಾದ ಶೈಕ್ಷಣಿಕ ವಾತಾವರಣವನ್ನು ಎಲ್ಲ ಶಾಲೆಗಳಲ್ಲಿ ಸೃಜಿಸಬೇಕು. ಮಕ್ಕಳು ಶಾಲೆಗೆ ಹಾಜರಾಗಲು ಹಾಗೂ ಕಲಿಯಲು ಅನುಕೂಲ ಕಲ್ಪಿಸುವ ಚಟುವಟಿಕೆಗಳಾದ ಮಧ್ಯಾಹ್ನದ ಬಿಸಿಯೂಟ, ಸಮವಸ್ತ್ರದಂತಹವನ್ನು ಶಿಕ್ಷಕರ ಕನಿಷ್ಠ ಬೋಧನಾ ಸಮಯ ಬಳಸಿ ಅನುಷ್ಠಾನ ಮಾಡುವಂತಹ ಸಾಧ್ಯತೆಯನ್ನು ಕೂಲಂಕಷವಾಗಿ ಪರಿಶೀಲಿಸಬೇಕು.

ಮಕ್ಕಳ ಕಲಿಕಾ ಗುಣಮಟ್ಟ ಹಾಗೂ ಸಂಬಂಧಿತ ವಿಷಯಗಳ ಪ್ರಗತಿ ಪರಿಶೀಲನೆಯು ಪ್ರಥಮ ಆದ್ಯತೆ ಆಗಬೇಕು. ಶಿಕ್ಷಕರು, ಶಿಕ್ಷಣ ಚಿಂತಕರು, ಪೋಷಕರು ಮತ್ತು ಸ್ವಯಂಸೇವಾ ಸಂಸ್ಥೆಗಳ ಸಹಕಾರದೊಂದಿಗೆ, 3ರಿಂದ 5 ವರ್ಷಗಳವರೆಗಿನ ದೂರದೃಷ್ಟಿಯೊಂದಿಗೆ ಶಾಲಾ ಶಿಕ್ಷಣದ ಬೇರುಗಳನ್ನು ಗಟ್ಟಿಗೊಳಿಸಲು ಸೂಕ್ತ ಯೋಜನೆ, ಕಾರ್ಯತಂತ್ರ, ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದಾಗಿದೆ.

ವಾಚಕರ ವಾಣಿ

ಹೋರ್ಡಿಂಗ್‌ಗಳ ಪರಿಶೀಲನೆ ನಡೆಯಲಿ

ಮುಂಬೈನಲ್ಲಿ ಭಾರಿ ಮಳೆ, ಗಾಳಿಗೆ ಹೋರ್ಡಿಂಗ್ ಒಂದು ಧರೆಗೆ ಉರುಳಿ 14 ಜನ ಮೃತಪಟ್ಟು, 70ಕ್ಕೂ ಹೆಚ್ಚು ಮಂದಿ ಗಾಯಗೊಂಡಿರುವುದು ದುರದೃಷ್ಟಕರ. ದೇಶದ ಕೆಲವು ನಗರಗಳಲ್ಲಿ ಈ ಹಿಂದೆ ಇಂತಹ ಪ್ರಕರಣಗಳು ನಡೆದಿರುವ ನಿದರ್ಶನಗಳಿವೆ. ಆದರೂ ಹೋರ್ಡಿಂಗ್ ಅಳವಡಿಸುವವರು, ನಿಗದಿಪಡಿಸಿದ ಗಾತ್ರಕ್ಕಿಂತ ದೊಡ್ಡ ಗಾತ್ರದ ಹೋರ್ಡಿಂಗ್ ಅಳವಡಿಸುವುದು ಅಥವಾ ಸುರಕ್ಷಾ ಕ್ರಮವನ್ನು ಸರಿಯಾಗಿ ಪಾಲನೆ ಮಾಡದೇ ಹೋರ್ಡಿಂಗ್ ಹಾಕುವುದು ಇಂತಹ ಅವಘಡಗಳಿಗೆ ಕಾರಣ.

ನಮ್ಮ ರಾಜ್ಯದಲ್ಲೂ ಸಂಬಂಧಪಟ್ಟವರು ತಕ್ಷಣ ಕಾರ್ಯಪ್ರವೃತ್ತರಾಗಿ, ಎಲ್ಲಾ ಹೋರ್ಡಿಂಗ್‌ಗಳ ದೃಢತೆಯ ಬಗ್ಗೆ ಪರಿಶೀಲನೆ ನಡೆಸಬೇಕು. ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು ಜನರ ರಕ್ಷಣೆಗೆ ಮುಂದಾಗಬೇಕು.

ಲಕ್ಷ್ಮಿಕಾಂತ್ ಕೊಟ್ಟಾರ ಚೌಕಿ, ಮಂಗಳೂರು

ಸಹಾಯವಾಣಿಯೇ ನೆರವಿಗೆ ಬಾರದಿದ್ದರೆ...!

ಸಾರ್ವಜನಿಕ ಶಿಕ್ಷಣ ಇಲಾಖೆ ನಡೆಸಲಿರುವ ಶಿಕ್ಷಕರ ಅರ್ಹತಾ ಪರೀಕ್ಷೆಗೆ (ಟಿಇಟಿ) ನಾನು ಆನ್‌ಲೈನ್‌ನಲ್ಲಿ ಅರ್ಜಿ ಭರ್ತಿ ಮಾಡುವಾಗ, ಎಸ್‌ಎಸ್‌ಎಲ್‌ಸಿ ರಿಜಿಸ್ಟರ್ ನಂಬರ್ ದಾಖಲಿಸುವ ಸಮಯದಲ್ಲಿ ತಾಂತ್ರಿಕ ದೋಷ ಕಂಡುಬರುತ್ತಿದೆ. ಇಂತಹ ರಿಜಿಸ್ಟರ್ ನಂಬರಿನ ಯಾವುದೇ ಅಭ್ಯರ್ಥಿ ಇಲ್ಲ ಎಂಬ ಸಂದೇಶ ಸ್ಕ್ರೀನ್ ಮೇಲೆ ಬರುತ್ತಿದೆ. ಈ ತೊಂದರೆಯಿಂದ ಮುಂದಿನ ವಿವರಗಳನ್ನು ತುಂಬಲು ಸಾಧ್ಯವಾಗುತ್ತಿಲ್ಲ. ಈ ಕುರಿತು ಇದೇ 10ರಿಂದ ಮೂರು ದಿನಗಳ ಕಾಲ ಟಿಇಟಿಗೆ ಸಂಬಂಧಿಸಿದಂತೆ ನೀಡಲಾಗಿರುವ ಸಹಾಯವಾಣಿ ಸಂಖ್ಯೆಗಳಿಗೆ ನಿರಂತರವಾಗಿ ಕರೆ ಮಾಡಿದರೂ ಯಾರೂ ಕರೆಯನ್ನು ಸ್ವೀಕರಿಸಲಿಲ್ಲ. ಅರ್ಜಿದಾರರಿಗೆ ತೊಂದರೆಯಾದರೆ ಸಹಾಯಕ್ಕೆ ಬರಬೇಕಾದ ಸಹಾಯವಾಣಿ ಸಂಖ್ಯೆಗಳೇ ಕಾರ್ಯನಿರ್ವಹಿಸದಿದ್ದರೆ ಇನ್ನು ಯಾರನ್ನು ಸಂಪರ್ಕಿಸುವುದು?

ಅರ್ಜಿ ಸಲ್ಲಿಸಲು ಇದೇ 15 ಕೊನೆಯ ದಿನಾಂಕ. ಹೀಗಾಗಿ, ನಾನು ಅರ್ಜಿ ಸಲ್ಲಿಸುವಿಕೆಯಿಂದ ವಂಚಿತಳಾಗಬಹುದು ಎಂಬ ಆತಂಕ ಕಾಡುತ್ತಿದೆ. ಅರ್ಜಿ ಸಲ್ಲಿಸುವ ಅವಧಿಯನ್ನು ವಿಸ್ತರಿಸುವ ಮೂಲಕ, ಇದೇ ರೀತಿ ತೊಂದರೆಗೆ ಒಳಗಾದ ನನ್ನಂತಹ ಹಲವಾರು ಅಭ್ಯರ್ಥಿಗಳಿಗೆ ನ್ಯಾಯ ಒದಗಿಸಬೇಕೆಂದು ಕೋರುತ್ತೇನೆ.

ಗೌರಿ ಉಪ್ಪಿನ, ಹುಬ್ಬಳ್ಳಿ

ಮಹಾನ್ ಜ್ಯೋತಿಷಿಗಳೇ...

ಬೇಲ್ ಹೋಮ ಮಾಡಿಸಿಬಿಡಿ,
ಪೆನ್‌ಡ್ರೈವ್ ದೋಷ ನಿವಾರಕ
ಪೂಜೆ ಮಾಡಿಸಿಬಿಡಿ,
ಎಂಬಿತ್ಯಾದಿ ಬಿಟ್ಟಿ (ತುಟ್ಟಿ)
ಸಲಹೆ ನೀಡದೆ...
ಪಾಪ! ಅವರಿಗೆ ವಿಶ್ರಾಂತಿ
ಪಡೆಯಲು ಅವಕಾಶ ಕೊಡಿ!

ಜೆ.ಬಿ.ಮಂಜುನಾಥ, ಪಾಂಡವಪುರ

ಧಾರ್ಮಿಕ ದಬ್ಬಾಳಿಕೆಗೆ ಬೇಕು ಕಡಿವಾಣ

'ಗೃಹಲಕ್ಷ್ಮಿ' ಯೋಜನೆಯಡಿ ರಾಜ್ಯ ಸರ್ಕಾರ ಮಹಿಳೆಯರಿಗೆ ನೀಡುತ್ತಿರುವ ಹಣವನ್ನು ಕೆಲವು ಗ್ರಾಮಗಳಲ್ಲಿ ಧಾರ್ಮಿಕ ಕಾರ್ಯಗಳಿಗೆ ನೀಡುವಂತೆ ಒತ್ತಾಯಪಡಿಸುತ್ತಿರುವುದರ ಕುರಿತು ಮಲ್ಲಿಕಾರ್ಜುನ ಹೆಗ್ಗಳಗಿ ವಿವರಿಸಿದ್ದಾರೆ (ಸಂಗತ, ಮೇ 14). ಹೌದು, ಬರೀ ಗೃಹಲಕ್ಷ್ಮಿ ಯೋಜನೆಯ ಹಣವನ್ನಷ್ಟೇ ಅಲ್ಲದೆ, ಕೆಲವು ಗ್ರಾಮಗಳಲ್ಲಿ ದೇವಾಲಯಗಳ ನಿರ್ಮಾಣಕ್ಕೆ ಊರಿನ ಎಲ್ಲ ಮನೆಯವರೂ ಗ್ರಾಮದ ಮುಖಂಡರು ನಿಗದಿಪಡಿಸಿದಷ್ಟು ಹಣವನ್ನು ನೀಡಲೇಬೇಕೆಂಬ ಷರತ್ತನ್ನು ವಿಧಿಸಲಾಗುತ್ತಿದೆ. ಇದರಿಂದ, ಕೂಲಿ ಮಾಡಿ ಜೀವನ ಸಾಗಿಸುತ್ತಿರುವ ಬಡವರನ್ನು ಶೋಷಣೆ ಮಾಡಿದಂತೆ ಆಗುತ್ತಿದೆ.

ನಮ್ಮ ಸಂವಿಧಾನ ನೀಡಿರುವ ಧಾರ್ಮಿಕ ಸ್ವಾತಂತ್ರ್ಯದ ಹಕ್ಕಿನ ಪ್ರಕಾರ, ಗುಡಿ ಗೋಪುರಗಳನ್ನು ನಿರ್ಮಾಣ ಮಾಡಿಕೊಳ್ಳಲು ಅವಕಾಶ ಇದೆ. ಆದರೆ ಬಡವರಿಂದಲೂ ಒತ್ತಾಯಪೂರ್ವಕವಾಗಿ ಹಣ ಸಂಗ್ರಹಿಸಿ ಅವುಗಳನ್ನು ನಿರ್ಮಾಣ ಮಾಡಬೇಕೆಂಬ ಉಲ್ಲೇಖ ಇಲ್ಲ. ಈ ಕುರಿತು ಸರ್ಕಾರ ಶೀಘ್ರವಾಗಿ ಗಮನಹರಿಸಿ, ಕಾನೂನು ಕ್ರಮ ಕೈಗೊಳ್ಳಬೇಕು.

ಅಂಬಿಕಾ ಬಿ.ಟಿ., ಹಾಸನ

ಸೌಹಾರ್ದದ ಮಾದರಿ ನಡೆ

ಜಮ್ಮು- ಕಾಶ್ಮೀರದ ರಿಯಾಸಿ ಜಿಲ್ಲೆಯಲ್ಲಿರುವ ದೇವಸ್ಥಾನಕ್ಕೆ ಹೋಗಲು ಅಗತ್ಯವಿರುವ ರಸ್ತೆ ನಿರ್ಮಾಣಕ್ಕಾಗಿ ಮುಸ್ಲಿಂ ಸಮುದಾಯದ ಕುಟುಂಬವೊಂದು ಫಲವತ್ತಾದ ಮುಕ್ಕಾಲು ಎಕರೆಯಷ್ಟು ಜಮೀನನ್ನು ದೇಣಿಗೆ ನೀಡಿರುವುದಾಗಿ ವರದಿಯಾಗಿದೆ (ಪ್ರ.ವಾ., ಮೇ 14). ಜಮ್ಮು- ಕಾಶ್ಮೀರಕ್ಕೆ ಸಂಬಂಧಿಸಿದಂತೆ ಹಿಂಸೆ, ರಕ್ತಪಾತದಂತಹ ಸುದ್ದಿಗಳನ್ನೇ ಹೆಚ್ಚಾಗಿ ಓದುತ್ತಿದ್ದ ನಮಗೆ, ಈ ಸುದ್ದಿ ಓದಿ ಸಂತೋಷವಾಯಿತು. ಇದು, ಆ ಪ್ರದೇಶದಲ್ಲಿ ಎರಡೂ ಧರ್ಮದವರ ಸಾಮರಸ್ಯದ ಜೀವನಕ್ಕೆ ನಿದರ್ಶನವಾಗಿದೆ. ಸೌಹಾರ್ದದ ಈ ಬಗೆಯ ಕೊಂಡಿಗಳನ್ನು ಬೆಸೆಯುವ ಕೆಲಸ ಆಗಬೇಕು. ಸ್ಥಳೀಯರ ಬದುಕನ್ನು ಸಹಜವೂ ಸಹನೀಯವೂ ಆಗಿಸುವ ದಿಸೆಯಲ್ಲಿ ಸರ್ಕಾರ ಹೆಚ್ಚು ಗಮನಹರಿಸಬೇಕು.

ಎಚ್.ಎಸ್.ಕಿರಣ್ ಕುಮಾರ್, ಗೌರಿಬಿದನೂರು

ಬಳೆ ದೌರ್ಬಲ್ಯದ ಸಂಕೇತವಲ್ಲ

ನಮ್ಮ ರಾಜಕಾರಣಿಗಳು ಬಳೆ ಸಂಸ್ಕೃತಿಯ ಬಗ್ಗೆ ಹೆಚ್ಚು ಮಾತನಾಡುತ್ತಿದ್ದಾರೆ. 'ನಾವು ಬಳೆ ತೊಟ್ಟಿಲ್ಲ, ತೊಡಿಸುತ್ತೇವೆ', 'ನಮ್ಮಲ್ಲಿ ಸಾಕಷ್ಟು ಬಳೆ ಇಲ್ಲ' ಎಂಬಂತಹ ಅವರ ಹೇಳಿಕೆಗಳನ್ನು ಗಮನಿಸಿದರೆ, ನಮ್ಮ ಸಂಸ್ಕೃತಿಯನ್ನು ನಾವೇ ಅಪಮಾನ ಮಾಡುತ್ತಿರುವಂತೆ ತೋರುತ್ತದೆ. ನಮ್ಮ ದೇಶದಲ್ಲಿ ಬಳೆಯನ್ನು ಬಹುಪಾಲು ಮಹಿಳೆಯರು ಧರಿಸುತ್ತಾರೆ. ಬಳೆಯು ನಮ್ಮ ಪರಂಪರೆ, ಸಂಪ್ರದಾಯದ ಭಾಗ ಕೂಡ ಆಗಿದೆ.

ಬಳೆ ತೊಟ್ಟಿಲ್ಲ ಎನ್ನುವುದನ್ನು ನಿಶ್ಶಕ್ತಿ, ದೌರ್ಬಲ್ಯದ ಸಂಕೇತವಾಗಿ ಬಳಸುವ ಮೂಲಕ, ಈ ಆಧುನಿಕ ಕಾಲದಲ್ಲಿ ಲಿಂಗತಾರತಮ್ಯ ಮಾಡುತ್ತಿರುವುದು ಸ್ಪಷ್ಟವಾಗುತ್ತಿದೆ. ಆದ್ದರಿಂದ ಪ್ರಭಾವಿ ನಾಯಕರು ತಮ್ಮ ಮಾತಿನ ಮೇಲೆ ನಿಗಾ ವಹಿಸುವುದು ಒಳಿತು.

ರಾಜೇಶ್ ಆರ್., ಪಾವಗಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ನಮಾಮಿ ಗಂಗೆ’ ಕುಂಟುತ್ತಲೇ ಸಾಗುತ್ತಿದೆ ಶುದ್ಧೀಕರಣ ಕ್ರಿಯೆ

ಲೋಕಸಭಾ ಚುನಾವಣೆಯ ಮಧ್ಯೆ ಕಾಂಗ್ರೆಸ್‌ನ ಜೈರಾಮ್ ರಮೇಶ್ ಅವರು ‘ನಮಾಮಿ ಗಂಗೆ’ ಯೋಜನೆಯ ಬಗ್ಗೆ ಪ್ರಶ್ನೆಗಳನ್ನು ಎತ್ತಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ಒಂದಾದ ಇದು ಯಶಸ್ವಿಯೇ ಆಗಿಲ್ಲ ಎಂಬುದು ಜೈರಾಮ್ ಅವರ ಆರೋಪ. ಮೋದಿ ಅವರು ವಾರಾಣಸಿ ಲೋಕಸಭಾ ಕ್ಷೇತ್ರದಿಂದ ನಾಮಪತ್ರ ಸಲ್ಲಿಸಿದ ದಿನವೇ ಜೈರಾಮ್ ಈ ಬಗ್ಗೆ ಮಾತನಾಡಿದ್ದಾರೆ. ಹತ್ತಾರು ಸಾವಿರ ಕೋಟಿ ವೆಚ್ಚದ ಈ ಯೋಜನೆಯಿಂದ ಆಗುತ್ತಿರುವ ಅನುಕೂಲಗಳೇನು ಎಂಬುದರ ಬಗ್ಗೆ ಚರ್ಚೆ ಆರಂಭವಾಗಿದೆ

ಪ್ರಜಾವಾಣಿ ವಾರ್ತೆ

ಗಂಗಾ ನದಿಯ ನೀರನ್ನು ಶುದ್ಧೀಕರಿಸುವ ‘ನೈರ್ಮಲ್ಯ ಗಂಗಾ’ ಯೋಜನೆಗೆ 2014ರ ಜೂನ್‌ನಲ್ಲಿ ‘ನಮಾಮಿ ಗಂಗೆ’ ಎಂದು ಮರುನಾಮಕಾರಣ ಮಾಡಲಾಗಿತ್ತು. ಪ್ರಧಾನಿ ನರೇಂದ್ರ ಮೋದಿ ಅವರು ಚಾಲನೆ ನೀಡಿದ್ದ ಈ ಯೋಜನೆ ಅಡಿಯಲ್ಲಿ, ಗಂಗಾ ನದಿಗೆ ಹರಿದುಬರುವ ಕೊಳಚೆ ನೀರನ್ನು ಸಂಪೂರ್ಣವಾಗಿ ಶುದ್ಧೀಕರಿಸುವ ಗುರಿ ಹಾಕಿಕೊಳ್ಳಲಾಗಿತ್ತು. 2014ರಲ್ಲಿ ಹಾಕಿಕೊಳ್ಳಲಾಗಿದ್ದ ಯೋಜನೆ ಪ್ರಕಾರ 2021ರ ಮಾರ್ಚ್ ಅಂತ್ಯದ ವೇಳೆಗೆ ಈ ಕಾಮಗಾರಿಗಳು ಪೂರ್ಣಗೊಳ್ಳಬೇಕಿತ್ತು. ಗುರಿ ತಲುಪುವುದು ಸಾಧ್ಯವಾಗದೇ ಇದ್ದಾಗ 2021ರ ಯೋಜನೆಯನ್ನು 2026ರ ಮಾರ್ಚ್‌ವರೆಗೆ ವಿಸ್ತರಿಸಲಾಗಿದೆ. ಯೋಜನೆಯ ವೆಚ್ಚವನ್ನೂ ದುಪ್ಪಟ್ಟುಗೊಳಿಸಲಾಗಿದೆ. ಯೋಜನೆಯ ಗಡುವು ಇನ್ನೂ ಎರಡು ವರ್ಷಗಳಷ್ಟು ದೂರವಿದೆ. ಆದರೆ ಗಂಗಾ ಬಯಲಿನ ಉತ್ತರ ಪ್ರದೇಶ, ಬಿಹಾರ ಮತ್ತು ಪಶ್ಚಿಮ ಬಂಗಾಳದ ಎಲ್ಲಿಯೂ ಈಗಲೂ ನೇರವಾಗಿ ಕುಡಿಯಲು ನದಿಯ ನೀರನ್ನು ಬಳಸುವಂತಹ ಸ್ಥಿತಿ ಇಲ್ಲ. ಕುಡಿಯುವುದಕ್ಕೆ ಇರಲಿ, ಸ್ನಾನ ಮಾಡಲೂ ಈ ನೀರನ್ನು ಬಳಸಲು ಸಾಧ್ಯವಿಲ್ಲ ಎಂಬುದನ್ನು ಆಯಾ ಸರ್ಕಾರಗಳ ವರದಿಗಳೇ ಹೇಳುತ್ತವೆ. ಗಂಗಾ ನದಿ ಮತ್ತು ಅದರ ಕೆಲವು ಉಪನದಿಗಳ ನೀರು ಉತ್ತರಾಖಂಡದ ವ್ಯಾಪ್ತಿಯಲ್ಲಿ ಹರಿಯುವಾಗ ಶುದ್ಧವಾಗಿಯೇ ಇರುತ್ತದೆ. ರಾಜ್ಯದ ಉದ್ದಕ್ಕೂ ನದಿ ಹರಿಯುವೆಡೆಯಲ್ಲಿ ನೇರವಾಗಿ ಕುಡಿಯಲು ಬಳಸಬಹುದಾದಷ್ಟು ನೀರಿನ ಗುಣಮಟ್ಟ ಉತ್ತಮವಾಗಿದೆ. ಆದರೆ ಉತ್ತರ ಪ್ರದೇಶವನ್ನು ಗಂಗಾ ಪ್ರವೇಶಿಸಿದಂತೆ ನೀರಿನ ಗುಣಮಟ್ಟ ಕುಸಿಯುತ್ತಾ ಹೋಗುತ್ತದೆ. ಉತ್ತರ ಪ್ರದೇಶದಲ್ಲೇ ಹಲವು ಉಪನದಿಗಳು ಗಂಗಾ ನದಿಯನ್ನು ಕೂಡಿಕೊಳ್ಳುತ್ತವೆ. ಅವೂ ಗಂಗಾ ನದಿಯ ಮಾಲಿನ್ಯದ ಮಟ್ಟವನ್ನು ಹೆಚ್ಚಿಸುತ್ತವೆ.

ಬಿಹಾರದಲ್ಲಿ ಮಾಲಿನ್ಯ ಇನ್ನಷ್ಟು ಮತ್ತು ಪಶ್ಚಿಮ ಬಂಗಾಳದಲ್ಲಿ ಮತ್ತಷ್ಟು ಹೆಚ್ಚಾಗುತ್ತದೆ. ಉತ್ತರಾಖಂಡದಲ್ಲಿ ಗಂಗಾ ನದಿಯ ನೀರಿನ ಗುಣಮಟ್ಟ ಉತ್ತಮವಾಗಿಯೇ ಇದ್ದರೂ ವರ್ಷದಿಂದ ವರ್ಷಕ್ಕೆ ಗುಣಮಟ್ಟ ಇಳಿಕೆಯಾಗುತ್ತಲೇ ಇದೆ. ಹೀಗಾಗಿ ಇಷ್ಟೂ ರಾಜ್ಯಗಳಲ್ಲಿ ‘ನಮಾಮಿ ಗಂಗೆ’ ಯೋಜನೆಯ ವ್ಯಾಪ್ತಿಗೆ ಒಳಪಡಿಸಲಾಗಿತ್ತು. ಗಂಗಾ ನದಿಯ ಪ್ರಮುಖ ಉಪನದಿಯಾದ ಯಮುನೆ ಹಾದು ಬರುವ ಹರಿಯಾಣ ಮತ್ತು ದೆಹಲಿಯನ್ನೂ ಯೋಜನೆಯ ವ್ಯಾಪ್ತಿಗೆ ತರಲಾಗಿತ್ತು.

ಗಂಗಾ ನದಿಯ ದಂಡೆಯ ಪಟ್ಟಣಗಳು ಮತ್ತು ದೊಡ್ಡ ಜನವಸತಿ ಪ್ರದೇಶಗಳಿಂದ ಕೊಳಚೆ ನೀರು ನೇರವಾಗಿ ನದಿ ನೀರು ಸೇರುವುದನ್ನು ತಡೆಯುವುದು ಯೋಜನೆಯ ಪ್ರಮುಖ ಗುರಿಗಳಲ್ಲಿ ಒಂದು. ಜತೆಗೆ ಕೈಗಾರಿಕಾ ಪ್ರದೇಶಗಳಿಂದ ಮಾಲಿನ್ಯಕಾರಕ ಮತ್ತು ವಿಷಕಾರಿ ಅಂಶವುಳ್ಳ ರಾಸಾಯನಿಕಗಳು ನದಿ ನೀರು ಸೇರುವುದನ್ನು ತಡೆಯುವುದೂ ಪ್ರಮುಖ ಗುರಿಯಾಗಿತ್ತು. ಅಲ್ಲದೆ, ನದಿ ದಂಡೆಯಲ್ಲಿ ನಡೆಯುವ ಶವಸಂಸ್ಕಾರದ ತ್ಯಾಜ್ಯ ನದಿ ಸೇರುವುದನ್ನು ಮತ್ತು ಶವಗಳನ್ನು ನದಿಗೆ ಎಸೆಯುವುದನ್ನು ತಡೆಯುವುದೂ ಯೋಜನೆಯ ಭಾಗವಾಗಿತ್ತು. ಈ ಎಲ್ಲಾ ಗುರಿಗಳ ಭಾಗವಾಗಿ ಒಟ್ಟು 450 ಕಾಮಗಾರಿಗಳನ್ನು ‘ನಮಾಮಿ ಗಂಗೆ’ ವಿಭಾಗವು ಆರಂಭಿಸಿತ್ತು. 2021ರ ಮಾರ್ಚ್ ಅಂತ್ಯದ ವೇಳೆಗೆ ಈ ಎಲ್ಲಾ ಕಾಮಗಾರಿಗಳು ಮುಗಿಯಬೇಕಿದ್ದವು. ಆ ಗಡುವಿನೊಳಗೆ ಕಾಮಗಾರಿಗಳು ಮುಗಿಯಲಿಲ್ಲ. ಹೀಗಾಗಿ ಯೋಜನೆಯನ್ನು 2026ರವರೆಗೆ ವಿಸ್ತರಿಸಲಾಯಿತು. ಆದರೆ ಈಗ ಕಾಮಗಾರಿ ಪೂರ್ಣಗೊಂಡಿರುವುದು 270 ಸ್ಥಳಗಳಲ್ಲಿ ಮಾತ್ರ. ಇನ್ನೂ 180 ಕಾಮಗಾರಿಗಳು ನಡೆಯುತ್ತಲೇ ಇವೆ.

ನೀರು ಶುದ್ಧೀಕರಣ ಘಟಕಗಳು ಕಾರ್ಯಾರಂಭ ಮಾಡಿದ್ದರೆ, ನದಿಯ ನೀರಿನ ಗುಣಮಟ್ಟ ಹೆಚ್ಚಲೇಬೇಕು. ಬಹುತೇಕ ಎಲ್ಲಾ ನೀರಿನ ಗುಣಮಟ್ಟ ಪರಿಶೀಲನಾ ಕೇಂದ್ರಗಳಲ್ಲಿ ನದಿನೀರಿನ ಗುಣಮಟ್ಟ ವರ್ಷದಿಂದ ವರ್ಷಕ್ಕೆ ಸುಧಾರಿಸಿದೆ ಎಂದು ನಾಲ್ಕೂ ರಾಜ್ಯಗಳ ಸರ್ಕಾರಗಳು ವರದಿ ನೀಡಿವೆ. ಆದರೆ ಇಷ್ಟೂ ರಾಜ್ಯಗಳಲ್ಲಿ ಎಲ್ಲಿಯೂ ಗಂಗಾ ನದಿಯ ನೀರನ್ನು ನೇರವಾಗಿ ಬಳಸಲು ಸಾಧ್ಯವೇ ಇಲ್ಲ ಎಂಬುದು ಆ ಸರ್ಕಾರಗಳ ತಾಂತ್ರಿಕ ವರದಿಗಳಲ್ಲಿನ ದತ್ತಾಂಶಗಳು ಹೇಳುತ್ತವೆ. ಹರಿಯಾಣ (ಯಮುನಾ), ಉತ್ತರ ಪ್ರದೇಶ, ಬಿಹಾರ ಮತ್ತು ಪಶ್ಚಿಮ ಬಂಗಾಳದ ಪರಿಶೀಲನಾ ಕೇಂದ್ರಗಳಲ್ಲಿ ಸಂಗ್ರಹಿಸಿದ ನದಿ ನೀರಿನ ಮಾದರಿಯಲ್ಲಿ ಆಮ್ಲೀಯ ಪ್ರಮಾಣ 7ಪಿಎಚ್‌ಗಿಂತ ಹೆಚ್ಚೇ ಇದೆ. ಜತೆಗೆ ಕೋಲಿಫಾರ್ಮ್ ಬ್ಯಾಕ್ಟೀರಿಯಾಗಳ ಸಂಖ್ಯೆಯೂ ಅಪಾಯಕಾರಿ ಮಟ್ಟದಲ್ಲಿಯೇ ಇದೆ. ಯೋಜನೆಯಲ್ಲಿ ಹಾಕಿಕೊಂಡ ಕಾಮಗಾರಿಗಳು ಪೂರ್ಣಗೊಂಡರೆ ಸಾಲದು. ಬದಲಿಗೆ ನೀರಿನ ಆಮ್ಲೀಯ ಪ್ರಮಾಣ ಮತ್ತು ಬ್ಯಾಕ್ಟೀರಿಯಾಗಳ ಸಂಖ್ಯೆ ಸುರಕ್ಷಿತ ಮಟ್ಟಕ್ಕೆ ಇಳಿಯಬೇಕು. ಆಗ ಮಾತ್ರ ಯೋಜನೆ ಯಶಸ್ವಿಯಾಗುತ್ತದೆ ಎಂಬುದು ತಜ್ಞರ ಅಭಿಪ್ರಾಯ. ಬಿಹಾರದಲ್ಲಿ ‘ನಮಾಮಿ ಗಂಗೆ’ಯ ಪ್ರಗತಿಯ ಬಗ್ಗೆ ಮಹಾಲೇಖಪಾಲರು (ಸಿಎಜಿ) ಸಿದ್ಧಪಡಿಸಿದ್ದ ವರದಿಯಲ್ಲೂ ಇದೇ ಮಾತನ್ನು ಹೇಳಲಾಗಿತ್ತು.

ವೆಚ್ಚ ಹೆಚ್ಚಳ

ಯೋಜನೆಯ ಅವಧಿ ವಿಸ್ತರಣೆಯಾದ ಕಾರಣಕ್ಕೆ ಯೋಜನಾ ವೆಚ್ಚವೂ ಏರಿಕೆಯಾಗಿದೆ. ಆದರೆ 2021ರ ಮಾರ್ಚ್ ವೇಳೆಗೆ ಕಾಮಗಾರಿ ಮುಗಿಸಲು ಗಡುವು ಹಾಕಿಕೊಂಡಿದ್ದ ಯೋಜನೆಗಳಿಗೆ ಬಿಡುಗಡೆ ಮಾಡಬೇಕಿದ್ದಷ್ಟು ಹಣವನ್ನು, 2023ರ ಡಿಸೆಂಬರ್ ವೇಳೆಗೂ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರಲಿಲ್ಲ



ಉತ್ತರಾಖಂಡ



ರಾಜ್ಯದ 13 ಜಿಲ್ಲೆಗಳಿಂದ ಪ್ರತಿದಿನ 70 ಕೋಟಿ ಲೀಟರ್‌ನಷ್ಟು ಕೊಳಚೆ ನೀರನ್ನು ಶುದ್ಧೀಕರಿಸದೆ ಗಂಗಾ ನದಿಗೆ ಬಿಡಲಾಗುತ್ತಿದೆ. ‘ನಮಾಮಿ ಗಂಗೆ’ ಯೋಜನೆ ಅಡಿ ಕೈಗೊಳ್ಳಲಾದ ಕಾಮಗಾರಿಗಳು ಮತ್ತು ಶುದ್ಧೀಕರಣ ಘಟಕಗಳ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಸರಿಯಾದ ಮಾಹಿತಿಯನ್ನು ರಾಜ್ಯ ಸರ್ಕಾರ ಒದಗಿಸುತ್ತಿಲ್ಲ ಎಂದು ಇದೇ ಫೆಬ್ರುವರಿಯಲ್ಲಿ ಎನ್‌ಜಿಟಿ ನೋಟಿಸ್ ನೀಡಿತ್ತು.

13 ಜಿಲ್ಲೆಗಳಲ್ಲಿ ಇನ್ನೂ ಲಕ್ಷಾಂತರ ಮನೆಗಳನ್ನು ಒಳಚರಂಡಿ ವ್ಯವಸ್ಥೆಯ ವ್ಯಾಪ್ತಿಗೆ ತಂದಿಲ್ಲ. ನಿರೀಕ್ಷಿತ ಮಟ್ಟದಲ್ಲಿ ಈ ಗುರಿಗಳನ್ನು ಸಾಧಿಸಲು ಸಾಧ್ಯವಾಗದೇ ಇರುವುದರಿಂದಲೇ, ನದಿ ನೀರಿನ ಶುದ್ಧತೆಯನ್ನು ಕಾಪಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ನೋಟಿಸ್‌ನಲ್ಲಿ ವಿವರಿಸಲಾಗಿತ್ತು.

ಮಂಜೂರಾದ ಕೊಳಚೆ ನೀರು ಶುದ್ಧೀಕರಣ ಘಟಕಗಳ ಸಂಖ್ಯೆ (ನೀಲಿ) | ಕಾಮಗಾರಿ ಪೂರ್ಣಗೊಂಡಿರುವ ಘಟಕಗಳ ಸಂಖ್ಯೆ (ಕೆಂಪು)



ಪಶ್ಚಿಮ ಬಂಗಾಳ



‘ಪಶ್ಚಿಮ ಬಂಗಾಳದಲ್ಲಿ ಹರಿಯುವ ಗಂಗಾ ನದಿಯ ಸ್ಥಿತಿಯೂ ಬದಲಾಗಿಲ್ಲ. ಕನಿಷ್ಠ ಸ್ನಾನ ಮಾಡುವಷ್ಟೂ ನೀರು ಶುದ್ಧವಾಗಿಲ್ಲ’ ಎಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಹೇಳಿದೆ. ಗಂಗಾ ನದಿಯ ಸ್ವಚ್ಛತೆಯ ಕುರಿತು ವಿವಿಧ ರಾಜ್ಯಗಳು ಕೈಗೊಂಡ ಕಾರ್ಯಗಳ ಬಗ್ಗೆ, ಆಯಾ ರಾಜ್ಯಗಳೇ ನೀಡಿದ ವರದಿಗಳ ಪರಿಶೀಲನೆ ವೇಳೆ ಮಂಡಳಿಯು ಈ ರೀತಿ ಹೇಳಿದೆ. ಪಶ್ಚಿಮ ಬಂಗಾಳದ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾಹಿತಿ ಕೂಡ ಇದನ್ನೇ ಹೇಳುತ್ತಿದೆ.

ಗಂಗಾ ನದಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಒಟ್ಟು 14 ಕಡೆಗಳಲ್ಲಿ ನೀರಿನ ಪರಿಶೀಲನಾ ಕೇಂದ್ರಗಳಿವೆ. ಇಲ್ಲಿ ಎಲ್ಲ ಕಡೆಗಳಲ್ಲಿಯೂ ನೀರಿನ ಗುಣಮಟ್ಟವು ಸ್ನಾನ ಮಾಡುವುದಕ್ಕೂ ಯೋಗ್ಯವಿಲ್ಲದ ಸ್ಥಿತಿಯಲ್ಲಿದೆ. ಜೊತೆಗೆ, ನ್ಯಾಯಮಂಡಳಿಗೆ ರಾಜ್ಯವು ನೀಡಿದ ವರದಿಯಲ್ಲಿ ಪ್ರಮುಖವಾದ ಇನ್ನೊಂದು ಅಂಶವಿದೆ. ರಾಜ್ಯದಲ್ಲಿ ಗಂಗಾ ನದಿಗೆ ಪ್ರತಿ ದಿನ 25.87 ಕೋಟಿ ಲೀಟರ್‌ನಷ್ಟು ಕೊಳಚೆ ನೀರು ಸೇರುತ್ತಿದೆ. ಪೂರ್ವ ಮೇಧಿನಿಪುರ ಜಿಲ್ಲೆ ಸೇರಿದಂತೆ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಒಂದೂ ಕೊಳಚೆ ನೀರು ಸಂಸ್ಕರಣಾ ಘಟಕವಿಲ್ಲ. ಇದನ್ನು ಗಮನಿಸಿದ ನ್ಯಾಯಮಂಡಳಿಯು, ರಾಜ್ಯಕ್ಕೆ ಎಚ್ಚರಿಕೆಯನ್ನೂ ನೀಡಿದೆ.

ಆಧಾರ: ಪಿಟಿಐ, ಉತ್ತರ ಪ್ರದೇಶ, ಉತ್ತರಾಖಂಡ, ಪಶ್ಚಿಮ ಬಂಗಾಳ ಹಾಗೂ ಬಿಹಾರ ರಾಜ್ಯಗಳ ಮಾಲಿನ್ಯ ನಿಯಂತ್ರಣ ಮಂಡಳಿಗಳ ವರದಿಗಳು, ರಾಜ್ಯಸಭೆಗೆ ಕೇಂದ್ರ ಜಲ ಸಂಪನ್ಮೂಲ ಸಚಿವಾಲಯ ನೀಡಿದ ಉತ್ತರ

ಉತ್ತರ ಪ್ರದೇಶ



ಗಂಗಾ ನದಿಯ ನೀರಿನ ಗುಣಮಟ್ಟದ ಬಗ್ಗೆ ಉತ್ತರ ಪ್ರದೇಶ ಸರ್ಕಾರವು ಪ್ರತಿ 15 ದಿನಗಳಿಗೆ ಒಮ್ಮೆ ತಾಂತ್ರಿಕ ವರದಿ ಪ್ರಕಟಿಸುತ್ತದೆ. ರಾಜ್ಯದಲ್ಲಿ 31 ಸ್ಥಳಗಳಲ್ಲಿ ನೀರಿನ ಗುಣಮಟ್ಟ ಪರಿಶೀಲನಾ ಕೇಂದ್ರಗಳನ್ನು ತೆರೆಯಲಾಗಿದೆ. ಈಚೆಗೆ ನಡೆಸಿದ ಪರಿಶೀಲನೆಯಲ್ಲಿ ರಾಜ್ಯದಲ್ಲಿ ಗಂಗಾ ನದಿ ಹರಿಯುವ ಎಲ್ಲಿಯೂ ನೀರಿನ ಗುಣಮಟ್ಟ ಉತ್ತಮವಾಗಿಲ್ಲ ಎಂಬುದು ಪತ್ತೆಯಾಗಿದೆ.

ಈ 31 ಕೇಂದ್ರಗಳಲ್ಲಿ, ಪರಿಶೀಲಿಸಲಾದ ನೀರಿನ ಮಾದರಿಗಳಲ್ಲಿ ಆಮ್ಲೀಯ ಮಟ್ಟ 7 ಪಿಎಚ್‌ಗಿಂತ ಹೆಚ್ಚೇ ಇದೆ. ಕೆಲವು ಕೇಂದ್ರಗಳಲ್ಲಿ ಆಮ್ಲೀಯ ಮಟ್ಟ 8ಪಿಎಚ್ ಅನ್ನು ದಾಟಿದೆ. ಜತೆಗೆ ಕೋಲಿಫಾರ್ಮ್ ಬ್ಯಾಕ್ಟೀರಿಯಾಗಳ ಸಂಖ್ಯೆ ಅಪಾಯಕಾರಿಮಟ್ಟದಲ್ಲಿ ಇದೆ. 31 ಕಡೆಯೂ ನದಿಯ ನೀರು ನೇರವಾಗಿ ಸ್ನಾನಕ್ಕೆ ಬಳಸಲೂ ಯೋಗ್ಯವಾಗಿಲ್ಲ. ಹಲವು ಹಂತದ ಶುದ್ಧೀಕರಣದ ನಂತರವಷ್ಟೇ ಕುಡಿಯಲು ಬಳಸಬಹುದು ಎಂದು ತಾಂತ್ರಿಕ ವರದಿಗಳು ಹೇಳುತ್ತವೆ.

ಬಿಹಾರ



‘ಬಿಹಾರದಲ್ಲಿ ಹರಿಯುವ ಗಂಗಾ ನದಿ ಸಂಪೂರ್ಣ ಕಲುಷಿತವಾಗಿಯೇ ಇದೆ. ಸ್ನಾನ ಮಾಡುವುದಕ್ಕೂ ಯೋಗ್ಯವಾದಷ್ಟು ಶುಚಿತ್ವ ಮಟ್ಟವೂ ಗಂಗಾ ನದಿಯ ನೀರಿಗಿಲ್ಲ’ ಎಂದು ಬಿಹಾರ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಇದೇ ಫೆಬ್ರುವರಿಯಲ್ಲಿ ವರದಿ ನೀಡಿತ್ತು. ರಾಜ್ಯದಲ್ಲಿ ಗಂಗೆಯು ಹರಿದುಹೋಗುವ ಒಟ್ಟು 34 ಸ್ಥಳಗಳಲ್ಲಿ (ನೀರಿನ ಪರಿಶೀಲನಾ ಕೇಂದ್ರಗಳು) ನೀರಿನ ಪರೀಕ್ಷೆಯನ್ನು ಮಾಡಲಾಗಿದೆ. ಜೊತೆಗೆ, ಗಂಗೆ ಹಾಗೂ ಅದರ ಉಪನದಿಗಳಿಗೆ ಕೊಳಚೆ ನೀರು ಸೇರುವ ಸ್ಥಳಗಳಲ್ಲಿನ ನೀರಿನ್ನೂ ಕಾರ್ಖಾನೆಗಳಿಂದ ಹೊರಬರುವ ನೀರನ್ನೂ ಸಂಗ್ರಹಿಸಿ ಮಂಡಳಿಯ ಪ್ರಯೋಗಾಲಯದಲ್ಲಿ ಪರೀಕ್ಷಿಸಲಾಗಿದೆ. 2023ರ ಡಿಸೆಂಬರ್‌ವರೆಗಿನ ಮಾಹಿತಿಯು ಈ ವರದಿಯಲ್ಲಿದೆ.

ಗಂಗಾ ನದಿನೀರಿನ ಮಾದರಿಗಳನ್ನು ಪರಿಶೀಲಿಸಿದಾಗ, ಮಾನವ ತ್ಯಾಜ್ಯದಿಂದ ಉಂಟಾಗುವ ಫೀಕಲ್ ಕೋಲಿಫಾರ್ಮ್ ಬ್ಯಾಕ್ಟೀರಿಯಾ ಸಂಖ್ಯೆಯು ಗಂಗಾ ನದಿನೀರಿನ ಪ್ರತಿ 100 ಎಂ.ಎಲ್‌ಗೆ 92 ಸಾವಿರದಷ್ಟಿದೆ ಎಂದು ವರದಿಯಲ್ಲಿ ಹೇಳಲಾಗಿದೆ. ಕೊಳಚೆ ನೀರನ್ನು ಸಂಸ್ಕರಿಸದೇ ನೇರವಾಗಿ ಗಂಗಾ ನದಿಗೆ ಬಿಡಲಾಗುತ್ತಿದೆ. ಕೊಳಚೆ ನೀರು ಸಂಸ್ಕರಣಾ ಘಟಕಗಳನ್ನು ವಿವಿಧ ಜಿಲ್ಲೆಗಳಲ್ಲಿ ‘ನಮಾಮಿ ಗಂಗೆ’ ಯೋಜನೆಯಡಿ ಕಟ್ಟಿಸಲಾಗುತ್ತಿದೆ ಎಂದು ಬಿಹಾರ ಸರ್ಕಾರ ಹೇಳಿದೆ.

ಸಿನಿ ಬಿಟ್ಸ್

‘ಮಾರ್ಟಿನ್’ ಏಕೆ ತಡ ಗೊತ್ತೇ?

2021ರಲ್ಲಿ ಶೂಟಿಂಗ್ ಆರಂಭಿಸಿದ್ದ ಧ್ರುವ ಸರ್ಜಾ ನಟನೆಯ ಪ್ಯಾನ್ ಇಂಡಿಯಾ ಸಿನಿಮಾ ‘ಮಾರ್ಟಿನ್’ಗೆ ಇನ್ನೂ ಬಿಡುಗಡೆ ಭಾಗ್ಯ ಸಿಕ್ಕಿಲ್ಲ. ಈ ಬಗ್ಗೆ ಇತ್ತೀಚೆಗೆ ಚಿತ್ರದ ನಿರ್ದೇಶಕ ಎ.ಪಿ. ಅರ್ಜುನ್ ಅವರನ್ನು ಸಿನಿಮಾ ಪತ್ರಕರ್ತರು ಪ್ರಶ್ನಿಸಿದಾಗ, ಅವರು ಕಾರಣಗಳ ಪಟ್ಟಿ ಬಿಚ್ಚಿಟ್ಟರು.

‘ಸಿನಿಮಾದ ಶೂಟಿಂಗ್ ಪೂರ್ಣಗೊಂಡಿದೆ. ಸದ್ಯ ರಿರೆಕಾರ್ಡಿಂಗ್ ಆಗುತ್ತಿದೆ. ಸಿಜಿ(ಗ್ರಾಫಿಕ್ಸ್) ಕೆಲಸಗಳು ನಡೆಯುತ್ತಿವೆ. ಈ ಸಿನಿಮಾ ಏಕೆ ತಡವಾಗುತ್ತಿದೆ ಎಂದರೆ, ಸಿನಿಮಾದಲ್ಲಿ ಸಿಜಿ ಕೆಲಸ ಹೆಚ್ಚು ಇದೆ. ಸಿನಿಮಾದ ಒಟ್ಟು ಅವಧಿಯಲ್ಲಿ ಸುಮಾರು ಎರಡು ಗಂಟೆ ಸಿಜಿಯೇ ಇದೆ. ಅದು ಪೂರ್ಣಗೊಳ್ಳದೆ ಬಿಡುಗಡೆ ದಿನಾಂಕ ಘೋಷಣೆ ಮಾಡಲು ಸಾಧ್ಯವೇ ಇಲ್ಲ. ನಾನು, ನಿರ್ಮಾಪಕರು ಜೊತೆಗೂಡಿ ರಿಲೀಸ್ ದಿನಾಂಕವನ್ನು ಆದಷ್ಟು ಬೇಗ ತಿಳಿಸುತ್ತೇವೆ. ಈ ವರ್ಷದಲ್ಲೇ ಸಿನಿಮಾ ತೋರಿಸುತ್ತೇವೆ’ ಎಂದಿದ್ದಾರೆ ಅರ್ಜುನ್.

‘ಮಾರ್ಟಿನ್’ ಚಿತ್ರಕ್ಕೆ ಖ್ಯಾತ ಬಹುಭಾಷಾ ನಟ ಅರ್ಜುನ್ ಸರ್ಜಾ ಕಥೆ ಬರೆದಿದ್ದಾರೆ. ವಾಸವಿ ಎಂಟರ್‌ಪ್ರೈಸಸ್ ಲಾಂಛನದಲ್ಲಿ ಉದಯ್ ಕೆ. ಮೆಹ್ತಾ ಈ ಚಿತ್ರ ನಿರ್ಮಿಸಿದ್ದಾರೆ. ಮಣಿ ಶರ್ಮ ಅವರ ಸಂಗೀತ ನಿರ್ದೇಶನದಲ್ಲಿ ಚಿತ್ರದ ಹಾಡುಗಳು ಮೂಡಿಬಂದಿದ್ದು, ರವಿ ಬಸ್ರೂರ್ ಹಿನ್ನೆಲೆ ಸಂಗೀತ ನೀಡಿದ್ದಾರೆ. ಸತ್ಯ ಹೆಗಡೆ ಛಾಯಾಚಿತ್ರಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನ ಹಾಗೂ ರವಿವರ್ಮ, ರಾಮ್ ಲಕ್ಷ್ಮಣ್ ಅವರ ಸಾಹಸ ನಿರ್ದೇಶನ ಚಿತ್ರಕ್ಕಿದೆ. ಚಿತ್ರದ ತಾರಾಬಳಗದಲ್ಲಿ ವೈಭವಿ ಶಾಂಡಿಲ್ಯ, ಅನ್ವೇಶಿ ಜೈನ್, ಜಾರ್ಜಿಯ ಆಂಡ್ರಿಯಾನಿ, ಚಿಕ್ಕಣ್ಣ, ಮಾಳವಿಕ ಅವಿನಾಶ್, ನಿಕ್ತಿನ್ ಧೀರ್, ನವಾಬ್ ಶಾ, ರೋಹಿತ್ ಪಾಠಕ್ ಮುಂತಾದವರಿದ್ದಾರೆ.

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ — ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ ಎರಡನೇ ಆವೃತ್ತಿ ಅತಿ ಶೀಘ್ರದಲ್ಲಿ

‘ಕಾಗೆ ಬಂಗಾರ’ಕ್ಕೆ ಕೈಯಿಟ್ಟ ಸೂರಿ!

ನಿರ್ದೇಶಕ ದುನಿಯಾ ಸೂರಿ ‘ಕೆಂಡಸಂಪಿಗೆ’ ಚಿತ್ರ ತೆರೆಕಂಡ ಬಳಿಕ ಅದರ ಮುಂದಿನ ಭಾಗ ‘ಕಾಗೆ ಬಂಗಾರ’ಕ್ಕೆ ಕೈ ಹಾಕುತ್ತೇನೆಂದು ಸಾಕಷ್ಟು ಸಲ ಹೇಳಿದ್ದರು. ಸುರೇಂದ್ರನಾಥ್ ಬರೆದು, ವಿಕ್ಕಿ ವರುಣ್ ಮತ್ತು ಮನ್ವಿತಾ ಹರೀಶ್ ಮುಖ್ಯಭೂಮಿಕೆಯಲ್ಲಿ ನಟಿಸಿದ್ದ ಚಿತ್ರ 2015ರಲ್ಲಿ ತೆರೆ ಕಂಡಿತ್ತು. ವಿಭಿನ್ನವಾದ ಕಥಾವಸ್ತುವಿನಿಂದ ಪ್ರೇಕ್ಷಕರ ಗಮನ ಸೆಳೆದಿದ್ದ ಈ ಚಿತ್ರ ‘ಕಾಗೆ ಬಂಗಾರ’ ಮತ್ತು ‘ಬ್ಲ್ಯಾಕ್ ಮ್ಯಾಜಿಕ್’ ಎಂಬ ಇನ್ನೆರಡು ಭಾಗಗಳನ್ನು ಹೊಂದಿದೆ ಎಂದು ಸೂರಿ ಹೇಳಿದ್ದರು.

ಇದೀಗ ಜಯಣ್ಣ ನಿರ್ಮಾಣದಲ್ಲಿ, ದುನಿಯಾ ಸೂರಿ ನಿರ್ದೇಶನದಲ್ಲಿಯೇ ‘ಕಾಗೆ ಬಂಗಾರ’ ಸೆಟ್ಟೇರುತ್ತಿದೆ. ವಿಕ್ಕಿ ವರುಣ್‌ಗೆ ರಿತನ್ಯಾ ಜೋಡಿಯಾಗಲಿದ್ದಾರೆ. ಆದರೆ ಇದು ‘ಕೆಂಡಸಂಪಿಗೆ’ಯ ಮುಂದುವರಿದ ಭಾಗವಲ್ಲ ಎನ್ನುತ್ತಿದೆ ಚಿತ್ರತಂಡ.

‘ಮುಂದಿನ ತಿಂಗಳ ಅಂತ್ಯದಲ್ಲಿ ಚಿತ್ರೀಕರಣ ಪ್ರಾರಂಭವಾಗಲಿದೆ. ದುನಿಯಾ ಸೂರಿ ಬರೆದ ಕಥೆ ಇದು. ಆದರೆ 2015ರ ಚಿತ್ರದ ಮುಂದುವರಿಕೆಯಲ್ಲ. ಬದಲಿಗೆ 2024ರಲ್ಲಿ ಸಿದ್ಧಗೊಂಡ ಹೊಸ ಕಥೆಯನ್ನು ಈ ಚಿತ್ರ ಹೊಂದಿರಲಿದೆ. ನಿರ್ಮಾಪಕ ಸುಧಿ ಅವರ ಬಳಿ ಈ ಚಿತ್ರದ ಶೀರ್ಷಿಕೆಯಿತ್ತು. ಅದನ್ನು ನಮ್ಮ ಹೆಸರಿಗೆ ವರ್ಗಾಯಿಸಿಕೊಂಡಿದ್ದೇವೆ. ಶೀಘ್ರದಲ್ಲಿಯೇ ಉಳಿದ ಮಾಹಿತಿ ನೀಡುತ್ತೇವೆ’ ಎನ್ನುತ್ತಾರೆ ನಿರ್ಮಾಪಕ ಜಯಣ್ಣ.

ಜಯಂತ್ ಕಾಯ್ಕಿಣಿ, ಯೋಗರಾಜ್ ಭಟ್ ಸಾಹಿತ್ಯದಲ್ಲಿ ‘ನೆನಪೆ ನಿತ್ಯ ಮಲ್ಲಿಗೆ’ ಸೇರಿದಂತೆ ‘ಕೆಂಡಸಂಪಿಗೆ’ ಚಿತ್ರದ ಹಾಡುಗಳು ಹಿಟ್ ಆಗಿದ್ದವು. ವಿ.ಹರಿಕೃಷ್ಣ ಸಂಗೀತವಿತ್ತು. ‘ಕಾಗೆ ಬಂಗಾರ’ಕ್ಕೆ ಚರಣ್ ರಾಜ್ ಸಂಗೀತವಿದ್ದು, ಶೇಖರ್ ಛಾಯಾಗ್ರಹಣವಿರಲಿದೆ. ‘ಕಾಗೆ ಬಂಗಾರ’ ‘ಕೆಂಡಸಂಪಿಗೆ’ಯಲ್ಲಿ ಒಂದು ಪ್ರಮುಖ ಪಾತ್ರವಾಗಿದ್ದು, ಪ್ರಶಾಂತ್ ಸಿದ್ಧಿ ಈ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು.

ವಿಕ್ಕಿ

ಗುಂಡಣ್ಣ



ನುಡಿ ಬೆಳಗು

ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಕೊನೆಗಾಲದ ಬದುಕು ಬದಲಿಸಲಾಗದು

ನಮ್ಮವರಿಗೆ ಈಗ ಎಪ್ಪತ್ತು ವರ್ಷ. ಬೇಡವೆಂದರೂ ದುಡಿಯಲು ಹೋಗುತ್ತಾರೆ. ಮನೆಯಲ್ಲಿ ಸುಖವಾಗಿ ತಿಂದುಂಡುಕೊಂಡು ಇರಿ ಎಂದರೂ ಕೇಳುವುದಿಲ್ಲ. ಮೊನ್ನೆ ಬಿಸಿಲಲ್ಲಿ ಸೈಕಲ್‌ನಲ್ಲಿ ಹೋಗುವಾಗ ಪ್ರಜ್ಞೆ ತಪ್ಪಿ ಬಿದ್ದಿದ್ದಾರೆ. ಯಾರೋ ಪರಿಚಯಸ್ಥರು ನೋಡಿ ತಂದು ಮನೆಗೆ ಬಿಟ್ಟರು. ಹೆಚ್ಚು ಕಡಿಮೆಯಾಗಿದ್ರೆ ಏನು ಗತಿ? ಇವರು ದುಡಿದು ತಂದು ನಾವು ತಿನ್ನಬೇಕು ಅಂತೇನೂ ಇಲ್ಲ. ಮಗ ಮನೆಗೆ ಬೇಕಾದ್ದು ತಂದು ಹಾಕುತ್ತಾನೆ. ಇವರದು ಅದೇನೋ ಸ್ವಾಭಿಮಾನವಂತೆ. ಜೀವ ಇರೋ ತನಕ ತಾವೇ ತಮ್ಮ ಊಟ ದುಡಿದು ತಿನ್ನಬೇಕಂತೆ. ಇಷ್ಟು ವರ್ಷ ಮಾಡಿದ್ದು ಸಾಲದೇ? ಸುಮ್ಮನೆ ಮನೇಲಿ ಇರೋಕೆ ಏನು ರೋಗ ಇವರಿಗೆ? ನೀವಾದರೂ ಬುದ್ಧಿ ಹೇಳಿ ಎಂದು ಅವರ ಹೆಂಡತಿ ನನಗೆ ಹೇಳಿದರು.

ನಾ ಬಲ್ಲಂತೆ ಇವರು ಒಂದು ಕಡೆ ಕೂಡುವ ಮನುಷ್ಯರಲ್ಲ. ಸದಾ ಯಾವುದಾದರೂ ಒಂದು ಕೆಲಸದಲ್ಲಿ ಬ್ಯುಸಿ ಇರುವ ಗುಣದವರು. ಕೊರೊನಾ ಕಾಲದಲ್ಲಿ ಮನೇಲಿ ಕೂರಲಾಗದೆ ಚಡಪಡಿಸಿದವರು. ದಿನವೂ ಹತ್ತಾರು ಪರಿಚಿತ ಜನರ ಬಳಿ ಹೋಗಿ ಮಾತಾಡದಿದ್ದರೆ ಅವರ ದಿನ ಮುಗಿಯುವುದಿಲ್ಲ.

ಒಮ್ಮೆ ಹೀಗೆ ಎಲ್ಲರೂ ಬಲವಂತ ಮಾಡಿ ಮನೆಯಲ್ಲೇ ಇರುವಂತೆ ಕೂಡಿ ಹಾಕಿದರು. ಗುಳಿಗೆ ನುಂಗಿ, ಊಟ ಮಾಡಿ, ಟಿವಿ ನೋಡುತ್ತಾ ಇರುವುದು ಉಳಿದವರ ಪ್ರಕಾರ ಸುಖದ ಜೀವನವಂತೆ. ಆದರೆ ಬಾಲ್ಯದಿಂದ ಕಷ್ಟಬಿದ್ದು ದುಡಿದು, ಹತ್ತಾರು ಜನರ ಜೊತೆ ಒಡನಾಡಿ, ಎಲ್ಲರನ್ನೂ ಕಂಡು ಮಾತಾಡುವ ಜೀವನ ಶೈಲಿ ರೂಢಿಸಿಕೊಂಡ ಅವರು ಮಂಕಾದರು. ಒಂಟಿತನ ಹೆಚ್ಚಾಯಿತು. ಸಾಹಿತ್ಯ, ಸಂಗೀತ, ಚಿತ್ರಕಲೆ, ಅಧ್ಯಾತ್ಮ ಯಾವುದೂ ಗೊತ್ತಿಲ್ಲದ ಅವರು ಕಾಯಿಲೆಗೆ ಬಿದ್ದರು. ಮನೆಯಿಂದ ಹೊರಗೆ ಬಿಟ್ಟರಷ್ಟೇ ಜೀವ ಚೈತನ್ಯವಾಗಿರಬಲ್ಲ ಇವರನ್ನು ಕೊನೆಗೆ ಮನೆ ಜೈಲಿನಿಂದ ಬಿಡುಗಡೆ ಮಾಡಲಾಯಿತು. ಆಮೇಲೆ ಯಜಮಾನರು ಮಾಮೂಲಿಯಾಗಿ ಸರಿ ಹೋದರು.

ವಯಸ್ಸಾದವರು ಹೀಗೇ ಇರಬೇಕು ಎಂದು ನಾವು ನಿರ್ಧರಿಸುತ್ತೇವೆ. ಸತತ ದುಡಿದು ದಣಿದ ಜೀವ ಕೂತು ಸುಖ ಪಡೆಯುವುದು ಸರಿ ಎಂದು ಭಾವಿಸುತ್ತೇವೆ. ಇಷ್ಟೇ ಮಾತಾಡಬೇಕು, ಹೀಗೇ ಇರಬೇಕು ಎಂದು ತಾಕೀತು ಮಾಡುತ್ತೇವೆ. ತಮ್ಮ ಯೌವನ, ಆರ್ಥಿಕ ತಾಕತ್ತು ಖಾಲಿಯಾದ ಇವರನ್ನು ಥರಾವರಿಯಾಗಿ ಬಗ್ಗಿಸಲು ನೋಡುತ್ತೇವೆ. ಆದರೆ ಬದುಕಿನ ಕೊನೆಯಲ್ಲಿ ಬದಲಾವಣೆಗಳು ಸಾಧ್ಯವಿಲ್ಲ. ಈಗಾಗಲೇ ಬೆಳೆದು ನಿಂತ ಮರ ಸಣ್ಣಗೆ ಒಣಗುತ್ತಿದೆ ನಿಜ. ಈಗ ಮಾರ್ಪಾಡುಗಳು ಮಾಡಲು ಹೋದರೆ ಮುರಿಯುತ್ತದೆ. ಮರ ಮುದಿಯಾದರೂ ಅನುಭವಗಳ ಖಜಾನೆ. ಅವರ ಬಹಳಷ್ಟು ಮಾತು, ನಡವಳಿಕೆ, ವರ್ತನೆ ಇಷ್ಟವಾಗದಿರಬಹುದು. ಅರ್ಥವಾಗದಿರಬಹುದು. ಬದುಕೆಂಬುದೇ ಹೀಗೆ. ಅದರ ಪಾಡಿಗೆ ಅದು ಚಲಿಸಬೇಕು. ನದಿಯ ಚಲನೆಯ ದಿಕ್ಕು ಪ್ರಕೃತಿಯ ನಿಯಮ. ಇದನ್ನು ಸುಲಭಕ್ಕೆ ಬದಲಿಸಲಾಗದು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಮೇ 15, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ಅಷ್ಟಮಿ ಅಹೋರಾತ್ರ ನಕ್ಷತ್ರ: ಆಶ್ಲೇಷ ಗಂ. 15-25 ಯೋಗ: ವೃದ್ಧಿ ಗಂ. 07-41 ಕರಣ : ವಿಷ್ಟಿ ಗಂ. 17-18, ವೃಷಭ ಮಾಸದ 02 ನೇ ದಿನ, ಮಳೆನಕ್ಷತ್ರ: ಕೃತ್ತಿಕಾ 2.
ರಾಹುಕಾಲ : ಮಧ್ಯಾಹ್ನ 12-00 - 01-30
ಸೂರ್ಯೋದಯ : 06-08 ಸೂರ್ಯಾಸ್ತ : 06-46
ಮುಸ್ಲಿಂ ದಿನಾಂಕ : 06 ಜುಲ್ಕಾಯದ್
ಅದೃಷ್ಟ ಸಂಖ್ಯೆ : 11, 7

ಮೇಷ: ಶೈಕ್ಷಣಿಕ ಹಾಗೂ ಸಾಂಸಾರಿಕ ಪರೀಕ್ಷೆಗಳೆರಡರಲ್ಲೂ ಉತ್ತಮ ಫಲಿತಾಂಶ ಪಡೆಯಲು ಪ್ರಯತ್ನ ಈಗಿನದ್ದಕ್ಕಿಂತ ಹೆಚ್ಚು ಅಗತ್ಯವಿದೆ. ಗುರುಗಳ ಮಾತನ್ನು ಮೀರುವುದರಲ್ಲಿ ಶ್ರೇಯಸ್ಸು ಇರುವುದಿಲ್ಲ.

ವೃಷಭ: ವಯಸ್ಸು ಹಾಗೂ ಉತ್ಸಾಹ ಇರುವಾಗ ಮಾತ್ರ ಸಮಾಜ ಸೇವೆ ಮಾಡಬಹುದೆನ್ನುವುದನ್ನು ಗಮನದಲ್ಲಿಟ್ಟು ಸೇವೆ ಸಲ್ಲಿಸಿ. ತಂದೆ ತಾಯಿ ಸಂತೋಷವು ನಿಮ್ಮ ಸಂತಸಕ್ಕೆ ಕಾರಣವಾಗಲಿದೆ.

ಮಿಥುನ: ಯಾರಿಂದಲೋ ಕೇಳಿಸಿಕೊಂಡ ವಾರ್ತೆಗಳನ್ನು ಹಬ್ಬಿಸುವ ಮೊದಲು ಆ ಸುದ್ದಿಯು ಸತ್ಯವೋ ಅಲ್ಲವೋ ಎಂಬುದನ್ನು ತಿಳಿದುಕೊಳ್ಳಿರಿ. ವಾಹನದ ರಿಪೇರಿ ವಿಚಾರದಲ್ಲಿ ಅಧಿಕವಾದ ಖರ್ಚು ಸಂಭವಿಸಲಿದೆ.

ಕರ್ಕಾಟಕ: ಧಾರ್ಮಿಕ ಕಾರ್ಯಕ್ರಮಗಳ ನಿರ್ವಹಣೆಯಲ್ಲಿ ಲೋಪದೋಷವನ್ನು ಮಾಡದೆ ಎಚ್ಚರಿಕೆ ವಹಿಸಿ. ವಿದ್ಯಾರ್ಥಿಗಳು ಉದಾಸೀನ ಮಾಡದೆ ಶಾಲಾ ಕಾರ್ಯಕ್ರಮದಲ್ಲಿ ಭಾಗವಹಿಸಿ. ಒಳ್ಳೆಯದಾಗುವುದು.

ಸಿಂಹ: ನಿವೃತ್ತಿ ಜೀವನವನ್ನು ಸುಖಕರವಾಗಿ ಕಳೆಯುವಲ್ಲಿ ಹೆಚ್ಚು ಶ್ರಮವಹಿಸಿ ಕೆಲಸ ಮಾಡುವ ಯೋಜನೆಯನ್ನು ಮಾಡುವಿರಿ. ಮನೆಯ ಜನರೊಂದಿಗೆ ಕಳೆದ ಸಮಯ ಅವಿಸ್ಮರಣೀಯ.

ಕನ್ಯಾ: ಸಣ್ಣ ಸಣ್ಣ ಸಮಸ್ಯೆಗಳನ್ನು ದೊಡ್ಡ ಸಮಸ್ಯೆಯನ್ನಾಗಿ ಮಾಡಿಕೊಂಡು ಪರಿಹಾರವನ್ನು ಕ್ಲಿಷ್ಟಕರವನ್ನಾಗಿ ಮಾಡಿಕೊಳ್ಳದಿರಿ. ಉದ್ಯೋಗದ ವಿಷಯದಲ್ಲಿ ಉತ್ತಮ ಅವಕಾಶಗಳು ಕೈತಪ್ಪುವ ಸಂದರ್ಭಗಳು ಎದುರಾಗಬಹುದು.

ತುಲಾ: ಹೊಸ ಉದ್ಯೋಗವನ್ನು ಹುಡುಕುತ್ತಿರುವವರಿಗೆ ಹೆಚ್ಚಿನ ಪ್ರಯತ್ನದ ಅವಶ್ಯಕತೆಯ ಮನವರಿಕೆ ಆಗುತ್ತದೆ. ಸಿದ್ಧಿಸಿದ ಕಲೆಯನ್ನು ಹಣದ ಮುಖ ನೋಡಿ ಅನರ್ಥಕಾರಿಯನ್ನಾಗಿ ಮಾಡಿಕೊಳ್ಳಬೇಡಿ.

ವೃಶ್ಚಿಕ: ಕುಟುಂಬದವರ ಜತೆ ಕಳೆಯುವ ಪ್ರತಿ ಕ್ಷಣವೂ ನೆನಪಿಟ್ಟುಕೊಳ್ಳಬೇಕಾದಂತಹ ಸನ್ನಿವೇಶಗಳಾಗಿರುತ್ತದೆ. ಗೆಲುವು ಅತ್ಯಂತ ಸಮೀಪ ಇರುವುದು ಬಹಳ ದೂರ ಇದ್ದಂತೆ ಭಾಸವಾಗಿ ಬೇಸತ್ತು ಕೈಬಿಡದಿರಿ.

ಧನು: ವೃತ್ತಿಯಲ್ಲಿ ರಾತ್ರಿ ಪಾಳಿ ತಪ್ಪುವಂಥ ಘಟನೆ ನಡೆದ ಕಾರಣದಿಂದಾಗಿ ಮನಸ್ಸಿಗೆ ಸಮಾಧಾನವಾಗುವುದು. ಅಧಿಕಾರಿ ವರ್ಗದವರಿಗೆ ಮುಂಬಡ್ತಿಯಂಥ ಕನಸುಗಳು ನೆರವೇರುವುದು. ಅತಿ ನಿದ್ರೆ ಒಳ್ಳೆಯದಲ್ಲ.

ಮಕರ: ಬದ್ಧವೈರಿಗಳ ಮನೆಯ ಕಷ್ಟವನ್ನು ನೋಡಿ ಮನಸ್ಸು ಕರಗಿ ಸಹಾಯ ಮಾಡುವ ಸಾಧ್ಯತೆಗಳಿವೆ. ಮನೆಯ ದುರಸ್ತಿ ಕಾರ್ಯಗಳು ಅಥವಾ ನೂತನ ಮನೆಯ ನಿರ್ಮಾಣವನ್ನು ಬೇಗ ಮುಗಿಸುವುದು ಸೂಕ್ತ.

ಕುಂಭ: ತಾಯಿಯ ಬ್ಯಾಂಕ್ ಹಾಗೂ ಕಚೇರಿ ಕೆಲಸಗಳು ನಿಮ್ಮ ಜವಾಬ್ದಾರಿಗೆ ಬರುವುದರಿಂದ ತಿರುಗಾಟ ಮಾಡಬೇಕಾಗುವುದು. ಮನಸ್ಸಿನಲ್ಲಿ ಏಕಾಗ್ರತೆಯಿಂದ ಶಿವನ ನಾಮ ಸ್ಮರಣೆ ಅಥವಾ ಧ್ಯಾನ ಮಾಡಿ.

ಮೀನ: ವರಾನ್ವೇಷಣೆಯ ಹಂತದಲ್ಲಿರುವ ಕನ್ಯೆಗೆ ಬಂದ ಸಂಬಂಧದ ಬಗ್ಗೆ ಕೂಲಂಕಷವಾಗಿ ಯೋಚಿಸದೆ ಮದುವೆ ಮಾತುಕತೆಯನ್ನು ಮಾಡದಿರಿ. ದುರ್ಲಭವಾದಂತಹ ವಸ್ತುಗಳ ಸಂಪಾದನೆಯಲ್ಲಿ ಹೆಚ್ಚು ಸಮಯ ಸವೆಸದಿರಿ.

ಪದಬಂಧ 5681

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನಿಷ್ಣಾತ ಇಲ್ಲಿದ್ದಾನೆ (4)
3.ಸಂಗೀತ ನೃತ್ಯಗತಿಯಲ್ಲಿ ಕೊನೆಯಾದ ಶಾಲೆ! (4)
5.ವಿನಾಯಕನಲ್ಲೇ ಕಬ್ಬಿಗನನ್ನು ಹುಡುಕಿ (2)
7.ಕೆರದ ಬಳಿಯಿರಿಸಿದ ಕೇರುವ ಸಾಧನ (3)
8.ಉತ್ತರದವರ ಕಡೆ ನೀರು ಪೂರೈಸುವ ಕೊಳಾಯಿ (2)
10.ಪರಿಶೆಯನ್ನು ಹೀಗೂ ಹೇಳುವರು (2)
11.ಸಡಗರ ಹೀಗೆ ಬಂದಿದೆ (3)
13.ಕಪಿತ್ಥವನ್ನು ಹಿಡಿದಿರುವ ಮಂಗ (2)
15.ಮೋಕ್ಷಕ್ಕೆ ಸಾಧಕವಾದ ಪರಮಾತ್ಮನ ಅರಿವು (4)
16.ಗಂಡೂ ಅಲ್ಲ ಹೆಣ್ಣೂ ಅಲ್ಲ! (4)

ಮೇಲಿಂದ ಕೆಳಕ್ಕೆ
1.ಪದ ಹೇಳಿ ಪಡೆದ ಬಿಲ್ಲೆ (3)
2.ತಡಿಯ ಹತ್ತಿರವಿರುವ ಬಿದಿರಿನ ತಟ್ಟಿ (3)
3.ಕ್ರೀಡಾಶೀಲ ವ್ಯಕ್ತಿಯಿವನು (3)
4.ಯಮನ ಹತ್ತಿರ ಕಾಣಿಸಿದ ಜೋಡಿ (3)
6.ಗೆಲವನ್ನು ಗಳಿಸುವುದಕ್ಕಾಗಿ ಕೈಗೊಳ್ಳುವ ಪ್ರಯಾಣ (5)
8.ಒಳ್ಳೆತನದ ಸೋಗಿನಲ್ಲಿ ಮೋಸಮಾಡುವವನು (5)
10.ಈತ ಎಚ್ಚರಗೊಂಡವನು (3)
11.ಸಮಾಧಾನವಾಗಿ ನಡೆದಿರುವ ರಾಜಿ (3)
12.ಮನದೊಳಗೆ ನೀವುವಿಕೆ (3)
14.ಇದು ಶಿವನ ಧನಸ್ಸು (3)



5680ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜನನಿ 3.ಗತ್ಯಂತರ
5.ತಿಲಕ 7.ಗಡಿಯಾರ
9.ಮೆಲುಮಾತು 12.ನವಮಿ
14.ಚದುರಂಗ 15.ಕಠೋರ

ಮೇಲಿಂದ ಕೆಳಕ್ಕೆ:
1.ಜಯಂತ 2.ನಿಷೇಕ
3.ಗಡಿಬಿಡಿ 4.ರಕ್ಷಕ
6.ಲವಾಜಮೆ 7.ಗರತು
8.ರಥೋತ್ಸವ 10.ಮಾವಟಿಗ
11.ಚಮಚ 12.ನಡುಕ
13.ಮಿಹಿರ

ಸುಡೊಕು 6066

	2			6	7	4		
3								
	7	1		4	8		6	
	4						8	
8		9		7	1			6
	5		8		4		9	
2				9			3	
4		3		5	2			8
	1		4			5	2	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6065 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,104
ಇಂದಿನ ಅಂತ್ಯ	22,217
▲	113
ದಿನದ ಗರಿಷ್ಠ	22,222

ವಿನಿಮಯ ದರ

$ ಡಾಲರ್	83.50
£ ಪೌಂಡ್	104.77
€ ಯುರೊ	90.13
¥ ಯೆನ್ (100ಕ್ಕೆ)	54

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು 100ಕ್ಕೆ	₹615
12 ಕ್ಕೆ	₹80
ಮೈಸೂರು 100ಕ್ಕೆ	₹618

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ನಿನ್ನೆಯ ದರ)

ಶೇಂಗಾ (ರಿಫೈನ್ಡ್)	₹1550 (1520)
ಸೋಯಾ (ರಿಫೈನ್ಡ್)	₹880 (900)
ಸೂರ್ಯಕಾಂತಿ (ರಿಫೈನ್ಡ್)	₹920 (905)
ಪಾಮೋಲಿನ್	₹885 (880)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಕೆ.ಆರ್. ಪೇಟೆ	₹9216-9216
ತಿಪಟೂರು	₹8500-9400
ಅರಸೀಕೆರೆ	₹8000-8910

ಮುದ್ರಮನೆ ಕಾಫಿ (50 ಕೆಜಿಗೆ)

ಎಪಿ	₹14500
ಎಸಿ	₹8540
ಆರ್‌ಪಿ	₹14900
ಆರ್‌ಸಿ	₹8710

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹177
ಆರ್‌ಎಸ್‌ಎಸ್-5	₹170
ಗುಡ್ ಲಾಟ್	₹160

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹230-476
ದ್ವಿತಳಿ (ಬಿ.ವಿ)	₹300-580

13 ತಿಂಗಳ ಗರಿಷ್ಠ: ಆಹಾರ ಪದಾರ್ಥಗಳ ಬೆಲೆ ಹೆಚ್ಚಳ

ಸಗಟು ಹಣದುಬ್ಬರ ಏರಿಕೆ

ನವದೆಹಲಿ (ಪಿಟಿಐ): ಸಗಟು ಬೆಲೆ ಸೂಚ್ಯಂಕ (ಡಬ್ಲ್ಯುಪಿಐ) ಆಧಾರಿತ ಹಣದುಬ್ಬರವು ಏಪ್ರಿಲ್‌ನಲ್ಲಿ ಶೇ 1.26ರಷ್ಟು ಏರಿಕೆಯಾಗಿದ್ದು, 13 ತಿಂಗಳ ಗರಿಷ್ಠ ಮಟ್ಟಕ್ಕೆ ಮುಟ್ಟಿದೆ.

ಆಹಾರ ಪದಾರ್ಥಗಳ ಬೆಲೆ ಹೆಚ್ಚಳವಾಗಿರುವುದೇ ಹಣದುಬ್ಬರದ ಏರಿಕೆಗೆ ಕಾರಣವಾಗಿದೆ. ಅದರಲ್ಲೂ ತರಕಾರಿಗಳ ಬೆಲೆ ಏರುಗತಿಯಲ್ಲಿದೆ.

ಫೆಬ್ರುವರಿಯಲ್ಲಿ ಶೇ 0.20ರಷ್ಟು ದಾಖಲಾಗಿದ್ದ ಹಣದುಬ್ಬರವು ಮಾರ್ಚ್‌ನಲ್ಲಿ ಶೇ0.53ಕ್ಕೆ ಏರಿಕೆಯಾಗಿತ್ತು. ಕಳೆದ ವರ್ಷದ ಏಪ್ರಿಲ್‌ನಲ್ಲಿ ಶೇ 0.79ರಷ್ಟು ದಾಖಲಾಗಿತ್ತು.

ಆಹಾರ ಪದಾರ್ಥಗಳು, ವಿದ್ಯುತ್, ಕಚ್ಚಾ ತೈಲ, ನೈಸರ್ಗಿಕ ಅನಿಲ ಹಾಗೂ ಆಹಾರ ಪದಾರ್ಥಗಳ ತಯಾರಿಕೆ ವೆಚ್ಚದಲ್ಲಿ ನಿರೀಕ್ಷೆಗೂ ಮೀರಿ ಬೆಲೆ ಏರಿಕೆಯಾಗಿದೆ. ಹಾಗಾಗಿ, ಸಗಟು ಹಣದುಬ್ಬರವು ಏರಿಕೆ ಪಥದಲ್ಲಿ ಸಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ಮಂಗಳವಾರ ತಿಳಿಸಿದೆ.

ಮಾರ್ಚ್‌ನಲ್ಲಿ ಶೇ 6.88ರಷ್ಟಿದ್ದ ಆಹಾರ ಹಣದುಬ್ಬರವು, ಏಪ್ರಿಲ್‌ನಲ್ಲಿ ಶೇ 7.74ಕ್ಕೆ ಏರಿಕೆಯಾಗಿದೆ. ಇಂಧನ ಮತ್ತು ವಿದ್ಯುತ್ ಸೂಚ್ಯಂಕದಲ್ಲಿಯೂ ಏರಿಕೆಯಾಗಿದೆ. ಮಾರ್ಚ್‌ನಲ್ಲಿ ಶೇ (–) 0.77ರಷ್ಟು ಇದ್ದದ್ದು, ಏಪ್ರಿಲ್‌ನಲ್ಲಿ ಶೇ 1.38ಕ್ಕೆ ಹೆಚ್ಚಳವಾಗಿದೆ.

'ಸಗಟು ಹಣದುಬ್ಬರವು ಜಾಗತಿಕ ಸರಕುಗಳ ಬೆಲೆಯೊಂದಿಗೆ ಬೆಸೆದು-ಕೊಂಡಿರುತ್ತದೆ. ಹಾಗಾಗಿ, ವರ್ಷದಿಂದ ವರ್ಷಕ್ಕೆ ಏರುಗತಿಯಲ್ಲಿ ಸಾಗುತ್ತದೆ' ಎಂದು ಕ್ರೆಡಿಟ್ ರೇಟಿಂಗ್ ಸಂಸ್ಥೆ ಐಸಿಆರ್‌ಎ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

'ಕಳೆದ ಕೆಲವು ತಿಂಗಳಿನಿಂದ ಕಚ್ಚಾ ತೈಲದ ಬೆಲೆ ಸೇರಿ ಹಲವು ಸರಕುಗಳ ಬೆಲೆಯಲ್ಲಿ ಏರಿಕೆಯಾಗಿದೆ. ಸದ್ಯದ ಸ್ಥಿತಿಯನ್ನು ಅವಲೋಕಿಸಿದರೆ ಮೇ ಮತ್ತು ಜೂನ್‌ನಲ್ಲಿ ಹಣದುಬ್ಬರವು ಶೇ 2ರಷ್ಟು ದಾಟುವ ಸಾಧ್ಯತೆಯಿದೆ' ಎಂದು ಹೇಳಿದ್ದಾರೆ.

2024–25ನೇ ಹಣಕಾಸು ವರ್ಷದಲ್ಲಿ ಸಗಟು ಹಣದುಬ್ಬರವು ಶೇ 3.3ರಷ್ಟು ಇರಲಿದೆ ಎಂದು ಐಸಿಆರ್‌ಎ ಅಂದಾಜಿಸಿದೆ.

ಮಾರ್ಚ್‌ನಲ್ಲಿ ಶೇ 19.52ರಷ್ಟಿದ್ದ ತರಕಾರಿ ಬೆಲೆಯು ಏಪ್ರಿಲ್‌ನಲ್ಲಿ ಶೇ 23.60ಕ್ಕೆ ಹೆಚ್ಚಳವಾಗಿದೆ. ಆಲೂಗಡ್ಡೆ ಬೆಲೆಯು ಶೇ 52.60ರಿಂದ ಶೇ 71.97ರಷ್ಟು ಹಾಗೂ ಈರುಳ್ಳಿ ಧಾರಣೆಯು ಶೇ 56.99ರಿಂದ ಶೇ 59.75ಕ್ಕೆ ಏರಿಕೆಯಾಗಿದೆ.

'ಖಾರಿಫ್ ಅವಧಿಯಲ್ಲಿ ಬಿತ್ತನೆ ಯಾಗುವ ಆಹಾರ ಧಾನ್ಯಗಳು ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ಮಂಡಿಗಳಿಗೆ ಪೂರೈಕೆಯಾಗುತ್ತವೆ. ಆಗ ಮಾರುಕಟ್ಟೆಯಲ್ಲಿ ಸಹಜವಾಗಿ ಪೂರೈಕೆ ಸರಪಳಿ ಹೆಚ್ಚಲಿದೆ. ಈ ಅವಧಿಯಲ್ಲಿ ಆಹಾರ ಪದಾರ್ಥಗಳ ಬೆಲೆ ಇಳಿಕೆಯಾಗುವ ಸಾಧ್ಯತೆಯಿದೆ' ಎಂದು ಪಿಎಚ್‌ಡಿ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ ಅಧ್ಯಕ್ಷ ಸಂಜೀವ್ ಅಗರವಾಲ್ ಹೇಳಿದ್ದಾರೆ.

ರೆಪೊ ದರ ಯಥಾಸ್ಥಿತಿ ಸಾಧ್ಯತೆ

ಏಪ್ರಿಲ್‌ನಲ್ಲಿ ಚಿಲ್ಲರೆ ಹಣದುಬ್ಬರವು ಅಲ್ಪ ಪ್ರಮಾಣದಲ್ಲಿ ಇಳಿಕೆಯಾಗಿದ್ದರೂ ಆಹಾರ ಪದಾರ್ಥಗಳ ಬೆಲೆ ಇಳಿಕೆಯಾಗಿಲ್ಲ. ಈಗ ಸಗಟು ಹಣದುಬ್ಬರವೂ ಏರಿಕೆಯಾಗಿದೆ. ಹಾಗಾಗಿ, ಜೂನ್ 5ರಿಂದ 7ರ ವರೆಗೆ ನಡೆಯುವ ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯಲ್ಲಿ ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವ ಸಾಧ್ಯತೆಯಿದೆ ಎಂದು ಆರ್ಥಿಕ ತಜ್ಞರು ಅಂದಾಜಿಸಿದ್ದಾರೆ.

ಚಿಲ್ಲರೆ ಹಣದುಬ್ಬರವು ಆರ್‌ಬಿಐ ಅಂದಾಜಿಸಿರುವ ಶೇ 2ರಿಂದ 6ರ ತಾಳಿಕೆ ಮಿತಿಯಲ್ಲಿದೆ. ಆದರೆ, ಇದನ್ನು ಶೇ 4ರ ಮಿತಿಯಲ್ಲಿ ಕಾಯ್ದುಕೊಳ್ಳುವುದು ಆರ್‌ಬಿಐನ ಗುರಿಯಾಗಿದೆ. 'ಏಪ್ರಿಲ್‌ನಲ್ಲಿ ದಾಖಲಾಗಿರುವ ಚಿಲ್ಲರೆ ಹಾಗೂ ಸಗಟು ಹಣದುಬ್ಬರವನ್ನು ಅವಲೋಕಿಸಿದರೆ ಜೂನ್‌ನಲ್ಲಿ ನಡೆಯುವ ಎಂಪಿಸಿ ಸಭೆಯಲ್ಲಿ ರೆಪೊ ದರ ಕಡಿತಗೊಳಿಸುವ ಸಾಧ್ಯತೆ ಕಡಿಮೆಯಿದೆ' ಎಂದು ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.



ಗೂಳಿ ಓಟ ಅಬಾಧಿತ

ಮುಂಬೈ (ಪಿಟಿಐ): ಸತತ ಎರಡನೇ ದಿನವಾದ ಮಂಗಳವಾರವೂ ದೇಶದ ಷೇರುಪೇಟೆಗಳಲ್ಲಿ ಗೂಳಿ ಓಟ ಮುಂದುವರಿದಿದ್ದು, ಸೂಚ್ಯಂಕಗಳು ಏರಿಕೆ ದಾಖಲಿಸಿವೆ.

ಚಿಲ್ಲರೆ ಹಣದುಬ್ಬರವು 11 ತಿಂಗಳ ಕನಿಷ್ಠ ಮಟ್ಟಕ್ಕೆ ದಾಖಲಾಗಿರುವುದು ಹೂಡಿಕೆದಾರರಲ್ಲಿ ಖರೀದಿ ಉತ್ಸಾಹವನ್ನು ಹೆಚ್ಚಿಸಿದೆ. ಅಲ್ಲದೆ, ರಿಲಯನ್ಸ್ ಇಂಡಸ್ಟ್ರೀಸ್ ಷೇರುಗಳ ಖರೀದಿ ಭರಾಟೆಯು ಸೂಚ್ಯಂಕಗಳ ಏರಿಕೆಗೆ ನೆರವಾಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 328 ಅಂಶ ಏರಿಕೆ (ಶೇ 0.45ರಷ್ಟು) ಕಂಡು, 73,104 ಅಂಶಗಳಲ್ಲಿ ಸ್ಥಿರಗೊಂಡಿತು. ದಿನದ ವಹಿವಾಟಿನ ಒಂದು ಸಂದರ್ಭದಲ್ಲಿ 510 ಅಂಶಗಳಷ್ಟು ಏರಿಕೆ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 113 ಅಂಶ ಏರಿಕೆ ಕಂಡು (ಶೇ 0.51ರಷ್ಟು), 22,127 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು.

ಮಹೀಂದ್ರ ಆ್ಯಂಡ್ ಮಹೀಂದ್ರ, ಎಲ್ ಆ್ಯಂಡ್ ಟಿ, ಜೆಎಸ್‌ಡಬ್ಲ್ಯು ಸ್ಟೀಲ್, ಎನ್‌ಟಿಪಿಸಿ, ಇಂಡಸ್‌ಇಂಡ್ ಬ್ಯಾಂಕ್, ಸನ್ ಫಾರ್ಮಾ, ಅಲ್ಟ್ರಾಟೆಕ್ ಸಿಮೆಂಟ್, ಎಸ್‌ಬಿಐ, ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಮಾರುತಿ ಸುಜುಕಿ ಕಂಪನಿಯ ಷೇರಿನ ಮೌಲ್ಯದಲ್ಲಿ ಹೆಚ್ಚಳವಾಗಿದೆ.

ನೆಸ್ಲೆ ಇಂಡಿಯಾ, ಟಿಸಿಎಸ್, ಎಚ್‌ಸಿಎಲ್ ಟೆಕ್, ಐಸಿಐಸಿಐ ಬ್ಯಾಂಕ್, ಬಜಾಜ್ ಫಿನ್‌ಸರ್ವ್, ಏಷ್ಯನ್ ಪೇಂಟ್ಸ್‌ನ ಷೇರಿನ ಮೌಲ್ಯ ಕುಸಿದಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಷೇರುಪೇಟೆಯಿಂದ ಬಂಡವಾಳ ಹಿಂತೆಗೆತ ಪ್ರಕ್ರಿಯೆಯನ್ನು ಮುಂದುವರಿಸಿದ್ದಾರೆ. ಸೋಮವಾರದ ವಹಿವಾಟಿನಲ್ಲಿ ₹4,498 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ ಎಂದು ಷೇರುಪೇಟೆಯ ಅಂಕಿಅಂಶ ತಿಳಿಸಿವೆ.

ಇಂಡೊನೇಷ್ಯಾದಲ್ಲಿ ಪ್ರವಾಹ 52 ಸಾವು, 20 ಮಂದಿ ನಾಪತ್ತೆ

ತನಾ ದತಾರ್, ಇಂಡೊನೇಷ್ಯಾ (ಎ.ಪಿ): ಇಂಡೊನೇಷ್ಯಾದ ಸುಮಾತ್ರಾ ದ್ವೀಪ ಪ್ರದೇಶದಲ್ಲಿ ಕಳೆದ ವಾರಾಂತ್ಯ ಕಂಡುಬಂದ ದಿಢೀರ್ ಪ್ರವಾಹದಿಂದ ತೀವ್ರ ಹಾನಿಯಾಗಿದ್ದು, ಕನಿಷ್ಠ 52 ಮಂದಿ ಮೃತಪಟ್ಟಿದ್ದಾರೆ.

ಧಾರಾಕಾರ ಮಳೆಯಿಂದಾಗಿ ಹಲವೆಡೆ ಭೂಕುಸಿತ ಸಂಭವಿಸಿದ್ದು, ಹಲವು ನದಿಗಳು ಉಕ್ಕಿ ಹರಿದಿವೆ. ಸುಮಾತ್ರಾದ ದಕ್ಷಿಣ ಭಾಗದ ನಾಲ್ಕು ಜಿಲ್ಲೆಗಳಲ್ಲಿ ತೀವ್ರ ಹಾನಿ ಸಂಭವಿಸಿದೆ.

ಹಲವು ಮನೆಗಳು ಕೊಚ್ಚಿಹೋಗಿವೆ. ಹಲವು ಕಟ್ಟಡಗಳು ಜಲಾವೃತವಾಗಿವೆ. ಸುಮಾರು 3,300 ಜನ ಅತಂತ್ರರಾಗಿದ್ದಾರೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಚರಣ್ ಎಸ್., ಆಡುಗೋಡಿ, ಬೆಂಗಳೂರು.

- **ಪ್ರಶ್ನೆ: ನಾನು ಕಳೆದ 10 ವರ್ಷಗಳ ಹಿಂದೆ ಮನೆ ಕಟ್ಟಿಸಿದ್ದೆ. ಇದಕ್ಕಾಗಿ ₹50 ಲಕ್ಷ ಬ್ಯಾಂಕ್ ಸಾಲ ಮಾಡಿದ್ದೆ. ಇನ್ನೂ 10 ವರ್ಷಗಳ ಇಎಂಐ ಕಂತು ಬಾಕಿ ಇದೆ. ಪ್ರತಿ ತಿಂಗಳು ಸುಮಾರು ₹50 ಸಾವಿರದ ಆಸುಪಾಸಿನಲ್ಲಿ ಕಂತು ಪಾವತಿಸುತ್ತಿದ್ದೇನೆ. ಇನ್ನೂ ಬಾಕಿ ಇರುವ ಅಸಲು ಸುಮಾರು ₹33 ಲಕ್ಷ ಇದೆ. ಶೇ 8.50ರಿಂದ ಶೇ 9ರ ಅಂದಾಜಿನಲ್ಲಿ ಬಡ್ಡಿ ಪಾವತಿಯಾಗುತ್ತಾ ಬಂದಿದೆ.ನಾನು ಖಾಸಗಿ ಕಂಪನಿಯಲ್ಲಿ ಉದ್ಯೋಗಿಯಾಗಿದ್ದು, ಸದ್ಯ ಬಡ್ತಿ ಸಿಕ್ಕಿದೆ. ಪ್ರಸ್ತುತ ನನಗೆ ಹೆಚ್ಚುವರಿ ಉಳಿತಾಯ ಮಾಡುವ ಅವಕಾಶವಿದೆ. ಸಾಲದ ಇಎಂಐ ಮೊತ್ತಕ್ಕೆ ಸರಿಸಮಾನವಾಗಿ ಉಳಿಕೆಗೆ ಯೋಚನೆ ಮಾಡುತ್ತಿದ್ದೇನೆ. ಇತರೆ ಎಲ್ಲಾ ವರ್ಗದ ಹೂಡಿಕೆಗೆ ತುಲನೆ ಮಾಡಿದರೆ ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡುವುದು ಉತ್ತಮ ಎಂಬುದು ನನ್ನ ಅನಿಸಿಕೆ. ನನ್ನ ಪ್ರಶ್ನೆ ಏನೆಂದರೆ, ನಾನು ಗಳಿಸುತ್ತಿರುವ ಈ ಹೆಚ್ಚುವರಿ ಮೊತ್ತವನ್ನು ಸಾಲ ಮರುಪಾವತಿಗೆ ಬಳಸಿಕೊಂಡು ಬಡ್ಡಿಯಿಂದ ಮುಕ್ತಿ ಹೊಂದಬಹುದೇ ಅಥವಾ ಅದರ ಬದಲು ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದು ಸೂಕ್ತವೇ?**

ಉತ್ತರ: ನೀವು ನಿಮ್ಮ ಗೃಹ ಸಾಲದ ಬಗೆಗಿನ ಮಾಹಿತಿ ಹಾಗೂ ಹೆಚ್ಚುವರಿ ಆದಾಯದ ಹೂಡಿಕೆ ಬಗೆಗಿನ ಮಾಹಿತಿ ನೀಡಿದ್ದೀರಿ. ನಿಮ್ಮ ಸಾಲ ಈಗಾಗಲೇ ಅರ್ಧದಷ್ಟು ಪಾವತಿಯಾಗಿದೆ. ಇನ್ನು ಉಳಿದ ಮೊತ್ತದ ಬಹುತೇಕ ಪಾಲು ತಿಂಗಳು ಕಳೆದಂತೆ ಅಸಲಿಗೆ ಹೆಚ್ಚು ಪಾವತಿಯಾಗಿ ಬಡ್ಡಿಯ ಪ್ರಮಾಣ ಕಡಿಮೆಯಾಗುತ್ತಾ ಹೋಗುತ್ತದೆ. ಆದರೂ, ಮಾಸಿಕವಾಗಿ ಸುಮಾರು ₹25 ಸಾವಿರದಷ್ಟು ಮೊತ್ತವನ್ನು ನೀವು ಈಗಲೂ ಬಡ್ಡಿಯಾಗಿ ಪಾವತಿಸುತ್ತಿರಬಹುದು. ಇದು ವಾರ್ಷಿಕವಾಗಿ ₹3 ಲಕ್ಷ ಆಗಲಿದೆ. ನಿಮ್ಮ ಸಾಲದ ಕರಾರು ಪತ್ರದಲ್ಲಿ ಮರುಪಾವತಿಗೆ ಸಂಬಂಧಿಸಿದ ಯಾವುದಾದರೂ ಷರತ್ತು, ಮಿತಿ ಇತ್ಯಾದಿ ಇದ್ದರೆ ಪರಿಶೀಲಿಸಿ ಅಥವಾ ಸಂಬಂಧಪಟ್ಟ ಬ್ಯಾಂಕ್ ಸಂಪರ್ಕಿಸಿ ಮಾಹಿತಿ ಪಡೆದುಕೊಳ್ಳಿ.

ಇನ್ನು ಸಾಲ ಮರುಪಾವತಿ ಅಥವಾ ಹೂಡಿಕೆಗೆ ಇರುವ ಅವಕಾಶಗಳ ಬಗ್ಗೆ ತುಲನೆ ಮಾಡುವುದಾದರೆ ಇವೆರಡೂ ಖಚಿತ ಬಡ್ಡಿ ಉಳಿತಾಯ ಹಾಗೂ ಹೂಡಿಕೆಯ ಮೇಲಿನ ಅಂದಾಜು ಗಳಿಕೆಯ ಮೇಲೆ ನಿರ್ಣಯಿಸಬೇಕಾಗಿದೆ.

ಸಾಲಕ್ಕೆ ಮರುಪಾವತಿಸುವ ಪ್ರತಿ ಒಂದು ರೂಪಾಯಿಯೂ ನಿಮ್ಮ ಬಡ್ಡಿಯನ್ನು ತಗ್ಗಿಸಲಿದೆ. ಜೊತೆಗೆ, ಬೇಗನೆ ಸಾಲದಿಂದ ಹೊರಬರಲು ನೆರವಾಗುತ್ತದೆ. ಆದರೆ, ಅದೇ ಮೊತ್ತವನ್ನು ಮಾರುಕಟ್ಟೆ ಆಧಾರಿತ ಉತ್ಪನ್ನಗಳಲ್ಲಿ ಹೂಡಿಕೆ ಮಾಡಿದಾಗ ನಿಮ್ಮ ಬಂಡವಾಳ ಮೊತ್ತಕ್ಕೆ ಕೆಲವೊಮ್ಮೆ ಪೆಟ್ಟು ಬೀಳುವ ಸಾಧ್ಯತೆ ಇದೆ.

ಹೀಗಾಗಿ, ನಿಮ್ಮ ವಿಚಾರದಲ್ಲಿ ಮರುಪಾವತಿಗೆ ಅವಕಾಶ ಇರುವ ಎಲ್ಲಾ ಮೊತ್ತವನ್ನು ಆದ್ಯತೆ ಮೇರೆಗೆ ಪಾವತಿಸಿ. ನಿಮ್ಮ ಹೂಡಿಕೆ ವಾರ್ಷಿಕವಾಗಿ ಶೇ 15ರಿಂದ ಶೇ 20ರಷ್ಟು ಲಾಭ ನೀಡುವ ಅವಕಾಶವಿರುವ ಹೂಡಿಕೆ ಎಂಬ ಧೈರ್ಯವಿದ್ದರೆ, ಹೆಚ್ಚುವರಿ ಮೊತ್ತವನ್ನು ಹೂಡಿಕೆ ಮಾಡಬಹುದಾಗಿದೆ.

ಸಂತೋಷ್, ಚಿತ್ರದುರ್ಗ.

- **ಪ್ರಶ್ನೆ: ನಾನು ಖಾಸಗಿ ಕೆಲಸ ನಿರ್ವಹಿಸುತ್ತಿದ್ದು, ಬಿಪಿಎಲ್ ಕಾರ್ಡ್ ಹೊಂದಿದ್ದೇನೆ. ಮುಂದಿನ ದಿನಗಳಲ್ಲಿ ಮನೆ ಕಟ್ಟಿಸುವ ಯೋಚನೆ ಇದೆ. ಇದಕ್ಕಾಗಿ ಬ್ಯಾಂಕ್‌ನಿಂದ ಸಾಲ ಪಡೆಯಲು ಏನು ಮಾಡಬೇಕು? ನನಗೆ ಯಾವುದೇ ಸ್ವಂತ ಮನೆ ಇರುವುದಿಲ್ಲ. ಜಮೀನು ಇರುವುದಿಲ್ಲ. ಖಾಸಗಿಯಾಗಿ ದುಡಿಯುವ ನನಗೆ ಅದೊಂದೇ ಆದಾಯದ ಮೂಲವಾಗಿದೆ. ಬ್ಯಾಂಕ್‌ನಲ್ಲಿ ಐ.ಟಿ ರಿಟರ್ನ್ಸ್ ಇದ್ದರೆ ಮಾತ್ರ ನಿಮಗೆ ಸಾಲ ಸಿಗುತ್ತದೆ ಎಂದು ಹೇಳುತ್ತಿದ್ದಾರೆ. ಇದಕ್ಕೆ ಪರಿಹಾರವೇನು?**

ಉತ್ತರ: ನಿಮ್ಮ ಪ್ರಶ್ನೆ ಸಹಜವಾದುದು. ಯಾವುದೇ ವ್ಯಕ್ತಿ ತನಗೆ ತೆರಿಗೆ ಕಟ್ಟಬೇಕಾಗುವ ಆದಾಯ ಇಲ್ಲದಿದ್ದಾಗ ಆದಾಯ ತೆರಿಗೆಯ ರಿಟರ್ನ್ಸ್ ಸಲ್ಲಿಸುವ ಪ್ರಮೇಯ ಬರುವುದಿಲ್ಲ. ಸಾಮಾನ್ಯವಾಗಿ ಬ್ಯಾಂಕ್‌ಗಳು, ಸಾಲ ಕೊಡುವಾಗ ಕೆಲವು ಸೂಚಿತ ಕಾನೂನಿನ ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸುತ್ತವೆ.

ಹೀಗಾಗಿ, ಎಲ್ಲಾ ಬ್ಯಾಂಕ್‌ಗಳು ಸಾಲ ನೀಡುವಾಗ ಕೇಂದ್ರೀಯ ಬ್ಯಾಂಕ್‌ನ ನಿರ್ದೇಶನಗಳನ್ನು ಪಾಲನೆ ಮಾಡಬೇಕಾಗುತ್ತದೆ. ಅದರ ಭಾಗವಾಗಿ ಬ್ಯಾಂಕ್‌ಗಳು ಆದಾಯ ತೆರಿಗೆ ರಿಟರ್ನ್ಸ್ ಬಗ್ಗೆ ಮಾಹಿತಿ ಕೇಳುತ್ತವೆ. ನಿಶ್ಚಿತ ಆದಾಯ ಇದ್ದಾಗ ಸಾಲದ ಮರುಪಾವತಿ ಸಾಮರ್ಥ್ಯ ಇದೆ ಎನ್ನುವುದನ್ನು ಖಚಿತಪಡಿಸಿಕೊಳ್ಳುವುದಕ್ಕೆ ಈ ಕ್ರಮವನ್ನು ಅನುಸರಿಸುತ್ತವೆ.

ನೀವು ನೀಡಿದ ಮಾಹಿತಿಯಲ್ಲಿ ನಿಖರ ಆದಾಯ ಅಥವಾ ವೃತ್ತಿ ಏನೆಂಬ ಬಗ್ಗೆ ಮಾಹಿತಿ ಇಲ್ಲ. ಆದರೆ, ನೀವು ಸ್ವಉದ್ಯೋಗ ಮಾಡುವುದಾಗಿ ತಿಳಿಸಿದ್ದೀರಿ. ನೀವು ಬಿಪಿಎಲ್ ಕಾರ್ಡ್ ಹೊಂದಿದ್ದರೂ ಅದು ಹಳೆಯ ಮಾಹಿತಿಯ ಆದಾಯದ ಆಧಾರದಲ್ಲಿ ಪಡೆ-ದುದಾಗಿರಬಹುದು ಹಾಗೂ ಅದಕ್ಕಾಗಿ ಕುಟುಂಬದ ವಾರ್ಷಿಕ ಆದಾಯ ಸುಮಾರು ₹1.20 ಲಕ್ಷದೊಳಗಿದ್ದು, ಸಂಬಂಧಪಟ್ಟ ಇತರೆ ನಿಯಮದೊಳಗೆ ಒಳಪಟ್ಟರೆ ಮಾತ್ರ ಪಡೆಯಲು ಅರ್ಹತೆ ಇರುತ್ತದೆ.

ಒಂದು ವೇಳೆ ನಿಮ್ಮ ವೈಯಕ್ತಿಕ ತೆರಿಗೆ ಆದಾಯವು ವಾರ್ಷಿಕವಾಗಿ ₹2.50 ಲಕ್ಷಕ್ಕೂ ಮೀರಿದ್ದರೆ ರಿಟರ್ನ್ಸ್ ಸಲ್ಲಿಸುವುದು ಅನಿವಾರ್ಯವಾ-ಗುತ್ತದೆ. ನಿಮಗೆ ಅನ್ವಯವಾಗುವ ತೆರಿಗೆ ವಿನಾಯಿತಿ ಇತ್ಯಾದಿಯನ್ನು ಪಡೆದುಕೊಳ್ಳಬಹುದು. ರಿಟರ್ನ್ಸ್ ಸಲ್ಲಿಸಿದ ಮಾತ್ರಕ್ಕೆ ತೆರಿಗೆ ಇದೆ ಎಂದೇನಿಲ್ಲ. ಹೊಸ ತೆರಿಗೆ ನಿಯಮದಡಿ ಸುಮಾರು ₹7 ಲಕ್ಷದ ವರೆಗಿನ ಆದಾಯಕ್ಕೆ ತೆರಿಗೆ ಇರುವುದಿಲ್ಲ. ಈ ಬಗ್ಗೆ ನೆರವು ಪಡೆಯಲು ಸಮೀಪದ ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ ಮಾಹಿತಿ ಪಡೆಯಿರಿ.

ಇನ್ನೂ ಒಂದು ಇರುವ ಅವಕಾಶವೆಂದರೆ, ಪ್ರಧಾನ ಮಂತ್ರಿ ಆವಾಸ ಯೋಜನೆ. ಇದು ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಮನೆ ಹೊಂದಲು ನೆರವಾಗುವ ಯೋಜನೆಯಾಗಿದೆ. ಅಗತ್ಯ ದಾಖಲೆಗಳೊಂದಿಗೆ ಸ್ನೇಹಿತರ ನೆರವು ಪಡೆದು ಕೇಂದ್ರ ಸರ್ಕಾರದ ವೆಬ್‌ಸೈಟ್‌ನಲ್ಲಿ ನೋಂದಣಿ ಮಾಡಿಸಿಕೊಳ್ಳಬಹುದು.

ಯಾವುದೇ ಇತರೆ ಸಾಧ್ಯತೆಗಳಿದ್ದರೂ ನಿಮ್ಮ ಆದಾಯದ ಮೂಲ ಹೆಚ್ಚಿಸುವ ಬಗ್ಗೆ ಗಮನಹರಿಸಿ. ನಿಮ್ಮ ಮೂಲ ಉದ್ದೇಶ ಮನೆ ಹೊಂದುವುದಾಗಿದೆ. ಹೀಗಾಗಿ, ಹಂತ ಹಂತವಾಗಿ ಆದಾಯದೊಂದಿಗೆ ಉಳಿತಾಯವನ್ನೂ ಹೆಚ್ಚಿಸಿಕೊಳ್ಳಿ. ಮುಂದಿನ ಎರಡು-ಮೂರು ವರ್ಷ ನಿಮ್ಮ ವಾಸ್ತವ ಆದಾಯ ಮೂಲವನ್ನು ಲೆಕ್ಕ ಹಾಕಿಸಿ ತೆರಿಗೆ ಸಲಹೆಗಾರರ ನೆರವಿನಿಂದ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಿ ಸಮರ್ಪಕ ದಾಖಲೆಗಳನ್ನು ಹೊಂದಿಸಿಕೊಳ್ಳಿ. ಮುಂದೆ ಖಂಡಿತವಾಗಿ ಅದನ್ನು ಬ್ಯಾಂಕ್‌ಗಳು ಮಾನ್ಯ ಮಾಡುತ್ತವೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್:businessdesk@prajavani.co.in

ಸಾರ್ವಜನಿಕ ಬ್ಯಾಂಕ್‌ಗಳಿಗೆ ಶೇ 35ರಷ್ಟು ಲಾಭ

ನವದೆಹಲಿ (ಪಿಟಿಐ): 2023–24ನೇ ಆರ್ಥಿಕ ವರ್ಷದಲ್ಲಿ ದೇಶದ ಸಾರ್ವಜನಿಕ ವಲಯದ 12 ಬ್ಯಾಂಕ್‌ಗಳು, ₹1.41 ಲಕ್ಷ ಕೋಟಿ ನಿವ್ವಳ ಲಾಭ ಗಳಿಸಿವೆ.

2022–23ನೇ ಆರ್ಥಿಕ ವರ್ಷದಲ್ಲಿ ₹1.04 ಲಕ್ಷ ಕೋಟಿ ಲಾಭಗಳಿಸಿದ್ದವು. ಇದಕ್ಕೆ ಹೋಲಿಸಿದರೆ ಲಾಭದ ಪ್ರಮಾಣದಲ್ಲಿ ಶೇ 35ರಷ್ಟು ಹೆಚ್ಚಳವಾಗಿದೆ. ಇದರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ (ಎಸ್‌ಬಿಐ) ಪಾಲು ಶೇ 40ಕ್ಕೂ ಹೆಚ್ಚಿದೆ.

2023–24ನೇ ಪೂರ್ಣ ಆರ್ಥಿಕ ವರ್ಷದಲ್ಲಿ ಎಸ್‌ಬಿಐ ₹61,077 ಕೋಟಿ ಲಾಭಗಳಿಸಿದೆ. ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 22ರಷ್ಟು ಹೆಚ್ಚಳವಾಗಿದೆ.

ಆದರೆ, ಶೇಕಡಾವಾರು ಲೆಕ್ಕಾಚಾರ-ದಲ್ಲಿ ಪಂಜಾಬ್ ನ್ಯಾಷನಲ್ ಬ್ಯಾಂಕ್‌ನ ನಿವ್ವಳ ಲಾಭದಲ್ಲಿ ಶೇ 228ರಷ್ಟು ಏರಿಕೆಯಾಗಿದ್ದು, ₹8,245 ಕೋಟಿ ಗಳಿಸಿದೆ. ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ₹13,649 ಕೋಟಿ (ಶೇ 62ರಷ್ಟು) ಹಾಗೂ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ₹2,549 ಕೋಟಿ (ಶೇ 61ರಷ್ಟು) ಲಾಭ ಗಳಿಸಿದೆ.

ಬ್ಯಾಂಕ್ ಆಫ್ ಇಂಡಿಯಾ ₹6,318 ಕೋಟಿ (ಶೇ 57ರಷ್ಟು), ಬ್ಯಾಂಕ್ ಆಫ್ ಮಹಾರಾಷ್ಟ್ರ ₹4,055 ಕೋಟಿ (ಶೇ 56ರಷ್ಟು) ಹಾಗೂ ಇಂಡಿಯನ್ ಬ್ಯಾಂಕ್ ₹8,063 ಕೋಟಿ (ಶೇ 53ರಷ್ಟು) ಲಾಭಗಳಿಸಿದೆ. ಈ ಕುರಿತು ಬ್ಯಾಂಕ್‌ಗಳು ಷೇರುಪೇಟೆಗೆ ಮಾಹಿತಿ ನೀಡಿವೆ.

ಪ್ರಯಾಣಿಕ ವಾಹನ ಸಗಟು ಮಾರಾಟ ಏರಿಕೆ

ನವದೆಹಲಿ (ಪಿಟಿಐ): ಕಳೆದ ವರ್ಷದ ಏಪ್ರಿಲ್‌ಗೆ ಹೋಲಿಸಿದರೆ ಪ್ರಸಕ್ತ ವರ್ಷದ ಏಪ್ರಿಲ್‌ನಲ್ಲಿ ಪ್ರಯಾಣಿಕ ವಾಹನಗಳ ಸಗಟು ಮಾರಾಟದಲ್ಲಿ ಶೇ 1.3ರಷ್ಟು ಅಲ್ಪ ಪ್ರಮಾಣದಲ್ಲಿ ಏರಿಕೆಯಾಗಿದೆ ಎಂದು ಭಾರತೀಯ ವಾಹನ ತಯಾರಕರ ಒಕ್ಕೂಟ (ಎಸ್‌ಐಎಎಂ) ತಿಳಿಸಿದೆ.

ಹಿಂದಿನ ವರ್ಷದ ಏಪ್ರಿಲ್‌ನಲ್ಲಿ 3.31 ಲಕ್ಷ ವಾಹನಗಳು ಮಾರಾಟವಾಗಿದ್ದರೆ, ಈ ಏಪ್ರಿಲ್‌ನಲ್ಲಿ 3.35 ಲಕ್ಷ ವಾಹನಗಳು ಮಾರಾಟವಾಗಿವೆ. ಯುಟಿಲಿಟಿ ವಾಹನಗಳಿಗೆ ಬೇಡಿಕೆ ಹೆಚ್ಚಾಗಿರುವುದರಿಂದ ಸಗಟು ಮಾರಾಟದಲ್ಲಿ ಏರಿಕೆಯಾಗಿದೆ ಎಂದು ತಿಳಿಸಿದೆ.

ಯುಟಿಲಿಟಿ ವಾಹನಗಳ ಮಾರಾಟದಲ್ಲಿ ಶೇ 21ರಷ್ಟು ಹೆಚ್ಚಳವಾಗಿದ್ದು, 1.79 ಲಕ್ಷ ಮಾರಾಟವಾಗಿವೆ. ಆದರೆ, ಪ್ರಯಾಣಿಕ ಕಾರುಗಳ ಮಾರಾಟದಲ್ಲಿ ಶೇ 23.38ರಷ್ಟು ಕುಸಿತವಾಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 1.25 ಲಕ್ಷ ಮಾರಾಟವಾಗಿದ್ದರೆ, ಪ್ರಸಕ್ತ ಅವಧಿಯಲ್ಲಿ 96,357 ಕಾರುಗಳಷ್ಟೇ ಮಾರಾಟವಾಗಿವೆ ಎಂದು ವಿವರಿಸಿದೆ.

ವ್ಯಾನ್‌ಗಳ ಮಾರಾಟದಲ್ಲಿ ಶೇ 15ರಷ್ಟು ಹೆಚ್ಚಳವಾಗಿದ್ದು, 12,060ಕ್ಕೆ ತಲುಪಿದೆ.

ದ್ವಿಚಕ್ರ ವಾಹನ ಮಾರಾಟ ಏರಿಕೆ: ದ್ವಿಚಕ್ರ ವಾಹನಗಳ ಮಾರಾಟದಲ್ಲಿ ಶೇ 31ರಷ್ಟು ಏರಿಕೆಯಾಗಿದ್ದು, 17.51 ಲಕ್ಷ ಮಾರಾಟವಾಗಿವೆ.

ಮೋಟರ್‌ಸೈಕಲ್ ಮಾರಾಟದಲ್ಲಿ ಶೇ 34ರಷ್ಟು ಹೆಚ್ಚಳವಾಗಿದ್ದು, 11.28 ಮಾರಾಟವಾಗಿವೆ. ಸ್ಕೂಟರ್‌ಗಳ ಮಾರಾಟದಲ್ಲಿ ಶೇ 25ರಷ್ಟು ಏರಿಕೆಯಾಗಿದ್ದು, 5.81 ಲಕ್ಷಕ್ಕೆ ಮುಟ್ಟಿದೆ. ತ್ರಿಚಕ್ರ ವಾಹನಗಳ ಮಾರಾಟದಲ್ಲಿ ಶೇ 14.53ರಷ್ಟು ಹೆಚ್ಚಳವಾಗಿದ್ದು, ಒಟ್ಟು 49,116 ಮಾರಾಟವಾಗಿವೆ.

'ಮುಂಗಾರು ಹಂಗಾಮು ಉತ್ತಮ ಆರಂಭದ ನಿರೀಕ್ಷೆಯಿದೆ. ಲೋಕಸಭಾ ಚುನಾವಣೆಯ ಫಲಿತಾಂಶದ ಬಳಿಕ ಅಧಿಕಾರಕ್ಕೆ ಬರುವ ಸರ್ಕಾರವು ಆಟೊ ವಲಯಕ್ಕೆ ಸಂಬಂಧಿಸಿದಂತೆ ಹಾಲಿ ಇರುವ ನೀತಿಗಳನ್ನು ಮುಂದುವರಿಸಬೇಕಿದೆ. ತಯಾರಿಕಾ ಮತ್ತು ಮೂಲ ಸೌಕರ್ಯಕ್ಕೆ ಒತ್ತು ನೀಡಿದರೆ ಈ ವಲಯದ ಬೆಳವಣಿಗೆಗೆ ಸಹಕಾರಿಯಾಗಲಿ-ದೆ' ಎಂದು ಎಸ್‌ಐಎಎಂ ಅಧ್ಯಕ್ಷ ವಿನೋದ್ ಅಗರ್ವಾಲ್ ತಿಳಿಸಿದ್ದಾರೆ.

ಮಳೆ ಅವಾಂತರ

ಬ್ರೆಜಿಲ್‌ನ ದಕ್ಷಿಣ ಭಾಗದಲ್ಲಿರುವ 'ರಿಯೊ ಗ್ರ್ಯಾಂಡ್ ಡೊ ಸುಲ್' ಪ್ರದೇಶದಲ್ಲಿ ಭಾರಿ ಮಳೆಯಿಂದಾಗಿ ಪ್ರವಾಹ ಉಂಟಾಗಿದ್ದು, ಕೆನಾಸ್ ನಗರದ ರಸ್ತೆಯು ಜಲಾವೃತಗೊಂಡಿದೆ

– ಎಎಫ್‌ಪಿ ಚಿತ್ರ

ಮಾಲ್ದೀವ್ಸ್ ಆರೋಪವನ್ನು ನಿರಾಕರಿಸಿದ ಭಾರತ

ಮಾಲೆ (ಪಿಟಿಐ): ಭಾರತ ಸೇನೆಯ ಹೆಲಿಕಾಪ್ಟರ್ ಪೈಲಟ್‌ಗಳು ಮಾಲ್ದೀವ್ಸ್‌ನಲ್ಲಿಯೇ ನೆಲೆಯೂರಿದ್ದು, 2019ರಿಂದಲೂ ಅನಧಿಕೃತವಾಗಿ ಕಾರ್ಯಾಚರಣೆ ನಡೆಸಿದ್ದಾರೆ ಎಂಬ ಮಾಲ್ದೀವ್ಸ್ ರಕ್ಷಣಾ ಸಚಿವರ ಹೇಳಿಕೆಯನ್ನು ಭಾರತ ಮಂಗಳವಾರ ತಳ್ಳಿಹಾಕಿದೆ.

ಈ ಕುರಿತು ಹೇಳಿಕೆ ನೀಡಿರುವ ಭಾರತದ ರಾಯಭಾರ ಕಚೇರಿಯು ಮಾಲ್ದೀವ್ಸ್‌ನಲ್ಲಿ ಭಾರತೀಯ ವೈಮಾನಿಕ ಸಿಬ್ಬಂದಿಯು ಎಂದಿಗೂ ಅಗತ್ಯ ಅನುಮತಿಯೊಂದಿಗೆ ಕಾರ್ಯಾಚರಣೆ ನಡೆಸಲಿದ್ದಾರೆ ಎಂದು ತಿಳಿಸಿದೆ.

ಶನಿವಾರ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ್ದ ರಕ್ಷಣಾ ಸಚಿವ ಘಸ್ಸಾನ್ ಅವರು, ದೇಶದಲ್ಲಿ ಅನಧಿಕೃತ ಕಾರ್ಯಾಚರಣೆ ನಡೆಯುತ್ತಿರುವ ಕುರಿತು ತಮಗೆ ಮಾಹಿತಿ ಇದೆ ಎಂದು ತಿಳಿಸಿದ್ದರು. ತಿಮರಾಫುಶಿಯಲ್ಲಿ ಅನುಮತಿ ಯಿಲ್ಲದೇ ಹೆಲಿಕಾಪ್ಟರ್ ಇಳಿದಿತ್ತು ಎಂಬುದನ್ನು ಉಲ್ಲೇಖಿಸಿದ್ದರು.

ಈ ಹೇಳಿಕೆಯನ್ನು ಭಾರತ ತಳ್ಳಿಹಾಕಿದೆ. ಮಾಲ್ದೀವ್ಸ್ ರಾಷ್ಟ್ರೀಯ ರಕ್ಷಣಾ ಪಡೆಯ (ಎಂಎನ್‌ಡಿಎಫ್) ಅನುಮೋದನೆಯೊಂದಿಗೆ ಅಗತ್ಯ ಕಾರ್ಯಾಚರಣೆ ನಡೆಸಲಿದೆ ಎಂದು ರಾಯಭಾರ ಕಚೇರಿಯು ತಿಳಿಸಿದೆ. ಸಚಿವರು ಸುದ್ದಿಗೋಷ್ಠಿ-ಯಲ್ಲಿ ಉಲ್ಲೇಖಿಸಿದ್ದ ಹೆಲಿಕಾಪ್ಟರ್ ಕೂಡಾ ಪೂರ್ಣ ಅನುಮೋದನೆ ಯೊಂದಿಗೆ ಕಾರ್ಯಾಚರಣೆ ನಡೆಸಿತ್ತು ಎಂದು ಸ್ಪಷ್ಟಪಡಿಸಿದೆ.

ಸಾವಿಗೂ ಮುನ್ನ ಪತಿಯ ನೋಡಲಾಗದ ವ್ಯಥೆ

ತಿರುವನಂತಪುರ (ಪಿಟಿಐ): 'ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನ ಹಾರಾಟವು ಕೊನೆಯ ಗಳಿಗೆಯಲ್ಲಿ ರದ್ದುಗೊಂಡಿದ್ದರಿಂದಾಗಿ ವಿದೇಶದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಗಂಡನ ಯೋಗಕ್ಷೇಮ ನೋಡಿಕೊಳ್ಳಲು ಹೋಗಲು ಸಾಧ್ಯವಾಗಿಲ್ಲ. ಜೊತೆಗೆ ಅವರು ಕೊನೆಯುಸಿರೆಳೆಯುವ ಮುನ್ನವೂ ಅವರ ಮುಖ ನೋಡಲಾಗಲಿಲ್ಲ' ಎಂದು ಕೇರಳದ ಅಮೃತಾ ಎಂಬ ಮಹಿಳೆ ಕಣ್ಣೀರು ಹಾಕಿದರು.

ಒಮನ್ ರಾಜಧಾನಿ ಮಸ್ಕತ್‌ನಲ್ಲಿರುವ ಅಮೃತಾ ಅವರ ಪತಿ ಇತ್ತೀಚೆಗೆ ಹೃದಯಾಘಾತಕ್ಕೆ ಒಳಗಾಗಿ, ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅವರ ಯೋಗಕ್ಷೇಮ ನೋಡಿಕೊಳ್ಳಲು ಕೇರಳದಲ್ಲಿರುವ ಅಮೃತಾ ಅವರು ಮೇ 8ರಂದು ಒಮನ್‌ಗೆ ತೆರಳಲು ಟಿಕೆಟ್ ಕಾಯ್ದಿರಿಸಿದ್ದರು. ಆದರೆ, ಅವರು ವಿಮಾನ ನಿಲ್ದಾಣಕ್ಕೆ ತೆರಳಿದಾಗ, ವಿಮಾನ ರದ್ದುಗೊಂಡಿದೆ ಎಂಬುದು ಅವರಿಗೆ ತಿಳಿಯಿತು.

ಆಗ, ತಾವು ಮಸ್ಕತ್‌ಗೆ ಹೋಗಲೇಬೇಕು ಎಂದು ಪ್ರತಿಭಟಿಸಿದ್ದರಿಂದಾಗಿ, ಅವರಿಗೆ ಮಾರನೇ ದಿನದ ಮತ್ತೊಂದು ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನದ ಟಿಕೆಟ್ ಅನ್ನು ನೀಡಲಾಗಿತ್ತು. ದುರ-ದೃಷ್ಟವಶಾತ್ ಆ ವಿಮಾನವೂ ರದ್ದುಗೊಂಡಿತ್ತು. ಇದರಿಂದಾಗಿ ಅವರು ಒಮನ್‌ಗೆ ತೆರಳಲಾಗ-ಲಿಲ್ಲ. ಈ ನಡುವೆ, ಅವರ ಪತಿ ಮೃತಪಟ್ಟಿದ್ದಾರೆ ಎಂಬ ಸುದ್ದಿಯು ಸೋಮವಾರ ಅಮೃತಾ ಅವರ ಕುಟುಂಬವನ್ನು ತಲುಪಿದೆ.

ಕೇರಳದಿಂದ ಹೊರಡಲು ಅಮೃತಾ ವಿಮಾನದ ಟಿಕೆಟ್ ಕಾಯ್ದಿರಿಸಿದ್ದರು. ಇನ್ನೇನು ಅವರು ಕಳೆದ ವಾರ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನದ ಮೂಲಕ ಮಸ್ಕತ್ ಸೇರಬೇಕಿತ್ತು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರ ಪತಿಯೂ ಕೊನೆಯುಸಿರೆಳೆದಿದ್ದಾರೆ.

ಕ್ಯಾಬಿನ್ ಸಿಬ್ಬಂದಿ ಕೊರತೆಯಿಂದ ಮೇ 8ರಿಂದ 10ರ ಮಧ್ಯೆ ಏರ್ ಇಂಡಿಯಾ ಎಕ್ಸ್‌ಪ್ರೆಸ್‌ನ 260ಕ್ಕೂ ವಿಮಾನಗಳು ಹಾರಾಟ ನಡೆಸಿರಲಿಲ್ಲ.

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIನವರುಗಳು. 18,100- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ15,000- 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663542555/ 9663563555

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516 ಶಿವ್ಮೊಗ 8095555517

Teachers/ Professors

REQUIRED COMPUTER Science Lecturer for a Reputed College Near Bagaluru: 9035219389 hrmvs1992@gmail.com

Wanted

ಬೇಕಾಗಿದ್ದಾರೆ ಮಾತೃ ಶ್ರವಣ ದೋಷವುಳ್ಳ ಮಕ್ಕಳ ವಸತಿ ಶಾಲೆಗೆ, ಮುಖ್ಯೋಪಾಧ್ಯಾಯರು, ವಿಶೇಷ ಶಿಕ್ಷಕರು, ಅಡಿಗೆಯವರು. ಆಸಕ್ತಕರು ಸಂಪರ್ಕ ಸಬಹುದಾದ ನಂಬರ್ 9886032632, 9606272996.

ವಯಸ್ಸಾದವರನ್ನು ನೋಡಿಕೊಳ್ಳಲು ಮಹಿಳೆಯರು ಬೇಕಾಗಿದ್ದಾರೆ. 18 ವರ್ಷ ಮೆಲ್ಪಟ್ಟವರಿಗೆ ಉಚಿತ, ಊಟ ವಸತಿಯೊಂದಿಗೆ 14 ರಿಂದ 17 ಸಾವಿರ ಸಂಬಳ. ದೂರವಾಣಿ: 8139962883

ಬೇಕಾಗಿದ್ದಾರೆ: ಆಟೆಂಡರ್, ಬಸ್ ಡ್ರೈವರ್, ಸೆಕ್ಯೂರಿಟೀ ಗಾರ್ಡ್‌ಗಳು, ಆಯಾಗಳು, ಸಂಪರ್ಕಿಸಿ: ಕ್ಯಾಮ್ಲಿನ್ ಆಂಗ್ಲ ಶಾಲೆ, 6ನೇ 'ಸಿ' ಮೇನ್, 4ನೇ ಕ್ರಾಸ್, ಹಂಪಿನಗರ, ಬೆಂಗಳೂರು.

ಭವಿಷ್ಯ

Astrology

ವಿವಾಹ ಮತ್ತು ಸಂತಾನವು ನಿಮ್ಮ ಸಮಸ್ಯೆಯಾಗಿದ್ದರೆ ಭರವಸೆಯೊಂದಿಗೆ ಮುನ್ನಡೆಯಿರಿ. ವಿವರವನ್ನು ತಿಳಿಯಲು ಕರೆ ಮಾಡ ಬಯಸುವವರಿಗೆ ನಮ್ಮ ನಂಬರ್: 9446573627

ಪ್ರವಾಸ

Travel

08.06.2024, 14.06.2024 ಚಾರ್-ಧಾಮ್ ಸಮೇತಪ್ರವಾಸ. 26.06.2024 ಕಾಶಿ, ಅಯೋಧ್ಯಾ,ಬುದ್ಧಗಯಾ. 28.06.2024, 11.07.2024 ವೈಷ್ಣೋದೇವಿ,ವಾಘಬಾರ್ಡರ್, ಕಾಶ್ಮೀರ, ಗುಲ್ಮಾರ್ಗ್,ಅಮರನಾಥ್ ಇತ್ಯಾದಿ.ಸಂಪರ್ಕಿಸಿ. ಏಷ್ಯನ್ ಟ್ರಾವಲ್ ಏಜೆನ್ಸಿ, ಕೆಳಮಹಡಿ, ಬೆಂಗಳೂರು-4. 26574131, 7204173686, 8431888138

13 ದಿನಗಳ ಚಾರ್‌ಧಾಮ್ ಯಾತ್ರೆ. 10 ದಿನಗಳ ಗುಜರಾತ್. 7 ದಿನಗಳ ಕಾಶಿ,ಅಯೋಧ್ಯ 12ದಿನಗಳ ನೇಪಾಳ ಮುಕ್ತಿನಾಥ್. ಸಂಪರ್ಕಿಸಿ: ನಂದಿ ಹಾಲಿಡೇಸ್ DVG ರಸ್ತೆ, ಬೆಂಗಳೂರು.4. 9980270467 080-41467722

ಮೇ ತಿಂಗಳಿಂದ ಪ್ರತಿ ತಿಂಗಳು 8 ದಿನಗಳ ಕಾಶಿ,ಗಯಾ,ಅಯೋಧ್ಯ/ ಚಾರ್‌ಧಾಮ್, ಸಪ್ಟೆಂಬರ್ ತಿಂಗಳಲ್ಲಿ ಮುಕ್ತಿನಾಥ ನೇಪಾಳ ಮನೋಕಾಮನ ಮೌಂಟ್ ಎವರೆಸ್ಟ್, ಜನಕಪುರಿ ಅಯೋಧ್ಯ ಕಾಶಿ,ಗಯಾ. ಸಂಪರ್ಕಿಸಿ 'ಶ್ರೀಸುಧಾ ಟ್ರಾವಲ್ಸ್' 080-22429289 9448119290 9019301300

19.06.2024 09.07.2024 18.09.2024 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 07.06.2024 06.07.2024 ನೇಪಾಳ 9 ದಿನಗಳು. 07.06.2024 ಅಸ್ಸಾಂ,ಮೇಘಾಲಯ 9 ದಿನಗಳು. 13.10.2024 24.11.202407.12.2024 ರಾಜಸ್ಥಾನ 10 ದಿನಗಳು. 17.10.2024 26.11.202410.12.2024 ಗುಜರಾತ ಓಂಕಾರೇಶ್ವರ ಉಜ್ಜಯಿನಿ 8/12 ದಿನಗಳು. 5.10.2024 04.11.2024 07.12. 2024 ಕಾಶಿ,ಗಯಾ,ಅಯೋಧ್ಯ 7 ದಿನಗಳು. 17.10.2024 26.11.202410.12.2024 ಮಧ್ಯಪ್ರದೇಶ 9 ದಿನಗಳು. ರೈಲಿನಲ್ಲಿ ಪ್ರಯಾಣಿಸುವವರು 120 ದಿನಗಳ ಮುಂಚಿತವಾಗಿ ತಮ್ಮ ಸೀಟುಗಳನ್ನು ಕಾಯ್ದಿರಿಸಬೇಕು. ಇದಲ್ಲದೇ ಫಾಮಿಲಿ ಪ್ರವಾಸಿಗಳಿಗೆ ವಿಚಾರಿಸಿರಿ. ಜೈನ್ ಟ್ರಾವಲ್ಸ್ ಬೆಂಗಳೂರು03. 9448402248 7022547922

14.05.2026 ರಿಂದ 9 ದಿನಗಳು, ನೇಪಾಳ, ಕಾಶಿ, ಅಯೋಧ್ಯ, ಸೀತಾಮಡಿ, ಜನಕ್ ಪುರ, ಗಯಾ, ಮನೋಕಾಮ, 23.05.2026 ರಿಂದ 4 ದಿನಗಳು, ಧರ್ಮಸ್ಥಳ, ಹೊರನಾಡು, ಸಿಂಗದೂರು, ಮುರಡೇಶ್ವರ, ಕೊಲ್ಲೂರು, ಮಲ್ಪೆಬೀಚ್, 24.05.2026 ರಿಂದ 3 ದಿನಗಳು, ಊಟಿ, ಇಶಾ ಫೌಂಡೇಶನ್, ಕುಡುಮುಡಿ, ಪಳನಿ, 14.06.2024 ರಿಂದ 13 ದಿನಗಳು, ಚಾರಧಾಮ ಪ್ರವಾಸ, ಕೇದಾರನಾಥ, ಗಂಗೋತ್ರಿ, ಬದಿರನಾಥ, ಯಮೋನೋತ್ರಿ, ದೆಹಲಿ, ಹರಿದ್ವಾರ, 16.06.2024 ರಿಂದ 3 ದಿನಗಳು, ಶಿರಡಿ, ಪಂಡಾರಪುರ, ಕೊಡಲಸಂಗಮ, ಬಿಜಾಪುರ, ಶನಿಸಿಂಗನಪುರ, ಶ್ರೀ ಗುರುರಾಜ ಟ್ರಾವೆಲ್ಸ್. ಕೋಲಾರ: 9900124333, 8123099913, 9611082432,

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9845114560 | +91 9900428036
*Conditions apply

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಹನ್ನೊಂದನೇ ವರ್ಷದ ಪುಣ್ಯಸ್ಮರಣೆ

ಎಂ.ವಿ.ಪುಟ್ಟಪ್ಪ ಹೆಗ್ಗಡೆ ಯವರು
ಜನನ:31-12-1931 ನಿಧನ:15-05-2013
ನೀವು ನಮ್ಮನ್ನಗಲಿ ಹನ್ನೊಂದು ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಾಳದಲ್ಲಿದೆ. ನಿಮ್ಮ ದಿವ್ಯಾತ್ಮಕ್ಕೆ ಭಗವಂತನ ಪದತಲದಲ್ಲಿ ಚಿರಶಾಂತಿ ದೊರೆಯಲೆಂದು ಪ್ರಾರ್ಥಿಸುವ
ಪತ್ನಿ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು ಮತ್ತು ಎಲ್ಲಾ ಬಂಧುಬಳಗ
ಫೋನ್: 9481320229 / 9480204505 9845027001 / 9480086310

1ನೇ ವರ್ಷದ ಪುಣ್ಯಸ್ಮರಣೆ

R V ಗೋವಿಂದರಾಜು
RTD Chief Engineer B.B.M.P
ಜನನ: 22.02.59 ನಿಧನ 15.05.23
ನೀವು ನಮ್ಮನ್ನಗಲಿ ವರುಷಗಳೇ ಕಳೆದರು ನಿಮ್ಮ ನೆನಪು ಸದಾ ಹಸಿರಾಗಿದೆ
ಇಂತಿ ದುಃಖತಪ್ತ ಕುಟುಂಬವರ್ಗ

LOOKING FOR JOB OPPORTUNITY
Refer Classifieds on Wednesday

ಚಿರಸ್ಮರಣೆ



ಶ್ರೀಮತಿ ಚಿಕ್ಕಕೆಂಪಮ್ಮ ಶ್ರೀ ಮೇಣಪ್ಪ ರೆಡ್ಡಿ
ಜಮೀನುದಾರರು
ಬಂಡೆ ಬೊಮ್ಮಸಂದ್ರ, ದೊಡ್ಡಗುಬ್ಬಿ (ಅಂಚೆ)
ನಿಮ್ಮ ಔದಾರ್ಯ, ಧ್ಯೇಯ, ಪ್ರಾಮಾಣಿಕತೆ, ನಿಷ್ಠಾವಂತ ದುಡಿಮೆಯೇ ನಮ್ಮೆಲ್ಲರ ಮಾರ್ಗದರ್ಶನ, ನಿಮ್ಮ ನೆನಪೇ ನಮಗೆ ಸದಾ ದಾರಿದೀಪ
ಸದಾ ನಿಮ್ಮನ್ನು ಸ್ಮರಿಸುವ ದುಃಖತಪ್ತರು
ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಕುಟುಂಬದವರು ಮತ್ತು ವಿನ್‌ಫ್ರಾ ಗ್ರೂಪ್.

ನಿರ್ಣಾಯಕ ಪಂದ್ಯದಲ್ಲಿ ಲಖನೌ ತಂಡಕ್ಕೆ ಸೋಲು • ಡೆಲ್ಲಿ ತಂಡದ ಪ್ಲೇಆಫ್ ಆಸೆ ಜೀವಂತ

ಮಿಂಚಿದ ಇಶಾಂತ್, ಟ್ರಿಸ್ಟನ್

ನವದೆಹಲಿ (ಪಿಟಿಐ): ಅಭಿಷೇಕ್ ಪೊರೆಲ್ ಮತ್ತು ಟ್ರಿಸ್ಟನ್ ಸ್ಟಬ್ಸ್ ಅವರ ಅರ್ಧಶತಕ ಹಾಗೂ ಇಶಾಂತ್ ಶರ್ಮಾ ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ನೆರವಿನಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಮಂಗಳವಾರ ನಡೆದ ಐಪಿಎಲ್‌ನ ಹಣಾಹಣಿಯಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡವನ್ನು 19 ರನ್‌ಗಳಿಂದ ಮಣಿಸಿತು.

ಈ ಗೆಲುವಿನೊಂದಿಗೆ ಡೆಲ್ಲಿ ತಂಡವು ಲಖನೌ ತಂಡದ ಪ್ಲೇ ಆಫ್ ಕನಸನ್ನು ದೂರ ಮಾಡಿತು. ಈ ಬೆಳವಣಿಗೆಯು ರಾಜಸ್ಥಾನ ರಾಯಲ್ಸ್ ತಂಡದ ಪ್ಲೇ ಆಫ್ ಹಾದಿಯನ್ನು ಸುಗಮಗೊಳಿಸಿತು. ಕೋಲ್ಕತ್ತ ನೈಟ್ ರೈಡರ್ಸ್ ಬಳಿಕ ರಾಯಲ್ಸ್ ಪ್ಲೇ ಆಫ್‌ಗೆ ಮುನ್ನಡೆಯಿತು.

ಗೆಲ್ಲಲೇಬೇಕಾಗಿದ್ದ ಪಂದ್ಯದಲ್ಲಿ ಮುಗ್ಗರಿಸಿದ ಕೆ.ಎಲ್. ರಾಹುಲ್ ಬಳಗವು ಈ ಆವೃತ್ತಿಯ ಪ್ಲೇ ಆಫ್ ರೇಸ್‌ನಿಂದ ಬಹುತೇಕ ಹೊರಬಿದ್ದಿದೆ. ಶುಕ್ರವಾರ ಮುಂಬೈ ಇಂಡಿಯನ್ಸ್ ವಿರುದ್ಧ ಗೆದ್ದರೂ ಪ್ಲೇ ಆಫ್ ಹಾದಿ ಕಠಿಣವಾಗಿದೆ. ಮತ್ತೊಂದೆಡೆ ರಿಷಭ್ ಪಂತ್ ಬಳಗ ಆಡಿರುವ 14 ಪಂದ್ಯಗಳಲ್ಲಿ 14 ಅಂಕದೊಂದಿಗೆ ಪ್ಲೇ ಆಫ್ ಆಸೆಯನ್ನು ತುಸು ಜೀವಂತವಾಗಿರಿಸಿದೆ. ಆದರೆ, ಉಳಿದ ಪಂದ್ಯಗಳ ಫಲಿತಾಂಶದ ಮೇಲೆ ಅದು ಅವಲಂಬಿತವಾಗಿದೆ.

ಸನ್‌ರೈಸರ್ಸ್ ಹೈದರಾಬಾದ್ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ಕೂಡ ತಲಾ 14 ಅಂಕಗಳನ್ನು ಹೊಂದಿವೆ. ಬಾಕಿ ಇರುವ ಎರಡು ಪಂದ್ಯಗಳಲ್ಲಿ ಒಂದನ್ನು ಗೆದ್ದರೆ ಹೈದರಾಬಾದ್ ಪ್ಲೇ ಆಫ್‌ಗೆ ಮುನ್ನಡೆಯಲಿದೆ. ಹೀಗಾಗಿ, ನಾಲ್ಕನೇ ತಂಡಕ್ಕಾಗಿ ಪೈಪೋಟಿ ಏರ್ಪಟ್ಟಿದೆ. ಶನಿವಾರ ನಡೆಯುವ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ರಾಯಲ್ಸ್ ಚಾಲೆಂಜರ್ಸ್ ಬೆಂಗಳೂರು ನಡುವಿನ ಪಂದ್ಯವೇ ಇದೀಗ ನಿರ್ಣಾಯಕವಾಗಲಿದೆ.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 209 ರನ್‌ಗಳ ಗೆಲುವಿನ ಗುರಿಯನ್ನು ಬೆನ್ನಟ್ಟಿದ ಲಖನೌ ತಂಡಕ್ಕೆ ಮಧ್ಯಮ ಕ್ರಮಾಂಕದಲ್ಲಿ ನಿಕೋಲಸ್ ಪೂರನ್ (61; 27ಎ, 4x6, 6x4) ಆಸರೆಯಾದರೆ, ಕೊನೆಯ ಹಂತದಲ್ಲಿ ಅರ್ಷದ್ ಖಾನ್ (ಔಟಾಗದೇ 58, 33ಎ, 4x3, 6x5) ಹೋರಾಟ ನಡೆಸಿದರು. ಆದರೆ, ಅವರಿಗೆ ಉಳಿದ ಆಟಗಾರರಿಂದ ಬೆಂಬಲ ಸಿಗಲಿಲ್ಲ. ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗೆ 189 ರನ್ ಗಳಿಸಿ ಸವಾಲು ಮುಗಿಸಿತು.

ಡೆಲ್ಲಿ ಕ್ಯಾಪಿಟಲ್ಸ್ ತಂಡದ ಬ್ಯಾಟರ್ ಟ್ರಿಸ್ಟನ್ ಸ್ಟಬ್ಸ್ –ಪಿಟಿಐ ಚಿತ್ರ

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ಕೋಲ್ಕತ್ತ ನೈಟ್ ರೈಡರ್ಸ್	13	9	3	19	1.428
ರಾಜಸ್ಥಾನ ರಾಯಲ್ಸ್	12	8	4	16	0.349
ಚೆನ್ನೈ ಸೂಪರ್ ಕಿಂಗ್ಸ್	13	7	6	14	0.528
ಸನ್‌ರೈಸರ್ಸ್ ಹೈದರಾಬಾದ್	12	7	5	14	0.406
ಡೆಲ್ಲಿ ಕ್ಯಾಪಿಟಲ್ಸ್	14	7	7	14	-0.377
ಆರ್‌ಸಿಬಿ	13	6	7	12	0.387
ಲಖನೌ ಸೂಪರ್ ಜೈಂಟ್ಸ್	13	6	7	12	-0.787
ಗುಜರಾತ್ ಟೈಟನ್ಸ್	13	5	7	11	-1.063
ಮುಂಬೈ ಇಂಡಿಯನ್ಸ್	13	4	9	8	-0.271
ಪಂಜಾಬ್ ಕಿಂಗ್ಸ್	12	4	8	8	-0.423

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (661)

ಪರ್ಪಲ್ ಕ್ಯಾಪ್: ಜಸ್‌ಪ್ರೀತ್ ಬೂಮ್ರಾ, ಹರ್ಷಲ್ ಪಟೇಲ್ (ತಲಾ 20 ವಿಕೆಟ್)

ಈ ಪಂದ್ಯದಲ್ಲೂ ಲಖನೌ ತಂಡದ ಆರಂಭ ಉತ್ತಮವಾಗಿರಲಿಲ್ಲ. ಮೊದಲ ಓವರ್‌ನಲ್ಲೇ ಕೆ.ಎಲ್. ರಾಹುಲ್ (5) ವಿಕೆಟ್ ಒಪ್ಪಿಸಿದರೆ, ಮೂರನೇ ಓವರ್‌ನಲ್ಲಿ ಕ್ವಿಂಟನ್ ಡಿ ಕಾಕ್ (12) ಔಟಾದರು. ಈ ಎರಡೂ ವಿಕೆಟ್‌ಗಳು ಇಶಾಂತ್ ಶರ್ಮಾ ಪಾಲಾದವು. ನಂತರದ ಬಂದ ಮಾರ್ಕಸ್ ಸ್ಟೊಯಿನಿಸ್ (5) ಮತ್ತು ದೀಪಕ್ ಹೂಡಾ (0) ಬೇಗನೇ ನಿರ್ಗಮಿಸಿದರು. ಹೀಗಾಗಿ, ತಂಡದ ಮೊತ್ತ 44 ಆಗುವಷ್ಟರಲ್ಲಿ ಪ್ರಮುಖ ನಾಲ್ಕು ವಿಕೆಟ್‌ಗಳು ಕಳೆದುಕೊಂಡಿತು.

ಆದರೆ, ಈ ಹಂತದಲ್ಲಿ ಪೂರನ್ ಮಿಂಚಿನ ಅರ್ಧಶತಕ ಗಳಿಸಿ ತಂಡದ ಮೊತ್ತವನ್ನು ಬೆಳೆಸಿದರು. ಕೊನೆಯ ಹಂತದಲ್ಲಿ ಐದು ಭರ್ಜರಿ ಸಿಕ್ಸರ್ ಸಿಡಿದ ಅರ್ಷದ್ ಏಕಾಂಗಿಯಾಗಿ ಪ್ರತಿರೋಧ ತೋರಿದರು. ಇಶಾಂತ್ ಶರ್ಮಾ ಮೂರು ವಿಕೆಟ್ ಪಡೆದು ಮಿಂಚಿದರು.

ಇದಕ್ಕೂ ಮೊದಲು ಟಾಸ್ ಗೆದ್ದ ಲಖನೌ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಅರ್ಷದ್ ಖಾನ್ ಬೌಲಿಂಗ್ ಮಾಡಿದ ಮೊದಲ ಓವರ್‌ನ ಎರಡನೇ ಎಸೆತದಲ್ಲಿಯೇ ಜೇಕ್ ಫ್ರೇಸರ್ ಮೆಕ್‌ಗುರ್ಕ್ ವಿಕೆಟ್ ಗಳಿಸಿದರು.

ಈ ಹಂತದಲ್ಲಿ ಜೊತೆಗೂಡಿದ ಅಭಿಷೇಕ್ ಪೊರೆಲ್ (58, 33ಎ) ಹಾಗೂ ಶಾಯ್ ಹೋಪ್ (38 ರನ್) ಎರಡನೇ ವಿಕೆಟ್ ಜೊತೆಯಾಟದಲ್ಲಿ 92 (49 ಎಸೆತ) ರನ್ ಸೇರಿಸಿ ತಂಡಕ್ಕೆ ಚೇತರಿಕೆ ನೀಡಿದರು. ನಂತರ ನಾಯಕ ರಿಷಭ್ ಪಂತ್ (33 ರನ್) ಕೂಡ ಉಪಯುಕ್ತ ಕಾಣಿಕೆ ನೀಡಿದರು.

ಅಭಿಷೇಕ್ ಆರು ಬೌಂಡರಿ ಮತ್ತು ನಾಲ್ಕು ಸಿಕ್ಸರ್ ಹೊಡೆದರು. ಅವರ ಆಟದಿಂದಾಗಿ ತಂಡಕ್ಕೆ ಪವರ್‌ಪ್ಲೇನಲ್ಲಿ 73 ರನ್ ಹರಿದುಬಂದವು. 9ನೇ ಓವರ್‌ನಲ್ಲಿ ರವಿ ಬಿಷ್ಣೋಯಿ ಅವರು ಶಾಯ್ ಹೋಪ್ ವಿಕೆಟ್ ಗಳಿಸಿ, ಜೊತೆಯಾಟ ಮುರಿದರು. ಎರಡು ಓವರ್‌ಗಳ ನಂತರ ಪೊರೆಲ್ ಕೂಡ ಔಟಾದರು. ಈ ಹಂತದಲ್ಲಿ ಬೌಲರ್‌ಗಳು ಹಿಡಿತ ಸಾಧಿಸುವ ಪ್ರಯತ್ನದಲ್ಲಿದ್ದರು. ಆದರೆ ಈ ಸಂದರ್ಭದಲ್ಲಿ ಟ್ರಿಸ್ಟನ್ ಸ್ಟಬ್ಸ್ (ಅಜೇಯ 57; 25ಎಸೆತ) ಅವರು ಅಬ್ಬರಿಸಿದರು. 228ರ ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟ್ ಬೀಸಿದ ಟ್ರಿಸ್ಟನ್ ನಾಲ್ಕು ಸಿಕ್ಸರ್ ಸಿಡಿಸಿದರು. ಹೀಗಾಗಿ, ಡೆಲ್ಲಿ ಕ್ಯಾಪಿಟಲ್ಸ್ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 208 ರನ್ ಗಳಿಸಿತು.

ಸ್ಕೋರ್ ಕಾರ್ಡ್

ಡೆಲ್ಲಿ ಕ್ಯಾಪಿಟಲ್ಸ್: 4 ವಿಕೆಟ್‌ಗೆ 208 (20 ಓವರುಗಳಲ್ಲಿ)
ಪೊರೆಲ್ ಸಿ ಪೂರನ್ ಬಿ ನವೀನ್ 58 (33ಎ, 4x5, 6x4)
ಮೆಕ್‌ಗುರ್ಕ್ ಸಿ ನವೀನ್ ಬಿ ಅರ್ಷದ್ 0 (2ಎ)
ಹೋಪ್ ಸಿ ರಾಹುಲ್ ಬಿ ಬಿಷ್ಣೋಯಿ 38 (27, 4x3, 6x2)
ಪಂತ್ ಸಿ ಹೂಡಾ ಬಿ ನವೀನ್ 33 (23ಎ, 4x5)
ಸ್ಟಬ್ಸ್ ಔಟಾಗದೇ 57 (25ಎ, 4x3, 6x4)
ಅಕ್ಷರ್ ಔಟಾಗದೇ 14 (10ಎ, 4x2)
ಇತರೆ: 8 (ವೈಡ್ 8)
ವಿಕೆಟ್ ಪತನ: 1-2 (ಜೇಕ್ ಫ್ರೇಸರ್ ಮೆಕ್‌ಗುರ್ಕ್, 0.2), 2-94 (ಶಾಯ್ ಹೋಪ್, 8.3), 3-111 (ಅಭಿಷೇಕ್ ಪೊರೆಲ್, 11.1), 4-158 (ರಿಷಭ್ ಪಂತ್, 16.2).
ಬೌಲಿಂಗ್: ಅರ್ಷದ್ ಖಾನ್ 3-0-45-1; ಮೊಹ್ಸಿನ್ ಖಾನ್ 4-0-29-0; ಯುದ್ಧವೀರ್ ಸಿಂಗ್ 2-0-28-0; ನವೀನ್-ಉಲ್-ಹಕ್ 4-0-51-2; ರವಿ ಬಿಷ್ಣೋಯಿ 4-0-26-1; ಕೃಣಾಲ್ ಪಾಂಡ್ಯ 2-0-20-0; ದೀಪಕ್ ಹೂಡಾ 1-0-9-0.

ಲಖನೌ ಸೂಪರ್ ಜೈಂಟ್ಸ್ 9ಕ್ಕೆ 189 (20 ಓವರ್‌ಗಳಲ್ಲಿ)
ಡಿ ಕಾಕ್ ಸಿ ಮುಕೇಶ್ ಬಿ ಶರ್ಮಾ 12 (8ಎ. 4x2)
ರಾಹುಲ್ ಸಿ ಮುಕೇಶ್ ಬಿ ಶರ್ಮಾ 5 (3ಎ, 4x1)
ಸ್ಟೊಯಿನಿಸ್ ಸ್ಟಂಪ್ಸ್ ಪಂತ್ ಬಿ ಪಟೇಲ್ 5 (7ಎ, 4x1)
ಹೂಡಾ ಎಲ್‌ಬಿಡಬ್ಲ್ಯು ಬಿ ಶರ್ಮಾ 0 (2ಎ)
ಪೂರನ್ ಸಿ ಪಟೇಲ್ ಬಿ ಮುಕೇಶ್ 61 (27ಎ, 4x6, 6x4)
ಆಯುಷ್ ಸಿ ಗುಲ್ಬದಿನ್ ಬಿ ಸ್ಟಬ್ಸ್ 6 (9ಎ)
ಕೃಣಾಲ್ ಸ್ಟಂಪ್ಸ್ ಪಂತ್ ಬಿ ಕುಲದೀಪ್ 18 (18ಎ, 4x2)
ಅರ್ಷದ್ ಖಾನ್ ಔಟಾಗದೇ 58 (33ಎ, 4x3, 6x5)
ಯುದ್ಧವೀರ್ ಸಿ ಹೋಪ್ ಬಿ ಅಹಮ್ಮದ್ 14 (7ಎ, 4x1, 6x1)
ಬಿಷ್ಣೋಯಿ ರನ್‌ಔಟ್ (ಮೆಕ್‌ಗುರ್ಕ್) 2 (2ಎ)
ನವೀನ್ ಔಟಾಗದೇ 2 (4ಎ)
ಇತರೆ: 6 (ಲೆಗ್‌ಬೈ 1, ವೈಡ್ 5)
ವಿಕೆಟ್ ಪತನ: 1-7 (ಕೆ.ಎಲ್. ರಾಹುಲ್, 0.5), 2-24 (ಕ್ವಿಂಟನ್ ಡಿ ಕಾಕ್, 2.5), 3-24 (ಮಾರ್ಕಸ್ ಸ್ಟೊಯಿನಿಸ್, 3.1), 4-44 (ದೀಪಕ್ ಹೂಡಾ, 4.1), 5-71 (ಆಯುಷ್ ಬದೋನಿ, 7.3), 6-101 (ನಿಕೋಲಸ್ ಪೂರನ್, 11.1), 7-134 (ಕೃಣಾಲ್ ಪಾಂಡ್ಯ, 14.4), 8-167 (ಯುದ್ಧವೀರ್ ಸಿಂಗ್, 16.6), 9-183 (ರವಿ ಬಿಷ್ಣೋಯಿ, 18.3)
ಬೌಲಿಂಗ್: ಇಶಾಂತ್ ಶರ್ಮಾ 4-0-34-3, ಖಲೀಲ್ ಅಹಮ್ಮದ್ 2-0-22-1,ಅಕ್ಷರ್ ಪಟೇಲ್ 1-0-20-1, ಮುಕೇಶ್ ಕುಮಾರ್ 4-0-33-1, ಕುಲದೀಪ್ ಯಾದವ್ 4-0-33-1, ಟ್ರಿಸ್ಟನ್ ಸ್ಟಬ್ಸ್ 1-0-4-1, ಗುಲ್ಬದಿನ್ ನಾಯಬ್ 1-0-12-0, ರಸಿಕ್ ಸಲಾಂ 3-0-30-0
ಪಂದ್ಯದ ಆಟಗಾರ: ಇಶಾಂತ್ ಶರ್ಮಾ

ಪರಾಗ್ ತವರಿನಲ್ಲಿ ರಾಜಸ್ಥಾನ ರಾಯಲ್ಸ್‌ಗೆ ಜಯದ ವಿಶ್ವಾಸ

ಸಂಜು ಸ್ಯಾಮ್ಸನ್ ಬಳಗಕ್ಕೆ ಇಂದು ಪಂಜಾಬ್ ಎದುರಾಳಿ

ರಿಯಾನ್ ಪರಾಗ್
–ಪಿಟಿಐ ಚಿತ್ರಗಳು

ಆಶುತೋಷ್ ಶರ್ಮಾ

ಗುವಾಹಟಿ (ಪಿಟಿಐ): ರಿಯಾನ್ ಪರಾಗ್ ಅವರ ತವರೂರಿನಲ್ಲಿ ರಾಜಸ್ಥಾನ ರಾಯಲ್ಸ್ ತಂಡವು ಬುಧವಾರ ನಡೆಯುವ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡವನ್ನು ಎದುರಿಸಲಿದೆ.

ಅಂಕಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿರುವ ರಾಜಸ್ಥಾನ ತಂಡದ ಗೆಲುವುಗಳಲ್ಲಿ ರಿಯಾನ್ ಕಾಣಿಕೆ ಮಹತ್ವದ್ದಾಗಿದೆ. ತಂಡಕ್ಕೆ ಗುವಾಹಟಿಯು ಎರಡನೇ ತವರು ತಾಣವಾಗಿದೆ. ಕಳೆದ ಆರು ವರ್ಷಗಳಿಂದ ತಂಡದಲ್ಲಿರುವ ರಿಯಾನ್ ಅವರ ಆಟ ಪರಿಪಕ್ವಗೊಳ್ಳುತ್ತಿದೆ. ಈ ಸಲದ ಟೂರ್ನಿಯಲ್ಲಿ ಅವರು 153ರ ಸ್ಟ್ರೈಕ್‌ರೇಟ್‌ನಲ್ಲಿ 483 ರನ್ ಗಳಿಸಿದ್ದಾರೆ.

ಮುಂದಿನ ಅಂತರರಾಷ್ಟ್ರೀಯ ಟಿ20 ಸರಣಿಗಳಲ್ಲಿ ಭಾರತ ತಂಡದಲ್ಲಿ ಆಯ್ಕೆಯಾಗಲು ಅರ್ಹತೆ ಇರುವ ಆಟಗಾರನಾಗಿ ರಿಯಾನ್ ಬೆಳೆದಿದ್ದಾರೆ. ಭಾರತ ತಂಡದಲ್ಲಿ ಆಡುವ ಈಶಾನ್ಯ ಭಾರತದ ಮೊಟ್ಟಮೊದಲ ಆಟಗಾರನಾಗಲು 22 ವರ್ಷದ ರಿಯಾನ್ ಅವರೂ ಕಾತರಿಸಿದ್ದಾರೆ.

ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಆಡಲಿರುವ ಭಾರತ ತಂಡಕ್ಕೆ ಆಯ್ಕೆಯಾಗಿರುವ ಸಂಜು ಸ್ಯಾಮ್ಸನ್ ನಾಯಕತ್ವದ ರಾಯಲ್ಸ್ ಬಳಗವು ಪ್ಲೇ ಆಫ್‌ಗೆ ಎರಡನೇ ತಂಡವಾಗಿ ಮುನ್ನಡೆದಿದೆ.

19 ಅಂಕಗಳೊಂದಿಗೆ ಕೆಕೆಆರ್ ತಂಡವು ಈಗಾಗಲೇ ಮೊದಲ ಸ್ಥಾನ ಪಡೆದು ಪ್ಲೇ ಆಫ್ ಪ್ರವೇಶಿಸಿಯಾಗಿದೆ. 16 ಅಂಕ ಗಳಿಸಿರುವ ರಾಜಸ್ಥಾನ ತಂಡವು ಈ ಪಂದ್ಯದಲ್ಲಿ ಗೆದ್ದು ಲೀಗ್ ಅಭಿಯಾನವನ್ನು ಮುಗಿಸುವ ಹುಮ್ಮಸ್ಸಿನಲ್ಲಿದೆ.

ತನ್ನ ಕಳೆದ ಪಂದ್ಯದಲ್ಲಿ ರಾಯಲ್ಸ್ ತಂಡವು ಚೆನ್ನೈ ಸೂಪರ್ ಕಿಂಗ್ಸ್ ಎದುರು ಸೋತಿತ್ತು. ಈಗ ಜಯದ ಹಾದಿಗೆ ಮರಳಬೇಕಿದೆ. ಜೋಸ್ ಬಟ್ಲರ್ ಅವರು ಇಂಗ್ಲೆಂಡ್‌ಗೆ ಮರಳಿರುವುದರಿಂದ ಉತ್ತಮ ಆರಂಭ ನೀಡುವ ಹೊಣೆ ಯಶಸ್ವಿ ಜೈಸ್ವಾಲ್ ಮೇಲೆ ಹೆಚ್ಚಿದೆ. ಸಂಜು, ಪರಾಗ್, ಶಿಮ್ರಾನ್ ಹೆಟ್ಮೆಯರ್ ಅವರೂ ಹೆಚ್ಚು ರನ್ ಗಳಿಸಬೇಕು. ಬೌಲಿಂಗ್ ವಿಭಾಗ ಉತ್ತಮವಾಗಿದೆ.

ಸ್ಪಿನ್ನರ್ ಯಜುವೇಂದ್ರ ಚಾಹಲ್, ಆರ್. ಅಶ್ವಿನ್ ಹಾಗೂ ವೇಗಿ ಟ್ರೆಂಟ್ ಬೌಲ್ಟ್ ಅವರು ಪಂಜಾಬ್ ಕಿಂಗ್ಸ್ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕಬಲ್ಲ ಸಮರ್ಥರು.

ಈಗಾಗಲೇ ಪ್ಲೇಆಫ್ ಹಾದಿಯಿಂದ ಹೊರಬಿದ್ದಿರುವ ಪಂಜಾಬ್ ತಂಡವು ಸಮಾಧಾನಕರ ಗೆಲುವಿಗಾಗಿ ಆಡಲಿದೆ. ಈ ತಂಡಕ್ಕೂ ಜಾನಿ ಬೆಸ್ಟೊ ಹಾಗೂ ಲಿಯಾಮ್ ಲಿವಿಂಗ್‌ಸ್ಟೋನ್ ಅವರು ಅಲಭ್ಯತೆ ಕಾಡಲಿದೆ. ಪ್ರಭಸಿಮ್ರನ್ ಸಿಂಗ್, ಶಶಾಂಕ್ ಸಿಂಗ್, ಆಶುತೋಷ್ ಶರ್ಮಾ, ರಿಲೀ ರೊಸೊ ಹಾಗೂ ಆಲ್‌ರೌಂಡರ್ ಸ್ಯಾಮ್ ಕರನ್ ಅವರ ಮೇಲೆ ಬ್ಯಾಟಿಂಗ್ ವಿಭಾಗದ ಹೊಣೆ ಇದೆ. ಗಾಯಗೊಂಡಿರುವ ಶಿಖರ್ ಧವನ್ ಅವರ ಗೈರುಹಾಜರಿಯೂ ತಂಡಕ್ಕೆ ಕಾಡುತ್ತಿದೆ. ಹರ್ಷಲ್ ಪಟೇಲ್, ಅರ್ಷದೀಪ್ ಸಿಂಗ್ ಹಾಗೂ ಕನ್ನಡಿಗ ವಿದ್ವತ್ ಕಾವೇರಪ್ಪ ಅವರಿಗೆ ತಮ್ಮ ಪ್ರತಿಭೆ ತೋರಲು ಇದೊಂದು ಅವಕಾಶವಾಗಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಸಿನಿಮಾ ಆ್ಯಪ್

‘ನಿಕಟ ಪೈಪೋಟಿಯ ಪಂದ್ಯಗಳ ಸಂಖ್ಯೆಯಲ್ಲಿ ಹೆಚ್ಚಳ’

ಇಂಪ್ಯಾಕ್ಟ್ ಪ್ಲೇಯರ್: ಶಾಸ್ತ್ರಿ ಬೆಂಬಲ



ರವಿ ಶಾಸ್ತ್ರಿ

ಆರ್. ಅಶ್ವಿನ್

ಚೆನ್ನೈ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ‘ಇಂಪ್ಯಾಕ್ಟ್ ಪ್ಲೇಯರ್’ ನಿಯಮ ಈ ಬಾರಿ ಟೀಕೆಗಳನ್ನು ಎದುರಿಸಿರಬಹುದು. ಆದರೆ ಭಾರತ ತಂಡದ ವೀಕ್ಷಣೆ ವಿವರಣೆಗಾರ ರವಿ ಶಾಸ್ತ್ರಿ ಮತ್ತು ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಅವರು ಬೆಂಬಲಕ್ಕೆ ನಿಂತಿದ್ದು, ಈ ನಿಯಮದಿಂದ ಪಂದ್ಯಗಳಲ್ಲಿ ನಿಕಟ ಪೈಪೋಟಿ ಏರ್ಪಡುತ್ತಿದೆ ಎಂದಿದ್ದಾರೆ.

ಕಳೆದ ಋತುವಿನಲ್ಲಿ ಜಾರಿಗೆ ಬಂದಿದ್ದ ಈ ನಿಯಮ ಈ ಬಾರಿ ಹೆಚ್ಚು ಚರ್ಚೆಗೆ ಒಳಗಾಗಿದೆ. ಈ ನಿಯಮದಿಂದಾಗಿ ಆಲ್‌ರೌಂಡರ್‌ಗಳ ಔಚಿತ್ಯ ಕಡಿಮೆಯಾಗುತ್ತಿದೆ ಎಂದು ಕೆಲವು ತಜ್ಞರು ಮತ್ತು ಹಾಲಿ ಆಟಗಾರರು ಕಳವಳ ವ್ಯಕ್ತಪಡಿಸಿದ್ದಾರೆ.

‘ಹೊಸ ನಿಯಮ ಏನಾದರೂ ಬಂದಾಗ, ಅದು ಯಾಕೆ ಸರಿಯಲ್ಲ ಎಂಬ ಸಮರ್ಥನೆಗೆ ಕೆಲವರು ಮುಂದಾಗುತ್ತಾರೆ’ ಎಂದು ಶಾಸ್ತ್ರಿ ಹೇಳಿದರು. ‘ಕಾಲಕ್ಕೆ ತಕ್ಕಂತೆ ಆಟವೂ ಬೆಳವಣಿಗೆಯಾಗುತ್ತದೆ’ ಎಂದು ಶಾಸ್ತ್ರಿ ನಿಯಮದ ಪರ ಮಾತನಾಡಿದರು.

‘ಇಂಪ್ಯಾಕ್ಟ್ ಪ್ಲೇಯರ್ ನಿಯಮ ಉತ್ತಮವಾಗಿದೆ. ಕಾಲ ಬದಲಾದ ಹಾಗೆ ನಾವೂ ಹೊಂದಿಕೊಳ್ಳಬೇಕಾಗುತ್ತದೆ. ಇತರ ಕ್ರೀಡೆಗಳಲ್ಲೂ ಪರಿವರ್ತನೆ ಕಾಣಬಹುದು’ ಎಂದು ಆರ್. ಅಶ್ವಿನ್ ತಮ್ಮ ಯು ಟ್ಯೂಬ್ ಚಾನೆಲ್‌ನಲ್ಲಿ ಅಭಿಪ್ರಾಯಪಟ್ಟಿದ್ದಾರೆ.

‘ಇದು ಉತ್ತಮ ನಿಯಮವೆಂದು ನನ್ನ ಭಾವನೆ. ಕಳೆದ ಬಾರಿಯ ಐಪಿಎಲ್‌ನಲ್ಲಿ ನಿಕಟ ಅಂತ್ಯ ಕಂಡ ಪಂದ್ಯಗಳಿದ್ದವು. ಇದರಿಂದ ಸಾಕಷ್ಟು ಪರಿಣಾಮವಾಗು ತ್ತಿದೆ’ ಎಂದು ಆಫ್ ಸ್ಪಿನ್ನರ್ ಹೇಳಿದರು.

‘ಈ ನಿಯಮ ಶಾಶ್ವತವೇನಲ್ಲ. ಪರೀಕ್ಷಾರ್ಥವಾಗಿ ಅಳವಡಿಸಿದ್ದೇವಷ್ಟೇ’ ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಇತ್ತೀಚೆಗೆ ಹೇಳಿದ್ದರು.

ಭಾರತ ತಂಡದ ನಾಯಕ ರೋಹಿತ್ ಶರ್ಮಾ, ಡೆಲ್ಲಿ ಕ್ಯಾಪಿಟಲ್ಸ್ ತಂಡದ ಸ್ಪಿನ್ನರ್ ಅಕ್ಷರ್ ಪಟೇಲ್, ಮುಕೇಶ್ ಕುಮಾರ್ ಕೂಡ ಈ ನಿಯಮದ ಬಗ್ಗೆ ಅತೃಪ್ತಿ ಹೊಂದಿದ್ದಾರೆ.

‘ಆಲ್‌ರೌಂಡರ್‌ಗಳ ಬೆಳವಣಿಗೆಯನ್ನು ಈ ನಿಯಮ ಕುಂಠಿತಗೊಳಿಸುತ್ತದೆ. ಕ್ರಿಕೆಟ್ ಆಟ 11 ಮಮದಿ ಆಡುತ್ತಾರೆ. 12 ಮಂದಿ ಅಲ್ಲ’ ಎಂದು ರೋಹಿತ್ ಅಭಿಪ್ರಾಯಪಟ್ಟಿದ್ದರು.

ವಿಶ್ವಕಪ್: ಗಯಾನದಲ್ಲಿ 2ನೇ ಸೆಮಿ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡವು ಮುಂಬರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದರೆ, ಜೂನ್ 27ರಂದು ಗಯಾನದಲ್ಲಿ ಆಡಲಿದೆ.

‘ಭಾರತ ನಾಲ್ಕರ ಘಟ್ಟ ಪ್ರವೇಶಿಸಿದರೆ ಎರಡನೇ ಸೆಮಿಫೈನಲ್‌ನಲ್ಲಿ ಆಡಬೇಕಾಗುತ್ತದೆ. ಆ ಪಂದ್ಯವು ಗಯಾನದಲ್ಲಿ ನಡೆಯಲಿದೆ’ ಎಂದು ಐಸಿಸಿ ಮೂಲಗಳು ಹೇಳಿವೆ.

ಅಮೆರಿಕ ಮತ್ತು ವೆಸ್ಟ್ ಇಂಡೀಸ್ ಜಂಟಿ ಆತಿಥ್ಯದಲ್ಲಿ ಈ ಟೂರ್ನಿ ನಡೆಯಲಿದೆ. ಬಾರ್ಬಡೊಸ್‌ನಲ್ಲಿ ನಡೆಯುವ ಫೈನಲ್ (ಜೂನ್ 29) ಪಂದ್ಯಕ್ಕೆ ಮಾತ್ರ ಒಂದು ಮೀಸಲು ದಿನವನ್ನು (ಜೂ 30) ಕಾಯ್ದಿರಿಸಲಾಗಿದೆ. ಟೂರ್ನಿಯ ಮೊದಲ ಸೆಮಿಫೈನಲ್ (ಜೂ 26) ಟ್ರಿನಿಡಾಡ್‌ನಲ್ಲಿ ನಡೆಯಲಿದೆ. ಗಯಾನದಲ್ಲಿ ನಡೆಯುವ ಸೆಮಿಫೈನಲ್ ಹಗಲು ಹೊತ್ತಿನ ಪಂದ್ಯವಾಗಿದೆ.

ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಸ್ಥಾನ

ದ್ರಾವಿಡ್ ಸ್ಥಾನ ತುಂಬುವರೇ ಲಕ್ಷ್ಮಣ್?

ವಿವಿಎಸ್ ಲಕ್ಷ್ಮಣ್

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಸ್ಥಾನಕ್ಕೆ ಪುನರಾಯ್ಕೆಗಾಗಿ ರಾಹುಲ್ ದ್ರಾವಿಡ್ ಅವರು ಮನಸ್ಸು ಮಾಡದಿದ್ದರೆ, ವಿವಿಎಸ್ ಲಕ್ಷ್ಮಣ್ ಅವರು ನೇಮಕವಾಗುವ ಸಾಧ್ಯತೆ ದಟ್ಟವಾಗಿದೆ.

ಟಿ20 ವಿಶ್ವಕಪ್ ಟೂರ್ನಿಯ ನಂತರ ದ್ರಾವಿಡ್ ಅವರ ಕಾರ್ಯಾವಧಿ ಮುಗಿಯಲಿದೆ. ನೂತನ ಕೋಚ್ ಆಯ್ಕೆಗೆ ಬಿಸಿಸಿಐ ಅರ್ಜಿಯನ್ನೂ ಆಹ್ವಾನಿಸಿದೆ. ಒಂದೊಮ್ಮೆ ದ್ರಾವಿಡ್ ಅವರು ಕೋಚ್ ಆಗಿ ಮುಂದುವರಿಯಲು ಬಯಸಿದರೆ, ಮತ್ತೊಮ್ಮೆ ಅರ್ಜಿ ಹಾಕಿ ಪ್ರಕ್ರಿಯೆಯ ಮೂಲಕವೇ ಆಯ್ಕೆಯಾಗಬೇಕು ಎಂದು ಈಚೆಗೆ ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಹೇಳಿದ್ದರು.

ಅರ್ಜಿ ಹಾಕಲು ಮೇ 27ರವರೆಗೆ ಸಮಯ ನಿಗದಿಪಡಿಸಲಾಗಿದೆ. ಕಳೆದ ಮೂರು ವರ್ಷಗಳಿಂದ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ) ಮುಖ್ಯಸ್ಥರಾಗಿರುವ ಲಕ್ಷ್ಮಣ್ ಅವರು ಭಾರತ ತಂಡದಲ್ಲಿ ದ್ರಾವಿಡ್ ಅವರೊಂದಿಗೆ ಆಡಿದವರು. 49 ವರ್ಷದ ಲಕ್ಷ್ಮಣ್ ಅವರು ಕೋಚ್ ಆಗಿಯೂ ಅನುಭವ ಹೊಂದಿದ್ದಾರೆ.

ಭಾರತ ತಂಡದ ಮಾಜಿ ಆಟಗಾರ ಗೌತಮ್ ಗಂಭೀರ್, ಆಸ್ಟ್ರೇಲಿಯಾದ ಜಸ್ಟಿನ್ ಲ್ಯಾಂಗರ್ ಹಾಗೂ ಐಪಿಎಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಕೋಚ್ ಆಗಿರುವ ಸ್ಟೀಫನ್ ಫ್ಲೆಮಿಂಗ್ ಅವರೂ ಕೋಚ್ ಸ್ಥಾನಕ್ಕಾಗಿ ಅರ್ಜಿ ಸಲ್ಲಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

ದಕ್ಷಿಣ ಆಫ್ರಿಕಾ ಮಹಿಳಾ ತಂಡ ಪ್ರವಾಸ

ನವದೆಹಲಿ (ಪಿಟಿಐ): ದಕ್ಷಿಣ ಆಫ್ರಿಕಾ ಮಹಿಳಾ ಕ್ರಿಕೆಟ್ ತಂಡವು ಜೂನ್ 16 ರಿಂದ ಜುಲೈ 9ರ ವರೆಗೆ ಭಾರತ ಪ್ರವಾಸ ಕೈಗೊಳ್ಳಲಿದ್ದು, ದಶಕದ ಬಳಿಕ ಟೆಸ್ಟ್, ಏಕದಿನ ಹಾಗೂ ಟಿ20 ಪಂದ್ಯಕ್ಕೆ ಭಾರತ ಆತಿಥ್ಯ ವಹಿಸಲಿದೆ.

ಈ ಸರಣಿಯು ಒಂದು ಟೆಸ್ಟ್, ಮೂರು ಏಕದಿನ ಮತ್ತು ಟಿ20 ಪಂದ್ಯಗಳನ್ನು ಒಳಗೊಂಡಿದೆ ಎಂದು ಬಿಸಿಸಿಐ ಮಂಗಳವಾರ ಪ್ರಕಟಿಸಿದೆ.

ಏಕದಿನ ಪಂದ್ಯಗಳು (ಜೂನ್ 16, 19, 23) ಬೆಂಗಳೂರಿನಲ್ಲಿ ನಡೆಯಲಿದ್ದು, ಏಕೈಕ ಟೆಸ್ಟ್ (ಜೂನ್ 28–ಜುಲೈ1) ಮತ್ತು ಟಿ20 ಪಂದ್ಯಗಳು (ಜುಲೈ 5, 7, 9) ಚೆನ್ನೈನಲ್ಲಿ ನಡೆಯಲಿವೆ. ಉಭಯ ತಂಡಗಳು ಕೊನೆಯ ಬಾರಿಗೆ 2014ರ ನವೆಂಬರ್‌ನಲ್ಲಿ ಟೆಸ್ಟ್ ಪಂದ್ಯವನ್ನಾಡಿದ್ದವು.

ಸರಣಿಯು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಜೂನ್ 13ರಂದು ಏಕದಿನ ಅಭ್ಯಾಸ ಪಂದ್ಯದೊಂದಿಗೆ ಪ್ರಾರಂಭವಾಗಲಿದ್ದು, ಅಲ್ಲಿ ಪ್ರವಾಸಿ ತಂಡವು, ಮಂಡಳಿ ಅಧ್ಯಕ್ಷರ ಇಲೆವೆನ್ ವಿರುದ್ಧ ಸೆಣಸಲಿದೆ.

ಏಕದಿನ ಪಂದ್ಯಗಳು 2022-2025ರ ಐಸಿಸಿ ಮಹಿಳಾ ಚಾಂಪಿಯನ್‌ಷಿಪ್ ಭಾಗವಾಗಿದೆ. ಏಕದಿನ ಪಂದ್ಯ ಮಧ್ಯಾಹ್ನ 1.30 ಕ್ಕೆ ಪ್ರಾರಂಭವಾಗಲಿದ್ದು, ಟಿ20 ಪಂದ್ಯಗಳು ಸಂಜೆ 7 ರಿಂದ ಪ್ರಾರಂಭವಾಗಲಿವೆ. ಸಾಂಪ್ರದಾಯಿಕ ಸ್ವರೂಪದಲ್ಲಿ ಮಹಿಳಾ ಕ್ರಿಕೆಟ್‌ಗೆ ಹೆಚ್ಚಿನ ಉತ್ತೇಜನ ನೀಡುವ ಬಿಸಿಸಿಐ ಮತ್ತು ಕ್ರಿಕೆಟ್ ದಕ್ಷಿಣ ಆಫ್ರಿಕಾ (ಸಿಎಸ್‌ಎ) ಉಪಕ್ರಮದ ಭಾಗವಾಗಿ ಟೆಸ್ಟ್ ಪಂದ್ಯ ಸೇರ್ಪಡೆಯಾಗಿದೆ.

ಕಳೆದ ವರ್ಷ ಡಿಸೆಂಬರ್‌ನಲ್ಲಿ ಮುಂಬೈನಲ್ಲಿ ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ವಿರುದ್ಧ ಭಾರತ ತಲಾ ಒಂದು ಟೆಸ್ಟ್ ಪಂದ್ಯ ಆಡಿತ್ತು.

ಥಾಯ್ಲೆಂಡ್ ಓಪನ್: ಪ್ರಧಾನ ಸುತ್ತಿಗೆ ಮೀರಾಬಾ

ಬ್ಯಾಂಕಾಕ್ (ಪಿಟಿಐ): ಭಾರತದ ಮೈಸ್ನಮ್ ಮೀರಾಬಾ ಅವರು ಥಾಯ್ಲೆಂಡ್ ಓಪನ್ ಸೂಪರ್ 500 ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಪ್ರಧಾನ ಸುತ್ತಿಗೆ ಮುನ್ನಡೆದರು.

ಪ್ರಕಾಶ್ ಪಡುಕೋಣೆ ಬ್ಯಾಡ್ಮಿಂಟನ್ ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿರುವ ಮಣಿಪುರದ 21 ವರ್ಷ ವಯಸ್ಸಿನ ಮೀರಾಬಾ, ಸ್ವದೇಶದ ಶಾಶ್ವತ್ ದಲಾಲ್ ಅವರನ್ನು 15-21, 21-14, 21-16 ರಿಂದ ಸೋಲಿಸಿದರು. ನಂತರ ಮಲೇಷ್ಯಾದ ಕೊಕ್ ಜಿಂಗ್ ಹಾಂಗ್ ವಿರುದ್ಧ 21-19, 21-9 ಅಂತರದಲ್ಲಿ ಗೆದ್ದು ಪ್ರಧಾನ ಸುತ್ತು ಪ್ರವೇಶಿಸಿದರು. ಅವರು ಬುಧವಾರ ಭಾರತದ ಅಗ್ರಮಾನ್ಯ ಆಟಗಾರ ಎಚ್.ಎಸ್. ಪ್ರಣಯ್ ಅವರನ್ನು ಎದುರಿಸಲಿದ್ದಾರೆ. ಪುರುಷರ ಸಿಂಗಲ್ಸ್ ಅರ್ಹತಾ ಸುತ್ತಿನಲ್ಲಿದ್ದ ಎಸ್.ಶಂಕರ್ ಮುತ್ತುಸಾಮಿ, ಆಯುಷ್ ಶೆಟ್ಟಿ, ಕಾರ್ತಿಕೇಯ ಗುಲ್ಶನ್ ಕುಮಾರ್ ಮತ್ತು ರವಿ ಅವರು ವಿವಿಧ ಹಂತಗಳಲ್ಲಿ ಸೋತರು.

74ನೇ ಜೂನಿಯರ್ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್

ಕರ್ನಾಟಕ ಬಾಲಕಿಯರ ತಂಡಕ್ಕೆ ಪ್ರಶಸ್ತಿ

ಬೆಂಗಳೂರು: ಆದ್ಯಾ ನಾಗಲಿಂಗ ಮತ್ತು ಆದ್ಯಾ ಗೌಡ ಅವರ ಆಟದ ಬಲದಿಂದ ಕರ್ನಾಟಕದ ಬಾಲಕಿಯರ ತಂಡವು ಮಧ್ಯಪ್ರದೇಶದ ಇಂದೋರ್‌ನಲ್ಲಿ ನಡೆದ 74ನೇ ಜೂನಿಯರ್ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.

ಮಂಗಳವಾರ ನಡೆದ ಬಾಲಕಿಯರ ಫೈನಲ್ ಹಣಾಹಣಿಯಲ್ಲಿ ಕರ್ನಾಟಕ ತಂಡವು 71–51 ಅಂತರದಿಂದ ಪಂಜಾಬ್ ತಂಡವನ್ನು ಮಣಿಸಿತು. ಮೊದಲಾರ್ಧದಲ್ಲಿ 33–23 ರಿಂದ ಮುನ್ನಡೆ ಪಡೆದಿದ್ದ ಕರ್ನಾಟಕದ ಬಾಲಕಿಯರು, ಉತ್ತರಾರ್ಧದಲ್ಲೂ ಪಾರಮ್ಯ ಮೆರೆದರು.

ಕರ್ನಾಟಕದ ಪರ ಆದ್ಯಾ ನಾಗಲಿಂಗ ಮತ್ತು ಆದ್ಯಾ ಗೌಡ ತಲಾ 16 ಮತ್ತು ಅದಿತಿ ಸುಬ್ರಹ್ಮಣ್ಯನ್ 12 ಪಾಯಿಂಟ್ಸ್ ಗಳಿಸಿದರು. ಚಂದಾ ಗೌತಮ್ 20 ಮತ್ತು ನಾದರ್ ಧಿಲ್ಲೋನ್ 15 ಅಂಕಗಳನ್ನು ಪಂಜಾಬ್ ತಂಡಕ್ಕೆ ತಂದುಕೊಟ್ಟರು.

ಚಾಂಪಿಯನ್ ಮತ್ತು ರನ್ನರ್ಸ್ ಅಪ್ ತಂಡಗಳು ಕ್ರಮವಾಗಿ ₹ 4 ಲಕ್ಷ ಮತ್ತು ₹3 ಲಕ್ಷ ಬಹುಮಾನ ಪಡೆದವು.

ಬಾಲಕರ ವಿಭಾಗದ ಪ್ರಶಸ್ತಿಯನ್ನು ರಾಜಸ್ಥಾನ ಗೆದ್ದುಕೊಂಡಿತು. ಫೈನಲ್‌ನಲ್ಲಿ ರಾಜಸ್ಥಾನ 85–77ರಿಂದ ಪಂಜಾಬ್ ತಂಡವನ್ನು ಮಣಿಸಿತು.

ಬಹುಮಾನ ಘೋಷಣೆ: ಪ್ರಶಸ್ತಿ ಗೆದ್ದ ಕರ್ನಾಟಕದ ಬಾಲಕಿಯರ ತಂಡವನ್ನು ಎಫ್‌ಐಬಿಎ ಏಷ್ಯಾ ಅಧ್ಯಕ್ಷ, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಕೆ.ಗೋವಿಂದರಾಜ್ ಅಭಿನಂದಿಸಿ, ತಂಡಕ್ಕೆ ₹ 5 ಲಕ್ಷ ಬಹುಮಾನ ಘೋಷಣೆ ಮಾಡಿದ್ದಾರೆ.

ಟ್ರೋಫಿಯೊಂದಿಗೆ ಕರ್ನಾಟಕದ ಬಾಲಕಿಯರ ಬ್ಯಾಸ್ಕೆಟ್‌ಬಾಲ್ ತಂಡ. (ಕುಳಿತವರು ಎಡದಿಂದ) ಶ್ರೇಯಾ ವಿ, ಯಶಸ್ವಿನಿ ಎಂ.ಕೆ, ಆದ್ಯಾ ನಾಗಲಿಂಗ (ನಾಯಕಿ), ನಿಧಿ ಶ್ರೀನಿವಾಸ್, ಅದಿತಿ, ತಿಶಾ (ನಿಂತವರು) ಸಂಗೀತಾ (ಮ್ಯಾನೇಜರ್), ಆದ್ಯಾ ಗೌಡ, ರಕ್ಷಿತಾ ಶೆಟ್ಟಿ, ಸಂಜನಾ ಎಸ್, ಅಶೋಕ್ ಭಂಡಾ (ಸಹಾಯಕ ಕೋಚ್), ಸತ್ಯನಾರಾಯಣ (ಕೋಚ್), ನಿಲಯ ರೆಡ್ಡಿ, ಡೈಸಿ ಪ್ರಿಯಾಂಕಾ, ತಾರುಷಿ, ಅಂಟೆ ಅಶ್ವತ್ಥ್ (ಮ್ಯಾನೇಜರ್)

ಐಎಂಎ ಅಧ್ಯಕ್ಷರಿಗೆ ‘ಸುಪ್ರೀಂ’ ತರಾಟೆ

ಒಂದನೇ ಪುಟದಿಂದ...

ಹೆಚ್ಚಿನ ಜವಾಬ್ದಾರಿ ನಿರೀಕ್ಷೆ: ‘ವೃತ್ತಿಯಲ್ಲಿ 45 ವರ್ಷಗಳ ಅನುಭವ ಹೊಂದಿರುವ ಮತ್ತು ಐಎಂಎ ಅಧ್ಯಕ್ಷರಾಗಿರುವ ನೀವು ಸಂದರ್ಶನ ನೀಡುವಾಗ ಹೆಚ್ಚಿನ ಜವಾಬ್ದಾರಿ ಹೊಂದಿರಬೇಕು ಎಂಬುದನ್ನು ನಿರೀಕ್ಷಿಸಲಾಗುತ್ತದೆ’ ಎಂದು ಪೀಠ ಹೇಳಿತು.

‘ನ್ಯಾಯಾಲಯದ ಆದೇಶದ ವಿರುದ್ಧ ನಿಮ್ಮ ಆಂತರಿಕ ಭಾವನೆಯನ್ನು ಈ ರೀತಿಯ ಸಂದರ್ಶನದಲ್ಲಿ ಹೊರಹಾಕ ಕೂಡದು’ ಎಂದು ನ್ಯಾಯಮೂರ್ತಿ ಅಮಾನುಲ್ಲಾ ಖಾರವಾಗಿ ಹೇಳಿದರು.

‘ನೀವು ಹೇಳಿದ್ದನ್ನೆಲ್ಲ ನಾವು ಗಂಭೀರವಾಗಿ ಪರಿಗಣಿಸಿದ್ದೇವೆ ಎಂಬುದು ನಿಮಗೆ ಗೊತ್ತಿದೆ. ಪತಂಜಲಿ ಕಡೆಯಿಂದ ವಿವರಣೆ ಪಡೆದಿದ್ದೇವೆ. ಅಲ್ಲದೆ ಅವರ ಕ್ಷಮೆಯಾಚನೆಗಳೂ ನಮ್ಮನ್ನು ಮೆಚ್ಚಿಸಲಿಲ್ಲ. ಅದೂ ಒಂದಲ್ಲ, ಎರಡಲ್ಲ; ಮೂರಕ್ಕೂ ಹೆಚ್ಚು ಬಾರಿ. ಅವರು ಹೃದಯದಿಂದ ಕ್ಷಮೆಯಾಚಿಸಿದ್ದರು ಎಂದು ನಮಗೆ ಅನಿಸಿರಲಿಲ್ಲ. ನಿಮ್ಮ ಪ್ರಮಾಣಪತ್ರಕ್ಕೂ ನಾವು ಇದೇ ರೀತಿ ಹೇಳಬಯಸುತ್ತೇವೆ’ ಎಂದು ಪೀಠ ಹೇಳಿತು.

‘ಅಶೋಕನ್ ಅವರ ಹೇಳಿಕೆಗಳು ತುಂಬಾ ದುರದೃಷ್ಟಕರ. ನಾವು ಉದಾರವಾಗಿದ್ದೇವೆ ಎಂದಮಾತ್ರಕ್ಕೆ ಯಾರಾದರೂ ಏನನ್ನಾದರೂ ಹೇಳಿ ತಪ್ಪಿಸಿಕೊಳ್ಳಬಹುದು ಎಂದು ಅರ್ಥವಲ್ಲ’ ಎಂದಿತು.

ಸಾರ್ವಜನಿಕವಾಗಿ ಏಕೆ ಕ್ಷಮೆ ಕೇಳಿಲ್ಲ: ‘ಐಎಂಎ ಸದಸ್ಯರ ತಂಡವನ್ನು ನೀವು ಮುನ್ನಡೆಸುತ್ತಿದ್ದೀರಿ. ನಿಮ್ಮ ಪ್ರಕಾರವೇ ಐಎಂಎನಲ್ಲಿ ದೇಶದಾದ್ಯಂತ 3.5 ಲಕ್ಷ ವೈದ್ಯ ಸದಸ್ಯರಿದ್ದಾರೆ. ಈ ಸಂಘದ ಅಧ್ಯಕ್ಷರಾಗಿ ನೀವು ಉಳಿದ ಸಹೋದ್ಯೋಗಿಗಳಿಗೆ ಯಾವ ರೀತಿಯ ನಿದರ್ಶನ ನೀಡುತ್ತಿದ್ದೀರಿ’ ಎಂದು ಕೇಳಿದ ಪೀಠವು, ‘ನೀವೇಕೆ ಸಾರ್ವಜನಿಕವಾಗಿ ಕ್ಷಮೆ ಕೇಳಿಲ್ಲ? ನೀವು ಇಲ್ಲಿಗೆ ಬರುವವರೆಗೆ ಏಕೆ ಕಾಯುತ್ತಿದ್ದೀರಿ’ ಎಂದು ಪ್ರಶ್ನಿಸಿತು.

‘ನ್ಯಾಯಮೂರ್ತಿಗಳು ಎದುರಿಸುವ ವೈಯಕ್ತಿಕ ಟೀಕೆಗಳಿಗೆ ನಾವು ಪ್ರತಿಕ್ರಿಯಿಸುವುದಿಲ್ಲ. ಈ ವಿಚಾರದಲ್ಲಿ ನಮಗೆ ಯಾವುದೇ ಅಹಂ ಇಲ್ಲ. ಆದರೆ ಈ ಸಂಸ್ಥೆಯ ವಿಷಯಕ್ಕೆ ಬಂದರೆ ಸುಮ್ಮನಿರುವುದಿಲ್ಲ. ನೀವು ಸಂಸ್ಥೆಯ ಮೇಲೆ ದಾಳಿ ಮಾಡಿದ್ದೀರಿ’ ಎಂದು ನ್ಯಾಯಮೂರ್ತಿ ಅಮಾನುಲ್ಲಾ ಹೇಳಿದರು.

ಈ ಹಂತದಲ್ಲಿ ಅಶೋಕನ್ ಅವರು ಸಲ್ಲಿಸಿದ ಕ್ಷಮಾಪಣೆ ಪ್ರಮಾಣಪತ್ರವನ್ನು ಸ್ವೀಕರಿಸಲು ನ್ಯಾಯಾಲಯವು ಒಲವು ತೋರುತ್ತಿಲ್ಲ ಎಂದು ಪೀಠವು ಐಎಂಎ ಪರ ಹಾಜರಿದ್ದ ಹಿರಿಯ ವಕೀಲ ಪಿ.ಎಸ್. ಪಟ್ವಾಲಿಯಾ ಅವರಿಗೆ ತಿಳಿಸಿತು. ‘ನಮಗೆ ಒಂದು ಅವಕಾಶ ನೀಡಿ, ಅದನ್ನು ಸರಿಪಡಿಸುತ್ತೇವೆ’ ಎಂದು ಪಟ್ವಾಲಿಯಾ ಕೋರಿದರು.

ವಿಚಾರಣೆಯನ್ನು ಪೀಠವು ಜುಲೈಗೆ ಮುಂದೂಡಿತು.

ಅಶೋಕನ್ ಅವರು ಏಪ್ರಿಲ್ 29ರಂದು ಪಿಟಿಐಗೆ ನೀಡಿದ್ದ ಸಂದರ್ಶನದಲ್ಲಿ, ‘ಐಎಂಎ ಮತ್ತು ಖಾಸಗಿ ವೈದ್ಯರ ಕೆಲ ಅಭ್ಯಾಸಗಳನ್ನು ಸುಪ್ರೀಂ ಕೋರ್ಟ್ ಟೀಕಿಸಿರುವುದು ದುರದೃಷ್ಟಕರ’ ಎಂದು ಹೇಳಿದ್ದರು.

ಆಯೋಗದಿಂದ ಕ್ರಮವಿಲ್ಲ

ಪ್ರಜಾವಾಣಿ ವಾರ್ತೆ

ಒಂದನೇ ಪುಟದಿಂದ...

ಆಯೋಗವು ಒಟ್ಟಾರೆ 425 ಪ್ರಮುಖ ದೂರುಗಳನ್ನು ಸ್ವೀಕರಿಸಿದೆ. ಈ ಪೈಕಿ 400 ಪ್ರಕರಣಗಳಲ್ಲಿ ಕ್ರಮ ತೆಗೆದುಕೊಳ್ಳಲಾಗಿದೆ. ಈ ದೂರುಗಳಲ್ಲಿ 170 ಕಾಂಗ್ರೆಸ್, 95 ಬಿಜೆಪಿ ಮತ್ತು 160 ಇತರ ಪಕ್ಷಗಳು, ವ್ಯಕ್ತಿಗಳಿಗೆ ಸಂಬಂಧಿಸಿದ್ದಾಗಿದೆ ಎಂದು ಆಯೋಗ ಮಾಹಿತಿ ನೀಡಿದೆ.

ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಪ್ರಚಾರ ಭಾಷಣ ಮಾಡುವ ಉನ್ನತ ನಾಯಕರು ಉತ್ತಮ ನಿದರ್ಶನಗಳನ್ನು ಹಾಕಿಕೊಡಬೇಕು ಎಂದು ನಿರೀಕ್ಷಿಸಲಾಗುತ್ತದೆ ಎಂದು ಆಯೋಗ ಹೇಳಿದೆ.

ಲೋಕಸಭಾ ಕ್ಷೇತ್ರಗಳ ಮಟ್ಟದಲ್ಲಿ ನಡೆಯುತ್ತಿರುವ ವಿವಿಧ ಪಕ್ಷಗಳ, ಅಭ್ಯರ್ಥಿಗಳ ಪ್ರಚಾರವು ಹಿಂಸಾಚಾರ, ಪ್ರಚೋದನೆ ಮುಕ್ತವಾಗಿದೆ. ಗದ್ದಲದ ವಾತಾವರಣವೂ ಅಷ್ಟಾಗಿ ಇಲ್ಲ ಎಂದು ಆಯೋಗ ತಿಳಿಸಿದೆ.

ಸಾಧಕರಿಗೆ ಸಿ.ಎಂ, ಡಿ.ಸಿ.ಎಂ ನೆರವು

ಒಂದನೇ ಪುಟದಿಂದ...

ಫಲಿತಾಂಶ ಪ್ರಕಟವಾದ ಬಳಿಕ ಅಂಕಿತಾ ಪೋಷಕರಿಗೆ ದೂರವಾಣಿ ಕರೆ ಮಾಡಿದ್ದ ಶಿವಕುಮಾರ್, ಮಗಳೊಂದಿಗೆ ಬೆಂಗಳೂರಿಗೆ ಬಂದು ತಮ್ಮನ್ನು ಭೇಟಿ ಮಾಡಲು ಆಮಂತ್ರಣ ಕೊಟ್ಟಿದ್ದರು.

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಮೆಳ್ಳಿಗೇರಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಅಂಕಿತಾ ಮತ್ತು ಮಂಡ್ಯ ತಾಲ್ಲೂಕಿನ ತುಂಬಗೆರೆ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ನವನೀತ್ ಪೋಷಕರ ಜೊತೆ ಶಿವಕುಮಾರ್ ಅವರನ್ನು ಮಂಗಳವಾರ ಭೇಟಿಮಾಡಿದರು.

ಅಂಕಿತಾಗೆ ₹5 ಲಕ್ಷ ಮೊತ್ತದ ಚೆಕ್ ನೀಡಿ ಗೌರವಿಸಿದ ಉಪ ಮುಖ್ಯಮಂತ್ರಿ, ನವನೀತ್‌ಗೂ ಅಭಿನಂದನೆ ಸಲ್ಲಿಸಿದರು. ವಿದ್ಯಾರ್ಥಿಗೆ ₹2 ಲಕ್ಷ ಮೊತ್ತದ ಚೆಕ್ ನೀಡುವಂತೆ ತಮ್ಮ ಕಚೇರಿಯ ಸಿಬ್ಬಂದಿಗೆ ಸೂಚಿಸಿದರು.

ಮೈಸೂರು ಪ್ರವಾಸದಿಂದ ಮಂಗಳವಾರ ಸಂಜೆ ಬೆಂಗಳೂರಿಗೆ ವಾಪಸಾದ ಸಿದ್ದರಾಮಯ್ಯ, ಅಂಕಿತಾ ಮತ್ತು ನವನೀತ್ ಅವರನ್ನು ತಮ್ಮ ಮನೆಗೆ ಕರೆಸಿಕೊಂಡು ಗೌರವಿಸಿದರು. ಮುಂದಿನ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಅಂಕಿತಾಗೆ ₹5 ಲಕ್ಷ ಮತ್ತು ನವನೀತ್‌ಗೆ ₹3 ಲಕ್ಷ ಮೊತ್ತದ ನೆರವನ್ನು ಘೋಷಿಸಿದರು.

ವಿದ್ಯಾರ್ಥಿಗಳನ್ನು ಅಭಿನಂದಿಸಿದ ಬಳಿಕ ಮಾತನಾಡಿದ ಸಿದ್ದರಾಮಯ್ಯ, ‘ಮೊರಾರ್ಜಿ ದೇಸಾಯಿ ವಸತಿ ಶಾಲೆ ನನ್ನ ಕನಸಿನ ಯೋಜನೆ. 1994ರಲ್ಲಿ ಉಪ ಮುಖ್ಯಮಂತ್ರಿಯಾಗಿದ್ದಾಗ ಈ ಶಾಲೆಗಳಿಗೆ ಚಾಲನೆ ನೀಡಿದ್ದೆ’ ಎಂದು ನೆನಪಿಸಿಕೊಂಡರು.

ಸಿ.ಎಂ ಸಾಧನೆಯೇ ಪ್ರೇರಣೆ: ಗೌರವ ಸ್ವೀಕರಿಸಿದ ಅಂಕಿತಾ, ‘ಸಾರ್ ನಿಮ್ಮ ಸಾಧನೆಯೇ ನನ್ನ ಈ ಯಶಸ್ಸಿಗೆ ಪ್ರೇರಣೆ. ನಿಮ್ಮ ಸಾಧನೆ ನನಗೆ ಪ್ರೋತ್ಸಾಹ ನೀಡಿತು’ ಎಂದು ಮುಖ್ಯಮಂತ್ರಿ ಅವರನ್ನುದ್ದೇಶಿಸಿ ಹೇಳಿದರು.

ಐಎಎಸ್ ಅಧಿಕಾರಿ ಆಗಬೇಕೆಂಬ ಆಸೆ ಹೊಂದಿರುವುದಾಗಿ ಅಂಕಿತಾ ಹೇಳಿದರು. ಪಿಯುಸಿ ಪ್ರವೇಶಾತಿ ಸೇರಿದಂತೆ ಮುಂದಿನ ವಿದ್ಯಾಭ್ಯಾಸಕ್ಕೆ ನೆರವು ಒದಗಿಸುವುದಾಗಿ ಸಿದ್ದರಾಮಯ್ಯ ಭರವಸೆ ನೀಡಿದರು.

ಶಾಲೆಗಳಿಗೂ ಅನುದಾನ ಘೋಷಣೆ

ಅಂಕಿತಾ ಕೊಣ್ಣೂರ ವ್ಯಾಸಂಗ ಮಾಡುತ್ತಿದ್ದ ಬಾಗಲಕೋಟೆ ಜಿಲ್ಲೆ ಮುಧೋಳ ತಾಲ್ಲೂಕಿನ ಮೆಳ್ಳಿಗೇರಿ ಮೊರಾರ್ಜಿ ದೇಸಾಯಿ ವಸತಿಶಾಲೆಯ ಅಭಿವೃದ್ಧಿಗೆ ₹ 1 ಕೋಟಿ ಮತ್ತು ಕೆ.ಸಿ. ನವನೀತ್ ವ್ಯಾಸಂಗ ಮಾಡಿರುವ ಮಂಡ್ಯ ತಾಲ್ಲೂಕಿನ ತುಂಬಿಗೆರೆ ಮೊರಾರ್ಜಿ ದೇಸಾಯಿ ವಸತಿ ಶಾಲೆ ಅಭಿವೃದ್ಧಿಗೆ ₹ 50 ಲಕ್ಷ ಅನುದಾನ ಒದಗಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.

ಸಿಇಟಿ: ಕೃಷಿ ಕೋಟಾ ದಾಖಲೆ ಸಲ್ಲಿಕೆಗೆ 17ರವರೆಗೆ ಅವಕಾಶ

ಬೆಂಗಳೂರು: ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಮೂಲಕ ಕೃಷಿ ಕೋಟಾದಲ್ಲಿ ಬಿಎಸ್‌ಸಿ (ಅಗ್ರಿ)ಗೆ ಪ್ರವೇಶ ಪಡೆಯಲು ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಅಗತ್ಯ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಮೇ 17ರವರೆಗೆ ಮತ್ತೊಂದು ಅವಕಾಶ ನೀಡಲಾಗಿದೆ.

ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುವ ಕೃಷಿ ಕೋಟಾದಲ್ಲಿ ಬಿಎಸ್‌ಸಿ (ಅಗ್ರಿ) ಪ್ರವೇಶಕ್ಕೆ ಸಲ್ಲಿದ್ದ 4 ಸಾವಿರಕ್ಕೂ ಹೆಚ್ಚು ಅರ್ಜಿಗಳು ತಿರಸ್ಕೃತಗೊಂಡಿವೆ. ಕೆಲ ವಿದ್ಯಾರ್ಥಿಗಳು ಅಗತ್ಯವಾದ ದಾಖಲೆಗಳನ್ನು ಸಲ್ಲಿಸಿಲ್ಲ. ಹಾಗಾಗಿ, ದಾಖಲೆ ಅಪ್‌ಲೋಡ್ ಮಾಡಲು ಮತ್ತಷ್ಟು ಸಮಯ ನೀಡಲಾಗಿದೆ ಎಂದು ಕೆಇಎ ಹೇಳಿದೆ.

ವಿದ್ಯಾರ್ಥಿಗಳು ಅರ್ಜಿ ಜತೆಗೆ ಅಗತ್ಯ ದಾಖಲೆಗಳನ್ನು ಸಲ್ಲಿಸಿದ ನಂತರ ಕೆಇಎ ಅವುಗಳನ್ನು ಪ್ರಾಯೋಗಿಕ ಪರೀಕ್ಷೆಯನ್ನು ನಡೆಸುವ ಅಧಿಕಾರ ಹೊಂದಿರುವ ಕೃಷಿ ವಿಶ್ವವಿದ್ಯಾಲಯಕ್ಕೆ ಕಳುಹಿಸಲಾಗುತ್ತದೆ.

ಟಿಟಿ: ಮಹಿಳಾ ಸಿಂಗಲ್ಸ್ ರ‍್ಯಾಂಕಿಂಗ್

24ನೇ ಸ್ಥಾನಕ್ಕೆ ಮಣಿಕಾ

ಮಣಿಕಾ ಬಾತ್ರಾ

ನವದೆಹಲಿ (ಪಿಟಿಐ): 'ಸೌದಿ ಸ್ಮ್ಯಾಶ್' ಟೂರ್ನಿಯಲ್ಲಿ ತೋರಿದ ಉತ್ತಮ ಸಾಧನೆಯಿಂದ ಭಾರತದ ಟೇಬಲ್ ಟೆನಿಸ್ ಆಟಗಾರ್ತಿ ಮಣಿಕಾ ಬಾತ್ರಾ ಅವರು ವಿಶ್ವ ಕ್ರಮಾಂಕದಲ್ಲಿ 24ನೇ ಸ್ಥಾನಕ್ಕೆ ಏರಿ ಜೀವನ ಶ್ರೇಷ್ಠ ಸಾಧನೆ ದಾಖಲಿಸಿದರು. ವಿಶ್ವದ ಅಗ್ರ -25 ರಲ್ಲಿ ಸ್ಥಾನ ಪಡೆದ ಭಾರತದ ಮೊದಲ ಆಟಗಾರ್ತಿ ಎಂಬ ಶ್ರೇಯಸ್ಸು ಅವರದಾಯಿತು.

ಖೇಲ್ ರತ್ನ ಪ್ರಶಸ್ತಿ ಪುರಸ್ಕೃತೆಯಾಗಿರುವ ಮಣಿಕಾ, ಜೆಡ್ಡಾದಲ್ಲಿ ಕಳೆದ ವಾರ ನಡೆದ ಸೌದಿ ಸ್ಮ್ಯಾಶ್ ಟೂರ್ನಿಗೆ ಮೊದಲು 39ನೇ ಸ್ಥಾನದಲ್ಲಿದ್ದರು. ಅಲ್ಲಿ ಅಗ್ರ ಆಟಗಾರ್ತಿಯರ ವಿರುದ್ಧ ಗಳಿಸಿದ ಗೆಲುವುಗಳಿಂದ 15 ಸ್ಥಾನ ಜಿಗಿತ ಕಂಡಿದ್ದಾರೆ. ಮಣಿಕಾ ಆ ಟೂರ್ನಿಯಲ್ಲಿ ಕ್ವಾರ್ಟರ್‌ಫೈನಲ್ ತಲುಪಿದ್ದರು. ಭಾರತದ ಆಟಗಾರ್ತಿಯೊಬ್ಬರು ಈ ಹಿಂದೆ ಎಂದೂ ಎಂಟರ ಘಟ್ಟ ತಲುಪಿರಲಿಲ್ಲ. ಪ್ಯಾರಿಸ್ ಒಲಿಂಪಿಕ್ಸ್‌ಗೆ ಮುನ್ನ ಈ ಸಾಧನೆ ಅವರ ವಿಶ್ವಾಸವನ್ನು ವೃದ್ಧಿಸಲಿದೆ. 'ಟಾಪ್–25 ರೊಳಗೆ ಸ್ಥಾನ ಪಡೆದು ಜೀವನ ಶ್ರೇಷ್ಠ ಸಾಧನೆಯು ಒಲಿಂಪಿಕ್ಸ್ ತಯಾರಿಗೆ ಖಂಡಿತಕ್ಕೂ ಉತ್ತೇಜನಕಾರಿ ಆಗಲಿದೆ' ಎಂದಿದ್ದಾರೆ.

'ಪ್ಯಾರಿಸ್ ಒಲಿಂಪಿಕ್ಸ್ ಸಮೀಪಿಸುತ್ತಿರುವಾಗ ಇಂಥ ಪ್ರದರ್ಶನ ಮುಂದುವರಿಸಿ ದೇಶ ಹೆಮ್ಮೆಪಡುವಂತೆ ಮಾಡಲು ಮತ್ತು ರ‍್ಯಾಂಕಿಂಗ್‌ನಲ್ಲಿ ಇನ್ನಷ್ಟು ಎತ್ತರಕ್ಕೆ ಏರಲು ಪ್ರೇರಣೆ ದೊರೆ ತಿದೆ. ಸುಧಾರಣೆ ನಿರಂತರ ಪ್ರಕ್ರಿಯೆ. ನಾನು ಅದಕ್ಕೆ ಬದ್ಧಳಾಗಿದ್ದೇನೆ' ಎಂದಿದ್ದಾರೆ.

ಇದಕ್ಕೆ ಮೊದಲು ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಪೋಸ್ಟ್ ಮಾಡಿದ ಬಾತ್ರಾ, ತಮ್ಮ ಕೋಚ್ ಅಮನ್ ಬಾಲ್ಗಿಯು ಮತ್ತು ಅಭ್ಯಾಸದ ಜೊತೆಗಾರ ಕಿರಿಲ್ ಬಾರ್ಬಾನೋವ್ ಅವರಿಗೆ ಧನ್ಯವಾದ ಹೇಳಿದ್ದರು. 2018ರ ಕಾಮನ್ವೆಲ್ತ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದ ಮಣಿಕಾ, ಕಳೆದ ವರ್ಷ ಹಾಂಗ್‌ಝೌ ಏಷ್ಯನ್ ಗೇಮ್ಸ್‌ನಲ್ಲಿ ಎಂಟರ ಘಟ್ಟ ತಲುಪಿ ಗಮನ ಸೆಳೆದಿದ್ದರು.

ಪೋಲ್ ವಾಲ್ಟ್: ರೋಸಿಗೆ ಚಿನ್ನ

ಆರ್ಯ ಎಸ್.

ಭುವನೇಶ್ವರ (ಪಿಟಿಐ): ರಾಷ್ಟ್ರೀಯ ಫೆಡರೇಷನ್ ಕಪ್ ಸೀನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಮೂರನೇ ದಿನವಾದ ಮಂಗಳವಾರ ಮಹಿಳೆಯರ ಪೋಲ್ ವಾಲ್ಟ್ ಸ್ಪರ್ಧೆಯಲ್ಲಿ ರೋಸಿ ಮೀನಾ ಪಾಲ್‌ರಾಜ್ 4.05 ಮೀ ಎತ್ತರಕ್ಕೆ ಜಿಗಿದು ಚಿನ್ನ ಗೆದ್ದರು.

ತಮಿಳುನಾಡಿನ 26 ವರ್ಷದ ರೋಸಿ ಅವರ ಪ್ರಯತ್ನವು ಕಳೆದ ವರ್ಷ ಅವರು ಸ್ಥಾಪಿಸಿದ 4.21 ಮೀಟರ್ ರಾಷ್ಟ್ರೀಯ ದಾಖಲೆಗಿಂತ ಕಡಿಮೆಯಾಗಿದೆ.

ತಮಿಳುನಾಡಿನ ಬರಾನಿಕಾ ಇಳಂಗೋವನ್ 4 ಮೀಟರ್ ಜಿಗಿದು ಬೆಳ್ಳಿ ಗೆದ್ದರೆ, ಕೇರಳದ ಮರಿಯಾ ಜೈಸನ್ (3.90 ಮೀಟರ್) ಮೂರನೇ ಸ್ಥಾನ ಪಡೆದರು. ಏಷ್ಯನ್ ಗೇಮ್ಸ್ ಕಂಚಿನ ಪದಕ ವಿಜೇತೆ ನಂದಿನಿ ಅಗಸರ 7 ಸ್ಪರ್ಧೆಗಳ ಹೆಪ್ಟಾಥ್ಲಾನ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದರು.

ಪುರುಷರ ಲಾಂಗ್‌ಜಂಪ್‌ನಲ್ಲಿ ಕರ್ನಾಟಕದ ಆರ್ಯ ಎಸ್. (7.83 ಮೀ.) ಬೆಳ್ಳಿ ಗೆದ್ದರು. ತಮಿಳುನಾಡಿನ ಜೆಸ್ವಿನ್ ಆಲ್ಡ್ರಿನ್ (7.99 ಮೀ.) ಚಿನ್ನ ಗೆದ್ದರು.

ಬಾಕ್ಸಿಂಗ್: ಸೆಮಿಫೈನಲ್‌ಗೆ ಗೌರವ್

ಅಸ್ತಾನಾ (ಕಜಕಸ್ತಾನ) (ಪಿಟಿಐ): ಭಾರತದ ಗೌರವ್ ಚೌಹಾಣ್ ಅವರು ಎಲೋರ್ಡಾ ಕಪ್ ಬಾಕ್ಸಿಂಗ್ ಟೂರ್ನಿಯ ಪುರುಷರ 92+ ಕೆ.ಜಿ ವಿಭಾಗದಲ್ಲಿ ಮಂಗಳವಾರ ಸೆಮಿಫೈನಲ್ ಪ್ರವೇಶಿಸಿದರೆ, ಅನುಭವಿ ಶಿವ ಥಾಪಾ ಮೊದಲ ಸುತ್ತಿನಲ್ಲಿಯೇ ನಿರ್ಗಮಿಸಿದರು.

ಗೌರವ್ ತಮ್ಮ ಆರಂಭಿಕ ಪಂದ್ಯದಲ್ಲಿ ಸ್ಥಳೀಯ ಫೇವರಿಟ್ ಡ್ಯಾನಿಯಲ್ ಸಪರ್ಬೆ ವಿರುದ್ಧ 3-2 ಅಂತರದಲ್ಲಿ ಜಯ ಸಾಧಿಸಿ, ಕನಿಷ್ಠ ಕಂಚಿನ ಪದಕ ಖಚಿತಪಡಿಸಿಕೊಂಡರು. ಆದರೆ ಆರು ಬಾರಿ ಏಷ್ಯನ್ ಚಾಂಪಿಯನ್‌ಷಿಪ್ ಪದಕ ವಿಜೇತ ಶಿವ 63.5 ಕೆ.ಜಿ ವಿಭಾಗದಲ್ಲಿ ಕಜಕಸ್ತಾನದ ಅಬ್ದುಯಾಲಿ ಅಲ್ಮಾತ್ ವಿರುದ್ಧ 1-4 ಅಂತರದಲ್ಲಿ ಸೋತರು.

ಸಂಜಯ್ (80 ಕೆ.ಜಿ) ಅವರು ಹಾಲಿ ಏಷ್ಯನ್ ಗೇಮ್ಸ್ ಚಾಂಪಿಯನ್ ಚೀನಾದ ಟುವೊಹೆಟೆರ್ಬೀಕೆ ತಂಗ್ಲಾಟಿಹಾನ್ ವಿರುದ್ಧ 0-5 ಅಂತರದಲ್ಲಿ ಸೋತು ಸ್ಪರ್ಧೆಯಿಂದ ನಿರ್ಗಮಿಸಿದರು.

ಮನೀಷಾ (60 ಕೆಜಿ), ಮೋನಿಕಾ (81+ಕೆಜಿ) ಮತ್ತು ಲಾಲ್ಫಕ್ಮಾವಿ ರಾಲ್ಟೆ (81+ ಕೆಜಿ) ಅವರು ಬುಧವಾರ ಕಣಕ್ಕಿಳಿಯಲಿದ್ದಾರೆ. ಕಡಿಮೆ ಪ್ರವೇಶಗಳಿದ್ದ ಕಾರಣ 81+ ಕೆಜಿ ವಿಭಾಗದಲ್ಲಿ ರಾಲ್ಟೆ ಅವರನ್ನು 'ಡ್ರಾ' ಮೂಲಕ ಸೇರ್ಪಡೆ ಮಾಡಲಾಗಿದೆ.

ಮರಡೋನಾ 'ಗೋಲ್ಡನ್ ಬಾಲ್' ಹರಾಜು ತಡೆಗೆ ಯತ್ನ


ಮರಡೋನಾ (1986ರ ವಿಶ್ವಕಪ್ ಫೈನಲ್ ವೇಳೆ) –ಎಎಫ್‌ಪಿ ಚಿತ್ರ

ಪ್ಯಾರಿಸ್ (ಎಪಿ): ಫುಟ್‌ಬಾಲ್ ದಂತಕತೆ, ಅರ್ಜೆಂಟೀನಾದ ಡೀಗೊ ಮರಡೋನಾ ಅವರು 1986ರ ವಿಶ್ವಕಪ್ ಸಂದರ್ಭದಲ್ಲಿ ಗೆದ್ದುಕೊಂಡ 'ಗೋಲ್ಡನ್ ಬಾಲ್' ಟ್ರೋಫಿ ಹರಾಜು ಹಾಕುವುದನ್ನು ತಡೆಯಲು ಕಾನೂನು ಮಾರ್ಗದ ಮೂಲಕ ಪ್ರಯತ್ನಿಸುವುದಾಗಿ ಅವರ ವಾರಸುದಾರರು ತಿಳಿಸಿದ್ದಾರೆ.

ಮರಡೋನಾ ಅವರ ವಾರಸುದಾರರ ವಕೀಲರು ಮಂಗಳವಾರ ಎಪಿ ಸುದ್ದಿಸಂಸ್ಥೆಗೆ ಈ ವಿಷಯ ಖಚಿತಪಡಿಸಿದ್ದಾರೆ.

ಮೆಕ್ಸಿಕೊ ಸಿಟಿಯಲ್ಲಿ ನಡೆದ ಆ ವರ್ಷದ ವಿಶ್ವಕಪ್ ಫೈನಲ್‌ನಲ್ಲಿ ಅರ್ಜೆಂಟೀನಾ ತಂಡ, ಮರೋಡನಾ ನೇತೃತ್ವದಲ್ಲಿ ಆಗಿನ ಪಶ್ಚಿಮ ಜರ್ಮನಿ ತಂಡವನ್ನು 3-2 ಗೋಲುಗಳಿಂದ ಸೋಲಿಸಿ ಟ್ರೋಫಿ ಎತ್ತಿಹಿಡಿದಿತ್ತು. ಟೂರ್ನಿಯ ಶ್ರೇಷ್ಠ ಆಟಗಾರನಿಗೆ ನೀಡುವ ಗೋಲ್ಡನ್ ಬಾಲ್ ಪ್ರಶಸ್ತಿಯನ್ನು ಆ ತಂಡದ ನಾಯಕರಾಗಿದ್ದ ಮರಡೋನಾ ಅವರಿಗೆ ಸಂದಿತ್ತು.

ನಿಗೂಢ ಸಂದರ್ಭದಲ್ಲಿ ಗೋಲ್ಡನ್ ಬಾಲ್ ಟ್ರೋಫಿ ಕಾಣೆಯಾಗಿತ್ತು. ದಶಕಗಳ ನಂತರ ಈ ಟ್ರೋಫಿ ಇತ್ತೀಚೆಗಷ್ಟೇ ಮತ್ತೆ ಕಾಣಿಸಿಕೊಂಡಿತ್ತು. ಮುಂದಿನ ತಿಂಗಳು ಪ್ಯಾರಿಸ್‌ನಲ್ಲಿ ಈ ಟ್ರೋಫಿಯನ್ನು ಹರಾಜು ಹಾಕುವುದಾಗಿ ಆಗಾಟೆಸ್ ಹರಾಜು ಸಂಸ್ಥೆ ಇತ್ತೀಚೆಗೆ ತಿಳಿಸಿತ್ತು.

ಮರಡೋನಾ 2020ರಲ್ಲಿ ತಮ್ಮ 60ನೇ ವಯಸ್ಸಿನಲ್ಲಿ ಮೃತರಾಗಿದ್ದರು. 'ಕಳವಾದ ಟ್ರೋಫಿ ಇದಾಗಿದೆ. ಹೀಗಾಗಿ ಅದರ ಈಗಿನ ಮಾಲೀಕರು ಅದನ್ನು ಮಾರುವ ಹಾಗಿಲ್ಲ' ಎಂಬುದು ಮರಡೋನಾ ಅವರ ವಾರಸುದಾರರ ವಾದವಾಗಿದೆ.

ಡಾಡ್ಜ್‌ಬಾಲ್: ರಾಜ್ಯ ತಂಡ ಆಯ್ಕೆ

ಬೆಂಗಳೂರು: ಅಭಿಶ್ರುತ್ ಮತ್ತು ಮೋನಿಶಾ ಎನ್.ಎಸ್. ಅಮೀನ್ ಅವರು ತೆಲಂಗಾಣದ ರಾಮಗುಂಡಂನಲ್ಲಿ ಬುಧವಾರದಿಂದ ಇದೇ 17ರವರೆಗೆ ನಡೆಯುವ ಐಡಿಬಿಎಫ್ ಡಾಡ್ಜ್‌ಬಾಲ್ ಫೆಡರೇಷನ್ ಕಪ್ ಟೂರ್ನಿಯಲ್ಲಿ ಕ್ರಮವಾಗಿ ಕರ್ನಾಟಕದ ಪುರುಷರ ಮತ್ತು ಮಹಿಳೆಯರ ತಂಡವನ್ನು ಮುನ್ನಡೆಸಲಿದ್ದಾರೆ.

ಪುರುಷರ ತಂಡ: ಅಭಿಶ್ರುತ್ (ನಾಯಕ), ಪ್ರಥಮ್ ಎಸ್. ಗೌಡ, ಸಮರ್ಥ್ ಕೆ.ಬಿ, ಸುನಿಲ್ ಕುಮಾರ್ ಕೆ, ನೂತನ್ ಜೆ. ಗೌಡ, ರಣವೀರ್ ರಾಣಾ, ಭರತ್ ವಿ.ಬಿ, ಯಶವಂತ್ ಎನ್.ಎಸ್, ಸೈಯ್ಯದ್ ಮೊಯಿನುದ್ದೀನ್, ವಿಶ್ರುತ್ ಎಸ್, ರವಿ ಕುಮಾರ ಕೆ.ಕೆ, ಸಂದೀಪ. ಸಂಪತ್ ಕುಮಾರ್ (ಕೋಚ್), ರಾಘವೇಂದ್ರ (ಮ್ಯಾನೇಜರ್).

ಮಹಿಳೆಯರ ತಂಡ: ಮೋನಿಶಾ ಎನ್.ಎಸ್. ಅಮೀನ್ (ನಾಯಕಿ), ವಿ. ಪ್ರಗತಿ, ಖುಷ್ಬು ಎಸ್, ಸ್ವರಾ ಪಿ.ಎಸ್, ವರ್ಷಾ ರಾಜ್, ವರ್ಷಿತಾ ಎನ್, ಲೀಶಾ ಡಿ. ಚವಾಣ್, ವಂದನಾ ಪಿ. ಗೌಡ, ನೇಹಾ ಕುಮಾರಿ ಎಂ.ಆರ್, ಅಯಲ್ ರಚಿತಾ, ನೇಹಾ ಕುಮಾರಿ ಎಸ್.ಎಂ, ಎಚ್.ಎನ್. ತನುಶ್ರೀ. ಗೀತಾ (ಕೋಚ್), ಭೂಮಿಕಾ (ಮ್ಯಾನೇಜರ್).

Flipkart Offer Discount Upto ₹2000

Hero MotoCorp Ltd. Regd. Office: The Grand Plaza, Plot No.2, Nelson Mandela Road, Vasant Kunj Phase - II, New Delhi - 110070, India. | CIN: L35911DL1984PLC017354 | For further information, contact your nearest Hero MotoCorp authorised outlet or visit us on www.HeroMotoCorp.com. Accessories and features shown may not be a part of standard fitment. Always wear a helmet while riding a two-wheeler. ^^Based on offers from empaneled dealers on Wheels of Trust platform. ~~Finance scheme is at the sole discretion of the financier, subject to its respective T&Cs. Terms and Conditions apply.

Exchange Powered By Wheels of Trust^^ SCAN FOR BEST RESALE VALUE

Authorised Dealers: Bengaluru: Peenya: Sai Hero, Ph: 9289922830, Magadi Road: Poorna Hero, Ph: 9289923212, Kamakshipalya: Poorna Motors, Ph: 9606922534, Banashankari: Sai Hero, Ph: 9289922476, JP Nagar: Sai Hero, Ph: 99002 36280, Kanakpura Road: Sai Hero, Ph: 8904677394, Banaswadi: Bhagath Hero, Ph: 9289922738, Hoskote: Bhagath Hero, Ph: 8884600051, K R Puram: Bhagath Hero, Ph: 7829488706, Hosur Road: RT Krishna Hero, Ph: 9289923177, Jigani: RT Krishna Hero, Ph: 8762860999, Byatarayanapura: Bimal Hero, Ph: 9289922863, RT Nagar: Bimal Hero, 9535327710, Doddaballapura: Bimal Hero, 9742202125, Lalbagh Road: Prakash Hero, Ph: 9289922117, Rajaji Nagar: Max Hero, Ph: 9289923023, Marathalli: Vaayuratha Hero, Ph: 9289923811, Tumkur: Sai Hero, Ph: 9289922986, B,H, Road: Sai Hero, Ph: 7022752841, Tiptur: Sai Hero Ph: 9164840456, Kunigal: Sai Hero, Ph: 7022752858, Kolar: Sai Balaji Motos, Ph: 9821745024, Associate Dealer: Madiwala: Ph: 9731660639, Bannerghatta Road: Ph: 41209619, Kengeri: Ph: 9739275523, Yelahanka: Ph: 28462524, 9341025589, Mysore Road: Ph: 9611997733, Devanahalli: Ph: 9964560599, Kanakapura: 9880212346, Bagepalli: Ph: 282828, Srinivaspur: Ph: 9738504002, Sidlaghatta: Ph: 254827, Nelamangala: Ph: 27723395, Pavagada: Ph: 9740324639, Madhugiri: Ph: 9972278989, Vijayapura: Ph: 9449619920, Sira: Ph: 9448417393, Chandapura: Ph: 9481329064, Also Available At: Dunnasandra: 8310166369, HSR Layout: Ph: 7428893265, Mathikere: 9035027951, Domlur: 7353919910, J.P. Nagar: Ph: 9035024274, RT Nagar: Ph: 9535327710, Attibele: Ph: 8050609104, B Narayanapura: Ph: 9945472149, Varthur: Ph: 9900877227, Papareddypalya: Ph: 9916678309, Anekal: Ph: 9739519252, Konankunte: Ph: 9886122251, Sarjapur Main Road: Ph: 8762860999, Bidadi: Ph: 9844767719, Ramanagara: 9663399909, Jigani: 9986498884, Chikkanayakanahalli: 9880807399, Turuvekere: 9448403205, Koratagere: 9731713711, Peresandra: 9901502049, Vidyaranyapura: 9606934533, For Buy/Sell/Exchange Old any Vehicle contact VV PURAM, Bengaluru: Olety: Sai Hero Sure: 98450 74491.